ಗುರುವಾರ, ಫೆಬ್ರುವರಿ 3, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭರತನಾಟ್ಯ ಪ್ರದರ್ಶನ

ಬೆಂಗಳೂರಿನಲ್ಲಿ ಬುಧವಾರ ನಡೆದ ‘ಕಲಾಗ್ರಾಮದ ಸುವರ್ಣ ಸಮುಚ್ಚಯ ನವೀಕೃತ ಸಭಾಂಗಣ’ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ನೃತ್ಯಗಂಗಾ ಪ್ರದರ್ಶಕ ಕಲಾಕೇಂದ್ರದ ವಿದ್ಯಾರ್ಥಿನಿಯರು ಭರತನಾಟ್ಯ ಪ್ರದರ್ಶಿಸಿದರು

meesho

ಶಾಪಿಂಗ್ ಜೊತೆ ಉಳಿತಾಯ ಕೂಡ!

MAHA INDIAN SAVINGS SALE
3RD FEB

1 ಕೋಟಿಗೂ ಹೆಚ್ಚಿನ ಪ್ರಾಡಕ್ಟ್ಸ್ ಮೇಲೆ 70%ವರೆಗೂ ರಿಯಾಯಿತಿ

ಆ್ಯಪ್ ಅನ್ನು ಡೌನ್ ಲೋಡ್ ಮಾಡಿ

GET IT ON Google Play
Download on the App Store

ಫ್ಯಾಷನ್

ಮಹಿಳೆಯರ ಫ್ಯಾಷನ್
ಕುರ್ತಿ ಮತ್ತು ಸೂಟ್ಸ್ — 50%ವರೆಗೂ ಆಫ್
ವೆಸ್ಟರ್ನ್ ವೇರ್ — ರೂ. 149ರಿಂದ ಆರಂಭ
ಸೀರೆ ಮತ್ತು ಲೆಹಂಗಾ — 60%ವರೆಗೂ ಆಫ್
ಆಭರಣಗಳು — ರೂ. 70ರಿಂದ ಆರಂಭ

ಪುರುಷರ ಫ್ಯಾಷನ್
ಟಿ-ಶರ್ಟ್‌ಗಳು — ರೂ. 149ರಿಂದ ಆರಂಭ
ಶರ್ಟ್‌ಗಳು — 30%ವರೆಗೂ ಆಫ್
ಬಾಟಮ್ ವೇರ್ — ರೂ. 199ರಿಂದ ಆರಂಭ
ಎತ್ನಿಕ್ ವೇರ್ — 40%ವರೆಗೂ ಆಫ್

ಪಾದರಕ್ಷೆಗಳು ಮತ್ತು ಅಕ್ಸೆಸರೀಸ್
ಪಾದರಕ್ಷೆಗಳು — ರೂ. 99ರಿಂದ ಆರಂಭ
ಅಕ್ಸೆಸರೀಸ್ — 50%ವರೆಗೂ ಆಫ್

ಸೌಂದರ್ಯ
ಪರ್ಸನಲ್ ಕೇರ್ — 70%ವರೆಗೂ ಆಫ್

ಕಿಡ್ಸ್
ಕಿಡ್ಸ್ ಫ್ಯಾಷನ್ — ರೂ. 79ರಿಂದ ಆರಂಭ

ಗೃಹ ಅಲಂಕಾರ
ಅಲಂಕಾರ ವಸ್ತುಗಳು — ರೂ. 79ರಿಂದ ಆರಂಭ
ಫರ್ನಿಶಿಂಗ್ — ರೂ. 79ರಿಂದ ಆರಂಭ

ಎಲೆಕ್ಟ್ರಾನಿಕ್ಸ್
ಎಲೆಕ್ಟ್ರಾನಿಕ್ಸ್ — 50%ವರೆಗೂ ಆಫ್
ಅಪ್ಲೈಯನ್ಸ್ — 50%ವರೆಗೂ ಆಫ್

ಕಿಚನ್ ಮತ್ತು ಗಾರ್ಡನಿಂಗ್
ಕಿಚನ್ — 50%ವರೆಗೂ ಆಫ್
ಗಾರ್ಡನಿಂಗ್ — 50%ವರೆಗೂ ಆಫ್

ಹೊಸ ಲಾಂಚಸ್
ಪ್ಯಾಕೇಜ್ಡ್ ಫುಡ್ ಮತ್ತು ಬೆವರೇಜಸ್ — 50%ವರೆಗೂ ಆಫ್
ಸ್ಪೋರ್ಟ್ಸ್ ಮತ್ತು ಫಿಟ್ನೆಸ್ — ರೂ. 70ರಿಂದ ಆರಂಭ
ಪೆಟ್ ಸಪ್ಲೈಸ್ — 30%ವರೆಗೂ ಆಫ್
ಸ್ಟೇಷನರಿ — 40%ವರೆಗೂ ಆಫ್
ಕಾರ್ ಮತ್ತು ಬೈಕ್ಸ್ — 30%ವರೆಗೂ ಆಫ್

ಕ್ಯಾಶ್ ಆನ್ ಡೆಲಿವರಿ ಸೌಲಭ್ಯ
ಈಸಿ ರಿಟರ್ನ್
ಮೊದಲ ಆರ್ಡರ್ ಮೇಲೆ 100ರೂ ವರೆಗೂ ಆಫ್

PhonePe
1000/- ವರೆಗಿನ ಕ್ಯಾಶ್ ಬ್ಯಾಕ್*
ಕನಿಷ್ಠ ಆರ್ಡರ್ ವ್ಯಾಲ್ಯೂ

Paytm
25/- ವರೆಗಿನ ಕ್ಯಾಶ್ ಬ್ಯಾಕ್*
ಕನಿಷ್ಠ ಆರ್ಡರ್ ವ್ಯಾಲ್ಯೂ

*T&C Apply. Minimum order value ₹250

ಟೋಯಿಂಗ್ ಕುರಿತಂತೆ 15 ದಿನಗಳಲ್ಲಿ ಸರಳೀಕೃತ ವ್ಯವಸ್ಥೆ ಜಾರಿ: ಆರಗ

‘ಟೋಯಿಂಗ್ ತಾತ್ಕಾಲಿಕ ಸ್ಥಗಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದಲ್ಲಿ ಇನ್ನು ಟೋಯಿಂಗ್ ಕುರಿತಂತೆ 15 ದಿನಗಳಲ್ಲಿ ಸರಳೀಕೃತ ವ್ಯವಸ್ಥೆ ಜಾರಿ ಬರಲಿದ್ದು, ಅಲ್ಲಿಯವರೆಗೆ ಟೋಯಿಂಗ್ ಸ್ಥಗಿತಗೊಳಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಆರಗ ಜ್ಞಾನೇಂದ್ರ

ಸುಗಮ ಸಂಚಾರ ವ್ಯವಸ್ಥೆ ಮತ್ತು ಟೋಯಿಂಗ್ ಕುರಿತಂತೆ ಪೊಲೀಸ್ ಅಧಿಕಾರಿಗಳ ಜತೆ ಬುಧವಾರ ಸಭೆಯ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಈಗ ಟೋಯಿಂಗ್‌ನಿಂದ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗಳಿಗೆ ಸೂಕ್ತಪರಿಹಾರ ಕಂಡಕೊಳ್ಳಲು ನಿರ್ಧಾರ ಮಾಡಿದ್ದೇವೆ. ಈ ಸಂಬಂಧ ಕೆಲವು ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಅದನ್ನು ಮುಖ್ಯಮಂತ್ರಿಯವರ ಜತೆ ಚರ್ಚಿಸಿ, ಬಳಿಕ ಪ್ರಕಟಿಸಲಾಗುವುದು ಎಂದು ಜ್ಞಾನೇಂದ್ರ ಹೇಳಿದರು.

ನಿಯಮಾವಳಿಗಳನ್ನು ಆದಷ್ಟು ಸರಳೀಕರಣ ಮಾಡುವುದರ ಜತೆಗೆ ಹೆಚ್ಚು ಪಾರದರ್ಶಕವಾಗಿ ಇರುವಂತೆ ನೋಡಿಕೊಳ್ಳಲಾಗುವುದು. ಅನಗತ್ಯ ಗೊಂದಲಗಳನ್ನು ನಿವಾರಿಸಲಾಗುವುದು. ನೋ ಪಾರ್ಕಿಂಗ್ ಫಲಕ ವಾಹನ ಸವಾರರಿಗೆ ಕಾಣುವಂತೆ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ದಂಡದ ಮೊತ್ತದ ಪರಿಷ್ಕರಣೆಯೂ ಸೇರಿ ಹಲವು ವಿಷಯಗಳ ಬಗ್ಗೆ ಸ್ಪಷ ನಿರ್ಧಾರಕ್ಕೆ ಬರಲಾಗುವುದು. ಹೊಸ ವ್ಯವಸ್ಥೆ ಘೋಷಣೆ ಮಾಡುವವರೆಗೆ ನಗರ ಪೊಲೀಸ್ ಸಿಬ್ಬಂದಿ ನೋಪಾರ್ಕಿಂಗ್ ಉಲ್ಲಂಘನೆ ಪ್ರಕರಣಗಳನ್ನು ನಿಭಾಯಿಸುತ್ತಾರೆ ಎಂದು ಹೇಳಿದರು.

ಟೋಯಿಂಗ್: ಪೊಲೀಸರ ತಪ್ಪಿಲ್ಲ– ಸದಾನಂದಗೌಡ

ನವದೆಹಲಿ: ಭಾರಿ ವಿವಾದಕ್ಕೆ ಕಾರಣವಾಗಿರುವ ಬೆಂಗಳೂರಿನ ವಾಹನಗಳ ಟೋಯಿಂಗ್ ಸಮಸ್ಯೆ ನಿವಾರಣೆ ನಿಟ್ಟಿನಲ್ಲಿ ವಾಹನ ದಟ್ಟಣೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಎಂದು ಸಂಸದ ಡಿ.ವಿ. ಸದಾನಂದಗೌಡ ಅಭಿಪ್ರಾಯಪಟ್ಟರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಈ ವಿಷಯ ತಿಳಿಸಿದ ಅವರು, ಅಸಮರ್ಪಕ ನಿರ್ವಹಣೆಯಿಂದಾಗಿ ವಾಹನ ದಟ್ಟಣೆ ಹೆಚ್ಚುತ್ತಿದೆ. ಹೆಬ್ಬಾಳ ಫ್ಲೈಓವರ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲು 20 ನಿಮಿಷದ ಬದಲಿಗೆ, 1 ಗಂಟೆಗೂ ಅಧಿಕ ಸಮಯ ವ್ಯಯವಾಗುತ್ತಿದೆ ಎಂದರು.

ಬೆಂಗಳೂರಿನಲ್ಲಿ ಜನರು ಮನಬಂದ ಕಡೆ ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ದಟ್ಟಣೆ ಹೆಚ್ಚುತ್ತಿದೆ ಎಂದು ಅವರು ದೂರಿದರು.

ಭ್ರಷ್ಟಾಚಾರ ನಿಯಂತ್ರಣಕ್ಕೆಂದೇ ರಾಜ್ಯ ಸರ್ಕಾರ ಆರಂಭಿಸಿರುವ ‘ಸಕಾಲ’ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸುವ ಅಗತ್ಯವಿದೆ. ಈ ಮೂಲಕ ಜನರ ಮನೆಬಾಗಿಲಿಗೇ ಸೌಲಭ್ಯ ತಲುಪಿಸಿದಲ್ಲಿ ವಾಹನ ದಟ್ಟಣೆ ಕಡಿಮೆ ಮಾಡಬಹುದು ಎಂದೂ ಅವರು ಹೇಳಿದರು.

‘ಸಕಾಲ ಯೋಜನೆಯ ಸಮರ್ಪಕ ಜಾರಿ ಕೋರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದೇನೆ. ಈ ಕುರಿತು ಕ್ರಮ ಕೈಗೊಳ್ಳುವ ಭರವಸೆ ದೊರೆತಿದ್ದರೂ ಇದುವರೆಗೆ ಈಡೇರಿಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ವಾಹನಗಳ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲು ಟೋಯಿಂಗ್ ಮಾಡಲಾಗುತ್ತದೆ. ಇದರಲ್ಲಿ ಖಂಡಿತ ಪೊಲೀಸರ ತಪ್ಪಿಲ್ಲ’ ಎಂದು ಅವರು ಪೊಲೀಸರ ಕ್ರಮವನ್ನು ಬೆಂಬಲಿಸಿದರು.

ಸಾರ್ವಜನಿಕರು ತಮ್ಮ ಮನೆಗಳ ಮುಂದಿರುವ ರಸ್ತೆ ಮೇಲೆ ವಾಹನ ನಿಲುಗಡೆ ಮಾಡುವುದರಿಂದಲೂ ಅವ್ಯವಸ್ಥೆ ಉಂಟಾಗುತ್ತಿದೆ. ಮನೆಗಳ ನಿರ್ಮಾಣಕ್ಕೆ ಪರವಾನಗಿ ನೀಡುವಾಗಲೇ ವಾಹನಗಳ ವೈಯಕ್ತಿಕ ಪಾರ್ಕಿಂಗ್ ಸೌಲಭ್ಯ ಹೊಂದುವಂತೆ ಸೂಚಿಸಬೇಕು ಎಂದು ಅವರು ಸಲಹೆ ನೀಡಿದರು.

ಪ್ರತಿಯೊಬ್ಬರೂ ಒಂದಕ್ಕಿಂತ ಹೆಚ್ಚು ವಾಹನ ಹೊಂದಿರುವುದರಿಂದ ನಿಲುಗಡೆಗೆ ಜಾಗವಿಲ್ಲದೆ, ರಸ್ತೆ ಮೇಲೆ ನಿಲುಗಡೆ ಮಾಡುವುದರಿಂದ ಸಮಸ್ಯೆ ತಲೆದೋರಿದೆ. ಮನಸೋ ಇಚ್ಛೆ ವಾಹನ ನಿಲ್ಲಿಸುವುದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಯವರು ಸೂಚಿಸಬೇಕು ಎಂದು ಅವರು ಕೋರಿದರು.

ಅಲ್ಲಲ್ಲಿ ವಾಹನ ಪಾರ್ಕಿಂಗ್‌ಗೆ ಸ್ಥಳಾವಕಾಶ ಇದ್ದರೂ ಜನ, ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುತ್ತಾರೆ. ಇದನ್ನು ತಡೆಯಲು ಪೊಲೀಸರು ನಿಯಮಾನುಸಾರ ಟೋಯಿಂಗ್ ಮಾಡುತ್ತಾರೆ. ಸರ್ಕಾರವೂ ಜನರನ್ನು ಓಲೈಸಲು ಮುಂದಾಗದೇ ಕ್ರಮಕ್ಕ ಮುಂದಾಗಬೇಕಿದೆ ಎಂದು ಅವರು ಸೂಚಿಸಿದರು.

ಪೊಲೀಸರು ಸುವ್ಯವಸ್ಥೆಗೆ ಶ್ರಮಿಸುತ್ತಾರೆ. ಆದರೆ, ಅವರನ್ನೇ ದೂಷಿಸಿ ಕೆಲಸದಿಂದ ಅಮಾನತು ಮಾಡುವಂತೆ ಆಗ್ರಹಿಸುವುದು ಸರಿಯಲ್ಲ ಎಂದರು.

ಕಸ ವಿಲೇವಾರಿ ಸಮಸ್ಯೆಯ ಕುರಿತೂ ಸರ್ಕಾರ ಗಮನ ಹರಿಸಬೇಕು. ಕಸ ವಿಲೇವಾರಿಯನ್ನು ಆಯಾ ವಾರ್ಡ್ ಮಟ್ಟದಲ್ಲೇ ಆಗುವಂತೆ ಹಾಗೂ ತ್ಯಾಜ್ಯವನ್ನು ಸಮರ್ಪಕವಾಗಿ ವಿಂಗಡಣೆ ಮಾಡುವ ವ್ಯವಸ್ಥೆಯೂ ಮೂಲದಲ್ಲೇ ಆಗುವಂತೆ ಕ್ರಮ ಕೈಗೊಳಬೇಕಿದೆ ಎಂದು ಸದಾನಂದಗೌಡ ಆಗ್ರಹಿಸಿದರು.

ಟೋಯಿಂಗ್ ಪ್ರತಿಕ್ರಿಯೆಗಳು

‘ಊಟ ಬಿಟ್ಟು ಓಡಿದೆ’

ಲಾಕ್‌ಡೌನ್ ಜಾರಿಯಾಗುವ ಮುನ್ನ ರಾಜಾಜಿನಗರದ ಹೋಟೆಲ್‌ವೊಂದರಲ್ಲಿ ಊಟ ಮಾಡಲು ತೆರಳಿದ್ದೆ. ಬೈಕ್ ಅನ್ನು ಹೋಟೆಲ್ ಮುಂಭಾಗ ನಿಲ್ಲಿಸಿ, ಊಟ ಸವಿಯುತ್ತಿದ್ದೆ. ನೋಡ ನೋಡುತ್ತಲೇ ಟೋಯಿಂಗ್ ವಾಹನ ಬಂದು ಬೈಕ್ ಎತ್ತಿಕೊಂಡು ಹೊರಟಿತು.

ತಿನ್ನುವುದನ್ನು ಅರ್ಧಕ್ಕೆ ಬಿಟ್ಟು ವಾಹನದ ಹಿಂದೆ ಓಡಿದೆ. ‘ದಂಡವನ್ನು ಸ್ಥಳದಲ್ಲೇ ಪಾವತಿಸುತ್ತೇನೆ, ಗಾಡಿ ಕೊಡಿ’ ಎಂದು ಮನವಿ ಮಾಡಿಕೊಂಡರೂ ಕೇಳಲಿಲ್ಲ. ಗಾಡಿ ಹೊತ್ತು ಹೊರಟೇ ಹೋದರು. ಕೊನೆಗೆ ಠಾಣೆಗೆ ಹೋದಾಗ ಗಾಡಿ ಬಿಟ್ಟು ಕಳುಹಿಸಿದರು. ಹೋಟೆಲ್‌ಗಳ ಮುಂದೆ ವಾಹನ ನಿಲುಗಡೆಗೆ ಅವಕಾಶ ಇಲ್ಲದ ಮೇಲೆ ಪರವಾನಗಿ ಏಕೆ ನೀಡುತ್ತಾರೆ? ಟೋಯಿಂಗ್ ವ್ಯವಸ್ಥೆಯಿಂದಾಗಿ ಹೋಟೆಲ್‌ಗಳಲ್ಲಿ ನೆಮ್ಮದಿಯಾಗಿ ಊಟ ಮಾಡುವುದಕ್ಕೂ ಅವಕಾಶ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ.

ಆನಂದ್ ಎರಪಲ್, ಬೈರವೇಶ್ವರ ನಗರ

‘ಅವಾಚ್ಯ ಶಬ್ದ ಬಳಸಿದ್ದರು’

ಟೋಯಿಂಗ್ ವಿಚಾರವಾಗಿ ಭಾಷ್ಯಂ ವೃತ್ತದಲ್ಲಿ ಇತ್ತೀಚೆಗೆ ನಡೆದ ಒಂದು ಘಟನೆಯನ್ನು ನನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದೆ. ಮೊದಲು ವೈಯಾಲಿಕಾವಲ್ ಮುಖ್ಯರಸ್ತೆಯಲ್ಲಿ ಒಂದು ಬೈಕ್ ಟೋ ಮಾಡಿದ್ದರು. ಓಡುತ್ತಾ ಬಂದ ವಾಹನದ ಮಾಲೀಕ ಎಷ್ಟೇ ಮನವಿ ಮಾಡಿದರೂ ಬೈಕ್ ಕೊಡಲಿಲ್ಲ. ಟೋಯಿಂಗ್ ವಾಹನ ಅಲ್ಲಿಂದ ಭಾಷ್ಯಂ ವೃತ್ತಕ್ಕೆ ಬಂದು ನಿಂತಿತ್ತು. ಅಲ್ಲಿದ್ದ ಇತರ ವಾಹನಗಳ ಸವಾರರು ಟೋಯಿಂಗ್ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

‘ಟೋಯಿಂಗ್ ಮಾಡಿದ ಸ್ಥಳದಲ್ಲೇ ಮಾಲೀಕರು ಬೇಡಿಕೊಂಡರೂ ಬೈಕ್ ಏಕೆ ಕೊಡಲಿಲ್ಲ’ ಎಂದು ಪ್ರಶ್ನಿಸಿದರು. ಆಗ ಟೋಯಿಂಗ್ ಸಿಬ್ಬಂದಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು.

ಸಿ.ರುದ್ರಪ್ಪ, ಪ್ಯಾಲೇಸ್ ಗುಟ್ಟಹಳ್ಳಿ

‘ದಂಡ ಕಟ್ಟಿಸಿಕೊಳ್ಳುವುದೇ ಗುರಿ’

ಟೋಯಿಂಗ್ ಸುಲಿಗೆಗೆ ಒಳಗಾದವರಲ್ಲಿ ನಾನೂ ಒಬ್ಬಳು. ಮಲ್ಲೇಶ್ವರದ ಬ್ಯಾಂಕ್‌ವೊಂದರ ಸುತ್ತಲೂ ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶ ಇದೆ. ಆದರೆ, ಅಲ್ಲಿ ಕಾರುಗಳನ್ನು ನಿಲ್ಲಿಸಿದ್ದರು. ನನ್ನ ಗಾಡಿಗೆ ಹೇಗೋ ಸ್ಥಳ ಗಿಟ್ಟಿಸಿಕೊಂಡೆ. ಕೆಲವೇ ನಿಮಿಷಗಳಲ್ಲಿ ಟೋಯಿಂಗ್ ವಾಹನ ಬಂತು. ಟೋಯಿಂಗ್ ಸಿಬ್ಬಂದಿ ನನ್ನ ಗಾಡಿ ತೆಗೆಯಲು ಮುಂದಾದರು. ಈ ಬಗ್ಗೆ ಪ್ರಶ್ನಿಸಿದಾಗ,‘ನಿಮ್ಮ ಗಾಡಿ ಗೆರೆಯಿಂದ ಹೊರಗೆ ನಿಂತಿದೆ. ಅದಕ್ಕೆ ಟೋ ಮಾಡುತ್ತಿದ್ದೇವೆ’ ಎಂದರು. ಅದೇ ಜಾಗದಲ್ಲಿರುವ ಕಾರನ್ನು ಟೋ ಮಾಡುವುದಿಲ್ಲವೇ ಎಂದು ಪ್ರಶ್ನಿಸಿದರೆ, ‘ಮೊದಲು ನೀವು ದಂಡ ಕಟ್ಟಿ’ ಎಂದು ಜೋರು ದನಿಯಲ್ಲಿ ಹೇಳಿದರು.

ಒಟ್ಟಾರೆ ದಂಡ ಕಟ್ಟಿಸಿಕೊಳ್ಳುವುದೇ ಅವರ ಗುರಿಯಾಗಿತ್ತು. ಗೆರೆಯ ನೆಪದಲ್ಲಿ ಕೊನೆಗೂ ದಂಡ ಕಟ್ಟಿಸಿಕೊಂಡರು. ತಪ್ಪಿಲ್ಲದಿದ್ದರೂ ದಂಡ ಪಾವತಿಸುವ ಸಾರ್ವಜನಿಕರ ಗೋಳು ಕೇಳುವವರಿಲ್ಲ. ರಸ್ತೆಯಲ್ಲಿ ಟೋಯಿಂಗ್ ವಾಹನ ಕಂಡರೆ ಈಗಲೂ ಹೆದರುತ್ತೇನೆ

ಪುಷ್ಪಾ ಶ್ರೀರಾಮ್, ವಸಂತಪ್ಪ ಬ್ಲಾಕ್

ಟೋಯಿಂಗ್ ಕಿರಿಕಿರಿ: ನೀವೂ ಬರೆಯಿರಿ

ಟೋಯಿಂಗ್ ಹೆಸರಿನಲ್ಲಿ ಸುಲಿಗೆ, ಕಿರಿಕಿರಿಗೆ ಒಳಗಾಗಿದ್ದರೆ ನಿಮ್ಮ ಅಭಿಪ್ರಾಯವನ್ನು ಬರೆದು ಕಳುಹಿಸಿ. ಎಲ್ಲಿ, ಯಾವಾಗ ನಡೆಯಿತು ಎಂಬ ವಿವರ ಇರಲಿ. ಜತೆಗೆ ನಿಮ್ಮದೊಂದು ಫೋಟೋ, ಮೊಬೈಲ್ ನಂಬರ್, ವಿಳಾಸ ಇರುವುದು ಅಗತ್ಯ. ಗರಿಷ್ಠ ಪದ ಮಿತಿ 100 ಪದಗಳು

ವಾಟ್ಸ್ ಆ್ಯಪ್ ಸಂಖ್ಯೆ 9606038256

ರೋಗಿಯ ಜೀವ ಉಳಿಸಿದ ಸಂಚಾರ ಪೊಲೀಸ್ ಸಿಬ್ಬಂದಿ

ಬೆಂಗಳೂರು: ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆಯ ಸಿಬ್ಬಂದಿ ಕಾಸಪ್ಪ ಕಲ್ಲೂರ ಸಮಯ ಪ್ರಜ್ಞೆ ಮೆರೆದು ರೋಗಿಯೊಬ್ಬರ ಜೀವ ಉಳಿಸಿದ್ದಾರೆ.

ವ್ಯಕ್ತಿಯೊಬ್ಬರನ್ನು ಮಂಗಳವಾರ ಆಂಬುಲೆನ್ಸ್ ಮೂಲಕ ಗ್ಲೋಬಲ್ ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿತ್ತು. ಅರಮನೆ ರಸ್ತೆಯಲ್ಲಿರುವ ಸಿಐಡಿ ಕಚೇರಿ ಬಳಿ ಮಧ್ಯಾಹ್ನ 1.15ರ ಸುಮಾರಿಗೆ ರೋಗಿಯಿದ್ದ ಆಂಬುಲೆನ್ಸ್‌ನ ಟಯರ್ ಪಂಕ್ಚರ್ ಆಗಿತ್ತು. ರೋಗಿಯ ಪತ್ನಿ ಹಾಗೂ ಮಗಳು ಸಹಾಯಕ್ಕಾಗಿ ಅಂಗಲಾಚಿದರೂ ಯಾರೂ ನೆರವಿಗೆ ಧಾವಿಸಿರಲಿಲ್ಲ.

ಇದನ್ನು ಕಂಡ ಕಾಸಪ್ಪ, ಅವರ ಬಳಿ ಹೋಗಿ ವಿಚಾರಿಸಿದ್ದಾರೆ. ತಮ್ಮ ಮೊಬೈಲ್‌ನಿಂದ ಆಂಬುಲೆನ್ಸ್‌ಗೆ ಕರೆಮಾಡಿದ್ದಾರೆ. ಸುಮಾರು ಹೊತ್ತು ಕಾದರೂ ಆಂಬುಲೆನ್ಸ್ ಬಂದಿಲ್ಲ. ಹೀಗಾಗಿ ಪಂಕ್ಚರ್ ಆಗಿದ್ದ ಚಕ್ರವನ್ನು ತಾವೇ ಬದಲಿಸಿ ಆಂಬುಲೆನ್ಸ್ ಹೊರಡಲು ನೆರವಾಗಿದ್ದಾರೆ.

ಮಧ್ಯಂತರ ವರದಿ ಶೀಘ್ರ ಸಲ್ಲಿಸುವಂತೆ ಮುಖ್ಯಮಂತ್ರಿ ಬೊಮ್ಮಾಯಿ ಸೂಚನೆ

‘ಸಾರಿಗೆ ಸಂಸ್ಥೆಗಳ ಪುನಃಶ್ಚೇತನಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಬುಧವಾರ ನಡೆದ ಸಭೆಯಲ್ಲಿ ಸಾರಿಗೆ ಸಂಸ್ಥೆಗಳ ಆರ್ಥಿಕ ಸ್ವಾವಲಂಬನೆ ಮತ್ತು ಸಂಪನ್ಮೂಲ ಕ್ರೋಡೀಕರಣ ಅಧ್ಯಯನ ಸಮಿತಿ ಅಧ್ಯಕ್ಷ ಎಂ.ಆರ್. ಶ್ರೀನಿವಾಸಮೂರ್ತಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ ಅವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ಹಣಕಾಸು ಇಲಾಖೆ ಕಾರ್ಯದರ್ಶಿ ಏಕ್ ರೂಪ್ ಕೌರ್, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಠಾರಿಯಾ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್ ಇದ್ದರು.

ಬೆಂಗಳೂರು: ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಗಳ ಪುನಃಶ್ಚೇತನಕ್ಕೆ ಸಂಬಂಧಿಸಿದಂತೆ ಶೀಘ್ರದಲ್ಲಿ ಮಧ್ಯಂತರ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೂಚನೆ ನೀಡಿದರು.

ರಾಜ್ಯದ ಸಾರಿಗೆ ಸಂಸ್ಥೆಗಳ ಆರ್ಥಿಕ ಸ್ವಾವಲಂಬನೆ ಮತ್ತು ಸಂಪನ್ಮೂಲ ಕ್ರೋಡೀಕರಣ ಅಧ್ಯಯನ ನಡೆಸಿ ವರದಿ ಸಲ್ಲಿಸಲು ರಚಿಸಿರುವ ಸಮಿತಿ ಅಧ್ಯಕ್ಷ ಎಂ.ಆರ್. ಶ್ರೀನಿವಾಸಮೂರ್ತಿ ಅವರೊಂದಿಗೆ ನಡೆಸಿದ ಸಭೆಯಲ್ಲಿ ಈ ಸೂಚನೆ ನೀಡಿದರು.

ಸಾರಿಗೆ ಸಂಸ್ಥೆಗಳ ಸಾಮರ್ಥ್ಯ ಗುರುತಿಸಿ, ಅವುಗಳ ದಕ್ಷ ಬಳಕೆಗೆ ಮಾರ್ಗೋಪಾಯಗಳನ್ನು ಶಿಫಾರಸು ಮಾಡುವಂತೆ ತಿಳಿಸಿದರು.

ಸಾರಿಗೆ ಸಂಸ್ಥೆಗಳ ಆಸ್ತಿಗಳಿಂದ ಆದಾಯ, ಸಂಸ್ಥೆಯ ವರ್ಕ್‌ಶಾಪ್‌ಗಳ ಸದ್ಬಳಕೆ, ಮಾನವ ಸಂಪನ್ಮೂಲದ ದಕ್ಷ ಬಳಕೆ, ಸಂಸ್ಥೆಗಳ ಸೇವೆಯಲ್ಲಿ ಸುಧಾರಣೆ, ತಂತ್ರಜ್ಞಾನದ ಬಳಕೆ ಮೊದಲಾದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಸಮಿತಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ತಾವು ಕೈಗೊಂಡ ಕ್ರಮಗಳ ಕುರಿತು ಎಂ.ಆರ್. ಶ್ರೀನಿವಾಸಮೂರ್ತಿ ಮಾಹಿತಿ ನೀಡಿದರು.

1,008 ಕಿ.ಮೀ. ಹೆದ್ದಾರಿ ಮರು ಡಾಂಬರೀಕರಣ

ಬೆಂಗಳೂರು: ಕೆ-ಶಿಪ್, ಎಸ್‌ಎಚ್‌ಡಿಪಿ ಮತ್ತು ಕೆಆರ್‌ಡಿಸಿಎಲ್ ವತಿಯಿಂದ ಅಭಿವೃದ್ಧಿಪಡಿಸಿದ್ದ ರಸ್ತೆಗಳ ಪೈಕಿ ಜೀವಿತಾವಧಿ ಮುಗಿದಿರುವ 1008 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳ ಮರು ಡಾಂಬರೀಕರಣಕ್ಕೆ ಸಮಗ್ರ ಯೋಜನಾ ವರದಿ(ಡಿಪಿಆರ್) ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ನಡೆದ ಲೋಕೋಪಯೋಗಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ರಸ್ತೆ ಅಭಿವೃದ್ಧಿ ಯೋಜನೆಗಳನ್ನು ಅಗತ್ಯಕ್ಕೆ ಅನುಗುಣವಾಗಿ, ಸಂಚಾರ ದಟ್ಟಣೆಯನ್ನು ಗಮನದಲ್ಲಿರಿಸಿಕೊಂಡು ರೂಪಿಸಬೇಕು ಮತ್ತು ಸರ್ಕಾರ ಬಿಡುಗಡೆಗೊಳಿಸಿದ ಅನುದಾನ ಗರಿಷ್ಠ ಪ್ರಮಾಣ ಸದ್ಬಳಕೆಯಾಗಬೇಕು ಎಂದೂ ಹೇಳಿದರು. ರಾಜ್ಯ ವ್ಯಾಪಿ ವಿವಿಧ ಎಂಜಿನಿಯರಿಂಗ್ ಇಲಾಖೆಗಳ ಏಕರೂಪ ದರಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಡಿ ಜಾರಿಗೆ ತರಲಾಗುತ್ತಿದ್ದು, ಇದರಂತೆಯೇ ಸರ್ಕಾರಿ ಕಟ್ಟಡಗಳಲ್ಲಿ ಬಳಕೆಯಾಗುವ ವಸ್ತುಗಳಿಗೆ ಕೂಡ ಏಕರೂಪ ದರಪಟ್ಟಿಯನ್ನು ರೂಪಿಸುವಂತೆಯೂ ನಿರ್ದೇಶನ ನೀಡಿದರು.

ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳೊಂದಿಗೆ ಸಂಯೋಜನೆ ಆಗಬೇಕು. ಇದಕ್ಕೆ ಪೂರಕವಾಗಿ ರಸ್ತೆ ತಜ್ಞರಿಂದ ಮಾಸ್ಟರ್ ಪ್ಲಾನ್ ತಯಾರಿಸಬೇಕು ಎಂದೂ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಇಲಾಖೆಯ ಒಡೆತನದ ಭೂಮಿಯಲ್ಲಿ ಕರ್ನಾಟಕ ವಸತಿ ಸಂಕೀರ್ಣ ನಿರ್ವಹಿಸಲು ₹45 ಕೋಟಿ ವೆಚ್ಚದಲ್ಲಿ ಮೊದಲ ಹಂತದ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಎಂದು ಬೊಮ್ಮಾಯಿ ಹೇಳಿದರು.

ಸಭೆಯಲ್ಲಿ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಬಿ.ಎಚ್. ಅನಿಲ್‌ಕುಮಾರ್ ಮತ್ತು ಹಿರಿಯ ಅಧಿಕಾರಿಗಳು ಇದ್ದರು.

ಸಭಾಂಗಣ ಉದ್ಘಾಟಿಸಿದ ಸಚಿವ ವಿ. ಸುನೀಲ್ ಕುಮಾರ್

ಸುವರ್ಣ ಸಮುಚ್ಚಯ ಪ್ರದರ್ಶನಕ್ಕೆ ಸಿದ್ಧ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ. ಸುನಿಲ್ ಕುಮಾರ್ 'ಕಲಾಗ್ರಾಮದ ಸುವರ್ಣ ಸಮುಚ್ಚಯ ನವೀಕೃತ ಸಭಾಂಗಣ'ದ ಲೋಕಾರ್ಪಣೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಲಲಿತಕಲಾ ಅಕಾಡೆಮಿ ಅಧ್ಯಕ್ಷ ಮಹೇಂದ್ರ ಡಿ ಇದ್ದರು ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ಅಗ್ನಿ ಅವಘಡದಿಂದ ಹಾನಿಗೊಳಗಾಗಿದ್ದ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸುವರ್ಣ ಸಮುಚ್ಚಯ ಸಭಾಂಗಣವು ಮೂರು ವರ್ಷಗಳ ಬಳಿಕ ಪ್ರದರ್ಶನಕ್ಕೆ ಸಿದ್ಧಗೊಂಡಿದೆ.

2018ರಲ್ಲಿ ಸಂಭವಿಸಿದ ಶಾರ್ಟ್ ಸರ್ಕೀಟ್‌ನಿಂದ ಸಭಾಂಗಣದ ಧ್ವನಿ-ಬೆಳಕಿನ ಉಪಕರಣಗಳು ಸಂಪೂರ್ಣ ಸುಟ್ಟು ಕರಗಲಾಗಿದ್ದವು. ನವೀಕರಣಗೊಂಡ ಸಭಾಂಗಣವನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅವರು ಬುಧವಾರ ಉದ್ಘಾಟಿಸಿದರು.

‘ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿಯೇ ನಗರದ ಹೊರವಲಯದಲ್ಲಿ ನಾಲ್ಕು ಕಲಾಕ್ಷೇತ್ರಗಳನ್ನು ನಿರ್ಮಿಸಲಾಗುತ್ತದೆ. ಜಾಗ ಗುರುತಿಸುವ ಕೆಲಸ ನಡೆಯುತ್ತಿದೆ. ರವೀಂದ್ರ ಕಲಾಕ್ಷೇತ್ರ, ಕಲಾಗ್ರಾಮ ಮತ್ತು ಜಿಲ್ಲಾ ರಂಗಮಂದಿರಗಳ ನಿರ್ವಹಣೆ ಕುರಿತು ಸರ್ಕಾರ, ಇಲಾಖೆಗೆ ಸಲಹೆಗಳು ಬಂದಿವೆ. ಈ ಬಗ್ಗೆ ಅಧಿಕಾರಿಗಳ ಜತೆಗೆ ಚರ್ಚಿಸಿ, ನಿರ್ವಹಣೆಯ ಬಗ್ಗೆ ನಿರ್ಧರಿಸಲಾಗುತ್ತದೆ’ ಎಂದು ಸುನೀಲ್ ಕುಮಾರ್ ತಿಳಿಸಿದರು.

‘ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಇಲಾಖೆ ಕೂಡ ‘ಅಮೃತ ಭಾರತಿಗೆ ಕನ್ನಡದ ಆರತಿ’ ಎಂಬ ಶೀರ್ಷಿಕೆಯಡಿ ವರ್ಷಪೂರ್ತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಕೋವಿಡ್‌ನಿಂದಾಗಿ ಕಾರ್ಯಕ್ರಮ ಆರಂಭಿಸಲು ಸಾಧ್ಯವಾಗಿರಲಿಲ್ಲ. ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸಲಾಗುತ್ತದೆ’ ಎಂದರು.

‘ಬಾಡಿಗೆ ಹೆಚ್ಚಿಸಿದರೆ ಅನ್ಯಾಯ’

‘ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ₹ 5 ಸಾವಿರದಿಂದ ₹ 10 ಸಾವಿರಕ್ಕೆ ಹೆಚ್ಚಳ ಮಾಡಲು ಸರ್ಕಾರ ಮುಂದಾಗಿದೆ ಎಂಬ ಮಾಹಿತಿಯಿದೆ. ಒಂದು ವೇಳೆ ಬಾಡಿಗೆ ಹೆಚ್ಚಳ ಮಾಡಿದರೆ ಕಲಾವಿದರಿಗೆ ಅನ್ಯಾಯವಾಗಲಿದೆ. ಸದ್ಯ ₹ 3 ಸಾವಿರಕ್ಕೆ ಕಲಾಕ್ಷೇತ್ರವನ್ನು ಕಲಾ ಚಟುವಟಿಕೆಗಳಿಗೆ ನೀಡಲಾಗುತ್ತಿದೆ’ ಎಂದು ರಂಗಕರ್ಮಿ ಕೆ.ವಿ. ನಾಗರಾಜಮೂರ್ತಿ ತಿಳಿಸಿದರು.

ವಸತಿ ಶಾಲೆಗಳಿಗೆ ಪ್ರವೇಶ: ಮಾರ್ಚ್ 20ಕ್ಕೆ ಪರೀಕ್ಷೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ವಸತಿ ಶಾಲೆಗಳಲ್ಲಿ 2022–23ನೇ ಶೈಕ್ಷಣಿಕ ಸಾಲಿನ 6ನೇ ತರಗತಿಗೆ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಫೆ.3ರಿಂದ ಫೆ.22ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಪ್ರವೇಶ ಪರೀಕ್ಷೆ ಮತ್ತು ಆನ್‌ಲೈನ್ ಕೌನ್ಸೆಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಲಿದೆ.

ಮಾರ್ಚ್ 20ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ಗಂಟೆಯವರೆಗೆ 100 ಅಂಕಗಳಿಗೆ ಪ್ರವೇಶ ಪರೀಕ್ಷೆ ನಡೆಯಲಿದೆ.

ಅರ್ಜಿ ಸಲ್ಲಿಸುವ ವಿಧಾನ ಹಾಗೂ ಮಾಹಿತಿ ಪುಸ್ತಕಕ್ಕಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.nic.in ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಕುಂಬಳಗೋಡು ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ನಡೆದ ‘ಪ್ರಜಾವಾಣಿ’ ಪತ್ರಿಕೆ ವಿತರಣಾ (ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ದಿಕ್ಸೂಚಿ) ಸಮಾರಂಭಕ್ಕೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೈ.ವಿ. ಬಾಲಸುಬ್ರಹ್ಮಣ್ಯ ಚಾಲನೆ ನೀಡಿದರು. ಪ್ರೌಢಶಾಲೆಯ ಮುಖ್ಯಶಿಕ್ಷಕಿ ಗಿರಿಜಾ, ಶಿಕ್ಷಕರಾದ ಮಲ್ಲಿಕಾರ್ಜುನ, ಸಮೀರ್ ಪಾಷಾ, ಸುನೀತಾ, ‘ಪ್ರಜಾವಾಣಿ’ಯ ಕಾರ್ಯನಿರ್ವಾಹಕ ಮಹೇಶ್ ಹಾಗೂ ವಿದ್ಯಾರ್ಥಿಗಳು ಇದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ನಡೆದ ರಾಷ್ಟ್ರೀಯ ನರೇಗಾ ದಿನಾಚರಣೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತೆ ಶಿಲ್ಪಾ ನಾಗ್ ಅವರು, ನರೇಗಾ ಯೋಜನೆಯಡಿ ನೂರು ದಿನ ಕೆಲಸ ಮಾಡಿದ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಬನ್ನಹಳ್ಳದ ಮಂಜುಳ ಅವರನ್ನು ಸನ್ಮಾನಿಸಿದರು.

ಫೆ 7 ರಿಂದ ಬಜೆಟ್ ಪೂರ್ವಭಾವಿ ಸಭೆ: ಸಿ.ಎಂ ಬೊಮ್ಮಾಯಿ

ಬೆಂಗಳೂರು: ಮಾರ್ಚ್‌ನಲ್ಲಿ ಚೊಚ್ಚಲ ಬಜೆಟ್ ಮಂಡಿಸಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದೇ 7 ರಿಂದ ಬಜೆಟ್ ಪೂರ್ವಭಾವಿ ಸಭೆಗಳನ್ನು ಆರಂಭಿಸಲಿದ್ದಾರೆ.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಎಲ್ಲ ಇಲಾಖೆಗಳ ಮುಖ್ಯಸ್ಥರ ಜತೆ ಸಭೆ ನಡೆಸಲಾಗುವುದು. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ದೊರೆಯಲಿರುವ ಸಾಲ ಮತ್ತು ಅನುದಾನಗಳನ್ನು ನೋಡಿಕೊಂಡು ಬಜೆಟ್‌ನ ರೂಪುರೇಷೆಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಕೇಂದ್ರದಿಂದ ರಾಜ್ಯ ಸಿಕ್ಕಿರುವ ಹೊಸ ಯೋಜನೆಗಳು ಅವುಗಳಿಗೆ ನಿಗದಿಯಾಗಿರುವ ಮೊತ್ತ. ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಸಿಕ್ಕಿರುವ ಅನುದಾನವನ್ನು ಲೆಕ್ಕಕ್ಕೆ ತೆಗೆದುಕೊಂಡು ಬಜೆಟ್ ಸಿದ್ಧಪಡಿಸಲಾಗುತ್ತದೆ ಎಂದು ಅವರು ತಿಳಿಸಿದರು.

2023 ಕ್ಕೆ ವಿಧಾನಸಭೆ ಚುನಾವಣೆ ನಡೆಯುವುದರಿಂದ ಸರ್ಕಾರ ಈ ಬಜೆಟ್‌ನಲ್ಲಿ ಒಂದಷ್ಟು ಜನಪ್ರಿಯ ಯೋಜನೆಗಳನ್ನು ಘೋಷಿಸುವ ಸಾಧ್ಯತೆ ಇದೆ. ಮುಂದಿನ ವರ್ಷ ಬಜೆಟ್ ಮಂಡಿಸಿದರೂ ಅದು ಜಾರಿ ಆಗುವ ಸಾಧ್ಯತೆ ಇಲ್ಲ. ಅಷ್ಟರಲ್ಲೇ ಚುನಾವಣೆ ಘೋಷಣೆ ಆಗಲಿದೆ. ಈ ಮಧ್ಯೆ ವಿವಿಧ ಸಂಘ ಸಂಸ್ಥೆಗಳು, ಸಮುದಾಯಗಳು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಮಂಡಿಸಲು ಆರಂಭಿಸಿದ್ದಾರೆ.

ಸಚಿವರಿಗೆ ಜಿಲ್ಲಾ ಉಸ್ತುವಾರಿ ಅನಗತ್ಯ: ಮಾಜಿ ಸಚಿವ ಸೋಮಶೇಖರ್ ಪತ್ರ

ಪ್ರಜಾವಾಣಿ ವಾರ್ತೆ

ಸೋಮಶೇಖರ್

ಬೆಂಗಳೂರು: ಸಚಿವರನ್ನು ಜಿಲ್ಲಾ ಉಸ್ತುವಾರಿಯಾಗಿ ನೇಮಕ ಮಾಡುವುದರಿಂದ ಅನುಕೂಲತೆಗಿಂತ ಗೊಂದಲವೇ ಹೆಚ್ಚಾಗುತ್ತಿದ್ದು, ಈ ನೇಮಕವನ್ನು ರದ್ದು ಮಾಡಿ ಎಂದು ಮಾಜಿ ಸಚಿವ ಬಿ. ಸೋಮಶೇಖರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಸ್ವಾತಂತ್ರ್ಯಾನಂತರದ ಆರಂಭದ ಕಾಲದಲ್ಲಿ ಜಿಲ್ಲಾ ಉಸ್ತುವಾರಿ ಹಾಗೂ ಉಪಮುಖ್ಯಮಂತ್ರಿ ಎಂದು ಯಾರನ್ನೂ ನೇಮಕ ಮಾಡುತ್ತಿರಲಿಲ್ಲ. ಸಂವಿಧಾನದ ಅನುಸಾರ ಇಂತಹ ನೇಮಕಕ್ಕೆ ಅವಕಾಶವೂ ಇಲ್ಲ. ಆದರೆ, ಸಂವಿಧಾನ ವಿರೋಧಿಯಾಗಿರುವ ಈ ಪದ್ಧತಿ ಜಾರಿಗೆ ಬಂದು ಕೆಲವು ದಶಕಗಳೇ ಕಳೆದಿದ್ದು, ರಾಜಕೀಯ ಸಂಪ್ರದಾಯವಾಗಿ ಬೆಳೆದು ಬಂದಿದೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಎಲ್ಲ ಇಲಾಖೆಗಳು ಆಯಾ ಖಾತೆಯ ಮಂತ್ರಿಗಳ ಆಡಳಿತಕ್ಕೆ ಒಳಪಟ್ಟಿರುತ್ತದೆ. ಮುಖ್ಯಮಂತ್ರಿ ಮಾತ್ರ ವಿವಿಧ ಇಲಾಖೆಗಳಲ್ಲಿ ಕೈ ಹಾಕುವ ಅವಕಾಶ ಇರುತ್ತದೆ. ಹೀಗಿರುವಾಗ, ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಇಲಾಖೆಯ ವಿಷಯದಲ್ಲಿ ಮಾತ್ರ ತೊಡಗಿಸಿಕೊಳ್ಳಬಹುದೇ ಹೊರತು ಇತರ ಇಲಾಖೆಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ತಾವು ಪ್ರತಿನಿಧಿಸುವ ಜಿಲ್ಲೆಯ ಮಂತ್ರಿಯಾಗಿದ್ದವರು ಸಹಜವಾಗಿ ಅಲ್ಲಿನ ಆಡಳಿತದಲ್ಲಿ ಆಸಕ್ತಿ ತೋರುತ್ತಾರೆ. ಹೀಗಿರುವಾಗ ಹೊರಗಿನ ಜಿಲ್ಲೆಯವರಿಗೆ ಉಸ್ತುವಾರಿ ವಹಿಸಿದರೆ ಗೊಂದಲ, ಅಸಮಾಧಾನಕ್ಕೆ ಕಾರಣವಾಗುತ್ತದೆ. ಹೀಗಿರುವಾಗ, ರಾಜಕೀಯ ಕಾರಣಕ್ಕೆ ಸೃಷ್ಟಿಯಾಗಿರುವ ಸಂವಿಧಾನ ವಿರೋಧಿ ನೇಮಕಾತಿಗಳನ್ನು ನಿಲ್ಲಿಸುವುದು ಸೂಕ್ತ ಎಂದು ಅವರು ಪ್ರತಿಪಾದಿಸಿದ್ದಾರೆ.

ಜಿಲ್ಲೆಯೊಳಗೆ ಇಲಾಖೆಗಳ ಮಧ್ಯೆ ಸಮನ್ವಯ ಸಾಧಿಸಿ ಆಡಳಿತ ಉತ್ತಮಗೊಳಿಸಲು ಕಾರ್ಯದರ್ಶಿ ಮಟ್ಟದ ಹಿರಿಯ ಅಧಿಕಾರಿಯನ್ನು ಸಮನ್ವಯಾಧಿಕಾರಿಯಾಗಿ ನೇಮಿಸಬಹುದು. ಹಾಗೆ ಮಾಡಿದಲ್ಲಿ ಅಭಿವೃದ್ಧಿಯೂ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಎಚ್ಚರಿಕೆ

ಅನುಮತಿ ಪಡೆಯದೆ ರಸ್ತೆ ಅಗೆದರೆ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಗೌರವ್ ಗುಪ್ತ

ಬೆಂಗಳೂರು: 'ಪೂರ್ವಾನುಮತಿ ಪಡೆಯದೆ ರಸ್ತೆ ಅಗೆದರೆ, ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುತ್ತದೆ' ಎಂದು ಬಿಬಿಎಂಪಿಯ ಮುಖ್ಯ ಆಯುಕ್ತ ಗೌರವ್ ಗುಪ್ತ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಕೆಲವು ರಸ್ತೆಗಳ ಕೆಳಗೆ ವಿದ್ಯುತ್ ಕೇಬಲ್‌ಗಳು ಹಾಗೂ ಜಲಮಂಡಳಿಯವರು ಅಳವಡಿಸಿರುವ ಕುಡಿಯುವ ನೀರಿನ ಕೊಳವೆಗಳು ಇರುತ್ತವೆ. ಅವುಗಳಿಗೆ ಹಾನಿ ಉಂಟಾದಾಗ, ದುರಸ್ತಿಪಡಿಸಲು ರಸ್ತೆ ಕತ್ತರಿಸಬೇಕಾಗುತ್ತದೆ. ಆದರೆ, ಇದಕ್ಕೆ ಬಿಬಿಎಂಪಿಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯ. ಇದಕ್ಕಾಗಿಯೇ ಪ್ರತ್ಯೇಕ ವ್ಯವಸ್ಥೆ ರೂಪಿಸಲಾಗಿದೆ’ ಎಂದರು.

‘ಅಭಿವೃದ್ಧಿಪಡಿಸಿದ ರಸ್ತೆಯನ್ನು ಒಮ್ಮೆ ಕತ್ತರಿಸಿದರೆ, ಬಳಿಕ ಎಷ್ಟೇ ದುರಸ್ತಿ ಮಾಡಿದರೂ ಮತ್ತೆ ಹಿಂದಿನ ಸ್ಥಿತಿಗೆ ತರಲು ಸಾಧ್ಯವಾಗದು. ಬಿಬಿಎಂಪಿಯ ಸ್ವಾಧೀನದಲ್ಲಿರುವ ರಸ್ತೆಯನ್ನು ಯಾರಾದರೂ ಅಕ್ರಮವಾಗಿ ಕತ್ತರಿಸಿದರೆ ಅಂತಹವರ ವಿರುದ್ಧ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಮ್ಮ ಸ್ವಾಧೀನದಲ್ಲಿರುವ ರಸ್ತೆಗಳ ಸುರಕ್ಷತೆ ನಮ್ಮ ಅಧಿಕಾರಿಗಳದ್ದೇ ಹೊಣೆ’ ಎಂದು ಸ್ಪಷ್ಟಪಡಿಸಿದರು.

‘ಹಲವಾರು ಪ್ರಕರಣಗಳಲ್ಲಿ ಬಿಬಿಎಂಪಿಯ ಅನುಮತಿ ಪಡೆಯದೆಯೇ ರಸ್ತೆ ಕತ್ತರಿಸಲಾಗುತ್ತಿದೆ. ಈ ರೀತಿ ಅಕ್ರಮವಾಗಿ ರಸ್ತೆ ಕತ್ತರಿಸಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಲಿದ್ದೇವೆ. ಅದಕ್ಕೆ ಕಡಿವಾಣ ಹಾಕಲು ಶೀಘ್ರವೇ ಹೊಸ ವ್ಯವಸ್ಥೆ ಜಾರಿಗೆ ತರಲಿದ್ದೇವೆ’ ಎಂದರು.

‘ಬಿಬಿಎಂಪಿ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳಿಗೆ ರಾಜ್ಯ ಬಜೆಟ್‌ನಲ್ಲಿ ಅನುದಾನ ಒದಗಿಸುವಂತೆ ಕೋರಿ ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟದ್ದೇವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಬಗ್ಗೆ ನಗರದ ಶಾಸಕರ ಜೊತೆ ಸಮಾಲೋಚನೆ ನಡೆಸಿದ್ದಾರೆ. ಅನೇಕ ಕಾರ್ಯಕ್ರಮಗಳನ್ನು ಈಗಾಗಲೇ ಘೋಷಣೆ ಮಾಡಿದ್ದಾರೆ. ಅದಕ್ಕೆ ಪೂರಕವಾಗಿ ಅನುದಾನ ಹಂಚಿಕೆ ಮಾಡಲಿದ್ದಾರೆ ಎಂಬ ವಿಶ್ವಾಸ ಇದೆ’ ಎಂದರು.

‘ಕಸ ವಿಲೇವಾರಿ ಸೆಸ್ ಹೆಚ್ಚಳವಿಲ್ಲ’

‘ಕಸದ ಸೆಸ್ ಹೆಚ್ಚಿಸುವ ಬಗ್ಗೆ ಯಾವುದೇ ಹೊಸ ಪ್ರಸ್ತಾಪವನ್ನು ಸರ್ಕಾರಕ್ಕೆ ಸಲ್ಲಿಸಿಲ್ಲ’ ಎಂದು ಗೌರವ್ ಗುಪ್ತ ತಿಳಿಸಿದರು.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಸಂಬಂಧಿಸಿ ಈಗಿರುವ ವ್ಯವಸ್ಥೆಯೇ ಮುಂದುವರಿಯಲಿದೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ. ಜನರ ಸಹಭಾಗಿತ್ವದಲ್ಲಿ ಅದರಲ್ಲಿ ಇನ್ನಷ್ಟು ಸುಧಾರಣೆ ತರಲು ಯೋಜನೆ ಸಿದ್ಧಪಡಿಸಿದ್ದೇವೆ. ಸರ್ಕಾರವೂ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಉದ್ದೇಶಿಸಿದ್ದು, ಮುಖ್ಯಮಂತ್ರಿಯವರು ಅದಕ್ಕೆ ಶೀಘ್ರವೇ ಚಾಲನೆ ನೀಡಲಿದ್ದಾರೆ’ ಎಂದರು.

‘ವಾರ್ಡ್‌ಗಳ ಮರುವಿಂಗಡಣೆ ಶೀಘ್ರ ವರದಿ’

‘ಬಿಬಿಎಂಪಿಯ ವಾರ್ಡ್‌ಗಳ ಮರುವಿಂಗಡಣೆ ಅಂತಿಮ ಹಂತದಲ್ಲಿದೆ. ಕೆಲವೇ ದಿನಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದೇವೆ. ಸರ್ಕಾರವೇ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಿದೆ‘ ಎಂದು ಮುಖ್ಯ ಆಯುಕ್ತರು ತಿಳಿಸಿದರು.

ಸರ್ಕಾರದ ಸೂಚನೆ ಮೇರೆಗೆ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 243ಕ್ಕೆ ಹೆಚ್ಚಿಸುವ ಬಗ್ಗೆ ವರದಿ ನೀಡಲು ಬಿಬಿಎಂಪಿ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

‘ತನ್ವೀರ್ ಸೇಠ್‌ಗೆ ವಿಪಕ್ಷ ನಾಯಕ, ಖಾದರ್‌ಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ ನೀಡಿ’

ಪ್ರೇಮಿಗಳ ದಿನ ತೀರ್ಮಾನ; ಸಿ.ಎಂ.ಇಬ್ರಾಹಿಂ

ಪ್ರಜಾವಾಣಿ ವಾರ್ತೆ

ಸಿ.ಎಂ.ಇಬ್ರಾಹಿಂ

ಮೈಸೂರು: ‘ನಾನು ಹುಟ್ಟಿರುವುದು ಟಿಪ್ಪು ಸುಲ್ತಾನ್ ಭೂಮಿಯಲ್ಲಿ. ರಾಜ್ಯದಲ್ಲಿ ನಮ್ಮ ಜನಸಂಖ್ಯೆ ಶೇ 21ರಷ್ಟಿದೆ. ಪ್ರೇಮಿಗಳ ದಿನ (ಫೆ.14) ರಾಜೀನಾಮೆ ನೀಡಿ ನನ್ನ ಪ್ರೀತಿ ಯಾರ ಕಡೆ ಎಂಬುದನ್ನು ಪ್ರಕಟಿಸುತ್ತೇನೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹೊಸ ಪಕ್ಷ ಕಟ್ಟುವ ಪ್ರಶ್ನೆಯೇ ಇಲ್ಲ. ನನ್ನ ಮುಂದಿರುವ ಮೂರು ಆಯ್ಕೆಗಳೆಂದರೆ ಜೆಡಿಎಸ್, ಮಮತಾ ಬ್ಯಾನರ್ಜಿ (ಟಿಎಂಸಿ) ಹಾಗೂ ಅಖಿಲೇಶ್ ಯಾದವ್ (ಎಸ್‌ಪಿ). ಈ ಮೂರರಲ್ಲಿ ಯಾರ ಕಡೆ ಹೋಗಬೇಕೆಂಬುದನ್ನು ಜನಾಭಿಪ್ರಾಯ ಕೇಳಿ ನಿರ್ಧರಿಸುತ್ತೇನೆ’ ಎಂದು ಹೇಳಿದರು.

‘ತನ್ವೀರ್ ಸೇಠ್ ಅವರನ್ನು ವಿಪಕ್ಷ ನಾಯಕ ಮಾಡಿ, ಯು.ಟಿ.ಖಾದರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಮಾಡಲು ಆಗಲ್ವಾ? ನಾವು ವೋಟ್ ಹಾಕೋ ಯಂತ್ರವೇ? ಇದನ್ನು ಹೇಳಿದರೆ ಸಿಟ್ಟು ಬರುತ್ತದೆ. ಚೀಲ ಹಿಡಿಯುವವರು ಇವರಿಗೆ ಬೇಕು. ನನ್ನಿಂದ ಇದನ್ನು ನಿರೀಕ್ಷಿಸಬೇಡಿ’ ಎಂದು ವಾಗ್ದಾಳಿ ನಡೆಸಿದರು.

‘ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೋ ಅಥವಾ ನಾನು ಪ್ರಶ್ನಿಸುತ್ತೇನೆ ಎಂದು ಸುಮ್ಮನಿದ್ದಾರೋ ಗೊತ್ತಿಲ್ಲ. ಇದುವರೆಗೆ ನನ್ನೊಂದಿಗೆ ಮಾತನಾಡಿಲ್ಲ. ಸ್ನೇಹಕ್ಕೆ ಬೆಲೆ ಕೊಡುವುದಿದ್ದರೆ, ನನಗೆ ಪರಿಷತ್ ವಿಪಕ್ಷ ನಾಯಕ ಸ್ಥಾನ ತಪ್ಪಿದ ದಿನವೇ ಅವರು ರಾಜೀನಾಮೆ ಕೊಡಬೇಕಿತ್ತು. ಮುಂದೆ ಅವರಿಗೂ ನನ್ನ ಸ್ಥಿತಿಯೇ ಬರಬಹುದು’ ಎಂದು ನುಡಿದರು.

‘ಹಳೆ ತಳಿಗಳ ಬೀಜ ಸಂಗ್ರಹಿಸುತ್ತಿದ್ದೇನೆ. ಜೆ.ಎಚ್.ಪಟೇಲ್ ಅವರ ಮಗ, ವೀರೇಂದ್ರ ಪಾಟೀಲ್ ಅವರ ಮಗ ಬರುತ್ತಾರೆ. ನಮ್ಮದು ವ್ಯವಸ್ಥೆ ವಿರುದ್ಧ ಹೋರಾಟ. ಮೈಸೂರಿನಿಂದಲೇ ಆ ಹೋರಾಟ ಆರಂಭಿಸಿದ್ದೇನೆ. ಸಿದ್ದರಾಮಯ್ಯ ‘ಅಹಿಂದ’ ನಡೆಸಿದರೆ ನಾನು ‘ಅಲಿಂಗೊ’ (ಅಲ್ಪಸಂಖ್ಯಾತರು, ಲಿಂಗಾಯತರು, ಒಕ್ಕಲಿಗರು) ಚಳವಳಿ ಶುರು ಮಾಡುತ್ತೇನೆ’ ಎಂದರು.

ಶಾಸಕ ತನ್ವೀರ್ ಸೇಠ್ ಬೆಂಬಲ ಸೂಚಿಸಿದ್ದಾರೆಯೇ ಎಂಬುದಕ್ಕೆ, ‘ಯಾರನ್ನೂ ನಾನು ಕರೆಯಲ್ಲ. ಒಳ್ಳೆಯ ಉದ್ದೇಶಕ್ಕೆ ಕೈ ಜೋಡಿಸಿ ಎಂದು ಎಲ್ಲರಿಗೂ ಮನವಿ ಮಾಡುತ್ತಿದ್ದೇನೆ. ಸೇಠ್ ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಅವರನ್ನೇ ಕೇಳಿ. ಶ್ರೀನಿವಾಸಪ್ರಸಾದ್, ವಿಶ್ವನಾಥ್ ಅವರೊಂದಿಗೂ ಮಾತನಾಡುತ್ತೇನೆ. ಸ್ವಾಮೀಜಿಗಳು ಬೆಂಬಲ ಸೂಚಿಸಿದ್ದಾರೆ’ ಎಂದು ತಿಳಿಸಿದರು.

ಅದಕ್ಕೂ ಮೊದಲು ಮೈಸೂರಿನ ನರಸಿಂಹರಾಜ ಕ್ಷೇತ್ರದ ಸ್ಥಳೀಯರು ಇಬ್ರಾಹಿಂ ಅವರನ್ನು ತೆರೆದ ವಾಹನದಲ್ಲಿ ಸ್ವಾಗತಿಸಿದರು. ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು.

ಗುರುವಾರ, ಫೆಬ್ರುವರಿ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 34 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಸಬ್-ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಮಾದರಿ ಪ್ರಶ್ನೋತ್ತರ ಇಲ್ಲಿದೆ.



ರಾಯಬರೇಲಿ ವಶಕ್ಕೆ ಬಿಜೆಪಿ ತಂತ್ರ 6
ಆಳ-ಅಗಲ: ಟಾಟಾ ತೆಕ್ಕೆಯಲ್ಲಿ ಲಾಭಕ್ಕೆ ಬರಲಿದೆಯೇ ಏರ್ ಇಂಡಿಯಾ
'ಮಠಕ್ಕೆ ನಿರಾಣಿ ನೀಡಿದ ವಸ್ತುಗಳನ್ನು ಮರಳಿಸುವೆ' 5

ಸೆನ್ಸೆಕ್ಸ್	ನಿಫ್ಟಿ	₹/$
59,558 ▲	17,780 ▲	74.83 ▼

ಹೆಚ್ಚಿದ ಕಾರ್ಯಭಾರ: 9,881 ಅತಿಥಿ ಉಪನ್ಯಾಸಕರ ಉದ್ಯೋಗಕ್ಕೆ ಕುತ್ತು

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಕಾರ್ಯಭಾರ ಹೆಚ್ಚಿಸಿದ್ದರಿಂದ 9,881 ಮಂದಿ ಉದ್ಯೋಗ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ.

2021-22ನೇ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 47 ವಿಷಯಗಳಿಗೆ ವಾರಕ್ಕೆ 15 ಗಂಟೆಗಳ ಬೋಧನೆಯ ಪೂರ್ಣ ಕಾರ್ಯಭಾರವಿರುವ 7,225 ಮತ್ತು ಭಾಗಶಃ ಕಾರ್ಯಭಾರವಿರುವ 3,411 ಸೇರಿ ಒಟ್ಟು 10,636 ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ.

ಅತಿಥಿ ಉಪನ್ಯಾಸಕರ ಬೇಡಿಕೆಗಳ ಈಡೇರಿಕೆಗಾಗಿ ಕಾಲೇಜು ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿಯೊಂದನ್ನು ರಚಿಸಿತ್ತು. ಸಮಿತಿಯ ಶಿಫಾರಸಿನಂತೆ ಕಲಾ ವಿಭಾಗದ ಬೋಧನೆಯನ್ನು ಒಂದು ವಾರಕ್ಕೆ ಗರಿಷ್ಠ 15 ಗಂಟೆ ಮತ್ತು ವಿಜ್ಞಾನ ವಿಭಾಗದ ಬೋಧನಾ ಅವಧಿಯನ್ನು ಗರಿಷ್ಠ 19 ಗಂಟೆಗೆ ಹೆಚ್ಚಿಸಲಾಗಿದೆ. ಸರ್ಕಾರ ಕೈಗೊಂಡ ಈ ಕ್ರಮದಿಂದಾಗಿ ಹಾಲಿ ಕೆಲಸ ಮಾಡುತ್ತಿದ್ದ ಅತಿಥಿ ಉಪನ್ಯಾಸಕರ ಪೈಕಿ 9,881 ಮಂದಿ ಉದ್ಯೋಗ ಕಳೆದುಕೊಳ್ಳಲಿದ್ದಾರೆ.

ಈ ಮೊದಲು ಕಲಾ ವಿಭಾಗದ ಉಪನ್ಯಾಸಕರು 8 ಗಂಟೆ ಮತ್ತು ವಿಜ್ಞಾನ ವಿಭಾಗದ ಉಪನ್ಯಾಸಕರು 10 ಗಂಟೆ ಕಾರ್ಯಭಾರ ಹೊಂದಿದ್ದರು. ಕಾರ್ಯಭಾರದ ಅವಧಿಯನ್ನು ಹೆಚ್ಚಿಸಿರುವ ಸರ್ಕಾರದ ಕ್ರಮ ಅವೈಜ್ಞಾನಿಕ ಎನ್ನುವುದು ಅತಿಥಿ ಉಪನ್ಯಾಸಕರ ದೂರು.

ಕಾರ್ಯಭಾರ ಹೆಚ್ಚಿಸಿದ್ದರಿಂದ ಇಬ್ಬರ ಕೆಲಸ ಒಬ್ಬ ಉಪನ್ಯಾಸಕರಿಗೆ ದೊರೆಯುತ್ತದೆ. ಈ ಮೊದಲು ತಾವು ಕೆಲಸ ನಿರ್ವಹಿಸುವ ಕಾಲೇಜಿನಲ್ಲಿ ಹೆಚ್ಚಿನ ಕಾರ್ಯಭಾರ ಇರದ ಕಾರಣ ಇತರೆ ಕಾಲೇಜಿಗೆ ಬೋಧನೆ ಮಾಡುತ್ತಿದ್ದರು. ಸರ್ಕಾರದ ಈ ನಿರ್ಧಾರದಿಂದ ಇದು ಅಸಾಧ್ಯವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೂ ತೊಂದರೆಯಾಗಲಿದೆ ಎಂಬುದು ಅತಿಥಿ ಉಪನ್ಯಾಸಕರ ಅಳಲು.

ರಾಜ್ಯದಲ್ಲಿ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, 1.80 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಮೊದಲು ಎಲ್ಲ ವಿಷಯಗಳ ಅತಿಥಿ ಉಪನ್ಯಾಸಕರ ಆಯ್ಕೆಗಾಗಿ ಆಯಾ ಕಾಲೇಜು ಹಂತದಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ವಿದ್ಯಾರ್ಹತೆ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು.

10ನೇ ಪುಟ ನೋಡಿ

ಬೇಡಿಕೆಗಳು

- ಯುಜಿಸಿ ನಿಯಮಾವಳಿಗಳ ಅನ್ವಯ ಪ್ರತಿ ಗಂಟೆಗೆ ₹1500 ನೀಡಬೇಕು
- 'ಬಳಸಿ ಬಿಸಾಡುವ ನೀತಿ'ಯನ್ನು ಕೈಬಿಡಬೇಕು
- ಅನ್ಯ ರಾಜ್ಯಗಳಂತೆಯೇ ಉತ್ತಮ ಸೌಲಭ್ಯಗಳನ್ನು ನೀಡಿ, ಸೇವಾ ಭದ್ರತೆ ಕಲ್ಪಿಸಬೇಕು

'ಅರ್ಹತೆ, ಹಿರಿತನಕ್ಕೆ ಅವಕಾಶ'

'ಶೈಕ್ಷಣಿಕ ಅರ್ಹತೆ, ಅನುಭವಗಳನ್ನು ಆಧರಿಸಿ ನಿಯಮಗಳ ಪ್ರಕಾರ ವ್ಯವಸ್ಥಿತವಾಗಿ ಮತ್ತು ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ. ಅನರ್ಹರಿಗೆ ಅವಕಾಶ ದೊರೆತಿಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

'ಅತಿಥಿ ಉಪನ್ಯಾಸಕರ ಗೌರವಯುತ ಬದುಕಿಗೆ ಅನುಕೂಲ ಕಲ್ಪಿಸಿ ವೇತನ ಹೆಚ್ಚಿಸಲಾಗಿದೆ. ಹಲವು ವರ್ಷಗಳಿಂದ ಗೌರವಧನ ಹೆಚ್ಚಿಸಿರಲಿಲ್ಲ. ನಮ್ಮ ಸರ್ಕಾರ ಗೌರವಧನ ಹೆಚ್ಚಿಸಿದೆ. ಹೆಚ್ಚು ಕಾರ್ಯಭಾರ ವಹಿಸಿದ್ದರಿಂದ ಹೆಚ್ಚು ಗೌರವಧನ ನೀಡಲಾಗುತ್ತಿದೆ' ಎಂದು ಪ್ರತಿಪಾದಿಸಿದ್ದಾರೆ.

ಡಿಜಿಟಲ್ ರೂಪಾಯಿ ಕುರಿತು ಪ್ರಧಾನಿ ನರೇಂದ್ರ ಮೋದಿ ವಿವರಣೆ

ಆನ್‌ಲೈನ್ ಪಾವತಿ: ಇನ್ನಷ್ಟು ಸುರಕ್ಷಿತ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಭಾರತದಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಆಧರಿಸಿದ ಡಿಜಿಟಲ್ ರೂಪಾಯಿಯನ್ನು ಚಲಾವಣೆಗೆ ತರವಾಗುವುದು ಎಂದು ಬಜೆಟ್‌ನಲ್ಲಿ ಪ್ರಕಟಿಸಿದ ಮಾರನೆಯ ದಿನ, ಡಿಜಿಟಲ್ ಕರೆನ್ಸಿಯು ಹೇಗಿರುತ್ತದೆ ಎಂಬ ವಿವರವನ್ನು ಪ್ರಧಾನಿ ನರೇಂದ್ರ ಮೋದಿ ನೀಡಿದರು. ಈ ಕರೆನ್ಸಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಪೂರ್ಣ ಬೆಂಬಲ ಇರುತ್ತದೆ, ಇದು ಕಾನೂನುಬದ್ಧ ಕರೆನ್ಸಿ ಆಗಿರುತ್ತದೆ.

ನರೇಂದ್ರ ಮೋದಿ

ಕೇಂದ್ರೀಯ ಬ್ಯಾಂಕ್ ಚಲಾವಣೆಗೆ ತರಲಿರುವ ಡಿಜಿಟಲ್ ಕರೆನ್ಸಿಯು ಆನ್‌ಲೈನ್ ಪಾವತಿಗಳನ್ನು ಇನ್ನಷ್ಟು ಸುರಕ್ಷಿತ ಆಗಿಸಲಿದೆ. ಮುಂಬರುವ ವರ್ಷಗಳಲ್ಲಿ ದೇಶದ ಡಿಜಿಟಲ್ ಅರ್ಥ ವ್ಯವಸ್ಥೆಗೆ ಇದು ಶಕ್ತಿ ನೀಡಲಿದೆ ಎಂದೂ ಮೋದಿ ಅವರು ಬಿಜೆಪಿ ಕಾರ್ಯಕರ್ತರು ಹಾಗೂ ಬಿಜೆಪಿ ಆಡಳಿತ ಇರುವ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗಿನ ವರ್ಚುವಲ್ ಸಭೆಯಲ್ಲಿ ತಿಳಿಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಬಜೆಟ್‌ನ ರೂಪುರೇಷೆಗಳ ಬಗ್ಗೆ ಮಾತನಾಡಿದ ಮೋದಿ, 'ಡಿಜಿಟಲ್ ರೂಪಾಯಿಯು ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ, ನೋಟುಗಳ ಮುದ್ರಣ, ಸಾಗಾಟ, ನಿರ್ವಹಣೆಯಲ್ಲಿನ ಹೊರೆಯನ್ನು ತಗ್ಗಿಸಲಿದೆ' ಎಂದು ಹೇಳಿದರು. ಡಿಜಿಟಲ್ ರೂಪಾಯಿಯು ಹಣಕಾಸು ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿ ಉಂಟುಮಾಡಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

'ಭೌತಿಕ ಸ್ವರೂಪದಲ್ಲಿ ಇರುವ ರೂಪಾಯಿಯ ಡಿಜಿಟಲ್ ಅವತಾರ, ಡಿಜಿಟಲ್ ರೂಪಾಯಿ. ಇದನ್ನು ಆರ್‌ಬಿಐ ನಿಯಂತ್ರಿಸಲಿದೆ. ಭೌತಿಕ ಸ್ವರೂಪದಲ್ಲಿ ಇರುವ ಕರೆನ್ಸಿಗಳನ್ನು ಡಿಜಿಟಲ್ ಕರೆನ್ಸಿ ಜೊತೆ ವಿನಿಮಯ ಮಾಡಿಕೊಳ್ಳಬಹುದು' ಎಂದು ಹೇಳಿದರು.

ಆರ್‌ಬಿಐ 2022–23ನೆಯ ಹಣಕಾಸು ವರ್ಷದಲ್ಲಿ ಡಿಜಿಟಲ್ ಕರೆನ್ಸಿಯನ್ನು ಚಲಾವಣೆಗೆ ತರುವ ನಿರೀಕ್ಷೆ ಇದೆ. ಕೇಂದ್ರ ಬಜೆಟ್‌ನಲ್ಲಿ ಉಲ್ಲೇಖಿಸಿರುವಂತೆ, ಈ ಕರೆನ್ಸಿಯು ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಲಿದೆ.

ಈ ಬಾರಿಯ ಬಜೆಟ್, ಬಡವರ ಅಭಿವೃದ್ಧಿಗೆ ಕಾರಣವಾಗುವಂತೆ ಇದೆ ಎಂದರು. 'ಪ್ರತಿ ಬಡವನೂ ಪಕ್ಕಾ ಮನೆಯನ್ನು ಹೊಂದಿರಬೇಕು, ನಲ್ಲಿ ನೀರಿನ ಸಂಪರ್ಕ ಹೊಂದಿರಬೇಕು, ಅಡುಗೆ ಅನಿಲ ಸಂಪರ್ಕ ಪಡೆದಿರಬೇಕು. ಇಂಥವುಗಳಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಇವುಗಳ ಜೊತೆಯಲ್ಲಿಯೇ, ದೇಶವನ್ನು ಆಧುನಿಕಗೊಳಿಸಲು ಸಮಾನ ಆದ್ಯತೆ ನೀಡಲಾಗಿದೆ' ಎಂದು ಪ್ರತಿಪಾದಿಸಿದರು.

'ಕಾನೂನು ಮಾನ್ಯತೆ ನೀಡುವ ನಡೆ ಅಲ್ಲ'

ನವದೆಹಲಿ (ಪಿಟಿಐ): ವರ್ಚುವಲ್ ಡಿಜಿಟಲ್ ಆಸ್ತಿಗಳು ಅಥವಾ ಕ್ರಿಪ್ಟೊಕರೆನ್ಸಿಗಳಿಗೆ ತೆರಿಗೆ ವಿಧಿಸುವ ಬಗ್ಗೆ ಕೇಂದ್ರ ಬಜೆಟ್‌ನಲ್ಲಿ ಇರುವ ಪ್ರಸ್ತಾವನೆಯು, ದೇಶದಲ್ಲಿ ಕ್ರಿಪ್ಟೊಕರೆನ್ಸಿಗಳಲ್ಲಿ ನಡೆದಿರುವ ವಹಿವಾಟು ಎಷ್ಟು ದೊಡ್ಡದಿದೆ ಎಂಬುದನ್ನು ಗೊತ್ತುಮಾಡಲಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಅಧ್ಯಕ್ಷ ಜೆ.ಬಿ. ಮೊಹಾಪಾತ್ರ ಹೇಳಿದ್ದಾರೆ.

ಕ್ರಿಪ್ಟೊಕರೆನ್ಸಿಗಳಲ್ಲಿ ಹೂಡಿಕೆ ಮಾಡುತ್ತಿರುವವರು ಯಾರು ಎಂಬುದು ಸಹ ಇದರಿಂದಾಗಿ ಗೊತ್ತಾಗಲಿದೆ. ಆದರೆ, ಕ್ರಿಪ್ಟೊಕರೆನ್ಸಿಗಳಲ್ಲಿನ ವಹಿವಾಟಿಗೆ 'ಯಾವುದೇ ಕಾನೂನು ಮಾನ್ಯತೆಯನ್ನು ಇದು ತಂದುಕೊಡುವುದಿಲ್ಲ' ಎಂದು ಅವರು ಹೇಳಿದ್ದಾರೆ.

ವರ್ಚುವಲ್ ಡಿಜಿಟಲ್ ಆಸ್ತಿಗಳು, ಕ್ರಿಪ್ಟೊಕರೆನ್ಸಿಗಳ ವರ್ಗಾವಣೆಯಿಂದ ಬರುವ ಆದಾಯಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಪ್ರಕಟಿಸಿದ್ದಾರೆ. 'ಯಾವುದೇ ವಹಿವಾಟು ಎಷ್ಟರಮಟ್ಟಿಗೆ ನ್ಯಾಯೋಚಿತ ಎಂಬುದನ್ನು ತೀರ್ಮಾನಿಸುವ ಸ್ಥಾನದಲ್ಲಿ ಇಲಾಖೆ ಇಲ್ಲ. ವ್ಯಕ್ತಿ ನಡೆಸುವ ಯಾವುದೇ ವಹಿವಾಟಿನಿಂದ ಆದಾಯ ಬರುತ್ತದೆಯೇ ಎಂಬುದನ್ನು ಮಾತ್ರ ಆದಾಯ ತೆರಿಗೆ ಇಲಾಖೆ ಮತ್ತು ಆದಾಯ ತೆರಿಗೆ ಕಾಯ್ದೆ ಗಮನಿಸುತ್ತವೆ. ಯಾವುದೇ ಆದಾಯ ಎಷ್ಟರಮಟ್ಟಿಗೆ ಕಾನೂನುಬದ್ಧ ಎಂಬುದನ್ನು ನಾವು ತೀರ್ಮಾನಿಸುವುದಿಲ್ಲ. ಬದಲಿಗೆ, ಆದಾಯದ ಮೇಲೆ ತೆರಿಗೆ ವಿಧಿಸುವ ಕೆಲಸವನ್ನು ನಾವು ಮಾಡುತ್ತೇವೆ' ಎಂದು ಅವರು ತಿಳಿಸಿದ್ದಾರೆ.

'ಈ ಕಾರಣದಿಂದಾಗಿ, ಕ್ರಿಪ್ಟೊ ಕರೆನ್ಸಿಗಳಿಗೆ ತೆರಿಗೆ ವಿಧಿಸಿದ ಮಾತ್ರಕ್ಕೆ, ಅವುಗಳಲ್ಲಿನ ವಹಿವಾಟು ಕಾನೂನುಬದ್ಧ ಎಂದಂತೆ ಆಗದು' ಎಂದು ಮೊಹಾಪಾತ್ರ ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ. 'ನೀವು ತೆರಿಗೆ ಪಾವತಿಸಿದ್ದೀರಿ ಎಂಬ ಒಂದೇ ಕಾರಣಕ್ಕೆ ಕ್ರಿಪ್ಟೊಕರೆನ್ಸಿಗಳಲ್ಲಿನ ವಹಿವಾಟು ಕಾನೂನು ಮಾನ್ಯತೆ ಪಡೆಯುವುದಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

10ನೇ ಪುಟ ನೋಡಿ

'ಬ್ಯಾಂಕ್ ಖಾತೆ ಬೇಡ, ಜನರಿಗೆ ಅನುಕೂಲ'

• ವೀಣಾ ಮಣಿ

ಬೆಂಗಳೂರು: ಆರ್‌ಬಿಐ ಮೂಲಕ ಚಲಾವಣೆಗೆ ಬರಲಿರುವ ಡಿಜಿಟಲ್ ರೂಪಾಯಿಯು ಜನಸಾಮಾನ್ಯರಿಗೆ ಅನುಕೂಲಕರ ಆಗಲಿದೆ ಎಂದು ಲೆಕ್ಕ ಪರಿಶೋಧಕರು, ವರ್ಚುವಲ್ ಕರೆನ್ಸಿ ವಿನಿಮಯ ಕೇಂದ್ರಗಳು ಮತ್ತು ಕ್ರಿಪ್ಟೊಕರೆನ್ಸಿ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಇದು ಡಿಜಿಟಲ್ ಕರೆನ್ಸಿ ಬಳಕೆಯ ವಿಚಾರವಾಗಿ ಹೆಚ್ಚಿನ ವಿಶ್ವಾಸ ಮೂಡಲು ಕಾರಣವಾಗಲಿದೆ. ಕಾಗದದ ನೋಟುಗಳ ಬಳಕೆಗೆ ಬದಲಾಗಿ, ಕಡಿಮೆ ವೆಚ್ಚದ ಪರ್ಯಾಯ ಕರೆನ್ಸಿಯ ಬಳಕೆಗೆ ಇದು ಅವಕಾಶ ಕಲ್ಪಿಸಲಿದೆ. ಅರ್ಥ ವ್ಯವಸ್ಥೆಯಲ್ಲಿ ನಗದಿನ ಮೇಲಿನ ಅವಲಂಬನೆಯನ್ನು ತಗ್ಗಿಸುವ ನಿರೀಕ್ಷೆ ಇದೆ' ಎಂದು ಸಿರಿಲ್ ಅಮರ್‌ಚಂದ್ ಮಂಗಲದಾಸ್ ಕಾನೂನು ಸಂಸ್ಥೆಯ ಹಿರಿಯ ಸಲಹೆಗಾರ್ತಿ ಆಗಿರುವ ಲಿಲಿ ವಡೇರಾ ತಿಳಿಸಿದರು.

'ಡಿಜಿಟಲ್ ಕರೆನ್ಸಿ ಮೂಲಕ ನಡೆಯುವ ವಹಿವಾಟುಗಳು ಒಂದಕ್ಕಿಂತ ಹೆಚ್ಚಿನ ಬ್ಯಾಂಕ್ ಖಾತೆಗಳ ಮೂಲಕ ನಡೆಯುವುದಿಲ್ಲ. ಇದನ್ನು ಬಳಸಲು ಬ್ಯಾಂಕ್ ಖಾತೆ ಬೇಕು ಎಂಬುದೂ ಇಲ್ಲ' ಎಂದು ಕ್ರಿಪ್ಟೊಕರೆನ್ಸಿ ವಿನಿಮಯ ಸೇವೆಗಳನ್ನು ಒದಗಿಸುವ ಡಿಫೈ ಕಂಪನಿಯ ಸಿಇಒ ಭಾಗಬನ್ ಬೆಹೆರಾ ಹೇಳಿದರು. ಯುಪಿಐ ಹಾಗೂ ಎನ್‌ಇಎಫ್‌ಟಿ ವ್ಯವಸ್ಥೆಗಳಲ್ಲಿ ಎದುರಾಗುವ ನೆಟ್‌ವರ್ಕ್ ಸಮಸ್ಯೆಯು ಇದರಲ್ಲಿ ಇರುವುದಿಲ್ಲ. ಇಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಕೆ ಮಾಡುವ ಕಾರಣದಿಂದ ಅಂತರರಾಷ್ಟ್ರೀಯ ವಹಿವಾಟುಗಳು ಕೂಡ ಸರಳವಾಗಲಿವೆ ಎಂದು ಜಿಯೊಟಸ್ ಕ್ರಿಪ್ಟೊ ವಿನಿಮಯ ಕಂಪನಿಯ ಸಿಇಒ ವಿಕ್ರಮ್ ಸುಬ್ಬುರಾಜ್ ಹೇಳಿದರು.

ಬ್ರಹ್ಮರಥ ಸಮರ್ಪಣೆ

ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನದ ನೂತನ ಬ್ರಹ್ಮರಥದ ಸಮರ್ಪಣಾ ಕಾರ್ಯಕ್ರಮ ಬುಧವಾರ ನಡೆಯಿತು. ಪ್ರಜಾವಾಣಿ ಚಿತ್ರ

ಬೀದಿ ಪಾಲಾಗುವ ಆತಂಕದಲ್ಲಿ 25 ಲಕ್ಷ ಭೂರಹಿತ ಕುಟುಂಬ

ಗೋಮಾಳದತ್ತ 'ಪ್ರಭಾವಿ' ಕಣ್ಣು

• ವಿಜಯಕುಮಾರ್ ಎಸ್.ಕೆ.

ಭೂ ಮಂಜೂರಾತಿ ಸಾಗುವಳಿದಾರರ ಅಂಕಿ– ಅಂಶ

ನಮೂನೆ	ಸಲ್ಲಿಕೆಯಾಗಿದ್ದ ಅರ್ಜಿ	ತಿರಸ್ಕಾರವಾದ ಅರ್ಜಿ	ವಿಲೇವಾರಿಗೆ ಬಾಕಿ ಇರುವ ಅರ್ಜಿ
50	10,89,268	6,98,220	10,568
53	10,98,397	7,37,435	1,45,845
57	8,02,198	-	-

ಬೆಂಗಳೂರು: ಗೋಮಾಳ, ಹುಲ್ಲುಬನಿ, ಗಾಯರಾಣ, ಸೊಪ್ಪಿನಬೆಟ್ಟ ಸೇರಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಖಾಸಗಿ ಸಂಘ– ಸಂಸ್ಥೆಗಳಿಗೆ ಮಂಜೂರು ಮಾಡಲು ನೀತಿಯೊಂದನ್ನು ರೂಪಿಸಲು ಹೊರಟಿರುವ ಸರ್ಕಾರದ ನಡೆಗೆ ಆಕ್ಷೇಪ ವ್ಯಕ್ತವಾಗಿದೆ.

ಗೋವು ಸೇರಿದಂತೆ ಜಾನುವಾರುಗಳಿಗೆ ಮೇವು ಸಿಗಬೇಕೆಂಬ ಕಾರಣಕ್ಕೆ ಹಿಂದೆ ಕೆಲವು ಭೂಮಿಯನ್ನು ಮೀಸಲಿಡಲಾಗಿದೆ. ಅದನ್ನು ಖಾಸಗಿ ವ್ಯಕ್ತಿ, ಸಂಸ್ಥೆಗಳಿಗೆ ಮಂಜೂರು ಮಾಡಲು ಅವಕಾಶವೂ ಇರಲಿಲ್ಲ. ಕೃಷಿಗೆ ಪೂರಕವಾದ ಚಟುವಟಿಕೆಗೂ ಈ ಭೂಮಿ ನೆರವಾಗುತ್ತಿತ್ತು. ಒತ್ತುವರಿ ಹೆಚ್ಚಾದ ಬಳಿಕ ಗೋಮಾಳ, ಹುಲ್ಲುಬನಿಗೆ ಮೀಸಲಾದ ಭೂಮಿ ಪ್ರಮಾಣ ಕಡಿಮೆಯಾದರೂ ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳ ವಶಕ್ಕೆ ಹೋಗಿರಲಿಲ್ಲ. ಉಳಿದ ಅಷ್ಟಿಷ್ಟು ಭೂಮಿಯನ್ನು ಖಾಸಗಿಯವರಿಗೆ ಕೊಡಲು ಮುಂದಾಗಿರುವ ಸರ್ಕಾರದ ಧೋರಣೆಗೆ ವಿರೋಧ ಮೂಡಿದೆ.

ಇದರ ಜತೆಗೆ, ಇದೇ ಜಾಗಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ 25 ಲಕ್ಷಕ್ಕೂ ಹೆಚ್ಚು ಕುಟುಂಬದವರಿಗೆ ಆತಂಕವೂ ಕಾಡತೊಡಗಿದೆ.

ಕೃಷಿಗೆ ಬೆನ್ನೆಲುಬಾಗಿರುವ ದನಕರುಗಳ ಮೇವಿಗೆ ಮೀಸಲಿಟ್ಟಿದ್ದ ಗೋಮಾಳ, ಹುಲ್ಲುಬನಿ ಮತ್ತು ಗಾಯರಾಣ ಜಾಗಗಳು ಈಗಾಗಲೇ ಕೃಷಿ ಭೂಮಿಯಾಗಿ ಪರಿವರ್ತನೆಯಾಗಿವೆ. ಕೆಲವರಿಗೆ ಜಾಗ ಮಂಜೂರಾಗಿದ್ದರೆ, ಬಹುತೇಕ ಹಳ್ಳಿಗಳಲ್ಲಿ ನಮೂನೆ 50, 53 ಮತ್ತು 57ರಲ್ಲಿ ಅರ್ಜಿ ಹಾಕಿಕೊಂಡು ಸಾಗುವಳಿ ಮಾಡುತ್ತಿರುವವರು ಮಂಜೂರಾತಿಗಾಗಿ ಕಾದಿದ್ದಾರೆ.

ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ದನ ಕರುಗಳಿಗೆ ಕಾಡಿನಿಂದ ಮೇವು ತರುವ ಜಾಗಗಳನ್ನು ಸೊಪ್ಪಿನಬೆಟ್ಟ ಎಂದು ಗುರುತಿಸಲಾಗಿತ್ತು. ಕೃಷಿಕರು ಇದನ್ನು ಸಾಮುದಾಯಿಕವಾಗಿ ಬಳಕೆ ಮಾಡುತ್ತಿದ್ದರು. ಇಲ್ಲಿಯೂ ಬಹುತೇಕ ಕಡೆ ಭೂಮಿ ಮತ್ತು ವಸತಿ ರಹಿತರು ಕೃಷಿ ಮಾಡುತ್ತಿದ್ದಾರೆ. ಮನೆಗಳನ್ನೂ ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದಾರೆ. ಸರ್ಕಾರಿ ಜಾಗದಲ್ಲಿ ಮನೆ ಮತ್ತು ಗುಡಿಸಿಲು ನಿರ್ಮಿಸಿರುವವರು ನಮೂನೆ 94 ಸಿ(ಗ್ರಾಮೀಣ) ಮತ್ತು 94 ಸಿಸಿ (ನಗರ) ಅಡಿಯಲ್ಲಿ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಇದೆಲ್ಲದರ ನಡುವೆ ಸಂಘ–ಸಂಸ್ಥೆಗಳಿಗೆ ಇದೇ ಜಾಗಗಳನ್ನು ಮಂಜೂರು ಮಾಡಲು ಹೊಸ ನೀತಿಯೊಂದನ್ನು ರೂಪಿಸಲು ಕಂದಾಯ ಸಚಿವ ಆರ್. ಅಶೋಕ್ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯೊಂದನ್ನು ಸರ್ಕಾರ ಜ.29ರಂದು ರಚಿಸಿದೆ. ಕಾನೂನು ಸಚಿವ ಜೆ.ಸಿ.ಮಾದುಸ್ವಾಮಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಪಶು ಸಂಗೋಪನಾ ಸಚಿವ ಪ್ರಭು ಚೌಹಾಣ್, ಕೃಷಿ ಸಚಿವ ಬಿ.ಸಿ. ಪಾಟೀಲ ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಸಮಿತಿಯಲ್ಲಿದ್ದಾರೆ.

10ನೇ ಪುಟ ನೋಡಿ

'ಸಮಿತಿ ರಚನೆಯ ಬಗ್ಗೆ ತಪ್ಪು ತಿಳಿವಳಿಕೆ'

'ಸಮಿತಿ ರಚನೆಯ ಉದ್ದೇಶದ ಬಗ್ಗೆ ತಪ್ಪು ತಿಳಿವಳಿಕೆ ಉಂಟಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ.

'ಇದುವರೆಗೆ ಗೋಮಾಳ ಸೇರಿದಂತೆ ಸರ್ಕಾರದ ಭೂಮಿಯನ್ನು ಯಾವುದೇ ನಿಯಮಗಳಿಲ್ಲದೆಯೇ ನೀಡಲಾಗುತ್ತಿತ್ತು. ಹೀಗಾಗಿ, ಈಗ ನಿಯಮಾವಳಿಗಳನ್ನು ರೂಪಿಸಲು ಉದ್ದೇಶಿಸಲಾಗಿದೆ. ಗೋಮಾಳ ಭೂಮಿಯನ್ನು ರೈತರಿಗೆ ಮಾತ್ರ ನೀಡಬೇಕು. ಸರ್ಕಾರದ ಇತರೆ ಭೂಮಿಯನ್ನು ಮಠಗಳಿಗೆ, ಶಿಕ್ಷಣ ಟ್ರಸ್ಟ್‌ಗಳಿಗೆ ಮತ್ತಿತರರಿಗೆ ನೀಡಬಹುದು' ಎಂದು ತಿಳಿಸಿದ್ದಾರೆ.

'ವಿಧಾನಸಭೆಗೆ ತರಲಿ'



ಸರ್ಕಾರದ ಆಸ್ತಿ ದುರುಪಯೋಗ ಹೆಚ್ಚುತ್ತಿದೆ. ಈಗ ಗೋಮಾಳ ಮತ್ತು ಹುಲ್ಲುಬನಿಗಳನ್ನು ಖಾಸಗಿ ಸಂಘ–ಸಂಸ್ಥೆಗಳಿಗೆ ಮಂಜೂರು ಮಾಡಲು ಹೊಸ ನೀತಿ ರೂಪಿಸಲು ಹೊರಟಿದೆ. ಈ ನೀತಿಯನ್ನು ವಿಧಾನಸಭೆಯಲ್ಲಿ ಮಂಡಿಸಲಿ. ಸರ್ಕಾರ ರೈತರ ಪರವೋ ಅಥವಾ ಮತ್ಸ್ಯಾರ ಪರ ಇದೆ ಎಂಬುದು ಗೊತ್ತಾಗಲಿದೆ

–ಎ.ಟಿ.ರಾಮಸ್ವಾಮಿ, ಶಾಸಕ

ಯುಜಿ ನೀಟ್: ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಪ್ರಸಕ್ತ ಸಾಲಿನ ವೈದ್ಯಕೀಯ, ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಮೊದಲ ಸುತ್ತಿನ ಸೀಟು ಹಂಚಿಕೆಯ ಪರಿಷ್ಕೃತ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ. 3B

ಕೋವಿಡ್‌ನಿಂದಾಗಿ ಈ ವರ್ಷವೂ ಪೂರ್ಣ ಪ್ರಮಾಣದಲ್ಲಿ ತರಗತಿಗಳಿಗೆ ಖುದ್ದು ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಆದರೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ 3B

ಸರ್ಕಾರದ ನಿರ್ಧಾರ ಪ್ರಶ್ನಿಸಿದ್ದ ಪಿಐಎಲ್

ಜಾತಿ ಆಧಾರಿತ ನಿಗಮ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಆಧಾರಿತ ನಿಗಮ--ಮಂಡಳಿಗಳನ್ನು ರದ್ದುಗೊಳಿಸುವಂತೆ ಕೋರಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ, ಪುನಃ ಏಳು ಜಾತಿ ಆಧಾರಿತ ಅಭಿವೃದ್ಧಿ ನಿಗಮ ಮಂಡಳಿಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ, 'ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ಹಾಗೂ ಜೆ. ಶ್ರೀನಿವಾಸನ್ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ ಮತ್ತು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, ಕರ್ನಾಟಕ ಕಾಡುಗೊಲ್ಲ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿತು.

ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ, ಬ್ರಾಹ್ಮಣ ಅಭಿವೃದ್ಧಿ ನಿಗಮ ಹಾಗೂ ಆರ್ಯವೈಶ್ಯ ನಿಗಮ ಮಂಡಳಿ ಸ್ಥಾಪಿಸಿರುವುದನ್ನು ಪ್ರಶ್ನಿಸಿ ಈಗಾಗಲೇ ಹೈಕೋರ್ಟ್‌ನ ಹಿರಿಯ ವಕೀಲ ಎಸ್.ಬಸವರಾಜ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು, ಇದರೊಟ್ಟಿಗೆ ಮಧ್ಯಂತರ ಅರ್ಜಿಯನ್ನೂ ಸಲ್ಲಿಸಲಾಗಿದೆ.

ಮಧ್ಯಂತರ ಅರ್ಜಿದಾರರ ಪರ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ವಾದ ಮಂಡಿಸಿದರು. 'ಎಲ್ಲ ಜಾತಿ ಆಧಾರಿತ ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳನ್ನು ರದ್ದುಗೊಳಿಸಬೇಕು' ಎಂಬುದು ಮುಖ್ಯ ಮನವಿಯಾದರೆ, 'ತಕ್ಷಣವೇ ಇವುಗಳಿಗೆ ಯಾವುದೇ ಅನುದಾನ ಬಿಡುಗಡೆ ಮಾಡದಂತೆ ನಿರ್ದೇಶಿಸಬೇಕು' ಎಂಬುದು ಅರ್ಜಿದಾರರ ಮಧ್ಯಂತರ ಕೋರಿಕೆ. ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಲಾಗಿದೆ.

ವೈದ್ಯರಿಗೆ ಬಯೋಮೆಟ್ರಿಕ್ ಹಾಜರಾತಿ

ಬೆಂಗಳೂರು: ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯ ವೈದ್ಯಕೀಯ ಮಹಾವಿದ್ಯಾಲಯಗಳು ಮತ್ತು ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೈದ್ಯರಿಗೆ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ.

ದಿನಕ್ಕೆ ಮೂರು ಬಾರಿ ಹಾಜರಾತಿ ನೀಡಬೇಕು ಎಂದು ಇಲಾಖೆಯಿಂದ ಸುತ್ತೋಲೆ ಹೊರಡಿಸಲಾಗಿದೆ.

ಕಾಲೇಜು ಆರಂಭದ ಸಮಯದಲ್ಲಿ ಮತ್ತು ಮಧ್ಯಾಹ್ನ 2 ಗಂಟೆಗೆ ಹಾಗೂ ದಿನದ ಪಾಳಿ ಅಂತ್ಯದಲ್ಲಿಯೂ ವೈದ್ಯರು ಹಾಜರಾತಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

ವೈದ್ಯರು ಕರ್ತವ್ಯದ ಅವಧಿಯನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಂದಾಪುರ: ಸರ್ಕಾರಿ ಪದವಿಪೂರ್ವ ಕಾಲೇಜು

ಹಿಜಾಬ್ ವಿರೋಧಿಸಿ ಕೇಸರಿ ಧರಿಸಿದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಕುಂದಾಪುರ: ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ 27 ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗಳಿಗೆ ಹಾಜರಾಗುತ್ತಿರುವುದನ್ನು ವಿರೋಧಿಸಿ ಬುಧವಾರ ಕೆಲವು ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿಕೊಂಡು ಕಾಲೇಜಿಗೆ ಹಾಜರಾಗಿದ್ದಾರೆ. ಇದು ಹೊಸ ವಿವಾದಕ್ಕೆ ಕಾರಣವಾಗಿದೆ.

ಉಡುಪಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿಜಾಬ್ ವಿವಾದದ ಬೆನ್ನಲ್ಲೇ ಕುಂದಾಪುರದಲ್ಲೂ ಈ ಬೆಳವಣಿಗೆ ನಡೆದಿದೆ.

ಒಂದು ಶತಮಾನದಷ್ಟು ಹಳೆಯದಾದ ಈ ಕಾಲೇಜಿನಲ್ಲಿ ನಡೆದ ಬೆಳವಣಿಗೆಗಳ ಮಾಹಿತಿ ಪಡೆದುಕೊಂಡ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಕಾಲೇಜಿಗೆ ಭೇಟಿ ನೀಡಿ ವಿವಾದವನ್ನು ಬಗೆಹರಿಸಲು ಪ್ರಯತ್ನಿಸಿದರೂ ಅದು ಫಲಕಾರಿಯಾಗಲಿಲ್ಲ.

ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಹಾಜರಾಗುತ್ತಿರುವುದಕ್ಕೆ ವಿರೋಧ ವ್ಯಕ್ತಪಡಿಸಿರುವ ಕೆಲವು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬುಧವಾರ ಕಾಲೇಜಿಗೆ ಹಾಜರಾದರು

'ಕಾಲೇಜಿನ ಕೆಲವು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಹಾಜರಾಗುತ್ತಿದ್ದಾರೆ. ಹೀಗಾಗಿ ನಾವೂ ಕೇಸರಿ ಶಾಲು ಹಾಕಿಕೊಂಡು ತರಗತಿಗೆ ಹಾಜರಾಗುತ್ತೇವೆ' ಎಂದು ಹಟ ಹಿಡಿದಿರುವ ಕೆಲ ವಿದ್ಯಾರ್ಥಿಗಳು, ಕೇಸರಿ ಶಾಲು ಹಾಕಿಕೊಂಡು ಕಾಲೇಜಿಗೆ ಬಂದಿದ್ದರು.

ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ವಸ್ತ್ರ ಸಂಹಿತೆ ಇದೆ. ಅದಕ್ಕೆ ಹೊರತಾಗಿ ಇತರ ಬಟ್ಟೆಗಳನ್ನು ಧರಿಸಲು ಅವಕಾಶ ಇಲ್ಲ ಎಂದು ಸಚಿವರು ಸೂಚಿಸಿದ್ದಾರೆ. ಗುರುವಾರದಿಂದ ಕಾಲೇಜಿನ ಸಮವಸ್ತ್ರ ಹೊರತಾಗಿ ಇತರ ವಸ್ತ್ರ ಧರಿಸಿದಲ್ಲಿ ಕಾಲೇಜು ಆವರಣದ ಒಳಗೆ ಪ್ರವೇಶವಿಲ್ಲ ಎನ್ನುವ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ ಹಾಗೂ ಈ ಕುರಿತು ಪೊಲೀಸ್ ಇಲಾಖೆಗೆ ಮಾಹಿತಿ ನೀಡಲಾಗಿದೆ ಎಂದು ಕಾಲೇಜು ಮೂಲಗಳು ತಿಳಿಸಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೀಟ್ ಸೂಪರ್ ಸ್ಪೆಷಾಲಿಟಿ ಪರೀಕ್ಷೆ: ಕೃಷಿ ಕಾರ್ಮಿಕನ ಮಗನ ಸಾಧನೆ

ಚಿದಾನಂದ ದೇಶಕ್ಕೆ ಮೊದಲ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಮುಧೋಳ ತಾಲ್ಲೂಕಿನ ರನ್ನಬೆಳಗಲಿಯ ಕೃಷಿ ಕಾರ್ಮಿಕ ಕಲ್ಲಪ್ಪ ಕುಂಬಾರ ಅವರ ಪುತ್ರ ಚಿದಾನಂದ ಕುಂಬಾರ 2021ನೇ ಸಾಲಿನ ನೀಟ್ ಸೂಪರ್ ಸ್ಪೆಷಾಲಿಟಿ ಪರೀಕ್ಷೆಯಲ್ಲಿ ಡಿಎಂ ಗ್ಯಾಸ್ಟ್ರೊಎಂಟರಾಲಜಿ ಹಾಗೂ ಡಿಎಂ ಹೆಪ್ಟಾಲಜಿ ಈ ಎರಡೂ ವಿಭಾಗಗಳಲ್ಲಿ ದೇಶಕ್ಕೆ ಮೊದಲ ರ್‍ಯಾಂಕ್ ಪಡೆದಿದ್ದಾರೆ.

ಸೂಪರ್ ಸ್ಪೆಷಾಲಿಟಿ ವಿಭಾಗದ ನೀಟ್ ಪರೀಕ್ಷೆಯಲ್ಲಿ ದೇಶದಾದ್ಯಂತ 20 ಸಾವಿರ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಚಿದಾನಂದ ಬಾಲಕನಿದ್ದಾಗಲೇ ತಾಯಿ ಕಸ್ತೂರಿ ತೀರಿಕೊಂಡಿದ್ದರು. ತಂದೆ ಕಲ್ಲಪ್ಪ ಅವರ ಆಶ್ರಯದಲ್ಲಿ ಬೆಳೆದು ಬಡತನದಲ್ಲೇ ರನ್ನಬೆಳಗಲಿಯ ಎಂಪಿಎಸ್ ಶಾಲೆಯಲ್ಲಿ 1ರಿಂದ 7ನೇ ತರಗತಿ, ಬಿವಿವಿಎಸ್ ಪ್ರೌಢಶಾಲೆಯಲ್ಲಿ 8 ರಿಂದ 10ನೇ ತರಗತಿ ಕಲಿತು, ಜಮಖಂಡಿಯ ಬಿಎಲ್‌ಡಿಇ ಕಾಲೇಜಿನಲ್ಲಿ ಪಿಯುಸಿ (ವಿಜ್ಞಾನ) ಪಾಸಾಗಿದ್ದರು. ಅವರು ವಿದ್ಯಾರ್ಥಿವೇತನ ಹಾಗೂ ಸಾರ್ವಜನಿಕರ ಆರ್ಥಿಕ ನೆರವಿನಿಂದ ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸಿದ್ದಾರೆ.

ಚಿದಾನಂದ ಕುಂಬಾರ

ಸರ್ಕಾರಿ ಕೋಟಾದಲ್ಲಿ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಎಂಬಿಬಿಎಸ್ ಕಲಿತು ಗುವಾಹಟಿಯಲ್ಲಿ ಎಂ.ಡಿ ಮುಗಿಸಿರುವ ಅವರು, ಹೈದರಾಬಾದ್‌ನ ಗ್ಲೋಬಲ್ ಹಾಸ್ಪಿಟಲ್‌ನಲ್ಲಿ ಕೆಲಸ ಮಾಡಿದ್ದಾರೆ.

'ಹೆಪ್ಟಾಲಜಿಯಲ್ಲಿ ಮೊದಲ ರ್‍ಯಾಂಕ್ ಬರುವ ನಿರೀಕ್ಷೆ ಇತ್ತು. ಆದರೆ ಗ್ಯಾಸ್ಟ್ರೊಎಂಟರಾಲಜಿಯಲ್ಲಿ ಮೊದಲ 50ರೊಳಗೆ ಸ್ಥಾನ ಸಿಗಬಹುದು ಅಂದುಕೊಂಡಿದ್ದೆ. ಸಾಮಾಜಿಕ ಜಾಲತಾಣದಿಂದ ದೂರವಿದ್ದು, ಮನಸ್ಸಿಟ್ಟು ಓದಿದರೆ ಖಂಡಿತ ಯಶಸ್ಸು ಸಾಧ್ಯ' ಎಂದು ಚಿದಾನಂದ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಅಪ್ಪ, ಸಂಬಂಧಿಗಳು, ಊರಿನ ಜನರ ನೆರವಿನಿಂದ ಇದೆಲ್ಲ ಸಾಧ್ಯವಾಗಿದೆ. ದೆಹಲಿಯ ಜಿ.ಬಿ.ಪಂತ್ ಕಾಲೇಜಿನ ಗ್ಯಾಸ್ಟ್ರೊಎಂಟರಾಲಜಿ ವಿಭಾಗಕ್ಕೆ ಸೇರ್ಪಡೆಯಾಗುವೆ' ಎಂದು ಅವರು ತಿಳಿಸಿದರು.

ಕೊರೊನಾ: 4 ಸೋಂಕಿತರ ಸಾವು

ಕೋಲಾರ: ಜಿಲ್ಲೆಯಲ್ಲಿ ಕೊರೊನಾ ಸೋಂಕಿತರ ಸಾವಿನ ಪ್ರಮಾಣ ದಿಢೀರ್ ಏರಿಕೆಯಾಗಿದ್ದು, ಬುಧವಾರ ಒಂದೇ ದಿನ 4 ಮಂದಿ ಸೋಂಕಿತರು ಕೊನೆಯುಸಿರೆಳೆದಿದ್ದಾರೆ. ಇದರಿಂದ ಆರೋಗ್ಯ ಇಲಾಖೆಯ ಆತಂಕ ಹೆಚ್ಚಾಗಿದೆ.

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ
ಸಹಾಯಕ ನಿರ್ದೇಶಕರ ಕಛೇರಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಸರ್.ಎಂ.ವಿ. ಜಿಲ್ಲಾ ಕ್ರೀಡಾಂಗಣ, ಚಿಕ್ಕಬಳ್ಳಾಪುರ ಜಿಲ್ಲೆ,
Email:dyescbpur@gmail.com ದೂರವಾಣಿ: 08156270054
ಸಂ: ಸನಿ/ಯುಸಕ್ರೀ/ಚಿ.ಬ/ಕ್ರಿ.ವ.ನಿ.ಊ.ಮ.ಟೆಂಡರ್/38/2021-22,
ದಿನಾಂಕ: 28.01.2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (01 ವರ್ಷದ ಅವಧಿಗೆ)

ವಿವರ: 2021–22 ಸಾಲಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆಯ ಕ್ರೀಡಾ ವಸತಿ ಶಾಲೆ/ನಿಲಯದ ಕ್ರೀಡಾಪಟುಗಳಿಗೆ ತ್ರೈಮಾಸಿಕ ಅವಧಿಗೆ ಊಟೋಪಚಾರವನ್ನು ಸರಬರಾಜು ಮಾಡಲು ಟೆಂಡರ್‌ದಾರರನ್ನು ನೇಮಿಸುವ ಕುರಿತು. ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **08.02.2022, ಮಧ್ಯಾಹ್ನ 4.00 ಗಂಟೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **09.02.2022 ಸಂಜೆ 4.30 ಗಂಟೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **10.02.2022 ಸಂಜೆ 5.00 ಗಂಟೆ. ಒಂದು ವೇಳೆ ಬದಲಾವಣೆಯಾದಲ್ಲಿ ದಿನಾಂಕವನ್ನು ತಿಳಿಸಲಾಗುವುದು.** ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಇ.ಎಂ.ಡಿ ಶುಲ್ಕ: **ರೂ.1,00,000/-**. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸರ್.ಎಂ.ವಿ. ಜಿಲ್ಲಾ ಕ್ರೀಡಾಂಗಣ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ: 08156-270054, ಇಮೇಲ್: **dyescbpur@gmail.com** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಸಂಪರ್ಕಿಸಲು ಕೋರಿದೆ. ಅರ್ಜಿ ವಿವರ ಮತ್ತು ಟೆಂಡರ್ ದಸ್ತಾವೇಜುಗಳನ್ನು ವೆಬ್ ಸೈಟ್: **http://www.eproc.karnataka.gov.in**ನಲ್ಲಿ ಪಡೆಯಬಹುದಾಗಿದೆ.

ಸಹಿ/- ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ341/ಎಂ.ಸಿ.ಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಒಬ್ಬರಿಗೆ ಹಂಚಿಕೆಯಾದ ಬದಲಿ ನಿವೇಶನ ಇನ್ನೊಬ್ಬರಿಗೂ ಹಂಚಿಕೆ

ಹಳೆ ಬಡಾವಣೆಯಲ್ಲಿ ಬದಲಿ ನಿವೇಶನ ನೀಡಿದ್ದ ಉಪಕಾರ್ಯದರ್ಶಿ–1 ವಿಭಾಗ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಒಬ್ಬ ವ್ಯಕ್ತಿಗೆ ಬದಲಿ ನಿವೇಶನದ ರೂಪದಲ್ಲಿ ಹಂಚಿಕೆಯಾಗಿದ್ದ ನಿವೇಶನವನ್ನು ಯಾವುದೇ ಸೂಚನೆ ನೀಡದೆಯೇ ರದ್ದುಪಡಿಸಿ, ಅದನ್ನು ಇನ್ನೊಬ್ಬ ವ್ಯಕ್ತಿಗೆ ಅಕ್ರಮವಾಗಿ ಹಂಚಿಕೆ ಮಾಡಿದ ಆರೋಪವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಉಪ ಕಾರ್ಯದರ್ಶಿ –1 ಆಗಿ ಕಾರ್ಯ ನಿರ್ವಹಿಸಿದ್ದ ಇಬ್ಬರು ಕೆಎಎಸ್ ಅಧಿಕಾರಿಗಳು ಎದುರಿಸುತ್ತಿದ್ದಾರೆ. ಈ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ ತನಿಖೆಗೆ ಒಳಪಡಿಸಲು ಪ್ರಾಧಿಕಾರವು ಶಿಫಾರಸು ಮಾಡಿದೆ.

ಜಿ.ಗುರುಪ್ರಸಾದ್ ಅವರಿಗೆ ಜೆ.ಪಿ. ನಗರ ಬಡಾವಣೆಯ ಒಂಬತ್ತನೇ ಹಂತದ ಎರಡನೇ ಬ್ಲಾಕ್ ಬಡಾವಣೆಯ 40x60 ಅಡಿ ವಿಸ್ತೀರ್ಣದ ನಿವೇಶನವನ್ನು (ಸಂಖ್ಯೆ 464) ಬಿಡಿಎ ಹಂಚಿಕೆ ಮಾಡಿತ್ತು. ಅವರ ಕೋರಿಕೆ ಮೇರೆಗೆ 2006ರಲ್ಲಿ ಎಚ್.ಎಸ್.ಆರ್. ಬಡಾವಣೆಯ 6ನೇ ಸೆಕ್ಟರ್‌ನಲ್ಲಿ ಬದಲಿ ನಿವೇಶನವನ್ನು (ಸಂಖ್ಯೆ 553) ಹಂಚಿಕೆ ಮಾಡಲಾಗಿತ್ತು. ಹಳೆಯ ಬಡಾವಣೆಯಲ್ಲಿ ಅವರಿಗೆ ನಿಯಮಬಾಹಿರವಾಗಿ ನಿವೇಶನ ಹಂಚಿಕೆಯಾದ್ದರಿಂದ ನಿವೇಶನ ರದ್ದತಿ ಪತ್ರವನ್ನು ಏಕಪಕ್ಷೀಯವಾಗಿ 2009ರ ಜೂನ್ 1 ರಂದು ನೋಂದಾಯಿಸಲಾಗಿದೆ.

ರವಿರಾಜ್ ಅವರಿಗೆ ಬಿ.ಟಿ.ಎಂ. ಬಡಾವಣೆಯ ಆರನೇ ಹಂತದ 2ನೇ ಬ್ಲಾಕ್‌ನಲ್ಲಿ ನಿವೇಶನ (ಸಂಖ್ಯೆ 530) ಹಂಚಿಕೆಯಾಗಿತ್ತು. ಇದನ್ನು ಬದಲಿಸಿ ಎಚ್.ಎಸ್.ಆರ್. ಬಡಾವಣೆಯ 6ನೇ ಸೆಕ್ಟರ್‌ನಲ್ಲಿ ನಿವೇಶನವನ್ನು (ಸಂಖ್ಯೆ 553) ಹಂಚಿಕೆ ಮಾಡಿ 2019ರ ಜ.17 ರಂದು ನೋಂದಾಯಿಸಲಾಗಿದೆ. ಈ ನಿವೇಶನವನ್ನು ಬಿಡಿಎ ಈ ಹಿಂದೆಯೇ ಗುರುಪ್ರಸಾದ್ ಅವರಿಗೆ ಹಂಚಿಕೆ ಮಾಡಿತ್ತು.

ಜಿ.ಗುರುಪ್ರಸಾದ್ ಅವರಿಗೆ ಬಿಡಿಎ ಕಾಯ್ದೆ 1976ರ ನಿಯಮ 11(ಎ)ಗೆ ವಿರುದ್ಧವಾಗಿ ಅದಾಗಲೇ ಅಭಿವೃದ್ಧಿ ಹೊಂದಿದ ಹಳೆಯ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡುವ ಮೂಲಕ ಉಪಕಾರ್ಯದರ್ಶಿ–1 ವಿಭಾಗದ ಅಧಿಕಾರಿಗಳು ಹಾಗೂ ನೌಕರರು ಕರ್ತವ್ಯ ಲೋಪ ಎಸಗಿರುವುದು ಪ್ರಾಧಿಕಾರವು ನಡೆಸಿದ ಆತಂರಿಕ ತನಿಖೆಯಲ್ಲಿ ಮೇಲ್ನೋಟಕ್ಕೆ ಸಾಬೀತಾಗಿದೆ.

ಉಪಕಾರ್ಯದರ್ಶೀ–1 ಆಗಿ ಕಾರ್ಯನಿರ್ವಹಿಸಿದ್ದ ಕೆಎಎಸ್ ಅಧಿಕಾರಿಗಳಾದ ಚಿದಾನಂದ ಹಾಗೂ ಸುಧಾ, ಅವರ ಕಚೇರಿಯ ಮೇಲ್ವಿಚಾರಕ ಡಿ.ಅಶ್ವತ್ಥನಾರಾಯಣ ರಾವ್ ಹಾಗೂ ಪ್ರಥಮದರ್ಜೆ ಸಹಾಯಕ (ನಿವೃತ್ತರಾಗಿದ್ದಾರೆ) ಎಸ್.ಮಂಜುನಾಥ ಕರ್ತವ್ಯಲೋಪ ಎಸಗಿದ್ದು ಇವರನ್ನು 1988ರ ಭ್ರಷ್ಟಾಚಾರ ತಡೆ ಕಾಯ್ದೆಯ 1988ರ ನಿಯಮ 17(ಎ) ರನ್ವಯ ವಿಸ್ತೃತ ವಿಚಾರಣೆಗೆ ಒಳಪಡಿಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಅನುಮತಿ ನೀಡಬಹುದು ಎಂದು ಬಿಡಿಎ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ 2022ರ ಜ. 5ರಂದು ಅಭಿಪ್ರಾಯ ಸಲ್ಲಿಸಿದ್ದಾರೆ.

ಉಪನಗರ ರೈಲಿಗೆ ₹459 ಕೋಟಿ

ಬೆಂಗಳೂರು: ಉಪನಗರ ರೈಲು ಯೋಜನೆಗೆ ಕೇಂದ್ರ ಸರ್ಕಾರ ತನ್ನ ಪಾಲಿನ ₹450 ಕೋಟಿ ಅನುದಾನವನ್ನು ಈ ಬಾರಿಯ ಬಜೆಟ್‌ನಲ್ಲಿ ಮೀಸಲಿಟ್ಟಿದೆ.

ರೈಲ್ವೆ ಮಂಡಳಿ ಬುಧವಾರ ಬಿಡುಗಡೆ ಮಾಡಿರುವ ಪಿಂಕ್ ಬುಕ್‌ನಲ್ಲಿ ಈ ಮಾಹಿತಿ ನೀಡಿದೆ. ಯೋಜನೆಯ ಡಿಪಿಆರ್ ಪ್ರಕಾರ ನಿಗದಿಯಾಗಿದ್ದ ತನ್ನ ಪಾಲಿನ (ಶೇ 20ರಷ್ಟು) ಮೊತ್ತವನ್ನು ಕೇಂದ್ರ ಸರ್ಕಾರ ನೀಡಿದೆ. ರಾಜ್ಯ ಸರ್ಕಾರವೂ ಇಷ್ಟೇ ಮೊತ್ತ ನೀಡಬೇಕಿದ್ದು, ಉಳಿದ ಮೊತ್ತವನ್ನು ಸಾಲವಾಗಿ ಪಡೆಯಬೇಕಾಗುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕೂಡಲೇ ಕಾಮಗಾರಿಯನ್ನು ಕೆ–ರೈಡ್ ಆರಂಭಿಸಬೇಕು ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ್ ಒತ್ತಾಯಿಸಿದರು.

ಇದಲ್ಲದೇ ಯಶವಂತಪುರ–ಹೊಸೂರು ನಡುವಿನ ಜೋಡಿ ರೈಲು ಮಾರ್ಗಕ್ಕೆ ₹225 ಕೋಟಿ, ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ವೈಟ್‌ಫೀಲ್ಡ್ ತನಕದ ನಾಲ್ಕು ಪಥದ ರೈಲು ಮಾರ್ಗಕ್ಕೂ ₹100 ಕೋಟಿ ಅನುದಾನ ಲಭ್ಯವಾಗಿದೆ. ಈಗಾಗಲೇ ಕಾಮಗಾರಿ ಆರಂಭವಾಗಿದ್ದು, ಅನುದಾನ ಲಭ್ಯವಾಗಿರುವುದರಿಂದ ಕಾಮಗಾರಿಗೆ ಇನ್ನಷ್ಟು ವೇಗ ದೊರೆಯುವ ಸಾಧ್ಯತೆ ಇದೆ ಎಂದು ಅವರು ಅಭಿಪ್ರಾಯಪಟ್ಟರು.

ಬೆಂಗಳೂರಿಗೆ ಅಗತ್ಯವಿರುವ ಲೆವೆಲ್ ಕ್ರಾಸಿಂಗ್‌ಗಳು, ನಿಲ್ದಾಣಗಳ ಅಭಿವೃದ್ಧಿ, ಯಶವಂತಪುರ ಎರಡನೇ ಟರ್ಮಿನಲ್ ಪ್ರಸ್ತಾವನೆಗೆ ಅನುದಾನ ಲಭ್ಯವಾಗದಿರುವುದು ಬೇಸರದ ವಿಷಯ ಎಂದರು.

ಜೆಡಿಎಸ್ ಮುಖಂಡ ಸೇರಿ 7 ಮಂದಿ ವಿರುದ್ಧ ಎಫ್‌ಐಆರ್

ನಕಲಿ ದಾಖಲೆ ಸೃಷ್ಟಿಸಿ ಬಿಡಿಎಗೆ ₹4.21 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ₹4.21 ಕೋಟಿ ವಂಚಿಸಲಾಗಿದ್ದು, ಈ ಸಂಬಂಧ ಜೆಡಿಎಸ್ ಮುಖಂಡ ಎ.ಎಂ. ಹನುಮಂತೇಗೌಡ ಸೇರಿ 7 ಮಂದಿ ವಿರುದ್ಧ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬಿಡಿಎ ಸ್ವಾಧೀನಕ್ಕೆ ಒಳಪಟ್ಟಿದ್ದ ಭೂಮಿಯ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅದನ್ನು ಬೇರೊಬ್ಬರಿಗೆ ಪರಭಾರೆ ಮಾಡಿರುವುದು ಬಿಡಿಎ ವಿಶೇಷ ಕಾರ್ಯಪಡೆ ಮತ್ತು ವಿಚಕ್ಷಣ ದಳದ ತನಿಖೆಯಿಂದ ದೃಢಪಟ್ಟಿತ್ತು. ಈ ಸಂಬಂಧ ಕಾರ್ಯಪಡೆಯ ಅಧಿಕಾರಿ ಇಂದ್ರಾಮಣಿ ದೂರು ನೀಡಿದ್ದಾರೆ. ಅದರ ಆಧಾರದಲ್ಲಿ ಹನುಮಂತೇಗೌಡ, ಜಮೀನಿನ ಖಾತೆದಾರರಾದ ನಾಗರತ್ನಮ್ಮ, ಶಶೀಂದ್ರ ನಾಗರಾಜ್, ವಾಣಿ ಶಶೀಂದ್ರ, ರವೀಂದ್ರ ಶಶೀಂದ್ರ, ಮುನಿರಾಜು ಹಾಗೂ ಕೆ.ದಿವಾಕರ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ನಗರದ ಕೊಮ್ಮಘಟ್ಟ ಗ್ರಾಮದ ಸರ್ವೆ ಸಂಖ್ಯೆ 78ರಲ್ಲಿದ್ದ ಒಟ್ಟು 9 ಎಕರೆ 27 ಗುಂಟೆ ಜಮೀನನ್ನು ಬಿಡಿಎ, ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿತ್ತು. ಆರೋಪಿತೆ ನಾಗರತ್ನ ಹೆಸರಿನಲ್ಲಿದ್ದ 2 ಎಕರೆ 34 ಗುಂಟೆ ಜಮೀನಿನ ಪೈಕಿ 5 ಗುಂಟೆ ಬಿಟ್ಟು ಉಳಿದ ಜಮೀನನ್ನು ಅಂತಿಮ ಅಧಿಸೂಚನೆ ಮೂಲಕ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆದರೆ, ಆರೋಪಿಗಳು 4 ಗುಂಟೆ ಮಾತ್ರ ಭೂಸ್ವಾಧೀನಕ್ಕೆ ಒಳಪಟ್ಟಿದೆ, ಉಳಿದ 2 ಎಕರೆ 30 ಗುಂಟೆ ಸ್ವಾಧೀನವಾಗಿಲ್ಲ ಎಂದು ಕೆ.ಎಂ. ಉದಯ್‌ಕುಮಾರ್ ಎಂಬುವರಿಗೆ ನಂಬಿಸಿದ್ದರು. ಪ್ರಾಧಿಕಾರದ ನಕಲಿ ಹಿಂಬರಹ ಸೃಷ್ಟಿ ಮಾಡಿದ್ದ ಅವರು ನಕ್ಷೆಯನ್ನೂ ನೀಡಿ ಉದಯ್‌ಕುಮಾರ್ ಅವರಿಗೆ ಶುದ್ಧಕ್ರಯಪತ್ರ ನೋಂದಾಯಿಸಿಕೊಟ್ಟಿದ್ದರು. ಈ ವಿಚಾರವನ್ನು ದೂರಿನಲ್ಲಿ ಪ್ರಸ್ತಾಪಿಸಲಾಗಿದೆ’ ಎಂದಿದ್ದಾರೆ ಪೊಲೀಸರು.

‘ನಾಗರತ್ನ ಅವರ ತಂದೆ ನಾಗಜೋಯಿಸ್ ಅವರು ಭೂಮಿಯ ಮೂಲ ಖಾತೆದಾರರಾಗಿದ್ದರು. ಆರೋಪಿಗಳು ಅವರಿಗೆ ಮುಂಗಡವಾಗಿ ₹1 ಲಕ್ಷ ಹಣ ನೀಡಿ ಸ್ವತ್ತಿನ ದಾಖಲೆಗಳನ್ನು ಮೊದಲೇ ಪಡೆದಿದ್ದರು. ನಾಗಜೋಯಿಸ್ ವಿಚಾರಣೆ ವೇಳೆ ಈ ವಿಷಯ ಹೇಳಿದ್ದಾರೆ. ತನ್ನ ಪ್ರಭಾವ ಬಳಸಿ ಆಸ್ತಿ ಮಾರಾಟ ಮಾಡಿಕೊಡಿಸುವುದಾಗಿ ಹನುಮಂತೇಗೌಡ ಅವರು ಮೂಲ ದಾಖಲೆಗಳನ್ನು ಪಡೆದುಕೊಂಡಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಹನುಮಂತೇಗೌಡರ ಮಾತಿನಿಂದ ಅನುಮಾನಗೊಂಡ ಜೋಯಿಸರು ಸ್ವತ್ತಿನ ವ್ಯವಹಾರ ನೋಡಿಕೊಳ್ಳಲು ವಕೀಲರಾದ ದಿವಾಕರ್ ಅವರಿಗೆ ಜಿಪಿಎ ನೋಂದಾಯಿಸಿಕೊಟ್ಟಿದ್ದರು. ಈ ವಿಷಯವೂ ದೂರಿನಲ್ಲಿದೆ’ ಎಂದಿದ್ದಾರೆ.

‘ಹನುಮಂತೇಗೌಡ ಹಾಗೂ ಇತರ ಆರೋಪಿಗಳು ನಕಲಿ ದಾಖಲೆಗಳನ್ನು ತೋರಿಸಿ ಉದಯ್ ಅವರಿಗೆ ₹4.21 ಕೋಟಿ ಮೊತ್ತಕ್ಕೆ ಭೂಮಿ ಮಾರಾಟ ಮಾಡಿರುವ ವಿಚಾರವನ್ನೂ ದೂರಿನಲ್ಲಿ ಪ್ರಸ್ತಾಪಿಸಲಾಗಿದೆ’ ಎಂದು ಹೇಳಿದ್ದಾರೆ.

‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ಗೆ ಕೃತಿಗಳ ಆಹ್ವಾನ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆಯು ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ಗೆ ಕೃತಿಗಳನ್ನು ಆಹ್ವಾನಿಸಿದೆ.

2021ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಕಟಗೊಂಡ ಸಾಹಿತ್ಯದ ಎಲ್ಲ ಪ್ರಕಾರದ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಆಯ್ಕೆಯಾದ 5 ಪ್ರಕಾರದ ಕೃತಿಗಳ ಲೇಖಕರಿಗೆ ತಲಾ ₹ 5 ಸಾವಿರ ಹಾಗೂ ಫಲಕವನ್ನು ನೀಡಿ ಗೌರವಿಸಲಾಗುತ್ತದೆ. ಪ್ರಕಟಿತ ಕೃತಿಯ ಮೂರು ಪ್ರತಿಗಳನ್ನು ಕಳುಹಿಸಲು 2022ರ ಮಾ.15 ಕಡೆಯ ದಿನಾಂಕ ಎಂದು ವೇದಿಕೆಯ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ತಿಳಿಸಿದ್ದಾರೆ.

ಪುಸ್ತಕ ಕಳುಹಿಸಬೇಕಾದ ವಿಳಾಸ: ದ್ವಾರನಕುಂಟೆ ಪಾತಣ್ಣ, ಅಧ್ಯಕ್ಷರು, ಸ್ವಾಭಿಮಾನಿ ಕರ್ನಾಟಕ ವೇದಿಕೆ, ನಂ.118, ಹೊಂಬೆಳಕು, 5ನೇ ಕ್ರಾಸ್, 1ನೇ ಬ್ಲಾಕ್, ಎಚ್.ಎಂ.ಟಿ. ಬಡಾವಣೆ, ನಾಗಸಂದ್ರ, ಬೆಂಗಳೂರು–560 073

ಸಂಪರ್ಕಕ್ಕೆ: 96860 73837

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್, ವಿಜನಿನಿ ರವರ ಕಛೇರಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ–9, ಶಿರಾ ದೂರವಾಣಿ & ಫ್ಯಾಕ್ಸ್ ಸಂಖ್ಯೆ: 08135-276101 ಇ–ಮೇಲ್: ubpee09@gmail.com
ಸಂಖ್ಯೆ:ಕಾಇಂ/ವಿಜನಿನಿ/ಭಮೇಯೋ/ವಿ–9/ಶಿರಾ/ಎಸ್.ಟಿ.ಪಿ/ಟೆಂಡರ್‌ಪ್ರಕಟಣೆ/01/2021–22 ದಿನಾಂಕ : 02.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (Call-3)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನೋಂದಾಯಿತ ಕಛೇರಿ, ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರೋಡ್, ಬೆಂಗಳೂರು–560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾ ಕಛೇರಿ ವ್ಯಾಪ್ತಿಯ 2019–20 ನೇ ಸಾಲಿನ ಲೆಕ್ಕಶೀರ್ಷಿಕೆ–4701 ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಟಿ.ಎಸ್.ಪಿ. ಕಾಮಗಾರಿಯಾದ “ಗುಬ್ಬಿ ತಾಲ್ಲೂಕು ನಿಟ್ಟೂರು ಹೋಬಳಿ ಹುಲ್ಲರವೆ ಕಾವಲ್ ಸ.ನಂ.11 ರಲ್ಲಿ ಎಸ್.ಟಿ. ಜನಾಂಗದ ಲಕ್ಕಮ್ಮನ ಜಮೀನಿನ ಹತ್ತಿರ ಚೆಕ್‌ಡ್ಯಾಂ ನಿರ್ಮಾಣದ ಕಾಮಗಾರಿ ಇಂಡೆಂಟ್ ನಂ.1685 (ಇತರೆ)” ಏಕ ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ www.eproc.karnataka.gov.in ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ದಿನಾಂಕ: **02.02.2022** ರಿಂದ **11.02.2022** ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ದಿನಾಂಕ: **02.02.2022** ರಿಂದ **11.02.2022** ರ ಸಂಜೆ 4.30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ನಿಗಧಿಪಡಿಸಿದ ಇ.ಎಂ.ಡಿ ಮೊತ್ತ / ಟೆಂಡರ್ ನಿಯಮ/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು. ಸ್ವೀಕೃತ ಟೆಂಡರ್ ಬಿಡ್‌ಗಳನ್ನು ದಿನಾಂಕ:**14.02.2022**ರ ಬೆಳಗ್ಗೆ 11.00 ಗಂಟೆಯ ನಂತರ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9 ಶಿರಾರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಅರ್ಹ ಗುತ್ತಿಗೆದಾರರು (www.eproc.karnataka.gov.in) ಅಂತರ್‌ಜಾಲದಿಂದ ಎಲ್ಲಾ ವಿವರಗಳನ್ನು ಪಡೆದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭ.ಮೇ.ಯೋ. ವಿಭಾಗ ನಂ.09, ಶಿರಾ.

ಸುದ್ದಿ 2 ನಿಮಿಷ

ಕೋರ್ಟ್‌ಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸಲು ಅರ್ಜಿ

ಬೆಂಗಳೂರು: ’ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಭಾವಚಿತ್ರವನ್ನು ಹೈಕೋರ್ಟ್ ಸೇರಿದಂತೆ ರಾಜ್ಯದಾದ್ಯಂತ ಎಲ್ಲ ಕೋರ್ಟ್ ಹಾಲ್‌ಗಳಲ್ಲಿ ಅಳವಡಿಸಲು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಬೇಕು‘ ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತಂತೆ ನಗರದ ಜೆ.ಜಗನ್‌ಕುಮಾರ್ ಎಂಬುವರು ರಿಟ್ ಅರ್ಜಿಯೊಂದನ್ನು ದಾಖಲಿಸಿದ್ದು ಇದು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ಅರ್ಜಿಯಲ್ಲಿ ಏನಿದೆ?: ’ಅಂಬೇಡ್ಕರ್ ಅವರು ಸ್ವತಂತ್ರ ಭಾರತದ ಪಿತಾಮಹರಲ್ಲಿ ಒಬ್ಬರು. ಇಂತಹ ಮಹನೀಯರ ಭಾವಚಿತ್ರ ಯಾವುದೇ ಕೋರ್ಟ್ ಹಾಲ್‌ನಲ್ಲಿ ಕಾಣಸಿಗುವುದು ಅಪರೂಪ ಎಂಬಂತಾಗಿದೆ. ಈ ದಿಸೆಯಲ್ಲಿ ನಾನು ಅವರ ಭಾವಚಿತ್ರವನ್ನು ರಾಜ್ಯದ ಎಲ್ಲ ಕೋರ್ಟ್ ಹಾಲ್‌ಗಳಲ್ಲಿ ಹಾಕುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ 2019ರ ಡಿಸೆಂಬರ್ 27ರಂದೇ ಪತ್ರ ಬರೆದಿದ್ದೆ. ಆದರೆ, ಈ ಪತ್ರಕ್ಕೆ ನನಗೆ ಈತನಕ ಯಾವುದೇ ಉತ್ತರ ಬಂದಿರುವುದಿಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ರಸ್ತೆ ವಿಸ್ತರಣೆಗೆ ಸಚಿವ ಸೂಚನೆ

ಬೆಂಗಳೂರು: ಜನಸಂಚಾರ ಮತ್ತು ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿರುವ ಮಹಾಲಕ್ಷ್ಮಿ ಬಡಾವಣೆಯ ಮೆಟ್ರೊ ನಿಲ್ದಾಣದ ರಸ್ತೆ ವಿಸ್ತರಿಸುವಂತೆ ಅಬಕಾರಿ ಸಚಿವ ಕೆ.ಗೋಪಾಲಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ಮೆಟ್ರೊ ನಿಲ್ದಾಣದ ರಸ್ತೆಗೆ ಬುಧವಾರ ಭೇಟಿ ನೀಡಿ ಅವರು, ಅಲ್ಲಿರುವ ಸಮಸ್ಯೆಗಳನ್ನು ಕುರಿತು ಪರಿಶೀಲನೆ ನಡೆಸಿದರು.

ಕಿರಿದಾದ ರಸ್ತೆಯಿಂದಾಗಿ ವಾಹನ ಮತ್ತು ಜನ ಸಂಚಾರಕ್ಕೆ ತೀವ್ರ ತೊಂದರೆ ಆಗುತ್ತಿರುವ ಕುರಿತು ಸ್ಥಳೀಯರು ಮನವಿ ಸಲ್ಲಿಸಿದ್ದರು.

ಇದಕ್ಕೆ ಸ್ಪಂದಿಸಿದ್ದ ಸಚಿವ ಗೋಪಾಲಯ್ಯ ಸ್ಥಳಕ್ಕೆ ಭೇಟಿ ನೀಡಿ, ಬಿಬಿಎಂಪಿ ಎಂಜಿನಿಯರ್‌ಗಳ ಜೊತೆ ಚರ್ಚೆ ನಡೆಸಿದರು. ವಾಹನ ಮತ್ತು ಜನರ ಸುಗಮ ಸಂಚಾರಕ್ಕೆ ರಸ್ತೆ ವಿಸ್ತರಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮಲ್ಲೇಶ್ವರ ವಿಭಾಗದ ಎಸಿಪಿ ನಾಗೇಶ್, ಬಿಬಿಎಂಪಿ ಎಂಜಿನಿಯರ್ ತಿಮ್ಮರಸು, ಸ್ಥಳೀಯ ಮುಖಂಡರಾದ ವೆಂಕಟೇಶ್ ಇದ್ದರು.

ತಹಶೀಲ್ದಾರ್ ಮೇಲಿನ ಹಲ್ಲೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ತಹಶೀಲ್ದಾರ್ ಮೇಲಿನ ಹಲ್ಲೆಯನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಬೆಂಗಳೂರು ನಗರ ಜಿಲ್ಲಾ ಘಟಕ ಖಂಡಿಸಿದೆ.

‘ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ನು ದುರುಪಯೋಗ ಮಾಡಿಕೊಳ್ಳುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಅದಕ್ಕೆ ಸರ್ಕಾರ ಆಸ್ಪದ ನೀಡಬಾರದು. ಸರ್ಕಾರಿ ಅಧಿಕಾರಿಗಳಿಗೇ ರಕ್ಷಣೆ ಇಲ್ಲವಾದರೆ ಸಾಮಾನ್ಯ ಜನರ ಪಾಡೇನು’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಸ್.ಮೃತ್ಯುಂಜಯಸ್ವಾಮಿ ಪ್ರಶ್ನಿಸಿದರು.

‘ಸಮಾಜ ಘಾತುಕ ಶಕ್ತಿಗಳಿಗೆ ತಕ್ಕ ಶಿಕ್ಷೆ ಆಗಬೇಕು. ಇಲ್ಲದಿದ್ದರೆ ಇಂತಹ ದುಷ್ಟ ಶಕ್ತಿಗಳಿಗೆ ಪಾಠ ಕಲಿಸಲು ನಮ್ಮ ಸಂಘಟನೆ ಸಶಕ್ತವಾಗಿದೆ. ಅಧಿಕಾರಿಗಳು ಮುಕ್ತವಾಗಿ ಕರ್ತವ್ಯ ನಿರ್ವಹಿಸಲು ಸೂಕ್ತ ರಕ್ಷಣೆ ನೀಡಬೇಕು’ ಎಂದು ಒತ್ತಾಯಿಸಿದರು.

ಸಂಘದ ರಾಷ್ಟ್ರೀಯ ಕಾರ್ಯದರ್ಶಿ ಎಚ್.ಎಂ.ರೇಣುಕ ಪ್ರಸನ್ನ, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಗುರುಸ್ವಾಮಿ, ಉಪಾಧ್ಯಕ್ಷ ಜಯಶೀಲಗೌಡ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENTS
And Finance Available On Low Interest Against Properties, Land& Buildings, Finance Sites, Flats, Converted and Agriculture Lands. Also Introducing Luxury Cars Finance @ Very Low Interest Call: 7411265189

WANTED INVESTER
We Are Manufacturer, Pure Silk Sarees, Invester Get Good Profit in-our Business. 7899356649

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

JOB OPPORTUNITIES

Multiple Vacancy

REQ. TEAM-LEADER, Telecaller, Backend & Field executive for For Banking Loan collection (salary upto 20,000 to 25,000). direct recruitment to company Contact:- 9620206756, 9620200756.

REAL ESTATE SELLING

Residential/ Commercial

Out-Station

B.C.ROAD,BANTWAL CLOSE to KSRTC bust stop and NH,newly built 5 Units of 2BHK apartments built on 9 cents land. Ideal for service apartments/Guest House/Hostel. 9945333814.

PERSONAL

Change of Name

NAME CHANGE
I, R. Sujatha alias Ramachandra Sujatha Muniraja w/o S. Muniraju aged about 54 years residing at #18, Lakeview Defence Colony, Shettihalli, Jalahalli West Post, Bengaluru-560015 have changed my name to RAMACHANDRA SUJATHA MUNIRAJU vide affidavit dated 02/02/2022 before notary B.S. Padma Prasad, Bengaluru.

I, BHOOMIKA SRIKANTH RAIKAR W/o Sri.Amol Subhash Palankar, residing at No.83-B, 22nd Cross, 2nd Block, Rajajinagar, Bangalore-560010 have changed my name to BHOOMIKA AMOL PALANKAR vide affidavit dated 01.02.2022 sworn before notary L.Veena, Bangalore-91.

I, B Krishnamurthy S/O Begure Gowda, aged 39 years Residing at No 83, Alagavaderahalli, Near H.P. Gas Agency, R.R.Nagar, Bangalore 560098, have changed my Name to ATHARVA SAMRAT GOWDA, Sworn before Notary S. Vijayakumar, Vide Affidavit dated 25-01-2022

SHAMPA PAUL W/o 14838921F- Nk/MT- ANUP KUMAR PAUL R/a Subidpur, Purandarpur, Gaighata, North 24 Parganas, WB changed name from SHAMPA PAUL to SHAMPA PAUL ROY notary KV Mani, Bangalore.

I, R.YADUNANDAN have changed my name to R.YADHUNANDAN vide affidavit dated: 2/2/2022 before Notary Manohar Jeerige Bangalore.

CONNECT

ಚಂದ್ರೋದಯ ಕನ್ವೆನ್ಷನ್ ಸೆಂಟರ್
ನಂ. 39/2, ಬನ್ನೇರುಘಟ್ಟ ರೋಡ್, ಬೆಂಗಳೂರು.
ದಿನಾಂಕ: 11-2-2022ರ ಮದುವೆಯು ರದ್ದಾಗಿದೆ ಈ ಮೇಲಿನ ದಿನಾಂಕ ಬೇಕಾಗಿರುವವರು
ಕೂಡಲೇ ಸಂಪರ್ಕಿಸಿ :
9448077605, 9148963246

Lost

I, ROSHAN Hanumanthe Gowda S/o Hanumanthe Gowda have lost SSLC Marksheet and Pass Certificate Roll No-20100848087/2010/STATE and PUC Marksheet and Pass Certificate Roll No-016994/2012/STATE & Banglore University Marksheet and Degree Roll No.12NCJB614 Year-2016. Finders please contact 7259675741 or please handover to the police station.

PUBLIC NOTICE

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact: 9880856233 /9845114560 9886213331

ಹೊಸಹಳ್ಳಿ ಗ್ರಾಮದಲ್ಲಿ ಕಲ್ಯಾಣಿ ಅಭಿವೃದ್ಧಿ ಕಾಮಗಾರಿಗೆ ಅತೀಕ್ ಚಾಲನೆ ನೀಡಿದರು. ಶಿಲ್ಪಾನಾಗ್, ಸಂಗಪ್ಪ ಇದ್ದರು

ಕಲ್ಯಾಣಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ‘ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ದೊಡ್ಡ ಸವಾಲಾಗಿ ಪರಿಣಮಿಸಿದ್ದು, ಸಾಂಪ್ರದಾಯಿಕ ಜಲಮೂಲಗಳಾದ ಕೆರೆ-ಕುಂಟೆ, ಕಲ್ಯಾಣಿ ಮತ್ತು ರಾಜಕಾಲುವೆಗಳನ್ನು ಪುನರ್ ಸಂರಕ್ಷಿಸಿಕೊಳ್ಳಬೇಕಾದ ಅಗತ್ಯವಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್ ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಯಲಹಂಕ ತಾಲ್ಲೂಕು ಪಂಚಾಯಿತಿ ಹಾಗೂ ಸಾತನೂರು ಗ್ರಾಮ ಪಂಚಾಯಿತಿ ಆಶ್ರಯದಲ್ಲಿ ‘ನರೇಗಾ ದಿವಸ್’ ಆಚರಣೆ ಅಂಗವಾಗಿ ಹೊಸಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಕಲ್ಯಾಣಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಒಂದು ಸಾವಿರ ಅಡಿಗಳಿಗಿಂತ ಆಳಕ್ಕೆ ಕುಸಿದಿದೆ. ಜಲ ಮೂಲಗಳನ್ನು ಸಂರಕ್ಷಣೆ ಮಾಡದಿದ್ದರೆ ಭವಿಷ್ಯದಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗಲಿದೆ ಎಂದು ಎಚ್ಚರಿಸಿದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಆಯುಕ್ತ ಶಿಲ್ಪಾನಾಗ್ ಮಾತನಾಡಿ, ‘ನರೇಗಾ ಯೋಜನೆಯಡಿ ಇತರೆ ರಾಜ್ಯಗಳಲ್ಲಿ ಶೇ 88ರಷ್ಟು ಮಹಿಳೆಯರು ಪಾಲ್ಗೊಳ್ಳುತ್ತಿದ್ದು, ಕರ್ನಾಟಕದಲ್ಲಿ ಶೇ 49.91ರಷ್ಟಿದೆ. ಹೆಚ್ಚಾಗಿ ಮಹಿಳೆಯರು ಭಾಗವಹಿಸುವುದರ ಜತೆಗೆ ಹಿರಿಯ ನಾಗರಿಕರು ಮತ್ತು ದುರ್ಬಲ ವರ್ಗದವರಿಗೆ ಅವಕಾಶ ಸಿಗುವಂತಾಗಬೇಕು‘ ಎಂದು ಆಶಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ ಮಾತನಾಡಿದರು.

ಏರಿಯಾ ಆಫೀಸರ್ಸ್ ಆ್ಯಪ್‌ನಲ್ಲಿ ನರೇಗಾ ಕಾಮಗಾರಿಗಳ ಚಿತ್ರಗಳನ್ನು ಸೆರೆ ಹಿಡಿಯುವುದರಲ್ಲಿ ರಾಜ್ಯದಲ್ಲಿ ದ್ವಿತೀಯ ಸ್ಥಾನ ಪಡೆದಿರುವ ಯಲಹಂಕ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಎಚ್.ರವಿಕುಮಾರ್, ಶೇ 100ರಷ್ಟು ಕೂಲಿ ಪಾವತಿ ಮಾಡಿರುವ ತಾಂತ್ರಿಕ ಸಂಯೋಜಕ ಮಹಮದ್ ರಫಿ, ತಾಂತ್ರಿಕ ಸಹಾಯಕಿ ಶ್ವೇತಾ ಸೇರಿ ಸಿಬ್ಬಂದಿಯನ್ನು ಇದೇ ವೇಳೆ ಸನ್ಮಾನಿಸಲಾಯಿತು.

ಸೋಮಾರಿ ಸಚಿವರನ್ನು ಕೈಬಿಡಿ:ವಿಶ್ವನಾಥ್

ಬೆಂಗಳೂರು: ‘ಸಚಿವ ಸಂಪುಟ ವಿಸ್ತರಣೆ ಆದರೆ ಸಾಲದು. ಸೋಮಾರಿ ಸಚಿವರನ್ನು ಕೈಬಿಟ್ಟು ಯುವಕರಿಗೆ ಆದ್ಯತೆ ನೀಡಬೇಕು. ಸಂಪೂರ್ಣ ಪುನಾರಚನೆ ಮಾಡುವುದು ಸೂಕ್ತ’ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಒಂದಷ್ಟು ಹಿರಿಯ ಸಚಿವರನ್ನು ಕೈಬಿಟ್ಟು ಪಕ್ಷ ಸಂಘಟನೆ ಕಾರ್ಯಕ್ಕೆ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

‘ಸೋಮಾರಿ ಸಚಿವರು, ವಿಧಾನಸಭಾ ಕ್ಷೇತ್ರವನ್ನೇ ರಾಜ್ಯ ಎಂದು ಪರಿಗಣಿಸಿ ಅಲ್ಲಿಯೇ ಮಲಗಿಕೊಂಡಿರುವವರು, ರಾಜ್ಯ ಪರ್ಯಟನೆ ಮಾಡದವರು ಮತ್ತು ಸರಿಯಾದ ರೀತಿಯಲ್ಲಿ ಇಲಾಖೆಗಳನ್ನು ನಿಭಾಯಿಸದವರನ್ನು ಬದಲಾವಣೆ ಮಾಡುವುದು ಸೂಕ್ತ’ ಎಂದರು.

‘ಪಕ್ಷ ಇದ್ದರಷ್ಟೇ ಅಧಿಕಾರ ನಡೆಸಲು, ಮಂತ್ರಿಯಾಗಲು ಸಾಧ್ಯ. ಆದ್ದರಿಂದ ಒಂದಷ್ಟು ಹಿರಿಯರನ್ನು ಪಕ್ಷ ಕಟ್ಟುವ ಕೆಲಸಕ್ಕೆ ಬಳಸಿಕೊಳ್ಳಬೇಕು. ಒಂದು ವರ್ಷ ಎರಡು ತಿಂಗಳು ಉಳಿದಿರುವುದರಿಂದ ಚುರುಕಾಗಿರುವ ಯುವಕರನ್ನು ಸಂಪುಟಕ್ಕೆ ತೆಗೆದುಕೊಂಡು ಉತ್ತಮ ಕೆಲಸ ಮಾಡಿಸಬೇಕು ಎಂದರು.

‘1.02 ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್ ವಂಚಿತ’

ಹಾಸನ: ‘ರಾಜ್ಯದಲ್ಲಿ 1.02 ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್ ಸೀಟ್ ಸಿಗದೆ ಹೊರಗುಳಿದಿದ್ದಾರೆ. ಅವರಲ್ಲಿ ಕನಿಷ್ಠ 25 ಸಾವಿರ ವಿದ್ಯಾರ್ಥಿಗಳಿಗೆ ಹಾಲಿ ಹಾಸ್ಟೆಲ್‌ಗಳಲ್ಲಿ ಹೆಚ್ಚುವರಿ ಪ್ರವೇಶ ನೀಡಿ ತುಂಬಿ ಉಳಿದವರಿಗೆ ವಿದ್ಯಾಸಿರಿ ಯೋಜನೆಯಡಿ ಹಣ ನೀಡಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು 560 020.
ತಿದ್ದುಪಡಿ
ಇದೇ ದಿನಪತ್ರಿಕೆಯಲ್ಲಿ ದಿನಾಂಕ 01.02.2022ರಂದು ಪ್ರಕಟಗೊಂಡ ಇ-ಹರಾಜು ಪ್ರಕಟಣೆ ಸಂಖ್ಯೆ: ಬೆಂಅಪ್ರಾ / ಅಸ / ಹರಾಜು / ಟಿ–02 / 2021–22 ದಿನಾಂಕ : 31.01.2022ಕ್ಕೆ ಸಂಬಂಧಿಸಿದಂತೆ ... ಕ್ರ.ಸಂ.1)ರ ಮಳಿಗೆ ಸಂಖ್ಯೆ: 1 ರಿಂದ 4ರ ಮೊತ್ತ: ರೂ.11,36,240.00 ಎಂಬುದನ್ನು **ರೂ.11,36,240.00 / ಪ್ರತೀ ಮಳಿಗೆಗೆ** ಎಂದು ಓದಿಕೊಳ್ಳುವುದು. ಕ್ರ.ಸಂ.2)ರಲ್ಲಿ ಮಳಿಗೆ ಸಂಖ್ಯೆ: 5 ರಿಂದ 8 ಹಾಗೂ ಮೊತ್ತ: ರೂ.10,56,160.00 ಎಂಬುದನ್ನು ಮಳಿಗೆ ಸಂಖ್ಯೆ: 5 ರಿಂದ 7 ಹಾಗೂ ಮೊತ್ತ: **ರೂ.10,56,160.00 / ಪ್ರತೀ ಮಳಿಗೆಗೆ** ಎಂದು ಓದಿಕೊಳ್ಳುವುದು ... ಕ್ರ.ಸಂ.1)ರ ಮಳಿಗೆ ಸಂಖ್ಯೆ:1 ರಿಂದ 4ರ ಮೊತ್ತ: ರೂ.10,65,225.00 ಎಂಬುದನ್ನು ರೂ. **10,65,225.00 / ಪ್ರತೀ ಮಳಿಗೆಗೆ** ಎಂದು ಓದಿಕೊಳ್ಳುವುದು. ಉಳಿದಂತೆ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.
ಸಹಿ/– ಅಭಿಯಂತರ ಸದಸ್ಯರು

ಈರೋಡ್ ರೈತರೊಂದಿಗೆ ನಟಿ ಜೂಹಿ ಚಾವ್ಲಾ ಸಂವಾದ

‘ಕಾವೇರಿ ಕೂಗು ಅಭಿಯಾನ ಯಶಸ್ವಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ಕೂಗು ಅಭಿಯಾನದ ಸಹಾಯದಿಂದ 1.25 ಲಕ್ಷ ರೈತರು ಮರ ಆಧಾರಿತ ಕೃಷಿ ಪದ್ಧತಿಗೆ ಬದಲಾಗಿದ್ದಾರೆ. ಅವರ ಆದಾಯ ಮತ್ತು ಇಳುವರಿ ಹೆಚ್ಚಾಗಿದೆ. ಈ ಯಶಸ್ಸು ಭಾರತದಾದ್ಯಂತ ವಿಸ್ತರಿಸಬೇಕು’ ಎಂದು ನಟಿ ಜೂಹಿ ಚಾವ್ಲಾ ತಿಳಿಸಿದ್ದಾರೆ.

ಈರೋಡ್ ಜಿಲ್ಲೆಯ ರೈತರೊಂದಿಗೆ ಸಂವಾದ ನಡೆಸಿದ ನಟಿ ಜೂಹಿ ಚಾವ್ಲಾ

ತಮಿಳುನಾಡಿನ ಈರೋಡ್ ಜಿಲ್ಲೆಯ ಗೋಬಿಚೆಟ್ಟಿಪಾಲಯಂ ಮೇವಾಣಿ ಗ್ರಾಮದ ರೈತರೊಂದಿಗೆ ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬರ ಅಥವಾ ವೈಯಕ್ತಿಕ ಸಮಸ್ಯೆಗಳಿಂದ ಪಾರಾಗಲು ತಮ್ಮ ಜಮೀನುಗಳನ್ನು ಮಾರಲು ನಿಶ್ಚಯಿಸಿದ್ದ ಅನೇಕ ರೈತರು ಕಾವೇರಿ ಕೂಗು ಅಭಿಯಾನದ ಕಾರಣದಿಂದ ಮರ ಆಧಾರಿತ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ’ ಎಂದು ಹೇಳಿದರು.

‘ಕಾವೇರಿ ಕೂಗು ಅಭಿಯಾನ ಆರಂಭವಾದ ಬಳಿಕ ರೈತರ ಆದಾಯ ಮತ್ತು ಇಳುವರಿ ಹೆಚ್ಚಾಗಿದೆ. ಆರ್ಥಿಕ ಸ್ಥಿತಿಯೊಂದಿಗೆ ಮಣ್ಣಿನ ಫಲವತ್ತತೆಯೂ ಹೆಚ್ಚಾಗಿದೆ’ ಎಂದರು.

ಈ ಅಭಿಯಾನದ ರೂವಾರಿಯಾದ ಸದ್ಗುರು ಅವರಿಗೆ ಧನ್ಯವಾದ ತಿಳಿಸಿರುವ ಅವರು, ‘ರೈತರ ಬದುಕಿನಲ್ಲಿ ಆಗಿರುವ ಪರಿವರ್ತನೆಯನ್ನು ಕಂಡು ನನಗೆ ಸದ್ಗುರುಗಳ ಮೇಲೆ ಇದ್ದ ಗೌರವ ಮತ್ತಷ್ಟು ಹೆಚ್ಚಾಗಿದೆ’ ಎಂದರು.

‘ನಾನು ನನ್ನ ಇನ್‌ಸ್ಟಾಗ್ರಾಮ್ ಮತ್ತು ಟ್ವಿಟರ್‌ನಲ್ಲಿ ಕಾವೇರಿ ಕೂಗು ಅಭಿಯಾನದ ಕುರಿತು ಬರೆಯುತ್ತಿರುತ್ತೇನೆ. ಇದರಿಂದ ಚಲನಚಿತ್ರ ಉದ್ಯಮದಲ್ಲಿಯೂ ಸಾಕಷ್ಟು ಅರಿವು ಮೂಡಿದೆ’ ಎಂದು ಹೇಳಿದರು.

‘ನನ್ನ ಕಳೆದ ವರ್ಷದ ಹುಟ್ಟುಹಬ್ಬದಂದು ನಾನೊಂದು ಮನವಿ ಮಾಡಿದ್ದೆ. ನನ್ನ ಹುಟ್ಟುಹಬ್ಬಕ್ಕೆ ಉಡುಗೊರೆಯಾಗಿ ಮರಗಳನ್ನು ನೆಡಿ, ಬೇರೆ ಇನ್ನಾವುದೇ ಉಡುಗೊರೆ ಕೊಡಬೇಡಿ’ ಎಂದು ತಿಳಿಸಿದ್ದೆ. ನನ್ನ ಮಿತ್ರರು ಮತ್ತು ಅಭಿಮಾನಿಗಳು 30 ಸಾವಿರ ಸಸಿಗಳನ್ನು ನೆಡುವುದಕ್ಕೆ ಹಣ ಸಂಗ್ರಹಿಸಿದರು. ಇದರೊಂದಿಗೆ ಕಾವೇರಿ ಕೂಗಿಗಾಗಿ 1 ಲಕ್ಷ ಸಸಿಗಳನ್ನು ನೆಡುವುದಕ್ಕೆ ಹಣಗೂಡಿಸುವ ನನ್ನ ಗುರಿ ಸಾಕಾರಗೊಳ್ಳುವಂತಿದೆ’ ಎಂದು ಉತ್ಸಾಹದಿಂದ ಹೇಳಿದರು.

ಕಾವೇರಿ ಕೂಗು ಅಭಿಯಾನದಡಿಯಲ್ಲಿ ಕಳೆದ ಎರಡು ವರ್ಷಗಳಿಂದ ತಮಿಳುನಾಡು ಮತ್ತು ಕರ್ನಾಟಕದ ರೈತರು 2.1 ಕೋಟಿ ಸಸಿಗಳನ್ನು ತಮ್ಮ ಜಮೀನುಗಳಲ್ಲಿ ನೆಟ್ಟಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಭರವಸೆ

‘ಕಸಾಪ: ತಂತ್ರಜ್ಞಾನ ಅಳವಡಿಕೆಗೆ ಸಹಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಕೈಗೊಂಡಿರುವ ತಂತ್ರಜ್ಞಾನ ಅಳವಡಿಕೆ ಹಾಗೂ ಕಟ್ಟಡ ನವೀಕರಣ ಕಾರ್ಯಕ್ಕೆ ಸರ್ಕಾರದ ಸಂಪೂರ್ಣ ಸಹಕಾರ ಇರಲಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಭರವಸೆ ನೀಡಿದರು.

ಪರಿಷತ್ತಿನ ಕೇಂದ್ರ ಕಚೇರಿಗೆ ಬುಧವಾರ ಭೇಟಿ ನೀಡಿದ ಅವರು, ಕಟ್ಟಡಗಳನ್ನು ಪರಿಶೀಲಿಸಿದರು. ಸರಸ್ವತಿ ಗ್ರಂಥ ಭಂಡಾರದಲ್ಲಿರುವ ಕುಮಾರವ್ಯಾಸನ ‘ಕರ್ಣಾಟ ಭಾರತ ಕಥಾಮಂಜರಿ’ಯ ತಾಳೆಗರಿಗಳ ಪ್ರತಿಯನ್ನು ಪರಿಶೀಲಿಸಿದರು.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ‘ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಸರ್. ಮಿರ್ಜಾ ಇಸ್ಮಾಯಿಲ್ ಅವರ ಅನನ್ಯ ಕೊಡುಗೆಯಿಂದ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು, ಇಂದು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಬೆಳೆದಿದೆ. ಹಿಂದೆ ಪರಿಷತ್ತಿನ ಅಧ್ಯಕ್ಷರು ವಿಧಾನಸೌಧಕ್ಕೆ ಭೇಟಿ ನೀಡಿದರೆ ಮುಖ್ಯಮಂತ್ರಿಗಳೇ ಕೆಳಗೆ ಬಂದು ಅವರನ್ನು ಸ್ವಾಗತಿಸುತ್ತಿದ್ದರು. ಆಳುವ ಪ್ರಭುತ್ವವು ಹಿಂದಿನಿಂದಲೂ ಪರಿಷತ್ತಿನೊಂದಿಗೆ ಇಟ್ಟುಕೊಂಡಿದ್ದ ಗೌರವದ ಪ್ರತೀಕವಿದು’ ಎಂದರು.

‘ಕರ್ಣಾಟ ಭಾರತ ಕಥಾಮಂಜರಿ’ಯ ತಾಳೆಗರಿಗಳ ಪ್ರತಿಯನ್ನು ವಿ.ಸುನೀಲ್ ಕುಮಾರ್ ಪರಿಶೀಲಿಸಿದರು. ಪರಿಷತ್ತಿನ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ಎಂ. ಪ್ರಕಾಶ ಮೂರ್ತಿ, ಮಹೇಶ ಜೋಶಿ, ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ಇದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪುಸ್ತಕೋದ್ಯಮದ ಸಮಸ್ಯೆಗಳನ್ನು ನಿವಾರಿಸುವಂತೆ ಬಸವರಾಜ ಬೊಮ್ಮಾಯಿ ಅವರಿಗೆ ಪ್ರಕಾಶ್ ಕಂಬತ್ತಳ್ಳಿ ಮನವಿ ಮಾಡಿದರು.ಸಂಘದ ಕಾರ್ಯದರ್ಶಿ ನ. ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಸೃಷ್ಟಿ ನಾಗೇಶ್, ವಿಧಾನ ಪರಿಷತ್ತಿನ ಸದಸ್ಯ ಎಚ್. ವಿಶ್ವನಾಥ್ ಹಾಗೂ ನವಕರ್ನಾಟಕ ಪ್ರಕಾಶನದ ಮುಖ್ಯಸ್ಥ ರಮೇಶ್ ಉಡುಪ ಇದ್ದರು.

ಉತ್ತರಾಖಂಡ ವಿಧಾನಸಭೆ ಚುನಾವಣೆ

ತಾರಾ ಪ್ರಚಾರಕರ ಪಟ್ಟಿಯಲ್ಲಿ ಶ್ರೀನಿವಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಾಖಂಡ ವಿಧಾನಸಭೆ ಚುನಾವಣೆಯ ಕಾಂಗ್ರೆಸ್ ತಾರಾ ಪ್ರಚಾರಕರ ಪಟ್ಟಿಯಲ್ಲಿ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಇದ್ದಾರೆ.

‘ಯುವಕರ ಪ್ರತಿಯೊಂದು ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಬಿ.ವಿ. ಶ್ರೀನಿವಾಸ್ ಅವರು ದೇಶದಾದ್ಯಂತ ಹೋರಾಟ ನಡೆಸುತ್ತಿದ್ದಾರೆ. ಈಗ ಉತ್ತರಾಖಂಡ ವಿಧಾನಸಭೆ ಚುನಾವಣೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತಾರೆ ಎನ್ನುವ ನಿರೀಕ್ಷೆ ಇದೆ’ ಎಂದು ಯುವ ಕಾಂಗ್ರೆಸ್‌ನ ಮಾಧ್ಯಮ ಉಸ್ತುವಾರಿ ರಾಹುಲ್ ರಾವ್ ತಿಳಿಸಿದ್ದಾರೆ.

ಬಿ.ವಿ. ಶ್ರೀನಿವಾಸ್

ವೀಕ್ಷಕರ ನೇಮಕ: ಗೋವಾ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಚುನಾವಣಾ ವೀಕ್ಷಕರಾಗಿ ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾದ 31 ಮಂದಿಯನ್ನು ಎಐಸಿಸಿ ಉಸ್ತುವಾರಿ ದಿನೇಶ್ ಗುಂಡೂರಾವ್ ನೇಮಿಸಿದ್ದಾರೆ.

ಇವರಲ್ಲಿ 24 ಮಂದಿ ಕರ್ನಾಟಕದವರು ಮತ್ತು ಮಹಾರಾಷ್ಟ್ರದವರು ಆರು ಮಂದಿ ಹಾಗೂ ಗೋವಾದ ಒಬ್ಬರು ಸೇರಿದ್ದಾರೆ. ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು ವೀಕ್ಷಕರ ಪಟ್ಟಿಯಲ್ಲಿದ್ದಾರೆ.

ಪುಸ್ತಕ ಖರೀದಿ: ಹಣ ಬಿಡುಗಡೆಗೆ ಪ್ರಕಾಶಕರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಖರೀದಿಗೆ ಅಗತ್ಯವಿರುವ ₹ 23 ಕೋಟಿಯನ್ನು ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ಪ್ರಕಾಶಕರ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

‘ಯೋಜನೆಯಡಿ ಆಯ್ಕೆಯಾದ ಪುಸ್ತಕಗಳ ತಲಾ 300 ಪ್ರತಿಗಳನ್ನು ಪ್ರತಿ ವರ್ಷ ಖರೀದಿಸಲಾಗುತ್ತದೆ. ಪುಸ್ತಕಗಳನ್ನು ಸರ್ಕಾರವೇ ರಚಿಸಿದ ಉನ್ನತ ಮಟ್ಟದ ಸಮಿತಿಯು ಆಯ್ಕೆ ಮಾಡಲಿದೆ. 2018ನೇ ಸಾಲಿನಲ್ಲಿ ಖರೀದಿಸಲಾದ ಪುಸ್ತಕಗಳ ಮೊತ್ತದಲ್ಲಿ ಇನ್ನೂ ₹ 8 ಕೋಟಿ ಪಾವತಿಸಬೇಕು. 2019ನೇ ಸಾಲಿನ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಹಣಕಾಸಿನ ಕೊರತೆಯಿಂದ ಖರೀದಿ ನಡೆದಿಲ್ಲ. ಈ ಖರೀದಿಗೆ ₹ 15 ಕೋಟಿ ಬೇಕಾಗುತ್ತದೆ. ಆದಷ್ಟು ಬೇಗ ಈ ಹಣವನ್ನು ಬಿಡುಗಡೆ ಮಾಡಬೇಕು’ ಎಂದು ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ ಒತ್ತಾಯಿಸಿದರು.

ಇದೇ ವೇಳೆ ಕನ್ನಡ ಪುಸ್ತಕಗಳ ಬೆಲೆ ಪರಿಷ್ಕರಣೆ, ಪುಸ್ತಕಗಳ ಅಳತೆಗೆ ತಕ್ಕಂತ ಬೆಲೆ ನಿಗದಿ, ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಪುಸ್ತಕ ಸರಬರಾಜು ಬಗ್ಗೆಯೂ ಚರ್ಚಿಸಿ, ಪುಸ್ತಕಗಳ ಖರೀದಿಗೆ ಇರುವ ತೊಡಕುಗಳನ್ನು ನಿವಾರಿಸುವಂತೆ ಆಗ್ರಹಿಸಿದರು.

ಚಿತ್ರಾವಳಿ

ವಿಶ್ವ ಜೌಗು ಪ್ರದೇಶದ ದಿನದ ಅಂಗವಾಗಿ ಸಿಡಿಡಿ ಸೊಸೈಟಿಯ ಸದಸ್ಯರು ಮಹದೇವಪುರ ಕೆರೆಯ ಉದ್ಯಾನದಲ್ಲಿ ನಡಿಗೆದಾರರಿಗೆ ಜೌಗು ಪ್ರದೇಶಗಳ ಬಗ್ಗೆ ಬುಧವಾರ ಜಾಗೃತಿ ಮೂಡಿಸಿದರು

ಶೆಟ್ಟಿಹಳ್ಳಿ ವಾರ್ಡ್‌ನ ಚಿಕ್ಕಸಂದ್ರ ಭಾಗದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಆರ್.ಮಂಜುನಾಥ್ ಬುಧವಾರ ಚಾಲನೆ ನೀಡಿದರು. ಪಾಲಿಕೆಯ ದಾಸರಹಳ್ಳಿ ವಲಯದ ಜಂಟಿ ಆಯುಕ್ತ ಜಗದೀಶ್, ಜೆಡಿಎಸ್‌ನ ಬ್ಲಾಕ್ ಅಧ್ಯಕ್ಷ ಕೆ.ಸಿ.ವೆಂಕಟೇಶ್, ಚಿಕ್ಕಸಂದ್ರ ವಾರ್ಡ್ ಅಧ್ಯಕ್ಷ ಚಂದ್ರಣ್ಣ, ಮುಖಂಡರಾದ ರಾಜಣ್ಣ, ಮುದ್ದಹನುಮೇಗೌಡ, ಹರ್ಷ, ಜಯಣ್ಣ, ಮಹದೇವ್, ಸೀತಾ ಮರಿಗೌಡ, ಕೃಷ್ಣಪ್ಪ, ಇಂದ್ರೇಶ್ ಹಾಗೂ ಇತರರು ಇದ್ದಾರೆ.

ನಗರದಲ್ಲಿ ಇಂದು

ರಾಜ್ಯ ವಿಪತ್ತು ಸ್ಪಂದನಾ ಪಡೆಯ ನೂತನ ವಾಹನಗಳ ಲೋಕಾರ್ಪಣೆ: ಗೃಹ ಸಚಿವ ಆರಗ ಜ್ಞಾನೇಂದ್ರ, ಅತಿಥಿಗಳು–ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಅಧ್ಯಕ್ಷತೆ–ರಿಜ್ವಾನ್ ಅರ್ಷದ್, ಸ್ಥಳ–ಪೂರ್ವ ದ್ವಾರದ ಮುಂಭಾಗ, ವಿಧಾನಸೌಧ, ಬೆಳಿಗ್ಗೆ 10.30

ಶಾಸಕರಿಗೆ ಎರಡು ದಿನಗಳ ತರಬೇತಿ ಶಿಬಿರ: ಉದ್ಘಾಟನೆ–ಸಚಿವ ಜೆ.ಸಿ. ಮಾಧುಸ್ವಾಮಿ, ಅಧ್ಯಕ್ಷತೆ–ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸ್ಥಳ–ಕೊಠಡಿ ಸಂಖ್ಯೆ- 419, 4ನೇ ಮಹಡಿ, ವಿಕಾಸಸೌಧ, ಬೆಳಿಗ್ಗೆ 10.30

ಪುರಂದರದಾಸರ ಆರಾಧನಾ ಮಹೋತ್ಸವ–‘ಗುರುರಾಘವೇಂದ್ರ ಸಂಸ್ಮರಣೆ ಪ್ರಶಸ್ತಿ’ ಪ್ರದಾನ: ಪುರಸ್ಕೃತರು–ರಾಮವಿಠಲಚಾರ್ಯ, ಉದ್ಘಾಟನೆ–ವಿದ್ವಾನ್ ಆರ್.ಕೆ.ಪದ್ಮನಾಭ, ಸನ್ಮಾನ–ಸಂತೋಷ್ ಹೆಗ್ಡೆ, ಅತಿಥಿಗಳು–ಎಸ್.ವಿ.ಚೌಟಿ, ವಿಜಯೇಂದ್ರ ಅವಧೂತ, ಎಸ್.ಪ್ರಶಾಂತ್, ಎಸ್.ನಾಮದೇವರಾವ್, ಆಯೋಜನೆ–ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ–ರಾಘವೇಂದ್ರ ಸೇವಾ ಸಮಿತಿ ಟ್ರಸ್ಟ್, ಜಲಮಂಡಳಿ ಕಚೇರಿ ಎದುರು, ಕೆಂಗೇರಿ ಉಪನಗರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಗಾಯನ ಪಿ.ಶೆಟ್ಟಿ, ಅತಿಥಿಗಳು–ಸೌಂದರ್ಯ ಶ್ರೀವತ್ಸ, ಎಂ.ಸೂರ್ಯಪ್ರಸಾದ್, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಗಾಯನ ಪಿ.ಶೆಟ್ಟಿ

PRE-BOOK YOUR CARENS TODAY!

Visit www.kia.com/in | Book Kia Carens | WhatsApp 09319591407 or Call 1800 108 5000 | Booking Amount ₹25 000 (Refundable**)

Carens From a different world | Meet the all-new Kia Carens. High-tech by design and inspiring by nature, it is futuristic sophistication clothed in bold and edgy armour. The Carens experience is simply incredible, with perfection that belongs to a different world.

6 Airbags, ESC, VSM, BAS, HAC, DBC (Downhill Brake Control), ABS, All Wheels Disc Brakes, Highline Tyre Pressure Monitoring System, and Rear Parking Sensors. | Perfectly high-tech way to stay entertained, navigate, and connect with your world. | Unparalleled audio experience sets the mood right for those epic voyages. | Think of it as your portal to a different world. | Personalisation at its best with 64-color ambient mood lighting to match your mood.

HOST OF OTHER INSPIRING FEATURES **BOLD & FUTURISTIC EXTERIOR:** Kia Signature Tiger Face with Digital Radiator Grille | Star Map LED DRLs with Crown Jewel LED Headlamps | Star Map LED Tail Lamps | R16 - 40.62 cm (16") Dual Tone Crystal Cut Alloy Wheels | Front & Rear Parking Sensors **SPACE-AGE & INDULGENT INTERIOR:** Ventilated Front Seats | Smart Pure Air Purifier with Virus & Bacteria Protection# | Full Digital LCD Cluster with 10.6 cm (4.2") TFT Multi-information Display | Kia Connect – Next Gen Connected Car Technology | 2nd Row One-touch Easy Electric Tumble Seat | Multi-drive Modes - Sport, Normal & Eco | Sporty Paddle Shifters | Smartphone Wireless Charger with Cooling Function | Roof Flushed 2nd & 3rd Row Diffused AC Vents | Rear Door Spot Lamps with Kia Logo Projection | Seat Back Table with Cup Holder and Gadget Mount | Seat Under-tray | Cooling Cup & Can Holders | Easy Push Dashboard Cup Holder & Tray | 5 USB Type-C Ports | Rear Sunshade Curtains | 3rd Row 50:50 Split Seats with Reclining and Full Flat Folding Option **CLASS LEADING PETROL & DIESEL ENGINES WITH MULTIPLE TRANSMISSION OPTIONS:** 1.4 l T-GDi Turbo Petrol Engine (7DCT/6MT), 1.5 l Petrol Engine (6MT) & 1.5 l CRDi VGT (6AT/6MT) Diesel Engine

Comfort of home while you roam. | Space is what inspires you to be truly you. That's why the Kia Carens offers you class-leading cabin space with plush 3-row seating comfort in 6 & 7 Seater options to carry your world with you.

Wherever you go, we stay with you. | 200 City Coverage | 350 Consumer Touchpoints | 241 Service Workshops | 24x7 | 3 Years Nationwide RSA^

For more information contact: 1800 108 5000
kiacare@kiaindia.net | Look for "Kia India" @
Scan to discover more

*T&C Apply. The product shown is for representation purpose only, actual features, colors and specifications as shown may not be part of standard fitment and may vary. Visit your nearest Kia dealership for more details. ^RSA Coverage across India except Andaman & Nicobar Islands and Lakshadweep. Class is defined as 3 row seater car with overall length less than 4 550 mm & height more than 1 680 mm. Kia Connect functionality is dependent on mobile network strength. Smartwatch and mobile phone are not provided with the vehicle. #The tests of protection from Virus & Bacteria are conducted with a defined process, under particular circumstances in a controlled environment and the results may vary. **On cancellation of booking, payment made through online mode will be processed after a deduction of ₹250 as a processing charges levied by payment gateway. Kia India Pvt. Ltd. (Formerly known as Kia Motors India Pvt. Ltd.) reserves the right to make any changes with respect to the trims, colors, specifications and other details of any model as mentioned or to discontinue any model or to modify/discontinue any service without prior notice. Kia urges you to follow traffic rules, these are meant to keep you safe on roads. No liability accepted for errors and printing errors.

FOR INFORMATION CONTACT: BANGALORE: VST CENTRAL, PALACE ROAD, PH: 9606988123, YESHWANTHPUR, PH: 9606988124 ADVAITH KIA, LALBAGH MAIN ROAD, PH: 9611006006 EPITOME KIA, WHITEFIELD, PH: 9606970216, YELAHANKA PH: 7406343339, NAARA MOTORS, J.P NAGAR, PH: 7406528200, PPS KIA, MYSORE ROAD, PH: 6309990010, JSP AUTOCORE, HOSUR ROAD, PH: 9606011244, MARATHAHALLI RING ROAD, PH: 9071077717, TAAPASI KIA, KALYAN NAGAR, PH: 8095537777 BELAGAVI: NAGSHANTI KIA, PH: 9019928670 BELLARY: ATHENA KIA, PH: 6364922831 BIJAPUR: KUMAR KIA, PH: 9606458516 DAVANGERE: JANSI KIA, PH: 9538018155 HASSAN: AADARSH KIA, PH: 9606034050 HUBLI: NAGSHANTI KIA, AMARGOL, PH: 9148432469 GULBARGA: KUMAR KIA, PH: 7829990763 KOLAR: EPITOME KIA, PH: 8951903224 KUSHALNAGAR: A.R.M KIA, PH: 9606055314 MANDYA: VOLANZO CARS PVT LTD, PH: 9606034070 MANGALORE: A.R.M. KIA, PH: 9606013152 MYSORE: VOLANZO CARS PVT LTD, VIJAYNAGAR, PH: 9606034060 SHIMOGA: JANSI KIA, PH: 9538416666 TUMKUR: PPS KIA, PH:6303622210 UDUPI: A.R.M. KIA, PH: 9606055296

INNOCEAN-002/22

‘ಬಿಜೆಪಿ ಬಿಡಲ್ಲ’

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ಯಡಿಯೂರಪ್ಪ ಅವರು ನನಗೆ ವಿಜಯನಗರ ಜಿಲ್ಲೆ ರಚನೆ ಮಾಡಿಕೊಟ್ಟರು. ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡಿದರು. ಇಂತಹ ಪಕ್ಷವನ್ನು ಬಿಟ್ಟು ಹೋಗಲು ಸಾಧ್ಯವೇ? ನಾನು ಬಿಜೆಪಿ ತೊರೆಯುವುದಿಲ್ಲ’ ಎಂದು ಪರಿಸರ ಮತ್ತು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ತಿಳಿಸಿದರು.

ತಾಲ್ಲೂಕಿನ ನಂದಿಗಿರಿಧಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಅವರ ಭೇಟಿಯಲ್ಲಿ ಯಾವುದೇ ರಾಜಕೀಯ ಉದ್ದೇಶವಿಲ್ಲ. ತುಂಗಾರತಿ ಬಗ್ಗೆ ಸಮಾಲೋಚಿಸಲು ಭೇಟಿ ಮಾಡಿದ್ದೆ ಎಂದರು.

ನಂದಿಬೆಟ್ಟದಲ್ಲಿ ತಾಂತ್ರಿಕ ಕಾರಣಗಳಿಂದಾಗಿ ರೋಪ್ ವೇ ಯೋಜನೆ ನನೆಗುದಿಗೆ ಬಿದ್ದಿದೆ. ರೋಪ್ ವೇ ನಿರ್ಮಾಣಕ್ಕೆ ಈ ತಿಂಗಳ ಅಂತ್ಯದಲ್ಲಿ ಟೆಂಡರ್ ಆಹ್ವಾನಿಸಲಾಗುವುದು ಎಂದರು.

ಗೊಂದಲದಲ್ಲಿರುವ ಕೋವಿಡ್ ಪೀಡಿತರು • ಚೇತರಿಸಿಕೊಂಡ ಬಳಿಕ ಕೆಲವರಿಗೆ ದೂರವಾಣಿ ಕರೆ

ಮನೆ ಆರೈಕೆ: ಔಷಧ ಕಿಟ್‌ಗಳ ಸಮಸ್ಯೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಕೋವಿಡ್ ಪೀಡಿತರಾಗಿ ಮನೆ ಆರೈಕೆಗೆ ಒಳಗಾದ ಎಲ್ಲರಿಗೂ ಕೋವಿಡ್ ಔಷಧದ ಕಿಟ್‌ಗಳು ಸಮರ್ಪಕವಾಗಿ ತಲುಪುತ್ತಿಲ್ಲ. ಇದರಿಂದಾಗಿ ಸೋಂಕಿತರು ಚಿಕಿತ್ಸೆಯ ಬಗ್ಗೆ ಗೊಂದಲಕ್ಕೆ ಒಳಗಾಗುತ್ತಿದ್ದಾರೆ.

ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ಸರ್ಕಾರವು ಲಕ್ಷಣ ರಹಿತರು, ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣ ಹೊಂದಿರುವವರಿಗೆ ಮನೆ ಆರೈಕೆಗೆ ಅವಕಾಶ ನೀಡಿ ಆದೇಶ ಹೊರಡಿಸಿತ್ತು. ಹೀಗಾಗಿ, ಈ ಅಲೆಯಲ್ಲಿ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ಪತ್ತೆಯಾದರೂ ಆಸ್ಪತ್ರೆ ದಾಖಲಾತಿ ಮೊದಲೆರಡು ಅಲೆಗಿಂತ ಕಡಿಮೆಯಿದೆ. ಸೋಂಕಿತರಲ್ಲಿ ಶೇ 5 ರಷ್ಟು ಮಂದಿಗೆ ಮಾತ್ರ ಆಸ್ಪತ್ರೆ ಹಾಗೂ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಬೇಕಾಗುತ್ತಿದೆ. ಶೇ 95 ರಷ್ಟು ಮಂದಿ ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ.

> ಸೋಂಕು ದೃಢಪಟ್ಟ ಬಳಿಕ ದೂರವಾಣಿ ಕರೆ ಮೂಲಕ ಕಿಟ್‌ಗಳ ಅಗತ್ಯದ ಬಗ್ಗೆ ವಿಚಾರಿಸಲಾಗುತ್ತಿದೆ. ಅಗತ್ಯ ಇರುವವರ ಮನೆಗಳಿಗೆ ಕಿಟ್ ಒದಗಿಸಿ, ಮಾರ್ಗದರ್ಶನ ನೀಡಲಾಗುತ್ತಿದೆ.
> ಡಾ.ಬಾಲಸುಂದರ್, ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ

ಕೋವಿಡ್ ಮೊದಲನೇ ಅಲೆಯಲ್ಲಿ ಮನೆ ಆರೈಕೆಗೆ ಒಳಗಾದವರಿಗೆ ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್ ಒಳಗೊಂಡ ಕಿಟ್‌ಗಳನ್ನು ವಿತರಿಸಲಾಗಿತ್ತು. ಆದರೆ, ಎರಡನೇ ಅಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾದ್ದರಿಂದ ಈ ಕಿಟ್‌ಗಳ ವಿತರಣೆ ನಡೆದಿರಲಿಲ್ಲ. ಇದರಿಂದಾಗಿ ಪಲ್ಸ್ ಆಕ್ಸಿಮೀಟರ್ ಸೇರಿದಂತೆ ವಿವಿಧ ವೈದ್ಯಕೀಯ ಉಪಕರಣಗಳ ಬೆಲೆ ಔಷಧದ ಮಳಿಗೆಗಳಲ್ಲಿ ದುಪ್ಪಟ್ಟಾಗಿತ್ತು. ಮೂರನೇ ಅಲೆಯಲ್ಲಿ ಸೋಂಕಿತರಲ್ಲಿ ಬಹುತೇಕರು ಮನೆ ಆರೈಕೆಗೆ ಒಳಗಾದ್ದರಿಂದ 12ರಿಂದ 18 ವರ್ಷದವರು ಹಾಗೂ ವಯಸ್ಕರಿಗೆ ಪ್ರತ್ಯೇಕ ಔಷಧಗಳ ಕಿಟ್‌ಗಳನ್ನು ಪೂರೈಸಲು ಆರೋಗ್ಯ ಇಲಾಖೆ ಆದೇಶ ಹೊರಡಿಸಿತ್ತು.

7 ದಿನಗಳ ಔಷಧ: ಪ್ರತಿಯೊಂದು ಕಿಟ್‌ಗಳಲ್ಲಿಯೂ 7 ದಿನಗಳವರೆಗೆ ಬೇಕಾಗುವ ಔಷಧಗಳು, ಮುಖಗವಸು ಮತ್ತು ಸ್ಯಾನಿಟೈಸರ್ (ಸೋಂಕು ನಿವಾರಕ ದ್ರಾವಣ) ಇರಬೇಕೆಂದು ಆದೇಶದಲ್ಲಿ ಸೂಚಿಸಲಾಗಿತ್ತು. ಆದರೆ, ಈ ಕಿಟ್‌ಗಳನ್ನು ಬಿಬಿಎಂಪಿ ಒದಗಿಸುತ್ತಿಲ್ಲ ಎಂದು ಮನೆ ಆರೈಕೆಗೆ ಒಳಗಾಗಿರುವ ಸೋಂಕಿತರು ಆರೋಪಿಸಿದ್ದಾರೆ. ಕೆಲವರಿಗೆ ಚೇತರಿಕೆ ಹೊಂದಿದ ಬಳಿಕ (7 ದಿನಗಳ ಬಳಿಕ) ಕಿಟ್‌ಗಳ ಅಗತ್ಯತೆ ಬಗ್ಗೆ ದೂರವಾಣಿ ಕರೆಗಳು ಬರುತ್ತಿವೆ.

‘ಜ್ವರ, ಕೆಮ್ಮು ಸೇರಿದಂತೆ ಕೋವಿಡ್‌ನ ಲಕ್ಷಣಗಳು ಕಾಣಿಸಿಕೊಂಡ ಬಳಿಕ ಕೋವಿಡ್ ಪರೀಕ್ಷೆಗೆ ಮಾಡಿಸಿಕೊಂಡೆ. ಸೋಂಕಿತನಾಗಿರುವುದು ಖಚಿತಪಡುತ್ತಿದಂತೆ ಮನೆಯಲ್ಲಿಯೇ ಪ್ರತ್ಯೇಕವಾಸಕ್ಕೆ ಒಳಗಾದೆ. 7 ದಿನಗಳ ಅವಧಿಯಲ್ಲಿ ಆರೋಗ್ಯ ಕಾರ್ಯಕರ್ತರು ಅಥವಾ ಬಿಬಿಎಂಪಿ ಸಿಬ್ಬಂದಿ ಕರೆ ಮಾಡಿ, ಆರೋಗ್ಯ ವಿಚಾರಿಸಲಿಲ್ಲ. ಔಷಧಗಳ ಕಿಟ್‌ಗಳನ್ನೂ ಒದಗಿಸಲಿಲ್ಲ. ಔಷಧದ ಮಳಿಗೆಯಲ್ಲಿ ಸಿಗುವ ಔಷಧಗಳನ್ನೇ ಪಡೆದು, ಚೇತರಿಸಿಕೊಂಡೆ’ ಎಂದು ಬನಶಂಕರಿಯ ನಿವಾಸಿ ಚಂದ್ರಶೇಖರ್ ತಿಳಿಸಿದರು.

‘ಸೋಂಕಿತನಾಗಿ ಆರು ದಿನಗಳವರೆಗೂ ಯಾವುದೇ ಕರೆ ಬಂದಿರಲಿಲ್ಲ. ಏಳನೇ ದಿನಕ್ಕೆ ಬಿಬಿಎಂಪಿ ಕಡೆಯವರು ಕರೆ ಮಾಡಿ, ಔಷಧದ ಕಿಟ್ ಅಗತ್ಯದ ಬಗ್ಗೆ ವಿಚಾರಿಸಿದರು. ಅದಾಗಲೇ ಚೇತರಿಸಿಕೊಂಡಿದ್ದೆ. ಹೀಗಾಗಿ, ಯಾವುದೇ ಕಿಟ್‌ಗಳು ಬೇಡವೆಂದು ತಿಳಿಸಿದೆ. ಬಿಬಿಎಂಪಿ ಕಡೆಯಿಂದ ಸಮರ್ಪಕವಾಗಿ ಕಿಟ್‌ಗಳ ವಿತರಣೆ ಆಗುತ್ತಿಲ್ಲ. ಸೋಂಕಿತರ ಆರೋಗ್ಯವನ್ನೂ ದೂರವಾಣಿ ಕರೆ ಮೂಲಕ ವಿಚಾರಿಸುವ ಕೆಲಸವಾಗುತ್ತಿಲ್ಲ’ ಎಂದು ಶ್ರೀರಾಮನಗರದ ನಿವಾಸಿ ಮಂಜುನಾಥ್ ಆರೋಪಿಸಿದರು.

ಕಿಟ್‌ನಲ್ಲಿ ಏನೆಲ್ಲ ಇರಲಿವೆ?

ಈ ಔಷಧದ ಕಿಟ್‌ಗಳಲ್ಲಿ ವಿಟಮಿನ್ ಸಿ ಮಾತ್ರೆ ಎರಡು ಶೀಟ್‌ಗಳು, ಝಿಂಕ್ ಮಾತ್ರೆ, ಪ್ಯಾರಾಸಿಟಮಾಲ್ ಮಾತ್ರೆ, ಲೆವೊಸೆಟ್ರಿಜಿನ್ ಮಾತ್ರೆ ಹಾಗೂ ಪ್ಯಾಂಟೊಪ್ರಜೋಲ್ ಮಾತ್ರೆಗಳು ತಲಾ ಒಂದು ಶೀಟ್‌ಗಳು ಇರಲಿವೆ. ಆ್ಯಂಟಿ–ಟಸಿವ್ (ಕೆಮ್ಮಿನ ಔಷಧ) ಒಂದು ಬಾಟಲಿ, ಮೂರು ಪದರಗಳುಳ್ಳ 10 ಮುಖಗವಸುಗಳು ಹಾಗೂ 50 ಮಿ.ಲೀ. ಸ್ಯಾನಿಟೈಸರ್‌ನ ಒಂದು ಬಾಟಲಿ ನೀಡಲಾಗುತ್ತದೆ. ಈ ಕಿಟ್‌ಗಳಿಗೆ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸಲಿದೆ.

ಸುದ್ದಿ 2 ನಿಮಿಷ

ಸಿಸಿಬಿ ‘ನಕಲಿ’ ಸಿಬ್ಬಂದಿ ಬಂಧನ

ಬೆಂಗಳೂರು: ತಾನು ಸಿಸಿಬಿ ಪೊಲೀಸ್ ಸಿಬ್ಬಂದಿ. ಪೊಲೀಸರು ಜಪ್ತಿ ಮಾಡಿರುವ ವಾಹನಗಳನ್ನು ಹರಾಜಿನಲ್ಲಿ ಕಡಿಮೆ ಬೆಲೆಗೆ ಕೊಡಿಸುತ್ತೇನೆ ಎಂದು ಹೇಳಿ ಹಲವರಿಂದ ಹಣ ಪಡೆದು ವಂಚಿಸಿದ್ದ ವ್ಯಕ್ತಿಯನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಲೂರ್ದನಾಥನ್ (44) ಬಂಧಿತ. ಈತ ಹೊಸಕೋಟೆಯ ಬೂದಿಗೆರೆ ನಿವಾಸಿ. ತಾನು ಸಿಸಿಬಿ ಪೊಲೀಸ್ ಎಂದು ಪರಿಚಯಿಸಿಕೊಳ್ಳುತ್ತಿದ್ದ ಈತ ಜನರನ್ನು ಪೊಲೀಸ್ ಠಾಣೆಗಳಿಗೆ ಕರೆದುಕೊಂಡು ಹೋಗುತ್ತಿದ್ದ. ಪೊಲೀಸರು ಜಪ್ತಿ ಮಾಡಿ ನಿಲ್ಲಿಸಿರುವ ವಾಹನಗಳನ್ನು ತೋರಿಸಿ ಹರಾಜಿನಲ್ಲಿ ಅವುಗಳನ್ನು ಅತಿ ಕಡಿಮೆ ಬೆಲೆಗೆ ಕೊಡಿಸುವುದಾಗಿ ನಂಬಿಸುತ್ತಿದ್ದ. ಬಳಿಕ ಹಣ ಪಡೆದು ಮೊಬೈಲ್ ಸ್ವಿಚ್ ಆಫ್ ಮಾಡಿಕೊಳ್ಳುತ್ತಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

‘ವಂಚನೆ ಸಂಬಂಧ ವ್ಯಕ್ತಿಯೊಬ್ಬರು ನೀಡಿದ ದೂರಿನ ಅನ್ವಯ ಆರೋಪಿಯನ್ನು ಬಂಧಿಸಲಾಗಿದೆ. ಬೆಳ್ಳಂದೂರಿನಲ್ಲೂ ಇದೇ ಮಾದರಿಯಲ್ಲಿ ವ್ಯಕ್ತಿಯೊಬ್ಬರನ್ನು ವಂಚಿಸಿರುವುದಾಗಿ ಆತ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ’ ಎಂದು ತಿಳಿಸಿದ್ದಾರೆ.

ಬಡವರ ವಿರೋಧಿ ಬಜೆಟ್: ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: ‘ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಬಡವರ ವಿರೋಧಿಯಾಗಿದೆ. ನಿರುದ್ಯೋಗ ಸಮಸ್ಯೆ ನಿವಾರಣೆಗೆ ಬಜೆಟ್‌ನಲ್ಲಿ ಯಾವ ಮಾರ್ಗೋಪಾಯಗಳನ್ನೂ ಸೂಚಿಸಿಲ್ಲ’ ಎಂದು ಕಾಂಗ್ರೆಸ್ ಬೆಂಗಳೂರು ನಗರ ಪ್ರಚಾರ ಸಮಿತಿ ಟೀಕಿಸಿದೆ.

ಬಜೆಟ್ ವಿರೋಧಿಸಿ ಮಹಾತ್ಮಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದ ಸಮಿತಿಯ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಹಾಗೂ ಎನ್‌ಡಿಎ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

‘ಕೋವಿಡ್‌ನಿಂದ ಲಕ್ಷಾಂತರ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಅವರ ಕುಟುಂಬಕ್ಕೆ ಅಗತ್ಯ ಪರಿಹಾರ ನೀಡಿಲ್ಲ. ಇದಕ್ಕಾಗಿ ವಿಶೇಷ ಪ್ಯಾಕೇಜ್ ಪ್ರಕಟಿಸಬಹುದೆಂಬ ನಿರೀಕ್ಷೆ ಹುಸಿಯಾಗಿದೆ. ರಾಜ್ಯದ ಜಿಎಸ್‌ಟಿ ಪಾಲನ್ನು ತನ್ನ ಬಳಿಯೇ ಇಟ್ಟುಕೊಂಡಿರುವ ಕೇಂದ್ರ ಸರ್ಕಾರ ಸಾಲದ ರೂಪದಲ್ಲಿ ರಾಜ್ಯಗಳಿಗೆ ಕೊಡುಗೆ ನೀಡುತ್ತಿರುವುದು ಹಾಸ್ಯಾಸ್ಪದ’ ಎಂದರು.

ಮುಖಂಡರಾದ ಎಸ್.ಮನೋಹರ್, ಜಿ.ಜನಾರ್ದನ್, ಎ.ಆನಂದ್, ಜಯಸಿಂಹ, ಪುಟ್ಟರಾಜು, ಪ್ರಕಾಶ್, ಹೇಮರಾಜು, ಚಂದ್ರಶೇಖರ್, ತೇಜಸ್, ಚೇತನ್, ವೆಂಕಟೇಶ್ ಹಾಗೂ ಸುಬ್ಬರಾಜ್ ಇದ್ದರು.

ಕೋವಿಡ್ ತಜ್ಞರ ಸಮಿತಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ

ಕೋವಿಡ್–19: ಸಂಭಾವ್ಯ ಅಲೆ ಎದುರಿಸಲು ಸಜ್ಜಾಗಿ

ಪ್ರಜಾವಾಣಿ ವಾರ್ತೆ

ಸಭೆಯಲ್ಲಿ ಗೌರವ್ ಗುಪ್ತ ಮಾತನಾಡಿದರು. ಡಾ.ಕೆ.ವಿ.ತ್ರಿಲೋಕಚಂದ್ರ ಇದ್ದಾರೆ

ಬೆಂಗಳೂರು: ‘ನಗರದಲ್ಲಿ ಕೊರೋನಾ ಮೂರನೇ ಅಲೆಯನ್ನು ಎಲ್ಲರ ಸಹಾಯದಿಂದ ಯಶಸ್ವಿಯಾಗಿ ನಿಭಾಯಿಸಲಾಗುತ್ತಿದೆ. ಕೋವಿಡ್ ಪ್ರಕರಣಗಳ ಸಂಖ್ಯೆಯೂ ತಗ್ಗುತ್ತಿದೆ. ಭವಿಷ್ಯದಲ್ಲಿ ಹೊಸ ಅಲೆ ಕಾಣಿಸಿಕೊಂಡರೂ ಅದನ್ನು ಸಮರ್ಥವಾಗಿ ಎದುರಿಸಲು ಸಜ್ಜಾಗಿರಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ಬಿಬಿಎಂಪಿಯ ಕೋವಿಡ್ ತಜ್ಞರ ಸಮಿತಿ ಜೊತೆ ವರ್ಚುವಲ್ ರೂಪದಲ್ಲಿ ಬುಧವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

‘ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರಿಗೆ ಯಾವ ತರಹದ ಚಿಕಿತ್ಸೆಯ ಅಗತ್ಯವಿದೆ ಎಂಬುದನ್ನು ನಿರ್ಧರಿಸುವ ಸಂಚಾರ ಟ್ರಯಾಜ್ ಘಟಕ ಮತ್ತು ಟೆಲಿ ಟ್ರಯಾಜ್ ಘಟಕಗಳು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿವೆ. ವೈದ್ಯರು ಮತ್ತು ಸಿಬ್ಬಂದಿಯನ್ನೊಳಗೊಂಡ ತಂಡಗಳ ನೆರವಿನಿಂದ ನಿತ್ಯವೂ 3,000ಕ್ಕೂ ಹೆಚ್ಚು ಸೋಂಕಿತರಿಗೆ ಅವರ ಮನೆಯಲ್ಲೇ ಟ್ರಯಾಜ್ ಮಾಡಲಾಗುತ್ತಿದೆ’ ಎಂದು ಅವರು ವಿವರಿಸಿದರು.

‘ಕೊರೊನಾ ಮೂರನೇ ಅಲೆ ಕಾಣಿಸಿಕೊಳ್ಳುವ ಸೂಚನೆ ಸಿಗುತ್ತಿದ್ದಂತೆಯೇ ಜನರಲ್ಲಿ ಈ ಕುರಿತ ಭಯವನ್ನು ಹೋಗಲಾಡಿಸಿ, ಧೈರ್ಯ ತುಂಬುವ ಕಾರ್ಯಕ್ಕೆ ಮಹತ್ವ ನೀಡಿದೆವು. ಪರಿಸ್ಥಿತಿಯನ್ನು ಎದುರಿಸುವುದರ ಜೊತೆಗೆ ಲಸಿಕಾಕರಣಕ್ಕೂ ಆದ್ಯತೆ ನೀಡಿದ್ದೇವೆ. ಇದರ ಪರಿಣಾಮವಾಗಿ ಸೋಂಕಿತರು ಆಸ್ಪತ್ರೆಗೆ ದಾಖಲಾಗುವ ಸಂಖ್ಯೆ ಕಡಿಮೆಯಿದೆ. ಶೀಘ್ರದಲ್ಲಿಯೇ ಮುನ್ನೆಚ್ಚರಿಕೆ ಡೋಸ್ ಲಸಿಕಾಕರಣದಲ್ಲೂ ಗುರಿ ತಲುಪಲಿದ್ದೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಜನವರಿ ತಿಂಗಳಲ್ಲಿ ಕೋವಿಡ್ ಸೋಂಕಿತರಲ್ಲಿ ಕೇವಲ ಶೇ 1.8ರಷ್ಟು ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಲ್ಲಿ ಹೆಚ್ಚಿನವರು 60 ವರ್ಷ ಮೇಲಿನವರು. ಆಸ್ಪತ್ರೆಗೆ ದಾಖಲಾಗಿರುವ ಸೋಂಕಿತರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂಚರನೆಯ ವಿಶ್ಲೇಷಣೆಗೆ (ಜೀನೋಮಿಕ್ ಸೀಕ್ವೆನ್ಸಿಂಗ್) ಕಳುಹಿಸಲಾಗುತ್ತಿದ್ದು, ಹೆಚ್ಚಿನ ಮೇಲ್ವಿಚಾರಣೆ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಸಭೆಯಲ್ಲಿ ವಿಶೇಷ ಆಯುಕ್ತ (ಆರೋಗ್ಯ) ಡಾ. ಕೆ.ವಿ.ತ್ರಿಲೋಕ್ ಚಂದ್ರ, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ಬಾಲಸುಂದರ್, ಕೋವಿಡ್ ತಜ್ಞರ ಸಮಿತಿ ಸದಸ್ಯರು ಭಾಗವಹಿಸಿದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಸ್ಥರಿಗೆ ಶಾಸಕ ಎಂ.ಕೃಷ್ಣಪ್ಪ ಪರಿಹಾರದ ಚೆಕ್ ವಿತರಿಸಿದರು. ತಹಶೀಲ್ದಾರ್ ಪಿ.ದಿನೇಶ್, ಬಿಜೆಪಿ ಮುಖಂಡರಾದ ಕೋಣನಕುಂಟೆ ಜಯರಾಮ್, ರಾಜಶೇಖರ್ ರೆಡ್ಡಿ,ಟಿ.ನಾರಾಯಣ್ ಹಾಗೂ ಇತರರು ಇದ್ದಾರೆ.

‘ಕೋವಿಡ್ ಪರಿಹಾರದ ಹಣ ಬಡ್ಡಿಗೆ ನೀಡಬೇಡಿ’

ಬೆಂಗಳೂರು: ‘ಕೋವಿಡ್‌ನಿಂದ ಕುಟುಂಬದ ಸದಸ್ಯರನ್ನು ಕಳೆದುಕೊಂಡ ನೋವು ಕಡಿಮೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಪರಿಹಾರದ ಹಣವನ್ನು ಬಡ್ಡಿಗೆ ನೀಡಬೇಡಿ. ಜೀವನೋಪಾಯಕ್ಕೆ ಹಣವನ್ನು ಸದುಪಯೋಗ ಪಡಿಸಿಕೊಳ್ಳಿ’ ಎಂದು ಶಾಸಕ ಎಂ.ಕೃಷ್ಣಪ್ಪ ಅವರು ಹೇಳಿದರು.

ಕೋಣನಕುಂಟೆಯ ಆರ್.ಬಿ.ಐ ಬಡಾವಣೆಯಲ್ಲಿ ಕಂದಾಯ ಇಲಾಖೆ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೋವಿಡ್‌ನಿಂದ ಮೃತಪಟ್ಟ 37 ಕುಟುಂಬದ ಸದಸ್ಯರಿಗೆ ತಲಾ ₹1 ಲಕ್ಷದ ಪರಿಹಾರದ ಚೆಕ್ ವಿತರಿಸಿದರು.

ತಹಶೀಲ್ದಾರ್ ಪಿ.ದಿನೇಶ್,‘ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಸ್ಥರಲ್ಲಿ ಹಲವರು ಪರಿಹಾರದ ಹಣಕ್ಕಾಗಿ ಅರ್ಜಿ ಸಲ್ಲಿಸಿಲ್ಲ. ಬೇರೆ ರಾಜ್ಯಗಳಿಂದ ವಲಸೆ ಬಂದ ಕೂಲಿ ಕಾರ್ಮಿಕರು ಮತ್ತು ಬಡವರ ಆಧಾರ್ ವಿಳಾಸ ಬೇರೆಯಾಗಿದ್ದು, ಅವರು ತಮ್ಮ ರಾಜ್ಯಗಳಲ್ಲೇ ಪರಿಹಾರ ಪಡೆದುಕೊಳ್ಳಬೇಕಾಗಿದೆ’ ಎಂದು ಅವರು ತಿಳಿಸಿದರು.

ಜಿಎಸ್‌ಎಸ್ ಕವನ ವಾಚನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿ.ಎಸ್.ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಂಟಿ ಕ್ರಿಯಾ ಸಮಿತಿಯು ಫೆ.6ರಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಂಡಿರುವ ಕವಿ ಜಿ.ಎಸ್.ಶಿವರುದ್ರಪ್ಪ ಅವರ ಜಯಂತಿ ಅಂಗವಾಗಿ ಜಿಎಸ್‌ಎಸ್ ಕುರಿತು ಸ್ವರಚಿತ ಕವನ ವಾಚನಕ್ಕೆ ಅವಕಾಶ ಕಲ್ಪಿಸಿದೆ.

ಕವನ ವಾಚನದಲ್ಲಿ ಭಾಗವಹಿಸಲು ಹೆಸರು ನೋಂದಾಯಿಸಿಕೊಳ್ಳಬಹುದು. ಭಾಗವಹಿಸಿದವರಿಗೆ ಪ್ರಮಾಣ ಪತ್ರ ವಿತರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕಾರ್ಯಕ್ರಮದ ಸ್ಥಳ: ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಮಲ್ಲತ್ತಹಳ್ಳಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕ:8310741113

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	38.34 ಕೋಟಿ ▲	4.16 ಕೋಟಿ
ಸಕ್ರಿಯ ಪ್ರಕರಣ	7.39 ಕೋಟಿ ▲	16.21 ಲಕ್ಷ ▼
ಗುಣಮುಖ	30.38 ಕೋಟಿ ▲	3.95 ಕೋಟಿ ▲
ಸಾವು	57.10 ಲಕ್ಷ ▲	4.97 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	30.65 ಲಕ್ಷ ▲	1.61 ಲಕ್ಷ ▼
ಗುಣಮುಖ	33.62 ಲಕ್ಷ ▲	2.81 ಲಕ್ಷ ▲
ಸಾವು	11,397 ▲	1,733 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 4.16 ಲಕ್ಷ ಫ್ರಾನ್ಸ್ ▲; 2.64 ಲಕ್ಷ ಅಮೆರಿಕ ▲; 1.71 ಲಕ್ಷ ಬ್ರೆಜಿಲ್ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 2.89 ಕೋಟಿ ಅಮೆರಿಕ ▲; 66.22ಲಕ್ಷ ಫ್ರಾನ್ಸ್ ▼; 25.90ಲಕ್ಷ ಬ್ರಿಟನ್ ▼

ಎಲ್ಲಿ ಹೆಚ್ಚು ಸಾವು (ಒಟ್ಟು): 1.42 ಲಕ್ಷ ಮಹಾರಾಷ್ಟ್ರ; 55,600 ಕೇರಳ ▲; 37,599 ತಮಿಳುನಾಡು ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 77.35 ಮಹಾರಾಷ್ಟ್ರ; 60.77 ಕೇರಳ; 33.61 ತಮಿಳುನಾಡು

ಭಾರತದ ಕೋವಿಡ್ ಸಂಖ್ಯೆ ವಿವರ: ಬುಧವಾರ ಬೆಳಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

‘ಚಿತ್ರಮಂದಿರ ಭರ್ತಿಗೆ ಅವಕಾಶ: ತಜ್ಞರ ಸಲಹೆ ಪಡೆದು ಕ್ರಮ’

ಪ್ರಜಾವಾಣಿ ವಾರ್ತೆ

ಆರ್.ಅಶೋಕ

ಬೆಂಗಳೂರು: ಚಿತ್ರಮಂದಿರಗಳಲ್ಲಿ ಶೇ 100 ರಷ್ಟು ಆಸನಗಳ ಭರ್ತಿಗೆ ಅನುಮತಿ ನೀಡಬೇಕು ಎಂಬ ವಿಚಾರದಲ್ಲಿ ತಜ್ಞರ ಸಲಹೆ ಪಡೆದು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದ್ದಾರೆ.

ವಿಧಾನಸೌಧದಲ್ಲಿ ಬುಧವಾರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಪದಾಧಿಕಾರಿಗಳ ಭೇಟಿಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಕೆಲವು ದಿನಗಳ ಹಿಂದೆ ವಾಣಿಜ್ಯ ಮಂಡಳಿ ನಿಯೋಗ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಶೇ 100 ರಷ್ಟು ಆಸನಗಳ ಭರ್ತಿಗೆ ಸಂಬಂಧಿಸಿದಂತೆ ಸಮಗ್ರ ವರದಿ ಒಳಗೊಂಡ ಮನವಿ ನೀಡುವಂತೆ ತಿಳಿಸಿದ್ದೆವು. ಅದನ್ನು ಇವತ್ತು ಸಲ್ಲಿಸಿದ್ದಾರೆ. ಮನವಿಯನ್ನು ತಜ್ಞರ ಮುಂದಿಟ್ಟು ಬಳಿಕ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

‘ಚಿತ್ರರಂಗ ಕಷ್ಟದಲ್ಲಿದೆ. ಸಾಕಷ್ಟು ಚಲನಚಿತ್ರಗಳು ಬಿಡುಗಡೆಗೆ ಸಿದ್ಧವಾಗಿವೆ. ಬೇರೆ ರಾಜ್ಯಗಳಲ್ಲಿ ಶೇ 100 ಚಿತ್ರ ಮಂದಿರ ಭರ್ತಿಗೆ ಅನುಮತಿ ಇದೆ. ಈ ಎಲ್ಲ ವಿಚಾರಗಳ ಬಗ್ಗೆ ಮುಖ್ಯಮಂತ್ರಿ ಜತೆ ಮಾತನಾಡುತ್ತೇನೆ’ ಎಂದು ಅಶೋಕ ಹೇಳಿದರು.

ಅನ್ಯಾಯ ಒಪ್ಪುವುದಿಲ್ಲ: ನದಿಗಳ ಜೋಡಣೆಯಿಂದ ರಾಜ್ಯಕ್ಕೆ ನ್ಯಾಯಯುತವಾದ ನೀರಿನ ಪಾಲು ಸಿಗಬೇಕು. ರಾಜ್ಯಕ್ಕೆ ಅನ್ಯಾಯವಾಗುವ ಹಾಗಿದ್ದರೆ ಅದನ್ನು ಒಪ್ಪುವ ಪ್ರಶ್ನೆಯೇ ಇಲ್ಲ ಎಂದು ಅಶೋಕ ಹೇಳಿದರು.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	17,36,425 ▲
ಸಕ್ರಿಯ ಪ್ರಕರಣಗಳು	92,469 ▼
ಗುಣಮುಖರಾದವರು	16,27,340 ▲
ಒಟ್ಟು ಸಾವು	16,615 ▲

ದಿನದ ಏರಿಕೆ

ಹೊಸ ಪ್ರಕರಣ	8,850 ▲
ಗುಣಮುಖ	21,493 ▼
ಸಾವು	13 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಮೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ ಮತ್ತು ಬೀದಿ ದೀಪಗಳ ನಿರ್ವಹಣೆ ಮಾಡುವ ವಾಹನಗಳಿಗೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ವೆಂಕಟ ಲಕ್ಷ್ಮಮ್ಮ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಿ.ಹನುಮಂತಯ್ಯ, ರಾಮೋಹಳ್ಳಿ ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕ್ ಅಧ್ಯಕ್ಷ ವಿ.ವೇಣುಗೋಪಾಲ್, ಉಪಾಧ್ಯಕ್ಷೆ ಶೋಭಾ ತಿಮ್ಮೇಗೌಡ , ಸದಸ್ಯರಾದ ಚೇತನ್, ಜಿ.ಮಹೇಶ್, ರವಿಕುಮಾರ್, ಬಿ.ಎಚ್.ಪ್ರಭು, ಚಂದ್ರು ಇದ್ದಾರೆ. –ಪ್ರಜಾವಾಣಿ ಚಿತ್ರ

ಕಳ್ಳತನ: ₹60 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಧಿಸಲು ಹೋದಾಗ ಸಿಬ್ಬಂದಿ ಮೇಲೆ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದ ರೌಡಿ ನರಸಿಂಹ ಅಲಿಯಾಸ್ ರೆಡ್ಡಿ (32) ಎಂಬಾತನನ್ನು ಕಾಲಿಗೆ ಗುಂಡು ಹೊಡೆದು ಸೆರೆ ಹಿಡಿದಿದ್ದ ಗಿರಿನಗರ ಠಾಣೆ ಪೊಲೀಸರು ಆತನಿಂದ ₹60 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ 3 ಕಾರುಗಳನ್ನು ಜಪ್ತಿ ಮಾಡಿದ್ದಾರೆ.

‘ಆರೋಪಿಯು ಐಷಾರಾಮಿ ಬದುಕು ನಡೆಸಲು ಶ್ರೀಮಂತರ ಮನೆಗಳಿಗೆ ನುಗ್ಗಿ ಕಳವು ಮಾಡುತ್ತಿದ್ದ. ವಿಚಾರಣೆ ವೇಳೆ ಇದನ್ನು ಒಪ್ಪಿಕೊಂಡಿದ್ದ. ಈತನ ಬಂಧನದಿಂದ ಠಾಣೆ ವ್ಯಾಪ್ತಿಯಲ್ಲಿ ನಡೆದ ಮೂರು, ಎಚ್‌ಎಸ್‌ಆರ್ ಬಡಾವಣೆ ಠಾಣೆಯ ನಾಲ್ಕು ಹಾಗೂ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ ಒಂದು ಪ್ರಕರಣ ಪತ್ತೆಯಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಆರೋಪಿಯು ಸುಮಾರು 12 ವರ್ಷಗಳಿಂದ ವಿವಿಧ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ. ದರೋಡೆ, ಮನೆಗಳ್ಳತನ, ಕೊಲೆ, ಕೊಲೆಯತ್ನ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ. ಹೊಸಕೆರೆಹಳ್ಳಿಯಲ್ಲಿ ವಾಸವಿದ್ದ ಈತ ಸಣ್ಣಪುಟ್ಟ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ರಾಜಿ ಪಂಚಾಯ್ತಿ ಮಾಡುತ್ತಿದ್ದ. ತನ್ನ ಮಾತು ಕೇಳದವರಿಗೆ ಬೆದರಿಕೆ ಹಾಕುತ್ತಿದ್ದ. ಮನೆಗಳ ಮುಂದೆ ನಿಲ್ಲಿಸಿರುತ್ತಿದ್ದ ವಾಹನಗಳಿಗೆ ಬೆಂಕಿ ಹಚ್ಚುತ್ತಿದ್ದ’ ಎಂದು ತಿಳಿಸಿದ್ದಾರೆ.

‘ಶ್ರೀಮಂತರು ಹಾಗೂ ಗಣ್ಯ ವ್ಯಕ್ತಿಗಳು ವಾಸಿಸುವ ಬಡಾವಣೆಗಳ ಮನೆಗಳಿಗೆ ನುಗ್ಗಿ ಕಳವು ಮಾಡುತ್ತಿದ್ದ. ಇದಕ್ಕಾಗಿ ತಮಿಳುನಾಡಿನಿಂದ ಹುಡುಗರನ್ನು ಕರೆಸಿಕೊಳ್ಳುತ್ತಿದ್ದ. ಕೆಂಗೇರಿ, ಸುಬ್ರಹ್ಮಣ್ಯಪುರ, ರಾಜರಾಜೇಶ್ವರಿನಗರ, ತಲಘಟ್ಟಪುರ ಸೇರಿದಂತೆ ವಿವಿಧೆಡೆ ಕಳವು ಮಾಡಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ ಈತ ಜೈಲಿಗೂ ಹೋಗಿದ್ದ. ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ಕಳವು ಮಾಡುವುದನ್ನು ಮುಂದುವರಿಸಿದ್ದ. ಕಳ್ಳತನ ಮಾಡಿದ ಚಿನ್ನಾಭರಣಗಳನ್ನು ಅವೆನ್ಯೂ ರಸ್ತೆ, ನಗರ್ತಪೇಟೆಯ ಲೇವಾದೇವಿದಾರರ ಬಳಿ ಗಿರವಿ ಇಡುತ್ತಿದ್ದ. ಕೋಲಾರ ಹಾಗೂ ತಮಿಳುನಾಡಿನಲ್ಲಿ ಅವುಗಳನ್ನು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದ’ ಎಂದು ಮಾಹಿತಿ ನೀಡಿದ್ದಾರೆ.

ಬೀಗ ಮುರಿದು ಕಳವು: ಆರೋಪಿ ಬಂಧನ

ಆರೋಪಿಯಿಂದ ಜಪ್ತಿ ಮಾಡಿರುವ ಚಿನ್ನಾಭರಣ ಹಾಗೂ ಇತರ ವಸ್ತುಗಳು

ಬೆಂಗಳೂರು: ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸಿ ಯಾರೂ ಇಲ್ಲದ ಹೊತ್ತಿನಲ್ಲಿ ಮನೆಗೆ ನುಗ್ಗಿ ಹಣ, ಆಭರಣ ಹಾಗೂ ಇತರ ವಸ್ತುಗಳನ್ನು ಕಳವು ಮಾಡಿಕೊಂಡು ಪರಾರಿಯಾಗುತ್ತಿದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನತೀಬ್ ಅಹ್ಮದ್ (34) ಬಂಧಿತ. ಈತನಿಂದ 5 ಗ್ರಾಂ ತೂಕದ ಚಿನ್ನದ ಉಂಗುರ, 80 ಗ್ರಾಂ ತೂಕದ ಬೆಳ್ಳಿಯ ಆಭರಣಗಳು, 6 ಕೈಗಡಿಯಾರಗಳು, 1 ಎಲ್‌ಇಡಿ ಟಿವಿ, 1 ಹೋಮ್ ಥಿಯೇಟರ್ ಹಾಗೂ ಎರಡು ಸೀರೆಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹1.20 ಲಕ್ಷ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಠಾಣಾ ವ್ಯಾಪ್ತಿಯಲ್ಲಿ ವಾಸವಿದ್ದ ವ್ಯಕ್ತಿಯೊಬ್ಬರು ಜನವರಿ 28ರಂದು ಬೆಳಿಗ್ಗೆ 8.30ರ ಸುಮಾರಿಗೆ ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಊರಿಗೆ ತೆರಳಿದ್ದರು. ಇದನ್ನು ಗಮನಿಸಿದ್ದ ಆರೋಪಿ ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ಇತರ ವಸ್ತುಗಳನ್ನು ದೋಚಿಕೊಂಡು ಪರಾರಿಯಾಗಿದ್ದ. ಮನೆಯ ಬಾಗಿಲು ತೆರೆದಿರುವುದನ್ನು ಗಮನಿಸಿದ್ದ ನೆರೆಮನೆಯವರು ದೂರವಾಣಿ ಕರೆ ಮಾಡಿ ವ್ಯಕ್ತಿಗೆ ವಿಷಯ ತಿಳಿಸಿದ್ದರು. ಅವರು ಮನೆಗೆ ಬಂದು ನೋಡಿದಾಗ ಚಿನ್ನಾಭರಣ ಹಾಗೂ ಇತರ ವಸ್ತುಗಳು ಕಳವು ಆಗಿರುವುದು ಗಮನಕ್ಕೆ ಬಂದಿತ್ತು’ ಎಂದು ಮಾಹಿತಿ ನೀಡಿದ್ದಾರೆ.

ಅಪರಾಧ ಸುದ್ದಿ

ಬಸ್ ಏರಿ ಆಭರಣ ಕಳವು: ಬಂಧನ

ಬೆಂಗಳೂರು: ದಟ್ಟಣೆಯಿಂದ ಕೂಡಿರುತ್ತಿದ್ದ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳನ್ನು ಏರಿ ಪ್ರಯಾಣಿಕರ ಚಿನ್ನದ ಸರ ಹಾಗೂ ಇತರ ವಸ್ತುಗಳನ್ನು ಕದ್ದು ಪರಾರಿಯಾಗುತ್ತಿದ್ದ ಇಬ್ಬರನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಗಿರೀಶ್ (25) ಹಾಗೂ ಅರುಣ್ (24) ಬಂಧಿತರು. ಇವರಿಂದ ಠಾಣಾ ವ್ಯಾಪ್ತಿಯಲ್ಲಿ ವರದಿಯಾಗಿದ್ದ ಮೂರು ಕಳವು ಪ್ರಕರಣಗಳಿಗೆ ಸಂಬಂಧಿಸಿದ 308 ಗ್ರಾಂ ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹14.36 ಲಕ್ಷ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ವ್ಯಕ್ತಿಯೊಬ್ಬರು ಜನವರಿ 17ರಂದು ಬೆಳಿಗ್ಗೆ 6.50ರ ಸುಮಾರಿಗೆ ಠಾಣಾ ವ್ಯಾಪ್ತಿಯ ಸ್ಥಳವೊಂದರ ಬಳಿ ಟಿವಿಎಸ್ ಜ್ಯುಪಿಟರ್ ಸ್ಕೂಟರ್ ನಿಲುಗಡೆ ಮಾಡಿ ಹೋಗಿದ್ದರು. ಜನವರಿ 20ರಂದು ರಾತ್ರಿ 8.15ಕ್ಕೆ ಸ್ಥಳಕ್ಕೆ ಬಂದು ನೋಡಿದಾಗ ಸ್ಕೂಟರ್ ನಾಪತ್ತೆಯಾಗಿತ್ತು. ಈ ಕುರಿತ ತನಿಖೆ ವೇಳೆ ಇಬ್ಬರನ್ನು ಬಂಧಿಸಿ ವಿಚಾರಿಸಲಾಗಿತ್ತು. ಅವರು ಸ್ಕೂಟರ್ ಕದ್ದಿರುವುದಾಗಿ ತಿಳಿಸಿದ್ದರು. ಬಸ್‌ಗಳನ್ನು ಏರಿ ಪ್ರಯಾಣಿಕರ ಬಳಿ ಇರುತ್ತಿದ್ದ ಚಿನ್ನಾಭರಣ ಕಳವು ಮಾಡಿರುವ ವಿಚಾರವನ್ನೂ ಒಪ್ಪಿಕೊಂಡಿದ್ದರು’ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಫೆ.5ಕ್ಕೆ ‘ಪುರಂದರ ನಮನ’ ಪ್ರಶಸ್ತಿ ಪ್ರದಾನ

ಬೆಂಗಳೂರು: ದಾಸವಾಣಿ ಸಂಸ್ಥೆಯು ಸಂಗೀತ ಕ್ಷೇತ್ರದ ಸಾಧಕರಿಗೆ ಪುರಂದರ ನಮನ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಇದೇ 5ರಂದು ಸಂಜೆ 4.30ಕ್ಕೆ ಮಲ್ಲೇಶ್ವರದ ಈಸ್ಟ್ ಪಾರ್ಕ್ ರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಹಮ್ಮಿಕೊಂಡಿದೆ.

ದಿವ್ಯಾ ಗಿರಿಧರ್, ಮಾನಸಾ ಕುಲಕರ್ಣಿ ಹಾಗೂ ಚಂದ್ರಿಕಾ ಗಿರೀಶ್ ಅವರಿಗೆ ಪ್ರಶಸ್ತಿ ಪ್ರದಾನ ನಡೆಯಲಿದೆ. ಅತಿಥಿಗಳಾಗಿ ಪ್ರಭಂಜನ ದೇಶಪಾಂಡೆ, ವಿಜಯ ಕೃಷ್ಣ ಡಿ. ಭಾಗವಹಿಸಲಿದ್ದಾರೆ.

‘ಸಂಸ್ಥೆ ಏರ್ಪಡಿಸಿದ್ದ ಪುರಂದರದಾಸರ ಗಾಯನ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ’ ಎಂದು ದಾಸವಾಣಿ ಸಂಸ್ಥೆಯ ಜಯರಾಜ್ ಕುಲಕರ್ಣಿ ತಿಳಿಸಿದ್ದಾರೆ.

ಗಾಂಜಾ ಮಾರಾಟ: ಆರೋಪಿ ಬಂಧನ

ಬೆಂಗಳೂರು: ಆಂಧ್ರಪ್ರದೇಶದಿಂದ ಗಾಂಜಾ ತಂದು ಬೆಂಗಳೂರು ಸೇರಿ ರಾಜ್ಯದ ಕೆಲವೆಡೆ ಮಾರಾಟ ಮಾಡುತ್ತಿದ್ದ ಮೂವರನ್ನು ಮಾರತ್ತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚಿಕ್ಕಬಳ್ಳಾಪುರದ ಅಜಯ್‌ಕುಮಾರ್ (21), ರಾಜ್‌ಬಾಬು ಯಾನೆ ರಾಜು (23) ಹಾಗೂ ಆಂಧ್ರಪ್ರದೇಶದ ಚಿತ್ತೂರಿನ ರವಿ ಮೊಗಸಾಲ (30) ಬಂಧಿತರು. ಇವರಿಂದ ₹4 ಲಕ್ಷ ಮೌಲ್ಯದ 40 ಕೆ.ಜಿ.ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಆರೋಪಿಗಳು ಮಾದಕ ವಸ್ತುಗಳನ್ನು ತಂದು ಪಣತ್ತೂರು ರೈಲ್ವೆ ಹಳಿ ಬಳಿ ಪೆಡ್ಲರ್‌ಗಳಿಗೆ ಪೂರೈಸುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ದಾಳಿ ನಡೆಸಿ ಮೂವರನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ಸ್ಕಾರ್ಪಿಯೊ ವಾಹನವನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದ್ದಾರೆ.

‘ಆಂಧ್ರಪ್ರದೇಶದ ವಿಶಾಖಪಟ್ಟಣದ ಡ್ರಗ್ ಪೆಡ್ಲರ್ ಶಂಕರ್ ಎಂಬಾತನಿಂದ ಗಾಂಜಾ ಖರೀದಿಸುತ್ತಿದ್ದ ಆರೋಪಿಗಳು ಅದನ್ನು ವಾಹನಗಳಲ್ಲಿ ಅಡಗಿಸಿಟ್ಟುಕೊಂಡು ಚಿಕ್ಕಬಳ್ಳಾಪುರಕ್ಕೆ ತರುತ್ತಿದ್ದರು. ಅಲ್ಲಿ ಅವುಗಳನ್ನು ಪ್ರತ್ಯೇಕಿಸುತ್ತಿದ್ದರು. ಬಳಿಕ ವಿವಿಧ ವಾಹನಗಳಲ್ಲಿ ತುಂಬಿ ಬೆಂಗಳೂರು ಸೇರಿ ವಿವಿಧ ಜಿಲ್ಲೆಗಳಿಗೆ ತೆಗೆದುಕೊಂಡು ಹೋಗಿ ಅಲ್ಲಿನ ಡೀಲರ್‌ಗಳಿಗೆ ಕೆ.ಜಿ.ಲೆಕ್ಕದಲ್ಲಿ ಮಾರಾಟ ಮಾಡುತ್ತಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

ಕಳ್ಳರ ಸುಳಿವು ನೀಡಿದ ಸಿಸಿಟಿವಿ ದೃಶ್ಯಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀಗ ಹಾಕಿರುತ್ತಿದ್ದ ಮನೆಗಳಿಗೆ ನುಗ್ಗಿ ಕಳವು ಮಾಡುತ್ತಿದ್ದ ಇಬ್ಬರನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇವರಿಂದ ₹35.12 ಲಕ್ಷ ಮೌಲ್ಯದ 800 ಗ್ರಾಂ ಚಿನ್ನಾಭರಣಗಳನ್ನುಜಪ್ತಿಮಾಡಲಾಗಿದೆ.

‘ಇರ್ಫಾನ್ ಶರೀಫ್ (56) ಹಾಗೂ ಮೊಹಮ್ಮದ್ ಬಿಲಾಲ್ ಹುಸೇನ್ (32) ಬಂಧಿತರು. ಪುಟ್ಟೇನಹಳ್ಳಿ ಹಾಗೂ ತುಮಕೂರು ಜಿಲ್ಲೆಯ ಹೊಸ ಬಡಾವಣೆಯಲ್ಲಿ ನಡೆದಿದ್ದ ಕಳವು ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿದ್ದರು. ಸ್ಥಳದಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿಗಳನ್ನು ವಶಕ್ಕೆ ಪಡೆದು ಅವುಗಳಲ್ಲಿ ಸೆರೆಯಾಗಿದ್ದ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ದೃಶ್ಯದಲ್ಲಿದ್ದ ವ್ಯಕ್ತಿಗಳ ಚಹರೆಯು ಆರೋಪಿಗಳಿಗೆ ಹೋಲಿಕೆಯಾಗುತ್ತಿತ್ತು. ಹೀಗಾಗಿ ಇಬ್ಬರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿತ್ತು. ಈ ವೇಳೆ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಆರೋಪಿ ಇರ್ಫಾನ್ ಈ ಹಿಂದೆ ಪೀಣ್ಯದಲ್ಲಿ ಫಿನಾಯಿಲ್ ಹಾಗೂ ಆ್ಯಸಿಡ್ ವ್ಯಾಪಾರ ಮಾಡಿಕೊಂಡಿದ್ದ. ಬಳಿಕ ಆ ಕೆಲಸ ಬಿಟ್ಟು ಕಳವು ಮಾಡಲಾರಂಭಿಸಿದ್ದ. ಬೆಂಗಳೂರು ಹಾಗೂ ಇತರೆ ಜಿಲ್ಲೆಗಳಲ್ಲಿ ನಡೆದಿದ್ದ ಹಲವು ಮನೆಗಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈತ ಪದೇ ಪದೇ ವಾಸ ಸ್ಥಳ ಬದಲಿಸುತ್ತಿದ್ದ. ಇತ್ತೀಚೆಗೆ ಪರಪ್ಪನ ಅಗ್ರಹಾರ ಕಾರಾಗೃಹದಿಂದ ಬಿಡುಗಡೆಯಾಗಿದ್ದ ಈತ ತುಮಕೂರು ಜಿಲ್ಲೆಯ ಹೊಸ ಬಡಾವಣೆಯಲ್ಲಿ ಕಳವು ಮಾಡಿದ್ದ. ದೇವನಹಳ್ಳಿ ಬಳಿಯ ಯಮರಹಳ್ಳಿಯ ಬಿಲಾಲ್ ಈತನ ಕೃತ್ಯಕ್ಕೆ ಸಹಕರಿಸಿದ್ದ’ ಎಂದು ವಿವರಿಸಿದ್ದಾರೆ.

ಗುಂಡಿ ಮುಚ್ಚಲು ಬಿಬಿಎಂಪಿ ವಿಫಲ: ರಾಮಲಿಂಗಾರೆಡ್ಡಿ ಆರೋಪ

ಹೈಕೋರ್ಟ್ ಸೂಚನೆ ನೀಡಿದರೂ ಕ್ರಮ ಕೈಗೊಳ್ಳದ ಸರ್ಕಾರ

ಪ್ರಜಾವಾಣಿ ವಾರ್ತೆ

ರಾಮಲಿಂಗಾ ರೆಡ್ಡಿ

ಬೆಂಗಳೂರು: 'ಹೈಕೋರ್ಟ್ ಸೂಚನೆ ಹೊರತಾಗಿಯೂ ನಗರದಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುವಲ್ಲಿ ಸರ್ಕಾರ ಹಾಗೂ ಬಿಬಿಎಂಪಿ ವಿಫಲವಾಗಿವೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ದೂರಿದರು.

'ಶಾಲಾ ಶಿಕ್ಷಕಿ ಇತ್ತೀಚೆಗೆ ರಸ್ತೆ ಗುಂಡಿಗೆ ಬಿದ್ದು ಸಾವಿಗೀಡಾಗಿದ್ದಾರೆ. ಈ ಹಿಂದೆಯೂ ರಸ್ತೆ ಗುಂಡಿಗಳಿಂದಾಗಿ ಜನ ಪ್ರಾಣ ಬಿಟ್ಟಿದ್ದಾರೆ. ಬೆಂಗಳೂರಿನ ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ರಸ್ತೆ ಗುಂಡಿಯಿಂದ ಸಾವುಗಳು ಸಂಭವಿಸಿರಲಿಲ್ಲ. ಹೈಕೋರ್ಟ್ ಚಾಟಿ ಬೀಸಿದ್ದು, ರಸ್ತೆ ಗುಂಡಿಗಳನ್ನು ಮುಚ್ಚದಿದ್ದರೆ ಎಂಜಿನಿಯರ್‌ಗಳನ್ನು ಜೈಲಿಗೆ ಹಾಕಲಾಗುವುದು ಎಂದಿದ್ದರೂ ಇದುವರೆಗೂ ಕ್ರಮ ಕೈಗೊಂಡಿಲ್ಲ' ಎಂದು ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಅವರೇ ಬೆಂಗಳೂರಿನ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಅವರು ಉಸ್ತುವಾರಿ ವಹಿಸಿರುವುದರಿಂದ ಹಣಕಾಸಿಗೆ ತೊಂದರೆ ಇಲ್ಲ. ಎಲ್ಲವೂ ಸುಸೂತ್ರವಾಗಿ ನಡೆಯುತ್ತದೆ ಎಂದು ಭಾವಿಸಲಾಗಿತ್ತು. ಆದರೆ, ಯಾವುದೇ ಪರಿಸ್ಥಿತಿ ಬದಲಾಗಿಲ್ಲ' ಎಂದು ಟೀಕಿಸಿದರು.

'ಸಚಿವ ಆರ್.ಅಶೋಕ ಅವರು ಹೇಳಿದಂತೆ ಸೆಪ್ಟೆಂಬರ್ ಒಳಗೆ 1,332 ಕಿ.ಮೀ. ಉದ್ದದ ಪ್ರಮುಖ ರಸ್ತೆಗಳಲ್ಲಿನ ಗುಂಡಿಗಳು ಹಾಗೂ ಸೆಪ್ಟೆಂಬರ್ 30ರ ಒಳಗೆ ವಾರ್ಡ್ ಮಟ್ಟದಲ್ಲಿ 85,791 ಕಿ.ಮೀ ಉದ್ದದ ರಸ್ತೆಗಳಲ್ಲಿನ ಗುಂಡಿ ಮುಚ್ಚಲು ಸೂಚನೆ ನೀಡಲಾಗಿದೆ ಎಂದು ಹೇಳಿದ್ದರು. ಆದರೆ, ಈಗಲೂ ನಗರದ ರಸ್ತೆಗಳಲ್ಲಿ ಗುಂಡಿಗಳಿವೆ. ಎರಡು ತಿಂಗಳಿನಿಂದ ಮಳೆ ಇಲ್ಲ. ಹೀಗಾಗಿ ರಸ್ತೆಗಳ ಡಾಂಬರೀಕರಣ ಮಾಡಬಹುದಾಗಿತ್ತು. ಆದರೆ, ಸರ್ಕಾರಕ್ಕೆ ಹಾಗೂ ಪಾಲಿಕೆಗೆ ರಸ್ತೆ ಗುಂಡಿ ಮುಚ್ಚುವ ಹಾಗೂ ಡಾಂಬರೀಕರಣ ಮಾಡುವ ಇಚ್ಛಾಶಕ್ತಿ ಇಲ್ಲ' ಎಂದು ದೂರಿದರು.

'ಸರ್ಕಾರ ಹಾಗೂ ಪಾಲಿಕೆ ನಿರ್ಲಕ್ಷ್ಯ ಧೋರಣೆ ವಿರೋಧಿಸಿ ಶನಿವಾರ ಬಿಬಿಎಂಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು' ಎಂದು ತಿಳಿಸಿದರು.

ಬೆಂಗಳೂರು ಜಿಲ್ಲಾಧ್ಯಕ್ಷರಾದ ಎಂ. ರಾಜಕುಮಾರ್, ಜಿ. ಶೇಖರ್, ಜಿ. ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯರಾದ ಪಿ.ಆರ್. ರಮೇಶ್, ಮಾಜಿ ಮಹಾಪೌರರಾದ ರಾಮಚಂದ್ರಪ್ಪ, ಮಂಜುನಾಥ ರೆಡ್ಡಿ, ಸಂಪತ್ ರಾಜ್, ಮಾಜಿ ಶಾಸಕ ಕೆ. ಚಂದ್ರಶೇಖರ್ ಇದ್ದರು.

ವಾರ್ಡ್‌ಗಳ ಅವೈಜ್ಞಾನಿಕ ಪುನರ್ ವಿಂಗಡಣೆ

'ವಾರ್ಡ್‌ಗಳ ಪುನರ್ ವಿಂಗಡಣೆಯನ್ನು ಮನಬಂದಂತೆ ಮಾಡಲಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳ ಬಳಿ ಯಾವ ಮಾಹಿತಿಯೂ ಇಲ್ಲ' ಎಂದು ರಾಮಲಿಂಗಾ ರೆಡ್ಡಿ ದೂರಿದರು.

'ಬಿಜೆಪಿ ವಾಮಮಾರ್ಗದಲ್ಲಿ ಅಧಿಕಾರಕ್ಕೆ ಬರಲು ವಿವಿಧ ರೀತಿಯ ತಂತ್ರಗಳನ್ನು ಮಾಡುತ್ತಿದೆ. ಪುನರ್ ವಿಂಗಡಣೆ ವೈಜ್ಞಾನಿಕವಾಗಿ ನಡೆಯದೇ, ಪಕ್ಷಪಾತವಾಗಿ ನಡೆಯುತ್ತಿದೆ' ಎಂದು ತಿಳಿಸಿದರು.

'ಯಾವುದೇ ಹೊಸ ಹಳ್ಳಿಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸುತ್ತಿಲ್ಲ. ಈಗ ಇರುವ 198 ವಾರ್ಡ್‌ಗಳನ್ನೇ 243 ವಾರ್ಡ್‌ಗಳಾಗಿ ಮಾಡುತ್ತಿದ್ದಾರೆ' ಎಂದರು.

ಅಂಗವಿಕಲ, ಅನಾಥ ಮಕ್ಕಳಿಗೆ ಆಶ್ರಯದ ಜತೆಗೆ ಶಿಕ್ಷಣ

ಮಾತೃಪ್ರೇಮ ಉಣಿಸುತ್ತಿರುವ 'ಮಾತೃಶ್ರೀ'

• ಶಿವರಾಜ ರಾಮನಾಳ

ಬೆಂಗಳೂರು: ಅಂಗವಿಕಲ, ಅನಾಥ ಮಕ್ಕಳಿಗೆ ಆಶ್ರಯ ಕಲ್ಪಿಸಿ, ಮಮತೆಯಿಂದ ಪೋಷಿಸುವ ಮೂಲಕ ಮಾನವೀಯ ಕೈಂಕರ್ಯದಲ್ಲಿ ಈ ಸಂಸ್ಥೆ ತೊಡಗಿಸಿಕೊಂಡಿದೆ.

ನಗರದ ಶೇಷಾದ್ರಿಪುರದ ಮಾತೃಶ್ರೀ ಮನೋವಿಕಾಸ ಕೇಂದ್ರ ಸಂಸ್ಥೆಯು ಇಂತಹ ಮಕ್ಕಳ ಆರೈಕೆಗಾಗಿಯೇ ಕಾರ್ಯನಿರ್ವಹಿಸುತ್ತಿರುವುದು ಗಮನಸೆಳೆದಿದೆ.

2003ರಲ್ಲಿ ಸಂಸ್ಥೆ ಆರಂಭವಾದಾಗ ಮೂವರು ವಿಶೇಷ ಮಕ್ಕಳಿದ್ದರು. ಈಗ 112 ಮಕ್ಕಳಿದ್ದಾರೆ. ಸಂಸ್ಥೆಯ ವತಿಯಿಂದ ನೆಲಮಂಗಲದ ಗೌಡನಹಳ್ಳಿ ಸಮೀಪ ದಾನಿಗಳು ನೀಡಿದ ಜಾಗದಲ್ಲಿ ಮಾತೃಶ್ರೀ ಸಂಸ್ಥೆಯ ಮತ್ತೊಂದು ಕೇಂದ್ರ ನಿರ್ಮಾಣವಾಗಿದೆ. ಎರಡೂ ಕೇಂದ್ರಗಳಲ್ಲಿ 24 ಸಿಬ್ಬಂದಿ ಇದ್ದಾರೆ. ಜತೆಗೆ, ದಾನಿಗಳು ನೀಡಿರುವ ನೆಲಮಂಗಲದ ಬಳಿಯ ಮತ್ತೊಂದು ಜಾಗದಲ್ಲಿ ವಿಶೇಷ ಮಕ್ಕಳಿಗೆ ಚಿಕಿತ್ಸೆ ನೀಡುವ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ.

ಈ ಸಂಸ್ಥೆ ಉಸ್ತುವಾರಿಗಾಗಿ ನಿವೃತ್ತ ಐಪಿಎಸ್ ಅಧಿಕಾರಿ ಗೋಪಾಲ್ ಬಿ. ಹೊಸೂರು ಅವರ ನೇತೃತ್ವದಲ್ಲಿ ಟ್ರಸ್ಟ್ ರಚಿಸಲಾಗಿದೆ.

'ಸಂಸ್ಥೆ ಪ್ರಾರಂಭವಾದಾಗ ಹಳ್ಳಿಗಳಿಗೆ ಹೋಗಿ ವಿಶೇಷ ಮಕ್ಕಳನ್ನು ಕರೆತರಲಾಗುತ್ತಿತ್ತು. ಈಗ ಪೋಷಕರೇ ಮಕ್ಕಳನ್ನು ಇಲ್ಲಿಗೆ ಕರೆ ತರುತ್ತಾರೆ. ಮಕ್ಕಳ ಕಲ್ಯಾಣ ಸಮಿತಿ ಮೂಲಕ ಕೆಲವರು ಇಲ್ಲಿ ಮಕ್ಕಳನ್ನು ದಾಖಲಿಸುತ್ತಾರೆ. ತಂದೆ ತಾಯಿಯನ್ನು ಕಳೆದುಕೊಂಡ ಮಕ್ಕಳಿಗೂ ಆಶ್ರಯ ನೀಡಿದ್ದೇವೆ. ಎಲ್ಲ ವಯಸ್ಸಿನ ಮಕ್ಕಳು ಇಲ್ಲಿದ್ದಾರೆ' ಎಂದು ಮಕ್ಕಳ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿರುವ ಸ್ವರ್ಣ ಹೇಳುತ್ತಾರೆ. ಒಂದು ವಿಶೇಷ ಮಗುವಿನ ತಾಯಿಯಾದ ಸ್ವರ್ಣ ಅವರು ಈ ಮಕ್ಕಳ ನಾಡಿ ಮಿಡಿತ ಅರಿತಿದ್ದಾರೆ.

'ವಿಶೇಷ ಮಕ್ಕಳ ಮನಸ್ಥಿತಿ ಒಂದೇ ರೀತಿ ಇರುವುದಿಲ್ಲ. ಕೆಲವರು ಮಾತು ಕೇಳುವುದಿಲ್ಲ. ಕೈಯಲ್ಲಿನ ತಟ್ಟೆ, ಲೋಟ ಎಸೆಯುತ್ತಾರೆ. ಅಂತಹ ಮಕ್ಕಳ ಬುದ್ಧಿಮಟ್ಟ ಅರಿತು ಶಿಕ್ಷಣ ನೀಡುತ್ತೇವೆ. ಈ ಮಕ್ಕಳನ್ನು ನಿಭಾಯಿಸಬಲ್ಲ ಸಿಬ್ಬಂದಿಗಳನ್ನೇ ನೇಮಿಸಿಕೊಳ್ಳುತ್ತೇವೆ' ಎಂದು ವಿವರಿಸುತ್ತಾರೆ.

'ಸಂಸ್ಥೆಯು 2011ರಲ್ಲಿ ಸರ್ಕಾರದ ಮಾನ್ಯತೆ ಪಡೆದಿದೆ. ಆದರೆ, ಇಲ್ಲಿನ ಸಿಬ್ಬಂದಿಯಲ್ಲಿ ಒಬ್ಬರಿಗೆ ಮಾತ್ರ ಸರ್ಕಾರದ ವೇತನ ದೊರೆಯುತ್ತದೆ. ಉಳಿದ ಸಿಬ್ಬಂದಿಗಳಿಗೆ ಸಂಸ್ಥೆಯೇ ವೇತನ ನೀಡುತ್ತಿದೆ. ಪ್ರತಿ ಮಗುವಿನ ನಿರ್ವಹಣೆಗೆ ತಿಂಗಳಿಗೆ ₹5 ಸಾವಿರಕ್ಕೂ ಹೆಚ್ಚು ವೆಚ್ಚವಾಗುತ್ತದೆ. ಆದರೆ, ಸರ್ಕಾರ ಮಗುವಿಗೆ ಒಂದು ಸಾವಿರದಂತೆ 75 ಮಕ್ಕಳಿಗೆ ಮಾತ್ರ ₹75 ಸಾವಿರ ನೀಡುತ್ತಿದೆ. ಇದರಿಂದ, ನಿರ್ವಹಣೆ ಕಷ್ಟ. ದಾನಿಗಳು ನೀಡುವ ದೇಣಿಗೆಯೇ ನಮಗೆ ಆಧಾರ' ಎಂದು ಸ್ವರ್ಣ ಅಳಲು ತೋಡಿಕೊಳ್ಳುತ್ತಾರೆ.

ಬೆಂಗಳೂರಿನ ಮಾತೃಶ್ರೀ ಮನೋವಿಕಾಸ ಕೇಂದ್ರದಲ್ಲಿ ಆರೈಕೆಯಲ್ಲಿರುವ ಮಕ್ಕಳಿಗೆ ಫಿಸಿಯೋಥೆರಪಿ ಚಿಕಿತ್ಸೆ ನೀಡುತ್ತಿರುವುದು —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಹೊಸ ಬೆಳಕು

ಅಂಕಿ ಅಂಶ

112	ಶೇಷಾದ್ರಿಪುರದ ಮಾತೃಶ್ರೀ ಸಂಸ್ಥೆಯಲ್ಲಿನ ವಿಶೇಷ ಮಕ್ಕಳು
65	ನೆಲಮಂಗಲ ಘಟಕದಲ್ಲಿರುವ ವಿಶೇಷ ಮಕ್ಕಳು
24	ಮಕ್ಕಳ ಆರೈಕೆಗಾಗಿ ಇರುವ ಸಿಬ್ಬಂದಿ

ಸಂಸ್ಥೆಯ ಜೊತೆಗಿನ ಕೆಲಸದಲ್ಲಿ ತೃಪ್ತಿ ಇದೆ. ಸರ್ಕಾರ ಹೆಚ್ಚಿನ ಅನುದಾನ ನೀಡಿ ಇಂತಹ ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕು

ಗೋಪಾಲ್ ಬಿ. ಹೊಸೂರು
ನಿವೃತ್ತ ಐಪಿಎಸ್ ಅಧಿಕಾರಿ, ಟ್ರಸ್ಟ್‌ನ ಮುಖ್ಯ ಪೋಷಕ

ಕೋವಿಡ್‌ನಿಂದ ಸಂಸ್ಥೆಯ ನಿರ್ವಹಣೆ ಕಷ್ಟವಾಗಿದೆ. ಇರುವ ಸೌಲಭ್ಯದಲ್ಲೇ ಮಕ್ಕಳಿಗೆ ಸೂಕ್ತ ಚಿಕಿತ್ಸೆ, ಶಿಕ್ಷಣ ನೀಡುತ್ತಿದ್ದೇವೆ

ಎಸ್.ಬಸವರಾಜು, ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ

ಯುಜಿ ನೀಟ್: ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ವೈದ್ಯಕೀಯ, ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಮೊದಲ ಸುತ್ತಿನ ಸೀಟು ಹಂಚಿಕೆಯ ಪರಿಷ್ಕೃತ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಫೆ.3ರ ಬೆಳಿಗ್ಗೆ 9 ಗಂಟೆಯವರೆಗೆ ಆಯ್ಕೆಗಳನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಅಣಕು ಸೀಟು ಹಂಚಿಕೆಯ ಫಲಿತಾಂಶವನ್ನು ಅದೇ ದಿನ ಸಂಜೆ 5 ಗಂಟೆಯ ನಂತರ ಪ್ರಕಟಿಸಲಾಗುವುದು ಎಂದು ತಿಳಿಸಿದೆ.

ಫೆ.3ರಂದು ಸಂಜೆ 5ರಿಂದ ಫೆ.5ರ ಬೆಳಿಗ್ಗೆ 9ರವರೆಗೆ ಆಯ್ಕೆಗಳನ್ನು ಬದಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ನಂತರ, ಫೆ.5ರಂದು ಸಂಜೆ 7 ಗಂಟೆ ನಂತರ ಸೀಟು ಹಂಚಿಕೆಯ ಫಲಿತಾಂಶವನ್ನು ಪ್ರಕಟಿಸಲಾಗುವುದು ಎಂದು ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಶಶಿಕಲಾಗೆ ಜೈಲಿನಲ್ಲಿ ಐಷಾರಾಮಿ ವ್ಯವಸ್ಥೆ ಆರೋಪ

ಡಾ.ಅನಿತಾ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಯಾಗಿದ್ದ ವೇಳೆ ತಮಿಳುನಾಡಿನ ರಾಜಕಾರಣಿ ಶಶಿಕಲಾ ನಟರಾಜನ್‌ಗೆ ಐಷಾರಾಮಿ ವ್ಯವಸ್ಥೆ ಮತ್ತು ಆತಿಥ್ಯ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕಾರಾಗೃಹ ಅಕಾಡೆಮಿ ಉಪನಿರ್ದೇಶಕಿ ಡಾ. ಅನಿತಾ ವಿರುದ್ಧ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

'ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಉಪನಿರ್ದೇಶಕಿ ಡಾ. ಅನಿತಾ ಆರ್. ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಟಿ ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ತನಿಖೆಯ ಆದೇಶ ಪ್ರಶ್ನಿಸಿ ಅರ್ಜಿದಾರರು 2018ರಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮಾನ್ಯ ಮಾಡಿ, ಅರ್ಜಿದಾರರ ವಿರುದ್ಧದ ತನಿಖೆ ರದ್ದುಪಡಿಸಿದೆ. ಈ ಆದೇಶವನ್ನು ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿಲ್ಲ. ದೋಷಾರೋಪಣೆ ಪಟ್ಟಿಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಎಚ್.ಎನ್. ಸತ್ಯನಾರಾಯಣ ರಾವ್ ಅವರ ವಿರುದ್ಧ ಮಾತ್ರವೇ ಆರೋಪಗಳಿವೆ. ಅನಿತಾ ಅವರ ವಿರುದ್ಧ ಆರೋಪಗಳಿಲ್ಲ. ಹಾಗಿದ್ದೂ, ಅನಿತಾ ಅವರ ವಿರುದ್ಧವೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ 2021ರ ಡಿಸೆಂಬರ್ 30ರಂದು ಆದೇಶ ಹೊರಡಿಸಲಾಗಿದೆ. ಆದ್ದರಿಂದ, ಅರ್ಜಿದಾರರ ಕೋರಿಕೆಯಂತೆ ಮುಂದಿನ ವಿಚಾರಣೆವರೆಗೆ ವಿಚಾರಣೆಯ ಆದೇಶಕ್ಕೆ ತಡೆ ನೀಡಲಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.

ತಮ್ಮ ವಿರುದ್ಧ ತನಿಖೆಗೆ ಆದೇಶಿಸಿದ ಕ್ರಮವನ್ನು ಪ್ರಶ್ನಿಸಿ ಡಾ.ಅನಿತಾ ಕರ್ನಾಟಕ ಆಡಳಿತ ಮಂಡಳಿ (ಕೆಎಟಿ) ಮೊರೆ ಹೋಗಿದ್ದರು. ಕೆಎಟಿ ಈ ಅರ್ಜಿಯನ್ನು ಮಾನ್ಯ ಮಾಡಿತ್ತು. ಇತ್ತೀಚೆಗೆ ಆರೋಪಿಗಳ ವಿರುದ್ಧ ವಿಚಾರಣೆಗೆ ಅನುಮತಿ ನೀಡಿ ಆದೇಶ ಹೊರಡಿಸುವ ವೇಳೆ ಡಾ. ಅನಿತಾರ ಹೆಸರನ್ನೂ ಸೇರ್ಪಡೆ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಆದೇಶ ರದ್ದು ಕೋರಿ ಡಾ. ಅನಿತಾ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಕಾರಿಗೆ ಕ್ಯಾಂಟರ್ ಡಿಕ್ಕಿ: ವಿದ್ಯಾರ್ಥಿಗಳಿಬ್ಬರು ಸಾವು

ಬಿಳಿಕೆರೆ: ಮೈಸೂರು– ಹಾಸನ ರಸ್ತೆಯ ಹೊಸರಾಮನಹಳ್ಳಿ ಬಳಿ ಮಂಗಳವಾರ ರಾತ್ರಿ ಕಾರಿಗೆ ಕ್ಯಾಂಟರ್ ಡಿಕ್ಕಿ ಹೊಡೆದು, ಕೋಲಾರದ ಮೌಳೀಶ್ವರ ರೆಡ್ಡಿ (21) ಹಾಗೂ ಅರಸೀಕೆರೆಯ ತೇಜಸ್ (20) ಮೃತಪಟ್ಟಿದ್ದಾರೆ.

ಭದ್ರಾವತಿಯ ಸುಹಾನ್ ಹಾಗೂ ಬೆಂಗಳೂರಿನ ಶುಭಾಂಕರ್ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರಿನ ಡಿಆರ್‌ಎಂ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಹಾಸನದ ಮಲೆನಾಡು ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಾದ ಇವರು, ಪ್ರವಾಸಕ್ಕೆಂದು ಹಾಸನದಿಂದ ಮೈಸೂರಿಗೆ ಹೋಗುತ್ತಿದ್ದರು. ರಾತ್ರಿ 12.20ರ ಸುಮಾರಿಗೆ ಮೈಸೂರಿನಿಂದ ಹಾಸನದ ಕಡೆ ಬರುತ್ತಿದ್ದ ಕ್ಯಾಂಟರ್ ಡಿಕ್ಕಿಯಾಗಿದ್ದು, ಮೌಳೀಶ್ವರ ರೆಡ್ಡಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಡಿಆರ್‌ಎಂ ಆಸ್ಪತ್ರೆಗೆ ಬರುವ ವೇಳೆಗೆ ತೇಜಸ್ ಅಸುನೀಗಿದ್ದಾರೆ. ಕ್ಯಾಂಟರ್ ಚಾಲಕ ಪರಾರಿಯಾಗಿದ್ದು, ಆತನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಬಿಳಿಕೆರೆ ಠಾಣೆ ಎಸ್‌ಐ ಶಿವಮಂಜು ತಿಳಿಸಿದ್ದಾರೆ.

ಬಾಲಿವುಡ್ ನಟ ರಮೇಶ್ ದೇವ್ ನಿಧನ



ರಮೇಶ್ ದೇವ್

ಮುಂಬೈ: ಬಾಲಿವುಡ್ ನಟ ರಮೇಶ್ ದೇವ್ (93) ಬುಧವಾರ ನಿಧನರಾದರು.

ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಇಲ್ಲಿನ ಕೋಕಿಲಾಬೆನ್ ಧೀರೂಭಾಯ್ ಅಂಬಾನಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅವರಿಗೆ ಪತ್ನಿ ಸೀಮಾ ದೇವ್, ಇಬ್ಬರು ಪುತ್ರರು ಇದ್ದಾರೆ. ಪುತ್ರ ಅಜಿಂಕ್ಯಾ ಅವರು ಮರಾಠಿ ಚಿತ್ರ ನಟರಾಗಿದ್ದರೆ, ಮತ್ತೊಬ್ಬ ಪುತ್ರ ಅಭಿನಯ್ ಅವರು ನಿರ್ದೇಶಕರಾಗಿದ್ದಾರೆ.

ಅವರು 285 ಹಿಂದಿ ಹಾಗೂ 190 ಮರಾಠಿ ಚಿತ್ರಗಳಲ್ಲಿ ನಟಿಸಿದ್ದು, 20ಕ್ಕೂ ಅಧಿಕ ಮರಾಠಿ ನಾಟಕಗಳಲ್ಲಿ ಅಭಿನಯಿಸಿದ್ದರು. 'ಆಪ್ ಕಿ ಕಸಮ್', 'ಮೇರೆ ಅಪ್ನೆ' ಅವರಿಗೆ ಹೆಸರು ತಂದ ಕೊಟ್ಟ ಪ್ರಮುಖ ಚಿತ್ರಗಳಾಗಿವೆ.

ಅಮಿತಾಭ್ ಬಚ್ಚನ್, ರಾಜೇಶ್ ಖನ್ನಾ ಅವರ ಅಭಿನಯದ ಜನಪ್ರಿಯ ಚಿತ್ರ 'ಆನಂದ್'ನಲ್ಲಿ ರಮೇಶ್ ಅವರು ಡಾ.ಪ್ರಕಾಶ್ ಕುಲಕರ್ಣಿ ಪಾತ್ರದಲ್ಲಿ ನಟಿಸಿದ್ದರು.

ಹೈಕೋರ್ಟ್ ಕಚೇರಿಗೆ ಸ್ಥಳಾವಕಾಶ

ತಕ್ಷಣ ಕ್ರಮಕ್ಕೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ವಕೀಲರ ಪರಿಷತ್ ಕಾರ್ಯ ನಿರ್ವಹಿಸುತ್ತಿರುವ (ಹಳೆಯ ಚುನಾವಣಾ ಆಯೋಗದ ಕಟ್ಟಡ) ಹಾಗೂ ಕೆಜಿಐಡಿ ಬಿಲ್ಡಿಂಗ್‌ಗಳನ್ನು ಹೈಕೋರ್ಟ್‌ಗೆ ಒದಗಿಸುವ ನಿಟ್ಟಿನಲ್ಲಿ ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಸರ್ಕಾರಕ್ಕೆ, ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ವಕೀಲ ರಮೇಶ್ ಎಲ್. ನಾಯಕ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಹೈಕೋರ್ಟ್ ಕಚೇರಿಗೆ ಅಗತ್ಯ ಸ್ಥಳಾವಕಾಶ ಕಲ್ಪಿಸಲು ಎಲ್ಲ ಪ್ರಯತ್ನ ಮಾಡಲಾಗುತ್ತಿದೆ. ಈ ಸಂಬಂಧ ಅಡ್ವೊಕೇಟ್ ಜನರಲ್ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಜತೆ ಮಾತುಕತೆ ನಡೆಸಿದ್ದಾರೆ. ಅಗತ್ಯ ಜಾಗ ಒದಗಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪ್ರಯತ್ನಿಸುತ್ತಿದ್ದಾರೆ. ಅದಕ್ಕಾಗಿ ನಾಲ್ಕು ವಾರಗಳ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕೋವಿಡ್ ನಡುವೆಯೂ ನ್ಯಾಯಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ನೆಲಮಹಡಿಯಲ್ಲೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೈಕೋರ್ಟ್‌ಗೆ ಅವಶ್ಯವಿರುವ ಕಚೇರಿಯ ಜಾಗ ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇದೇ 14ರೊಳಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ, ಮುಂದಿನ ವಿಚಾರಣೆ ವೇಳೆಗೆ ನ್ಯಾಯಾಲಯವೇ ಕೆಜಿಐಡಿ ಹಾಗೂ ವಕೀಲರ ಪರಿಷತ್ ಕಟ್ಟಡ ಖಾಲಿ ಮಾಡಿಸಲು ಆದೇಶ ಹೊರಡಿಸಲಿದೆ' ಎಂದು ಎಚ್ಚರಿಸಿತು.

ಕೋರಿಕೆ ಏನು?: 'ಹೈಕೋರ್ಟ್ ನೆಲಮಹಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಚೇರಿಗಳಿಗೆ ಸೂಕ್ತ ಗಾಳಿ, ಬೆಳಕಿನ ವ್ಯವಸ್ಥೆ ಇಲ್ಲ. ಇದರಿಂದ ಕೆಲಸ ಮಾಡುವ ಸಿಬ್ಬಂದಿಯ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಆದ್ದರಿಂದ, ಇಲ್ಲಿರುವ ಕಚೇರಿಗಳನ್ನು ಸೂಕ್ತ ಜಾಗಕ್ಕೆ ಸ್ಥಳಾಂತರಿಸಬೇಕು' ಎಂಬುದು ಅರ್ಜಿದಾರರ ಕೋರಿಕೆ.

ನಿರ್ಬಂಧ ಉಲ್ಲಂಘಿಸಿ ರಥೋತ್ಸವ: ಪ್ರಕರಣ

ಕಲಬುರಗಿ: ಕೋವಿಡ್ ನಿಯಮ ಉಲ್ಲಂಘಿಸಿ ಜಾತ್ರೆ ನಡೆಸಿದ ಪ್ರಯುಕ್ತ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕೋರಿಸಿದ್ದೇಶ್ವರ ಸಂಸ್ಥಾನ ಮಠದ ಆಡಳಿತ ಮಂಡಳಿಯ ಹತ್ತು ಜನ ಸದಸ್ಯರ ವಿರುದ್ಧ ಪ್ರಕರಣದಾಖಲಿಸಿಕೊಳ್ಳಲಾಗಿದೆ.ಮಠದ ಇನ್ನುಳಿದ ಸದಸ್ಯರ ಮೇಲೆಯೂ ಕ್ರಮ ಜರುಗಿಸಲಾಗುವುದು ಎಂದು ವಾಡಿ ಪಿಎಸ್‌ಐ ಮಹಾಂತೇಶ ತಿಳಿಸಿದರು.

ಬಹುದಿನಗಳ ನಂತರ ಸುಗಮ ಕಲಾಪ

ನವದೆಹಲಿ (ಪಿಟಿಐ): ಪ್ರಸಕ್ತ ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ಬುಧವಾರದ ರಾಜ್ಯಸಭಾ ಕಲಾಪ ಯಾವುದೇ ಅಡಚಣೆಗಳಲ್ಲದೇ ನಡೆಯುವ ಮೂಲಕ ಗಮನ ಸೆಳೆಯಿತು ಎಂದು ಸಚಿವಾಲಯದ ಮೂಲಗಳು ಹೇಳಿವೆ.

ಕಳೆದ ವರ್ಷ ಮಾರ್ಚ್ 19ರಂದು ನಡೆದ ಬಜೆಟ್ ಅಧಿವೇಶನದ ಕಲಾಪವು ಇದೇ ರೀತಿ ಯಾವುದೇ ಅಡ್ಡಿಗಳಿಲ್ಲದೇ ನಡೆದಿತ್ತು. ಅದು ರಾಜ್ಯಸಭೆಯ 253ನೇ ಅಧಿವೇಶನವಾಗಿತ್ತು ಎಂದು ಇವೇ ಮೂಲಗಳು ಹೇಳಿವೆ.

2021ರ ಡಿಸೆಂಬರ್ 13, 2009ರ ಜೂನ್‌ನಲ್ಲಿ ಸಹ ಯಾವುದೇ ಅಡ್ಡಿಗಳಿರದ ಕಲಾಪಕ್ಕೆ ರಾಜ್ಯಸಭಾ ಅಧಿವೇಶನ ಸಾಕ್ಷಿಯಾಗಿತ್ತು ಎಂದೂ ಮೂಲಗಳು ಹೇಳಿವೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Poem-3 I am the Land

English

ಎಸ್ಸೆಸ್ಸೆಲ್ಸಿ

1. Summary of the poem 'I am the Land' OR In the poem 'I am the Land' the speaker is yet assertive.Substantiate in your own words. How does the poet Marina de Bellagenta express the feelings of the land?

The speaker 'Land' waits patiently that man owns the land. She tolerates the activities of the man such as, people digging the muddy holes, plough the land, plant trees, grow fruit and grass. Children dance and play on the land. Soldiers fight over the land with guns that they suffocating and make breathless. Fences are built on the land to divide the countries. The land bears everything without complaining and remains patient. At last she asserts that 'man cannot put a fence around the planet earth' which warns the strength of human is limited compare to the earth and remains as the ocean of patience and mercy.

2. "YOUCAN NOT PUT A FENCE, AROUND THE PLANET EARTH." Is this the tone of weakness or self assertion? Justify.

Certainly the land has the tone of self assertion. Whatever the harm and injustice done through many activities by human beings to the land can be borne because the land is always patient. We can buy and fence the limited land, but we cannot buy or fence round the whole earth. Man is nothing before the earth. So the poet makes us to realize, the strength of human is limited and no one can live without the earth.

3. Bring out the contrast between the speaker and reader in the poem 'I am the Land.'

The contrast between the reader and the speaker is like that of man and the earth. If man shouts, the speaker of the poem 'Land' is always patient and bears all that is done to it. When human beings buy the land, grow trees , children play and dance, in contrast the earth waits. While the man was making holes, fencing, and putting boundaries, the earth would stare.

4. "with muddy holes and car lot eyes I stare….."

a) Who does 'I' refer to? 'I' refers to the land.

b) What does the 'muddy hole' refer here? 'Muddy hole' refers here virtual holes in the land.

c) What does the word 'stare' mean here? Look at the things fixedly for a long time.

5. "You come with guns a chain link necklace chokes me now."

a) What is compared to 'fence' here? Here fence is compared to chain link necklace.

b) What does 'chokes' mean? 'Chokes' means suffocating breathlessly.

c) What is the figure of speech used for the underlined words? Personification.

Annappa Shetty MA,M.Ed,
SRP in English,Hassan



ವಿದ್ಯುದಾವೇಶಗಳು ಮತ್ತು ಕ್ಷೇತ್ರಗಳು

ಭೌತಶಾಸ್ತ್ರ

(………ಹಿಂದಿನ ಸಂಚಿಕೆಯಿಂದ)

$$F_1 = F_{12} + F_{13} + \dots + F_{1n} = \frac{1}{4\pi\varepsilon_0}\left[\frac{q_1 q_2}{r_{12}^2}\hat{r}_{12} + \frac{q_1 q_3}{r_{13}^2}\hat{r}_{13} + \dots + \frac{q_1 q_n}{r_{1n}^2}\hat{r}_{1n}\right] = \frac{q_1}{4\pi\varepsilon_0}\sum_{i=2}^{n}\frac{q_i}{r_{1i}^2}\hat{r}_{1i} \quad \dots\dots\dots(5)$$

ಸದರಿ ಮೊತ್ತವು ಸಹಜವಾಗಿ ಸಮಾಂತರ ಚತುರ್ಭುಜ ನಿಯಮದ ಸದಿಶ ಸಂಕಲನದಿಂದ ಉಂಟಾಗುವುದು. ಎಲ್ಲಾ ಸ್ಥಾಯಿ ವಿದ್ಯುತ್‌ಚ್ಛಕ್ತಿಯು ಕೂಲಂಬ್‌ನ ನಿಯಮ ಮತ್ತು ಅಧ್ಯಾರೋಪಣ ಸಿದ್ಧಾಂತದ ಪರಿಣಾಮವಾಗಿದೆ.

ವಿದ್ಯುತ್ ಕ್ಷೇತ್ರ

ನಿರ್ವಾತ ಪ್ರದೇಶದ O ಮೂಲಬಿಂದುವಿನಲ್ಲಿ ಒಂದು Q ಬಿಂದು ವಿದ್ಯುದಾವೇಶವನ್ನು ಇರಿಸಲಾಗಿದೆ ಎಂದು ಪರಿಗಣಿಸೋಣ. ಒಂದು ಪಕ್ಷ ಇನ್ನೊಂದು ಬಿಂದು ಆವೇಶ q ಅನ್ನು P ಬಿಂದುವಿನಲ್ಲಿ, $OP = \vec{r}$ ಆಗುವಂತೆ ಇರಿಸಿದರೆ, ಕೂಲಂಬನ ನಿಯಮದ ಪ್ರಕಾರ Q ವಿದ್ಯುದಾವೇಶವು qನ ಮೇಲೆ ಬಲವನ್ನು ಬೀರುತ್ತದೆ. ನಾವುಗಳು ಹೀಗೆ ಪ್ರಶ್ನಿಸಿಕೊಳ್ಳೋಣ: ಒಂದು ಪಕ್ಷ q ಆವೇಶವನ್ನು ತೆಗೆದರೆ, ಅದನ್ನು ಇರಿಸಿದ ಸುತ್ತಲಿನ ಪ್ರದೇಶದಲ್ಲಿ ಏನು ಇರುತ್ತದೆ? ಅಲ್ಲಿ ಏನು ಇರುವುದಿಲ್ಲವೇ? P ಬಿಂದುವಿನಲ್ಲಿ ಏನು ಇರುವುದಿಲ್ಲ ಎಂದಾದರೆ, ನಾವು P ಬಿಂದುವಿನಲ್ಲಿ ಇರಿಸಿದ q ವಿದ್ಯುದಾವೇಶದ ಮೇಲೆ ಬಲ ಹೇಗೆ ಉಂಟಾಗುತ್ತದೆ? ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸಲು ನಮ್ಮ ಹಿರಿಯ ವಿಜ್ಞಾನಿಗಳು **'ಕ್ಷೇತ್ರ'** ಎನ್ನುವ ಪರಿಕಲ್ಪನೆಯನ್ನು ಪರಿಚಯಿಸಿದರು. ಇದರ ಪ್ರಕಾರ Q ವಿದ್ಯುದಾವೇಶವು ತನ್ನ ಸುತ್ತಲು ವಿದ್ಯುತ್ ಕ್ಷೇತ್ರವನ್ನು ಉಂಟು ಮಾಡುತ್ತದೆ. ಯಾವಾಗ, ಇನ್ನೊಂದು q ವಿದ್ಯುದಾವೇಶವನ್ನು ಯಾವುದೇ P ಬಿಂದುವಿನಲ್ಲಿ ತಂದಾಗ ಅದರ ಮೇಲೆ ವಿದ್ಯುತ್ ಕ್ಷೇತ್ರವು ಪ್ರಭಾವ ಬೀರುತ್ತದೆ ಮತ್ತು ಬಲವನ್ನು ಉಂಟುಮಾಡುತ್ತದೆ. Q ವಿದ್ಯುದಾವೇಶದಿಂದ $\vec{r}$ ದೂರದ ಬಿಂದುವಿನಲ್ಲಿ ಉಂಟಾಗಬಹುದಾದ ವಿದ್ಯುತ್ ಕ್ಷೇತ್ರವು

$$E(r) = \frac{1}{4\pi\varepsilon_0}\frac{Q}{r^2}\hat{r} = \frac{1}{4\pi\varepsilon_0}\frac{Q}{r^2}\hat{r} \quad \dots\dots\dots(6)$$



ಆವೇಶ Q

ಇಲ್ಲಿ $\hat{r} = \vec{r}/r$ ಒಂದು ಘಟಕ ಸದಿಶವಾಗಿದ್ದು, ಮೂಲಬಿಂದುವಿನಿಂದ $\vec{r}$ ದೂರದ ಬಿಂದುವಿನವರೆಗೆ ಇದೆ. ಹಾಗಾಗಿ, ಸಮೀಕರಣವು (6) ಪ್ರತಿಯೊಂದು $\vec{r}$ ಸ್ಥಾನೀಯ ಸದಿಶ ಪರಿಮಾಣದ ವಿದ್ಯುತ್ ಕ್ಷೇತ್ರದ ಪರಿಮಾಣವನ್ನು ಸ್ಪಷ್ಟ ಪಡಿಸುತ್ತದೆ. ಪದ 'ಕ್ಷೇತ್ರ' ಎಂಬುದು, ಹಂಚಿಕೆಯಾಗಿರುವ ಕೆಲ ಪರಿಮಾಣಗಳು (ಸದಿಶ ಅಥವಾ ಅದಿಶ ಪರಿಮಾಣಗಳಾಗಿರಲಿ) ಯಾವ ರೀತಿ ಸ್ಥಾನದೊಂದಿಗೆ ಬದಲಾಗುತ್ತವೆ ಎಂಬುದರ ಮಹತ್ವವನ್ನು ತಿಳಿಸುತ್ತದೆ. ವಿದ್ಯುತ್ ಕ್ಷೇತ್ರದ ಇರುವಿಕೆಯುಲ್ಲಿಯೇ ವಿದ್ಯುದಾವೇಶದ ಪರಿಣಾಮವನ್ನು ಅಳವಡಿಸಲ್ಪಟ್ಟಿರುತ್ತದೆ. Q ವಿದ್ಯುತ್ ಆವೇಶದಿಂದ q ಆವೇಶದ ಮೇಲೆ ಬೀರುವ ಬಲ F ಅನ್ನು ನಾವು ಈ ರೀತಿಯಾಗಿ ಪಡೆಯಬಹುದು.

$$\mathbf{F} = \frac{1}{4\pi\varepsilon_0}\frac{Qq}{r^2}\hat{r} \quad \dots\dots\dots(7)$$



ಆವೇಶ - Q ನ ವಿದ್ಯುತ್ ಕ್ಷೇತ್ರ

q ವಿದ್ಯುದಾವೇಶವು ಕೂಡ ಸಮನಾದ ಮತ್ತು ವಿರುದ್ಧವಾದ ಬಲವನ್ನು Q ವಿದ್ಯುದಾವೇಶದ ಮೇಲೆ ಬೀರುತ್ತದೆ ಎಂಬುದನ್ನು ಗಮನಿಸಬೇಕು. Q ಮತ್ತು q ವಿದ್ಯುದಾವೇಶಗಳ ನಡುವಿನ ಸ್ಥಾಯಿ ವಿದ್ಯುತ್ ಬಲಗಳನ್ನು, q ವಿದ್ಯುದಾವೇಶ ಮತ್ತು Q ನ ವಿದ್ಯುತ್ ಕ್ಷೇತ್ರ ಇವುಗಳ ನಡುವಿನ ಪರಸ್ಪರ ಪರಿಣಾಮಗಳಾಗಿ ತೆಗೆದುಕೊಳ್ಳಬಹುದು ಮತ್ತು ಪ್ರತಿಕ್ರಮದಲ್ಲೂ ಇದು ಸರಿಯಾಗಿರುತ್ತದೆ.

ಒಂದು ಪಕ್ಷ q ಆವೇಶದ ಸ್ಥಾನವನ್ನು ಸದಿಶ ಪರಿಮಾಣ r ನಿಂದ ಗುರುತಿಸುವುದಾದರೆ, ಅದು ತನ್ನ ಸ್ಥಾನದಲ್ಲಿ ಅನುಭವಿಸುವ ಬಲವು q ಆವೇಶ ಮತ್ತು ವಿದ್ಯುತ್ ಕ್ಷೇತ್ರ ನ ಗುಣಲಬ್ಧಕ್ಕೆ ಸಮನಾಗಿರುತ್ತದೆ. ಅದು,

$$\vec{F}(\vec{r}) = q\,\vec{E}(\vec{r}) \quad \dots\dots\dots(8)$$

ಸಮೀಕರಣ (8)ರ ಪ್ರಕಾರ ವಿದ್ಯುತ್ ಕ್ಷೇತ್ರದ SI ಮೂಲಮಾನ N/C ಆಗಿರುತ್ತದೆ ಎಂದು ಸ್ಪಷ್ಟ ಪಡಿಸಬಹುದು.

ಇಲ್ಲಿ ಕೆಲ ಮಹತ್ವದ ಅಭಿಪ್ರಾಯಗಳನ್ನು ನೀಡಬಹುದು:

ಪಿಯುಸಿ

(i) ಒಂದು ಪಕ್ಷ q ಘಟಕ ಸದಿಶ ಪರಿಮಾಣವಾದರೆ, 'Q' ವಿದ್ಯುದಾವೇಶದಿಂದ ಉಂಟಾದ ವಿದ್ಯುತ್ ಕ್ಷೇತ್ರವು ಅದರಿಂದಲೇ ಉಂಟಾಗುವ ಬಲಕ್ಕೆ ಸಾಂಖ್ಯಿಕವಾಗಿ ಸಮನಾಗಿರುತ್ತದೆ ಎಂಬುದನ್ನು ನಾವು ಸಮೀಕರಣ (8) ರಿಂದ ನಿರ್ಣಯಿಸಬಹುದು. ಹಾಗಾಗಿ, Q ವಿದ್ಯುದಾವೇಶದಿಂದ ಒಂದು ಬಿಂದುವಿನಲ್ಲಿ ಉಂಟಾದ ವಿದ್ಯುತ್ ಕ್ಷೇತ್ರವು ಸ್ಥಳಾವಕಾಶದ ಅದೇ ಬಿಂದುವಿನಲ್ಲಿ ಇರಿಸಿಬಹುದಾದ ಧನಾತ್ಮಕ ಘಟಕ ವಿದ್ಯುದಾವೇಶವು ಅನುಭವಿಸುವ ಬಲಕ್ಕೆ ಸಮನಾಗಿರುತ್ತದೆ ಎಂದು ವ್ಯಾಖ್ಯಾನಿಸಬಹುದು. ವಿದ್ಯುತ್ ಕ್ಷೇತ್ರವನ್ನು ಉಂಟುಮಾಡುವ 'Q' ವಿದ್ಯುದಾವೇಶವನ್ನು ಆಕರ ವಿದ್ಯುದಾವೇಶ ಎಂದು ಮತ್ತು ಇದರ ಪರಿಣಾಮವನ್ನು ಪರೀಕ್ಷಿಸುವ ವಿದ್ಯುದಾವೇಶ qನ್ನು ಪರೀಕ್ಷಕ ವಿದ್ಯುದಾವೇಶ ಎಂದು ಕರೆಯುತ್ತಾರೆ. ಇಲ್ಲಿ 'ಆಕರ ವಿದ್ಯುದಾವೇಶ' Q ವು ಅದರ ಮೂಲ ಸ್ಥಾನದಲ್ಲೇ ಇರಬೇಕು ಎಂಬುದನ್ನು ಗಮನಿಸಬೇಕು. ಒಂದು ವೇಳೆ q ವಿದ್ಯುದಾವೇಶವನ್ನು Qನ ಸುತ್ತಲಿನ ಯಾವುದೇ ಬಿಂದುವಿಗೆ ತಂದಲ್ಲಿ Q ಸ್ವತಃ q ನಿಂದ ಉಂಟಾಗುವ ವಿದ್ಯುತ್ ಬಲವನ್ನು ಅನುಭವಿಸುತ್ತದೆ ಮತ್ತು ಅದು ಚಲಿಸಲು ಮುಂದಾಗುತ್ತದೆ. ಈ ತೊಂದರೆಯಿಂದ ಹೊರಬರಲು q ನ ಪರಿಮಾಣವನ್ನು ನಗಣ್ಯವಾಗುವಷ್ಟು ಚಿಕ್ಕದಾಗಿಸಬೇಕು. ಬಲ F ವು ನಗಣ್ಯವಾಗುವಷ್ಟು ಚಿಕ್ಕದಾಗುತ್ತದೆ. ಆದರೆ, F/q ನ ಅನುಪಾತವು ಪರಿಮಿತವಾಗಿರುತ್ತದೆ ಮತ್ತು ಹಾಗೆಯೇ, ವಿದ್ಯುತ್ ಕ್ಷೇತ್ರವನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಗಣಿತಶಾಸ್ತ್ರದ 'ಡಿಟರ್ಮಿನೆಂಟ್ಸ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A' GRADE

ಜ್ಞಾನಭಾರತಿ ಆವರಣ, ಬೆಂಗಳೂರು – 560056.

ಸಂಖ್ಯೆ: ಎಸಿಎ.4/ಸ್ನಾ.ಪ./2021–2022 ದಿನಾಂಕ: 02.02.2022

ಪ್ರವೇಶಾತಿ ಅಧಿಸೂಚನೆ

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ: 02.02.2022

ಬೆಂಗಳೂರು ವಿಶ್ವವಿದ್ಯಾಲಯದ ಈ ಕೆಳಕಂಡ ವಿಭಾಗಗಳಲ್ಲಿ ಖಾಲಿ ಇರುವ ಸೀಟ್‌ಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು **ದಿನಾಂಕ: 07.02.2022** ರವರೆಗೆ ಸಲ್ಲಿಸಬಹುದಾಗಿದೆ. **(Website: www.bangaloreuniversity.ac.in)**

ಕಲಾ ನಿಕಾಯ: ಸ್ವಂತ ಹಣದ ಕೋರ್ಸ್: ಎಂ.ಎ.: ಮಾಧ್ಯಮ ಅಧ್ಯಯನ ಮತ್ತು ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು.

ವಿಜ್ಞಾನ ನಿಕಾಯ: ಸ್ವಂತ ಹಣದ ಕೋರ್ಸ್: ಎಂ.ಎಸ್ಸಿ.: ಫಿಲ್ಮ್ ಮೇಕಿಂಗ್, ಗ್ರಾಫಿಕ್ಸ್ ಮತ್ತು ಅನಿಮೇಷನ್, ನೈಸರ್ಗಿಕ ವಿಪತ್ತು ನಿರ್ವಹಣೆ ಮತ್ತು ಘನತ್ಯಾಜ್ಯ ನಿರ್ವಹಣೆ.

ವಾಣಿಜ್ಯ ನಿಕಾಯ: ಸ್ವಂತ ಹಣದ ಕೋರ್ಸ್: ಎಂ.ಕಾಂ (ಎಫ್.ಎ), ಎಂ.ಕಾಂ (ಐ.ಬಿ) ಮತ್ತು ಎಂ.ಟಿ.ಟಿ.ಎಂ

ಸಹಿ/–, ಕುಲಸಚಿವರು

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ. 16/I, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು - 560 052.

ದೂ.: 080-22200660, ಫ್ಯಾಕ್ಸ್:080-22266299, 22096688

ಇ-ಮೇಲ್: admnkfcsc123@yahoo.com / info@kfcsc.com

ಸಂಖ್ಯೆ: KFCSC/LEGAL/DIS/10/2021-22 ದಿನಾಂಕ: 03.02.2022

ಪ್ರಕಟಣೆ

ಶ್ರೀ. ಬಿ.ಎಸ್ ರಾಜಶೇಖರ್, ಕಿರಿಯ ಸಹಾಯಕರು, ಇವರು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಮಂಡ್ಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, **ದಿನಾಂಕ: 21.11.2019 ರಿಂದ** ಅನಧಿಕೃತ ಗೈರು ಹಾಜರಾಗಿರುತ್ತಾರೆ. ಈ ಬಗ್ಗೆ ಸದರಿಯವರ ಕುಟುಂಬದವರು ಅವರು ಕಾಣೆಯಾಗಿರುವ ಬಗ್ಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಈ ವರೆಗೆ ಪತ್ತೆಯಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಈ ದಿನದಿಂದ 15 ದಿನಗಳ ಒಳಗಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದೆ. ಇಲ್ಲವಾದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಈ ಮೂಲಕ ತಿಳಿಸಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(57ಇ):2021–22:ಜೆಇ–2 ದಿನಾಂಕ: 01.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಲೆಕ್ಕಶೀರ್ಷಿಕೆ: 8443–ಠೇವಣಿ ಕೊಡುಗೆಯಡಿ ಕಾಮಗಾರಿ ಇಂಡೆಂಟ್ ನಂ. 145223 (ಅಂ.ಮೊತ್ತ ರೂ. 200.00 ಲಕ್ಷ) ಮತ್ತು **ಲೆಕ್ಕಶೀರ್ಷಿಕೆ :** 5054 ಟಿ.ಎಸ್.ಪಿ ಕಾಮಗಾರಿ ಇಂಡೆಂಟ್ 147011 (ಅಂ.ಮೊತ್ತ ರೂ.165.48 ಲಕ್ಷ), **ಲೆಕ್ಕಶೀರ್ಷಿಕೆ :** 3054 ರಾಜ್ಯ ಹೆದ್ದಾರಿ ಸುಧಾರಣೆ ರಡಿ ಇಂಡೆಂಟ್ 146242 (ಅಂ.ಮೊತ್ತ ರೂ.150.00 ಲಕ್ಷ), ಈ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಟೆಂಡರನ್ನು ಸಲ್ಲಿಸುವ **ಕೊನೆಯ ದಿನಾಂಕ: 14.02.2022** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

DIPR/MNG/MCA/928/21-22 dt.02.02.2022

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

‘ಮೋದಿ ರೂಪದಲ್ಲಿ ವಿವೇಕಾನಂದರ ಪುನರ್ಜನ್ಮ’

ಹೊಸಪೇಟೆ (ವಿಜಯನಗರ): ‘ಪ್ರಧಾನಿ ನರೇಂದ್ರ ಮೋದಿಯವರ ರೂಪದಲ್ಲಿ ಸ್ವಾಮಿ ವಿವೇಕಾನಂದರ ಪುನರ್ಜನ್ಮವಾಗಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ‘ಸ್ವಾಮಿ ವಿವೇಕಾನಂದರು ದೇಶದ ಸಂಸ್ಕೃತಿ, ಪರಂಪರೆಯನ್ನು ವಿಶ್ವಕ್ಕೆ ಪರಿಚಯಿಸಿದ್ದರು. ಅದೇ ಕೆಲಸ ಮೋದಿಯವರು ಮಾಡುತ್ತಿದ್ದಾರೆ. ಭಾರತಕ್ಕೆ ವಿಶ್ವಗುರುವಿನ ಸ್ಥಾನ ತಂದುಕೊಟ್ಟಿದ್ದಾರೆ’ ಎಂದು ಅವರು ಹೇಳಿದರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ತಾಂತ್ರಿಕ ನಿರ್ದೇಶಕರವರ ಕಚೇರಿ, ಜಾವಾ ಫ್ಯಾಕ್ಟರಿ ರಸ್ತೆ, ಹೈವೇ ಸರ್ಕಲ್ ಹತ್ತಿರ, ಬನ್ನಿಮಂಟಪ, ಮೈಸೂರು–570001.

ದೂರವಾಣಿ: 0821–2491424, ಇಮೇಲ್: ksdbtd1@gmail.com

ವೆಬ್‌ಸೈಟ್ : www.karnataka.gov.in/ksdb

ಸಂಖ್ಯೆ: ಕಕೊಅಮ/ತಾನಿ–ಎಂಸಿ/ಪಿಎಂಎವೈ–ಹೆಚ್‌ಎಫ್‌ಎ/ಐಎಫ್‌ಟಿ–03/2021–22/438 ದಿನಾಂಕ: 01.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ – 3ನೇ ಕರೆ
ದ್ವಿಲಕೋಟೆ ಪದ್ಧತಿ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ತಾಂತ್ರಿಕ ನಿರ್ದೇಶಕರು, ಮೈಸೂರು ವೃತ್ತ, ಮೈಸೂರು ಇವರು ಆಯುಕ್ತರು, ಕಕೊಅಮ, ಬೆಂಗಳೂರು ರವರ ಪರವಾಗಿ ಪಿಎಂಎವೈ (ನಗರ) ಯೋಜನೆಯಡಿ **ಮಂಗಳೂರು ನಗರದಲ್ಲಿನ ಕಣ್ಣೂರು ಗ್ರಾಮದ ಸರ್ವೆ ನಂ. 17/1ರಲ್ಲಿ ಫಾಸ್ಟ್ ಟ್ರ್ಯಾಕ್ ಇನ್ನೋವೇಟಿವ್ ಟೆಕ್ನಾಲಜಿ ಬಳಕೆಯೊಂದಿಗೆ ಮೂಲಭೂತ ಸೌಲಭ್ಯ ಒಳಗೊಂಡಂತೆ 500 (ಜಿ+3) ಮನೆಗಳ ನಿರ್ಮಾಣದ ಕಾಮಗಾರಿಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಲಮ್‌ಸಂ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. **(ಕೆಎಸ್‌ಡಿಬಿ/2021–22/ಬಿಡಿ/ವರ್ಕ್_ಇಂಡೆಂಟ್3162/3ನೇ ಕರೆ).** ಕಾಮಗಾರಿಯ ಅಂದಾಜು ಮೊತ್ತ **ರೂ. 2806.14 ಲಕ್ಷಗಳು.** ಇಎಂಡಿ: **ರೂ. 28.06 ಲಕ್ಷಗಳು.** ಟೆಂಡರ್ ಪ್ರಕಟಣೆ, ವೇಳಾಪಟ್ಟಿ ಹಾಗೂ ಇತರೆ ವಿವರಗಳು ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ಲಭ್ಯವಿರುತ್ತದೆ.

1	ಪೂರ್ವ ಬಿಡ್ ಸಭೆಯ ದಿನಾಂಕ	07.02.2022ರ ಬೆಳಿಗ್ಗೆ 11.00 ಗಂಟೆಗೆ
2	ಇ–ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	11.02.2022ರ ಸಂಜೆ 5.30 ಗಂಟೆಯವರೆಗೆ.
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	14.02.2022ರ ಬೆಳಿಗ್ಗೆ 11.00 ಗಂಟೆಗೆ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ಅರ್ಹ ಬಿಡ್‌ದಾರರಿಗೆ ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು
5	ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತೆರೆಯುವ ವಿಳಾಸ	ತಾಂತ್ರಿಕ ನಿರ್ದೇಶಕರವರ ಕಚೇರಿ, ಕಕೊಅಮ ಮೈಸೂರು ವೃತ್ತ, ಹೈವೇ ಸರ್ಕಲ್ ಹತ್ತಿರ, ಜಾವಾ ಫ್ಯಾಕ್ಟರಿ ರಸ್ತೆ, ಬನ್ನಿಮಂಟಪ, ಮೈಸೂರು–570001.

ಸಹಿ/– ತಾಂತ್ರಿಕ ನಿರ್ದೇಶಕರು ಕಕೊಅಮ, ಮೈಸೂರು.

DIPR/DDU/YC/3170/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕೃಷ್ಣರಾಜ ಸಾಗರ ಆಧುನೀಕರಣ ಮತ್ತು ಮಧ್ಯಮ ನೀರಾವರಿ ಯೋಜನಾ ವಿಭಾಗ, ಮಳವಳ್ಳಿ. ಜಿಲ್ಲೆ: ಮಂಡ್ಯ ಪಿನ್‌ಕೋಡ್–571430

ಫೋನ್ ನಂ: 08231 – 200217

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 06/2021–22 ದಿನಾಂಕ:31.01.2022

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 06/2021–22 ದಿನಾಂಕ 31.01.2022 ರಲ್ಲಿ ಒಟ್ಟು 31 ಕಾಮಗಾರಿ (ಅಂದಾಜಿನ ಕನಿಷ್ಠ ಮೊತ್ತ 14.20 & ಗರಿಷ್ಠ ಮೊತ್ತ 60.00 ಲಕ್ಷ) ಗಳಿಗೆ ಕೆ.ಡಬ್ಲ್ಯೂ–1, ಕೆ.ಡಬ್ಲ್ಯೂ–2 & ಕೆ.ಡಬ್ಲ್ಯೂ–3 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕವನ್ನು ಹಾಗೂ ಇತರೆ ವಿವರಗಳನ್ನು ಇ–ಪೋರ್ಟಲ್ www.eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ಕೆಆರ್‌ಎಸ್‌ಎಂ ಅಂಡ್ ಎಂಐಪಿ ವಿಭಾಗ, ಮಳವಳ್ಳಿ.

ವಾಸಾಸಂಇ/ಸನಿ–ಮಂಡ್ಯ/ಎಂಸಿಎ/572/2021–22

Office of the Assistant Director,
Department of Youth Empowerment and Sports,

Bangalore Urban District, Sri Kanteerava Sports Complex, Bangalore-560001. Ph : 080-22239711 Mob : 9902588176

Email : adyssbangaloreurban12@gmail.com

No. AD/DYES/BU/25/RSC/2021-22 Dated : 02-02-2022

SHORT TERM TENDER NOTIFICATION
(E-procurement portal)

Tenders are invited for supply of Sports Materials.

Particulars : Supplying of sports materials. **Tender amount in lakhs :** Rs.15.00 **EMD :** Rs.37,500/-

The Tender shall be submitted through e-procurement portal (http://eproc.karnataka.gov.in). Vendors need to register in the e-procurement portal to submit their bids online. The tender document can be viewed free of cost from the e-procurement portal.

(a) Last date and time for submission of Tender Documents through e-procurement portal : **14-02-2022 till 5.00 PM**

(b) Opening of Technical offers : **15-02-2022 at 5.00 PM**

(c) Opening of Commercial offers : **18-02-2022 at 11.00 AM**

Additional information may be obtained during office hours at the above mentioned address.

Sd/-
Sd/- Assistant Director,
Youth Empowerment and Sports,
Bangalore Urban District
(Tender Inviting Authority)

DIPR/DDU/Sreshta/3167/2021-22

COVID-19. DO NOT PANIC, BE AWARE
Wear Mask | 6 Feet Follow Physical Distancing | Maintain Hand Hygiene

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288

ಸಂಖ್ಯೆ: ಕವಶಿಸಸ/ಸಕಾಇ/ಟೆಂಡರ್–29/2020–21 ದಿನಾಂಕ: 02.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಿರ್ವಹಿಸುತ್ತಿರುವ **ಬೆಂಗಳೂರು ವಿಭಾಗದ ಪರಿಶಿಷ್ಟ ಜಾತಿಯ 90 ವಸತಿ ಶಾಲೆಗಳು, ಮೈಸೂರು ವಿಭಾಗದ 67 ವಸತಿ ಶಾಲೆಗಳು, ಕಲುಬುರಗಿ ವಿಭಾಗದ 69 ವಸತಿ ಶಾಲೆಗಳು, ಬೆಳಗಾವಿ ವಿಭಾಗದ 71 ಶಾಲೆಗಳು ಹಾಗೂ ಪರಿಶಿಷ್ಟ ವರ್ಗದ 58 ವಸತಿ ಶಾಲೆಗಳ** ಆವರಣದಲ್ಲಿ ತೆರೆದ ವಿದ್ಯುತ್ ತಂತಿಗಳಿಗೆ **Providing LT Polyolefin heat shrinkable tube insulation covered Rabbit ACSR Conductor in place of the existing bare Rabbit conductor duly releasing the same** ವಿದ್ಯುತ್ ಕಾಮಗಾರಿಗೆ (ಕ್ರಮವಾಗಿ ಇಂಡೆಂಟ್ ಸಂಖ್ಯೆ: **2978, 2979, 2980, 2981, 2969**) ಇ–ಪೋರ್ಟಲ್ ಮುಖಾಂತರ ದಿನಾಂಕ: **02.02.2022** ರಂದು ಟೆಂಡರ್‌ಗಳನ್ನು ಕರೆಯಲಾಗಿದ್ದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **16.02.2022** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

DIPR/DDU/YC/3179/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ, ಯಲಹಂಕ ವಿಭಾಗ, ಎನ್.ಆರ್. ಚೌಕ, ಬೆಂಗಳೂರು–560 002.

ಸಂಖ್ಯೆ:ಕಾಪಾಅ/ರಮೂ/ಯಲ/ಟೆಂಡರ್/07/2021-22 ದಿನಾಂಕ: 02-02-2022

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ ಸೂಚನೆ (ಐಎಫ್‌ಟಿ) ಕೆಡಬ್ಲ್ಯೂ-4
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಯಲಹಂಕ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳಕಂಡ ಕಾಮಗಾರಿಗಳಿಗೆ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)	ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ)
1.	ಜಕ್ಕೂರು ಫ್ಲೈಯಿಂಗ್ ತರಬೇತಿ ಶಾಲೆಯಿಂದ ರಸ್ತೆ ಮೂಲಸೌಕರ್ಯ, ಯಲಹಂಕ ವಿಭಾಗದ ಯಲಹಂಕ ವಲಯ ಗಡಿ ಪ್ರದೇಶದವರೆಗೆ ಜಕ್ಕೂರು ಮುಖ್ಯರಸ್ತೆಯನ್ನು ಭೂ ಸ್ವಾಧೀನದೊಂದಿಗೆ ಹಾಗೂ ಬಿಡಬ್ಲ್ಯೂಎಸ್‌ಎಸ್‌ಬಿ ರಸ್ತೆಯ ಕಟ್ಟಿಂಗ್‌ನ ಪುನರ್ ನಿರ್ಮಾಣ ಮತ್ತು ಡಾಂಬರೀಕರಣ ಸೇರಿದಂತೆ ಅಗಲಗೊಳಿಸುವುದು.	291.24	4.38

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 05-02-2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 11-02-2022ರ ಸಂಜೆ 3:00 ಗಂಟೆಯವರೆಗೆ. 3) ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ ಇಲ್ಲಿ ದಿನಾಂಕ: 11-02-2022 ರಂದು ಸಂಜೆ 4:00 ಗಂಟೆಗೆ ನಡೆಸಲಾಗುವುದು. 4) ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 19-02-2022ರ ಸಂಜೆ 5:30 ಗಂಟೆಯೊಳಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 21-02-2022ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಯಲಹಂಕ ವಿಭಾಗ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009

ದೂ: 080–22220436, ಇ–ಮೇಲ್: aigrcomp@karnataka.gov.in

ಸಂಖ್ಯೆ: ಕಾಂಪ್–108/2020–21 ದಿನಾಂಕ: 02.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಬಿಲ್ಡ್ ಒನ್ ಮತ್ತು ಆಪರೇಟ್ **(BOO Model)** ಮಾದರಿಯಲ್ಲಿ ಐ.ಟಿ. ಉಪಕರಣಗಳ ಪೂರೈಕೆ, ಅಳವಡಿಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡಲು ಮತ್ತು ಅಗತ್ಯವಿರುವ ಮಾನವ ಸಂಪನ್ಮೂಲವನ್ನು ನೀಡಲು ಆಸಕ್ತಿ ಹೊಂದಿರುವ ಏಜೆನ್ಸಿಗಳು ಟೆಂಡರುಗಳನ್ನು ಸಲ್ಲಿಸಲು ಈ ಮೂಲಕ ಆಹ್ವಾನ ನೀಡಲಾಗಿದೆ. ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಟೆಂಡರ್ ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: **04–04–2022ರ ಸಂಜೆ 5.30 ಗಂಟೆಯವರೆವಿಗೂ** ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ **ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ)** ಇವರನ್ನು ಸಂಪರ್ಕಿಸಿ.

ಸಹಿ/– ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು

DIPR/DDU/YC/3172/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಯೋಜನೆ ಕೇಂದ್ರ–03 ವಿಭಾಗ, ಬಿಬಿಎಂಪಿ ಕೇಂದ್ರ ಕಛೇರಿ, ಆನೆಕ್ಸ್–02 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು–560 002.

ಸಂ: ಕಾಪಾಅ/ಯೋಕೇಂ03/ಟೆಂಡರ್/01/2021–22 ದಿನಾಂಕ: 02.02.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜೆಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ಕೇಂದ್ರ–03 ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಕೋಟಿಗಳಲ್ಲಿ)	ಇಎಂಡಿ (ರೂ. ಕೋಟಿಗಳಲ್ಲಿ)
1	ಬೆಂಗಳೂರಿನ ಬಸವೇಶ್ವರನಗರ ಜಂಕ್ಷನ್‌ನಲ್ಲಿ ಹೆಚ್ಚುವರಿ ಫ್ಲೈ ಓವರ್ ನಿರ್ಮಾಣ ಕಾಮಗಾರಿ, ಉಳಿದ ಕಾಮಗಾರಿಗಳು ಹಾಗೂ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಉದ್ದಕ್ಕೂ 72ನೇ ಅಡ್ಡರಸ್ತೆಯ ಫ್ಲೈ ಓವರ್‌ಗೆ ಸಂಪರ್ಕಿಸುವ ಕಾಮಗಾರಿ.	15.20	0.15

1)ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ **ದಿನಾಂಕ : 02.02.2022ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2)ಪ್ರಿ–ಬಿಡ್ ಮೀಟಿಂಗ್: **07.02.2022ರ ಮಧ್ಯಾಹ್ನ 1.30 ಗಂಟೆಗೆ.** 3) ಟೆಂಡರ್ ಬಗೆಗಿನ ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **05.02.2022ರ ಸಂಜೆ 5.30 ಗಂಟೆಯವರೆಗೆ.** 4) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **11.02.2022 ರ ಸಂಜೆ 5.30 ಗಂಟೆಯವರೆಗೆ** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **14.02.2022ರ 4.30 ಗಂಟೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22441076 ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, (ಯೋಜನೆ– ಕೇಂದ್ರ–03) ವಿಭಾಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–5/ಬೇ.ಸ.ಪ್ರ/2021–22 ದಿನಾಂಕ: 01–02–2022

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ, ಕೋಲಾರ ಜಿಲ್ಲೆ, ಕೆ.ಜಿ.ಎಫ್. ತಾಲ್ಲೂಕು, ರಾಬರ್ಟ್‌ಸನ್‌ಪೇಟೆ ಹೋಬಳಿ, ಗಟ್ಟರ್ಯಾಗಡಹಳ್ಳಿ ಗ್ರಾಮದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸುಮಾರು 150 ಎಕರೆ ಜಮೀನಿನಲ್ಲಿ 50:50ರ ಅನುಪಾತದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಸದರಿ ಸಂಯುಕ್ತ ವಸತಿ ಯೋಜನೆಯಲ್ಲಿ ವಿವಿಧ ವರ್ಗದ ನಿವೇಶನ ಹೊಂದಲು ಬಯಸುವ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28–02–2022 ಆಗಿರುತ್ತದೆ.

ಅರ್ಜಿ ಮತ್ತು ಆರಂಭಿಕ ಠೇವಣಿ ಹಣ e-payment ಮೂಲಕ ಪಾವತಿಸಲು ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಚಿಕ್ಕಬಳ್ಳಾಪುರ ಮೊಬೈಲ್ ನಂ. 9902509877, 9980856902 ಅಥವಾ ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾ.ಸೇ)/ ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಕಛೇರಿ ದೂರವಾಣಿ ಸಂಖ್ಯೆ: 080–22273511 ext. 335/307 ಗೆ ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/DDU/Zen/R.O:3163/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಕೆಳಗೆ ಸೂಚಿಸಿರುವ ಐಟಂವಾರು ಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 31.01.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಈ ಕೆಳಗಿನಂತೆ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಸಂಜೆ 4:00ರ ವರೆಗೆ ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 76.70 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 1.53 ಲಕ್ಷಗಳಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಕೊನೆಯ ದಿನಾಂಕ
1.	17/2021–22	86	ಕರೆ–2	3ನೇ ದರ್ಜೆ & ಮೇಲ್ಪಟ್ಟು	15.02.2022

ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

PUBLIC NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_LPT1212_TATAMOTORS Reg No –KA41D1543
2) CB_Ashok Leyland Dost GOODS Reg No – KA51AE1627
3) CB_M & M JEETO Reg No – KA439329
4) CB_JEETO X-7-16 Reg No – KA11B6144
5) CB_BOLERO MAXI TRUCK Reg No – KA11B6546
6) CB_TATA_ACE_GOLD Reg No – KA11B5492
7) CB_BACKHOE_LOADER_JCB_3DX_JCB Engine No – H00236583 Chassis No - RAJ3DXSST02840215

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. From 03.02.2022

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact
Kotak Mahindra Bank Ltd.
Contact No / 080 - 61564249

PUBLIC NOTICE

This is to inform public in general that Kotak Mahindra Bank Ltd has organized an auction in below mention respect of vehicles.

1. CB_VE_11_14_FULLY_BUILT YOM – 2019 REG No – KA53D9643 Min Reserve Price –919000 /-
2. CB_HYDRAULIC_EXCAVATOR_EX_200 YOM – 2017 SI No – S20023702 Min Reserve Price – 1652000/-
3. CB_PC300_Exc, YOM – 2017 SL No – N300369 Min Reserve Price – 2511000/-
4. CB_VE_10_75_FULLY_BUILT_PASSENGER YOM – 2019 Reg No – KA547792 Min Reserve Price –101000/-
5. TATA - CB_TATA Magic YOM – 2018 Reg No – KA17D3468 Min Reserve Price –269000/-
6. CB_FORCE TEMPO TRAVELLER Fully Built YOM – 2019 Reg No – ka17d7292 Min Reserve Price –520000/-
7. CB_SML S7 Bus YOM – 2019 Reg No – KA17D7293 Min Reserve Price –801000/-
8. CB_MAHINDRA BLAZO25 FBT TIPPER YOM – 2019 Reg No – KA22D2540 Min Reserve Price –1729000/-
9. CB_VE_10_75_CAB_CHASSIS_TANKER YOM – 2019 Reg No – KA03AH5653 Min Reserve Price –674000/-
10. CB_JS205 YOM – 2019 SI No – NONREGPUNJD20BVJ2752290 Min Reserve Price –2735000/-
11. CB_AL U TIPPERS U2518 CAB CHASSIS TIPPER YOM – 2019 SI No – NRMB1HTLHD9JPXF7656 Min Reserve Price –1832000/-

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. From 03.02.2022

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact
Kotak Mahindra Bank Ltd.
Contact No / 080 - 61564249

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.

ದೂರವಾಣಿ:08426–281027.ಇಮೇಲ್:dam_division@rediffmail.com

ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2021–22/3285–86 ದಿನಾಂಕ:01.02.2022

ಟೆಂಡರ್ ಪ್ರಕಟಣೆ (2ನೇ ಕರೆ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Indent No. 21730 for Rs. 1305.43 Lakhs (Call-2). (2) Indent No. 21735 for Rs. 1139.43 Lakhs (Call-2)** ಶೇಕಡಾವಾರು ದ್ವಿಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–Cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 02.02.2022 ರಿಂದ 17.03.2022 ಸಾಯಂಕಾಲ 5.00 ಘಂಟೆಯವರೆಗೆ.** 2) Last date & time for tender **quarries/ clarifications ದಿನಾಂಕ: 11.02.2022 ರಂದು ಮಧ್ಯಾಹ್ನ 4.00 ಗಂಟೆಯವರೆಗೆ. 3) ಪ್ರೀ ಬಿಡ್ ಮೀಟಿಂಗ್** ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಕಚೇರಿಯಲ್ಲಿ. (1) (ಇಂಡೆಂಟ್ ನಂ. 21735), (2) (ಇಂಡೆಂಟ್ ನಂ. 21730) **(1) ದಿನಾಂಕ: 17.02.2022 ರಂದು ಬೆಳಿಗ್ಗೆ 11–00 ಗಂಟೆಗೆ. (2) ದಿನಾಂಕ: 17.02.2022 ಮಧ್ಯಾಹ್ನ 4–00 ಗಂಟೆಗೆ 4)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:21.03.2022 ಮುಂಜಾನೆ ಘಂಟೆಗೆ. 5)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 28.03.2022** ಮುಂಜಾನೆ 11.00 ಘಂಟೆಗೆ. ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/508/ಎಂಸಿಎ/2021–22

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂಖ್ಯೆ: ಕೆಆರ್‌ಐಡಿಎಲ್/ ಸಿಂಗಸಂದ್ರ/ವಾಣಿಜ್ಯ ಸಂಕೀರ್ಣ/ಟಿಎನ್‌ಡಿ/2021–22 ದಿನಾಂಕ: 01.02.2022

ಟೆಂಡರ್ ಪ್ರಕಟಣೆ (2ನೇ ಕರೆ)

ಸಿಂಗಸಂದ್ರ, ಸರ್ವೆ ಸಂಖ್ಯೆ. 125 (ಹಳೆ ಸಂಖ್ಯೆ. 42) ಬೇಗೂರು ಹೋಬಳಿ, ಬೆಂಗಳೂರು ಇಲ್ಲಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ಗಾಗಿ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಕೆಆರ್‌ಐಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಮುಖ್ಯ ಅಭಿಯಂತರರು (ಬಿಬಿಎಂಪಿ), ಕೆಆರ್‌ಐಡಿಎಲ್ ಇವರು ಹೆಸರಾಂತ ಮತ್ತು ಅನುಭವವುಳ್ಳ ಗುತ್ತಿಗೆದಾರರು/ ಕಂಪನಿಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರುಗಳನ್ನು ವಿದ್ಯುನ್ಮಾನವಾಗಿ (ಆನ್‌ಲೈನ್) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ದಿನಾಂಕ ಮತ್ತು ಸಮಯದ ಒಳಗೆ ಸಲ್ಲಿಸತಕ್ಕದ್ದು.

ಅಂದಾಜು ವೆಚ್ಚ: ರೂ.8470.00 ಲಕ್ಷ.

ಸಂಸ್ಥೆಯು ರೂ. 85.00 ಲಕ್ಷ ಮೊತ್ತದ ಇಎಂಡಿ ಪಾವತಿ ಮಾಡಬೇಕು.

ವಿಚಾರಣೆಯ ಕಡೆಯ ದಿನಾಂಕ ಮತ್ತು ಸಮಯ: **02.03.2022 ರಂದು ಮಧ್ಯಾಹ್ನ 2.00 ಗಂಟೆ ವರೆಗೆ.** ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **02.03.2022 ರಂದು ಸಂಜೆ 4.00 ಗಂಟೆ ವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ :**04.03.2022 ರಂದು ಸಂಜೆ 4.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **07.03.2022 ರಂದು ಸಂಜೆ 4.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ:
ಮುಖ್ಯ ಅಭಿಯಂತರರು (ಬಿಬಿಎಂಪಿ),
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್,
ಬೆಂಗಳೂರು-560009. ದೂ: 080-28015604 ಇವರನ್ನು ಸಂಪರ್ಕಿಸಿ.
ಮಾಹಿತಿಗೆ ದಯವಿಟ್ಟು www.kridl.org.inಗೆ ಲಾಗಿನ್ ಆಗುವುದು.

ಸಹಿ/– ಮುಖ್ಯ ಅಭಿಯಂತರರು (ಬಿಬಿಎಂಪಿ)

ವಾಸಾಸಂಇ/ಉನಿ.ನ/3176/ಎಂಸಿಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.

ದೂರವಾಣಿ ಸಂಖ್ಯೆ: 080– 22250017 /22250018 ಇ–ಮೇಲ್ mdkmvstdc@gmail.com

No. MDKMVSTDC/GKS/LIS/CR/2021-22/2570 Date: 29.01.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಕೇಂದ್ರ ಕಛೇರಿ, ಬೆಂಗಳೂರು ಇವರ ವತಿಯಿಂದ ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡಗಳ ಅರ್ಹ ಸಣ್ಣ ಮತ್ತು ಅತೀಸಣ್ಣ ರೈತರುಗಳಿಗೆ 2021–22ನೇ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆಯ ಕಾಮಗಾರಿಗಳನ್ನು "SEARCHING AND PREPARATION OF LIFT IRRIGATION PROPOSALS UNDER GANGA KALYANA SCHEME AND IMPLEMENTATION OF SUCH UNITS IN VARIOUS OF DISTRICTS" (RWS & S SR 2019-20) ರ ದರಗಳಂತೆ ಪ್ಯಾಕೇಜ್‌ವಾರು ಟೆಂಡರ್ ಕರೆಯಲು ಹಾಗೂ ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗಕ್ಕೆ ಸೇರಿದ ಟೆಂಡರ್‌ದಾರರಿಗೆ ರೂ.50.00 ಲಕ್ಷಗಳ ಮಿತಿಯೊಳಗಿನ ನಿರ್ಮಾಣ ಕಾಮಗಾರಿಗಳ ಟೆಂಡರ್‌ಗಳಲ್ಲಿ ವಿಶೇಷ ಆದ್ಯತೆಯನ್ನು ಸರ್ಕಾರದ ನಿಯಮಾನುಸಾರ ಮೀಸಲಾತಿ ಅನುಪಾತವನ್ನು ಅನುಸರಿಸಿ, ಕೆ.ಡಬ್ಲ್ಯೂ–1 ಪ್ರಕಾರ ನೋಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟು ಸಿವಿಲ್ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಒಟ್ಟು ಪ್ಯಾಕೇಜ್	ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿಟ್ಟ ಕಾಮಗಾರಿಗಳ ಸಂಖ್ಯೆ	ಪರಿಶಿಷ್ಟ ಪಂಗಡ (ST) ಗುತ್ತಿಗೆದಾರರಿಗೆ ಮೀಸಲಿಟ್ಟ ಕಾಮಗಾರಿಗಳ ಸಂಖ್ಯೆ	ಇತರೆ ಗುತ್ತಿಗೆದಾರರಿಗೆ ಮೀಸಲಿಟ್ಟ ಕಾಮಗಾರಿಗಳ ಸಂಖ್ಯೆ	ಒಟ್ಟು ಕಾಮಗಾರಿಗಳ ಸಂಖ್ಯೆ
1	11	2 ಪ್ಯಾಕೇಜ್	1 ಪ್ಯಾಕೇಜ್	8 ಪ್ಯಾಕೇಜ್	11 ಪ್ಯಾಕೇಜ್

1) ಆಸಕ್ತ ಗುತ್ತಿಗೆದಾರರು ಟೆಂಡರ್ ದಾಖಲಾತಿಗಳನ್ನು ವೆಬ್–ಸೈಟ್ https//:eproc.karnataka.gov.in ನಲ್ಲಿ ದಿನಾಂಕ: 07.02.2022 ರಿಂದ ಡೌನ್‌ಲೋಡ್ ಮಾಡಿಕೊಂಡು ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 24.02.2022 ರಂದು ಸಂಜೆ 5.00 ಗಂಟೆಯವರೆಗೆ. 2) ಹೆಚ್ಚಿನ ಮಾಹಿತಿಗಳನ್ನು ಟೆಂಡರ್ ದಾಖಲಾತಿಗಳಿಂದ ಪಡೆದುಕೊಳ್ಳಬಹುದಾಗಿದೆ ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. 3) ಟೆಂಡರಿಗೆ ಸಂಬಂಧಿಸಿದಂತೆ ಮುಂದೂಡಿಕೆ/ತಿದ್ದುಪಡಿಗಳು ಏನಾದರೂ ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 4) ಕಂಡೀಷನ್ ಟೆಂಡರ್‌ಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಸಹಿ/– ಪ್ರಧಾನ ವ್ಯವಸ್ಥಾಪಕರು

ವಾ.ಸಾ.ಸಂ.ಇ/ಬೆಂ.ನಗರ/3174/ಆಕಾರ್/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸೋಲೂರು: ಕೋವಿಡ್ ಕಾರಣಕ್ಕೆ ಸರಳ ರೀತಿಯಲ್ಲಿ ನಡೆದ ಕಾರ್ಯಕ್ರಮ

ಈಡಿಗ ಪೀಠದ ವಿಖ್ಯಾತಾನಂದ ಶ್ರೀ ಪೀಠಾರೋಹಣ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ಇಲ್ಲಿನ ಸೋಲೂರಿನಲ್ಲಿರುವ ಆರ್ಯ ಈಡಿಗ ಸಂಸ್ಥಾನದ ನಾರಾಯಣ ಗುರು ಮಠದ ರೇಣುಕಾದೇವಿ ಪೀಠಾಧಿಪತಿಯಾಗಿ ವಿಖ್ಯಾತಾನಂದ ಶ್ರೀಗಳು ಬುಧವಾರ ಪೀಠಾರೋಹಣ ಮಾಡಿದರು.

ಮುಂಜಾನೆ ದೇಗುಲದಲ್ಲಿನ ಧಾರ್ಮಿಕ ವಿಧಿ-ವಿಧಾನಗಳ ನಂತರ ವಿಖ್ಯಾತಾನಂದ ಶ್ರೀಗಳು ರೇಣುಕಾ ದೇವಿಗೆ ಪ್ರಥಮ ಪೂಜೆ ಸಲ್ಲಿಸಿದರು. ಅಲ್ಲಿಂದ ಮೆರವಣಿಗೆ ಮೂಲಕ ಶ್ರೀಗಳನ್ನು ವೇದಿಕೆಗೆ ಕರೆತರಲಾಯಿತು. ಬೆಳಿಗ್ಗೆ 8.45ರ ಶುಭ ಸಮಯದಲ್ಲಿ ಶಿವಗಿರಿ ಪೀಠದ ವಿಶ್ಯುದ್ದಾನಂದ ಸ್ವಾಮೀಜಿ, ಸಚ್ಚಿದಾನಂದ ಸ್ವಾಮೀಜಿ ಮೊದಲಾದ ಮಠಾಧೀಶರ ಸಮ್ಮುಖದಲ್ಲಿ ಪೀಠಾರೋಹಣ ಮಾಡಿದ ಶ್ರೀಗಳಿಗೆ ಬೆಳ್ಳಿ ಕಿರೀಟ ತೊಡಿಸಿ, ಪುಷ್ಪಾರ್ಚನೆ ಮಾಡಲಾಯಿತು. ಕರಾವಳಿಯ ವಿವಿಧ ಜಿಲ್ಲೆಗಳೂ ಸೇರಿದಂತೆ ನಾನಾ ಭಾಗದಿಂದ ಬಂದಿದ್ದ ಭಕ್ತರು ಶ್ರೀಗಳಿಗೆ ನಮನ ಸಲ್ಲಿಸಿದರು.

ಈ ಸಂದರ್ಭ ಆಶೀರ್ವಚನ ನೀಡಿದ ವಿಖ್ಯಾತಾನಂದ ಸ್ವಾಮೀಜಿ 'ಸಮಾನತೆ, ಸೋದರತೆ ಹಾಗೂ ಏಕತೆ ಭರಿತ ಸುಂದರ ಸಮಾಜ ನಿರ್ಮಾಣಕ್ಕೆ ನಾರಾಯಣ ಗುರು ರೇಣುಕಾದೇವಿ ಪೀಠ ಸದಾ ಸಿದ್ಧವಿರುತ್ತದೆ. ಗುರು ನಾರಾಯಣರು ತೋರಿದ ಮಾರ್ಗದಲ್ಲಿ ನಡೆಯುವ ಸಂಕಲ್ಪ ನಮ್ಮದು' ಎಂದರು.

'ಬಿಲ್ಲವ, ಹಳೇಪೈಕ, ನಾಮಧಾರಿ, ಈಳವ, ನಾಡಾರ್, ಈಳಿಗೇರ, ಕಲಾಲ್ ಮೊದಲಾಗಿ ಇಪ್ಪತ್ತಾರು ಜಾತಿಗಳಲ್ಲಿ ಹರಡಿಹೋಗಿರುವ ಈಡಿಗ ಸಮುದಾಯವನ್ನು ಭಾವನಾತ್ಮಕವಾಗಿ ಒಂದುಗೂಡಿಸುವುದು ನನ್ನ ಆದ್ಯತೆಯಾಗಿದೆ. ಸಮಾಜದ ನಿರಾಶ್ರಿತ ಮಕ್ಕಳನ್ನು ಮಠಕ್ಕೆ ದತ್ತು ಪಡೆದು ಅವರಿಗೆ ಎಲ್ಲಾ ರೀತಿಯ ಶಿಕ್ಷಣವನ್ನು ಸೋಲೂರಿನಲ್ಲಿ ನೀಡಲಾಗುವುದು. ನಾರಾಯಣ ಗುರುಗಳ ತತ್ವ, ಸಂದೇಶಗಳನ್ನು ಪ್ರಚಾರ ಮಾಡುವುದಕ್ಕೆ ರಾಜ್ಯದಾದ್ಯಂತ ನಿರಂತರ ಪ್ರವಾಸ ಮಾಡುತ್ತೇನೆ' ಎಂದರು.

'ನೂತನ ಶ್ರೀಗಳು ಶಿಕ್ಷಣ, ಸಮಾನತೆಗೆ ಒತ್ತು ಕೊಟ್ಟು ಮಠವನ್ನು ಪ್ರಗತಿಯತ್ತ ಕೊಂಡೊಯ್ಯುತ್ತಾರೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ವಿಶ್ವಾಸ ವ್ಯಕ್ತಪಡಿಸಿದರು.

'ಸಮಾನ ಮನಸ್ಕರು ಒಂದಾಗಿ ವಿಖ್ಯಾತಾನಂದ ಶ್ರೀಗಳ ಪಟ್ಟಾಭಿಷೇಕ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಈ ಸಂಸ್ಥಾನ ರಾಜ್ಯದ ಶಕ್ತಿ ಕೇಂದ್ರವಾಗಿ ಮಾರ್ಪಾಡಾಗಲಿ. ಧ್ವನಿ ಇಲ್ಲದ ಸಮುದಾಯದ ಧ್ವನಿಯಾಗಿ ಕೆಲಸ ಮಾಡಲಿ' ಎಂದು ಇಂಧನ ಸಚಿವ ಸುನಿಲ್‌ಕುಮಾರ್ ಆಶಿಸಿದರು.

ಕೋವಿಡ್ ಹಿನ್ನೆಲೆಯಲ್ಲಿ ಮಠದ ಆವರಣದಲ್ಲಿ ಸರಳ ರೀತಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಶಾಸಕ ಎ. ಮಂಜುನಾಥ್ ಸೇರಿದಂತೆ ಕೆಲವು ಮಂದಿ ಗಣ್ಯರಷ್ಟೇ ಕಾರ್ಯಕ್ರಮದಲ್ಲಿ ಭಾಗಿಯಾದರು.

ಸಂಸ್ಥಾನದ ವ್ಯವಸ್ಥಾಪಕ ಧರ್ಮದರ್ಶಿ ಎಂ. ತಿಮ್ಮೇಗೌಡ ಹಾಗೂ ಕಾರ್ಯ ನಿರ್ವಾಹಕ ಧರ್ಮದರ್ಶಿ ಜೆ.ಪಿ. ಸುಧಾಕರ್ ಮೊದಲಾದವರು ಕಾರ್ಯಕ್ರಮದ ನೇತೃತ್ವವಹಿಸಿದ್ದರು.

ಸೋಲೂರಿನ ನಾರಾಯಣ ಗುರು ಮಠದ ರೇಣುಕಾ ಪೀಠದ ನೂತನ ಪೀಠಾಧಿಪತಿ ವಿಖ್ಯಾತಾನಂದ ಶ್ರೀಗಳಿಗೆ ಶಿವಗಿರಿ ಪೀಠದ ವಿಶ್ಯುದ್ದಾನಂದ ಸ್ವಾಮೀಜಿ ಹಾಗೂ ಸಚ್ಚಿದಾನಂದ ಸ್ವಾಮೀಜಿ ಕಿರೀಟ ತೊಡಿಸಿದರು. ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಸುನಿಲ್‌ಕುಮಾರ್, ಸಮುದಾಯದ ಮುಖಂಡರಾದ ತಿಮ್ಮೇಗೌಡ, ಜೆ.ಪಿ. ಸುಧಾಕರ್ ಹಾಜರಿದ್ದರು

ಸಮಾಜಮುಖಿ ಸೇವೆಯ ಕಾಯಕ

ನಾರಾಯಣ ಗುರುಗಳ ಅನುಯಾಯಿಯಾದ ವಿಖ್ಯಾತಾನಂದ ಶ್ರೀಗಳು ಮೂಲತಃ ಮಂಗಳೂರು ಸಮೀಪದ ಕುಪ್ಪೆಪದವಿನ ಸನ್ನಿಕಾಯಿಯವರು.

1988ರಲ್ಲಿ ಕೇರಳದ ಶಿವಗಿರಿಯಲ್ಲಿ ಬ್ರಹ್ಮಚರ್ಯ ದೀಕ್ಷೆ ಪಡೆದ ಶ್ರೀಗಳು, 1990ರಲ್ಲಿ ಹೃಷಿಕೇಶ ಕೈಲಾಸ ವಿದ್ಯಾಪೀಠದಲ್ಲಿ ಉನ್ನತ ಅಧ್ಯಯನ ಕೈಗೊಂಡು, 1992 ರಲ್ಲಿ ನೈಷ್ಠಿಕ ಬ್ರಹ್ಮಚರ್ಯ ದೀಕ್ಷೆ ಪಡೆದರು. 1993ರಲ್ಲಿ ಸನ್ಯಾಸ ದೀಕ್ಷೆ ಕೈಗೊಂಡು ಶಿವಗಿರಿ ಸಂಘದ ಸದಸ್ಯರಾಗಿ ಆಸ್ಪತ್ರೆ, ಶಾಲೆ, ವಿವಿಧ ಶಾಖಾ ಮಠಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕಾರ್ಕಳದ ಬಲ್ಯೊಟ್ಟಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಅನಾಥ ಮಕ್ಕಳಿಗಾಗಿ ಆಧುನಿಕ ಶಿಕ್ಷಣ ನೀಡುತ್ತಾ ಬಂದಿದ್ದಾರೆ. ಕರಾವಳಿ ಭಾಗದಲ್ಲಿ ಕಂಡುಬರುವ ಮೌಢ್ಯಾಚರಣೆಗಳನ್ನು ತೊಡೆದು ಹಾಕಿ, ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ.

ಆರ್ಯ ಈಡಿಗ ಸಮುದಾಯಕ್ಕೆ ಒಂದು ಪ್ರತ್ಯೇಕ ಪೀಠ ಬೇಕು ಎನ್ನುವ ಆಶಯದೊಂದಿಗೆ ಸಮಾನ ಮನಸ್ಕರು ಸೇರಿ ಸೋಲೂರಿನಲ್ಲಿ ಆರ್ಯ ಈಡಿಗ ಸಂಸ್ಥಾನ ಸ್ಥಾಪನೆ ಮಾಡಿದ್ದು, 2007ರಲ್ಲಿ ಈ ಮಠದ ಮೊದಲ ಮಠಾಧಿಪತಿಯಾಗಿ ರೇಣುಕಾನಂದ ಸ್ವಾಮೀಜಿ ಪೀಠಾರೋಹಣ ಮಾಡಿದ್ದರು. ಆದರೆ ನಂತರದಲ್ಲಿ ಉನ್ನತ ಅಧ್ಯಯನದ ಕಾರಣ ನೀಡಿ ಅವರು ಪೀಠ ತ್ಯಜಿಸಿದ್ದರು. ಮುಂದಿನ ಆರೇಳು ವರ್ಷ ಕಾಲ ಈ ಮಠಕ್ಕೆ ಪೀಠಾಧಿಪತಿ ಇರಲಿಲ್ಲ. ಇದೀಗ ವಿಖ್ಯಾತಾನಂದರು ಈ ಸ್ಥಾನ ತುಂಬಿದ್ದಾರೆ.

'ಯಡಿಯೂರಪ್ಪ ಯುಗ ಅಂತ್ಯವಾಗಿದೆ, ಯುಗಾದಿಗೆ ಹೊಸ ಬೆಳವಣಿಗೆ'

ಬೆಳಗಾವಿ: 'ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಯುಗ ಅಂತ್ಯವಾಗಿದೆ. ಉಳಿದ ನಾಲ್ಕೈದು ಮಂದಿಯ ಯುಗವೂ ಮುಗಿಯುತ್ತಾ ಬಂದಿದೆ. ರಾಜ್ಯದಲ್ಲಿ ಪಕ್ಷಕ್ಕೆ ಎರಡನೇ ಹಂತದ ನಾಯಕತ್ವ ಬೇಕಾಗಿದ್ದು, ಬದಲಾವಣೆ ಅವಶ್ಯ ಹಾಗೂ ಅನಿವಾರ್ಯವಾಗಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸ್ಥಾನದಿಂದ ಬಸವರಾಜ ಬೊಮ್ಮಾಯಿ ಅವರನ್ನು ಬದಲಾಯಿಸಲಾಗುತ್ತದೆ ಎನ್ನುವುದು ನನ್ನ ಮಾತಿನ ಅರ್ಥವಲ್ಲ' ಎಂದರು.

'ಮುಂದಿನ ಚುನಾವಣೆಗೆ ಹೈಕಮಾಂಡ್ ಎರಡನೇ ಹಂತದ ನಾಯಕತ್ವಕ್ಕೆ ಆದ್ಯತೆ ಕೊಡುತ್ತಾರೆಂಬ ವಿಶ್ವಾಸವಿದೆ' ಎಂದು ತಿಳಿಸಿದರು.

'ಯುಗಾದಿಗೆ ರಾಜ್ಯ ರಾಜಕಾರಣದಲ್ಲಿ ಒಳ್ಳೆಯ ಬೆಳವಣಿಗೆ ಆಗುತ್ತದೆ. ಹೊಸ ಮಂತ್ರಿಗಳು, ಹೊಸ ಪದಾಧಿಕಾರಿಗಳು ಬರಬಹುದು. ನಾನು ಸಚಿವ ಸ್ಥಾನ ಕೇಳಿಲ್ಲ. ಮುಂದಿನ ಚುನಾವಣೆಯಲ್ಲಿ ಮಹತ್ವಪೂರ್ವ ಜವಾಬ್ದಾರಿ ಕೊಡುತ್ತಾರೆ ಎನ್ನುವ ವಿಶ್ವಾಸವಿದೆ' ಎಂದು ಪ್ರತಿಕ್ರಿಯಿಸಿದರು.

'ನಮ್ಮ ಕೆಲವು ಶಾಸಕರು ಕಾಂಗ್ರೆಸ್‌ಗೆ ಹೋಗುತ್ತಾರೆ ಎಂದು ಪರೀಕ್ಷಿಸುವುದಕ್ಕಾಗಿ ಹೇಳಿದ್ದೆ. ನಾವು ಹೋಗುವುದಿಲ್ಲ ಎಂದು ಎಲ್ಲರೂ ಸ್ಪಷ್ಟಪಡಿಸುತ್ತಿದ್ದಾರೆ ಅಷ್ಟು ಸಾಕು' ಎಂದು ಹಾಸ್ಯ ಚಟಾಕಿ ಹಾರಿಸಿದರು.

'ಮಜಾ ಮಾಡಲು ಪೀಠ ಸ್ಥಾಪಿಸಿದರೆ ಪ್ರಯೋಜನವಿಲ್ಲ'

'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ನೂರು ಪೀಠವಾದರೂ ಏನೂ ಆಗುವುದಿಲ್ಲ. ಕುರ್ಚಿ ಇಡ್ಕೊಂಡು ಕೂರುವುದರಿಂದ ಲಾಭವೇನೂ ಇಲ್ಲ. ಸಮುದಾಯದ ಭವಿಷ್ಯಕ್ಕಾಗಿ ಹೋರಾಡುವವರ ಹಿಂದೆ ಜನರು ಬರುತ್ತಾರೆ. ಮಜಾ ಮಾಡಲು, ಕಾರ್ಯಕ್ರಮಕ್ಕೆ ₹ 25 ಲಕ್ಷ ಅಥವಾ ₹ 1 ಕೋಟಿ ಕೊಡುತ್ತೇನೆ ಎಂದ ಕೂಡಲೇ ಪೀಠಕ್ಕೆ ಗೌರವ ಬರುವುದಿಲ್ಲ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಕುಟುಕಿದರು.

'ಮಂತ್ರಿ ಮಾಡುವುದಕ್ಕಾಗಿ ಹರ ಜಾತ್ರೆ ನಡೆಸುವುದು, ಯಾರನ್ನೋ ಮುಖ್ಯಮಂತ್ರಿ ಮಾಡಲೆಂದು ಮತ್ತೊಂದು ಪೀಠ ಸ್ಥಾಪಿಸುವುದಲ್ಲ' ಎಂದು ಟೀಕಿಸಿದರು.

'ಯಾರನ್ನೋ ಮುಖ್ಯಮಂತ್ರಿ ಅಥವಾ ಮಂತ್ರಿ ಮಾಡಲೆಂದು ಮೀಸಲಾತಿ ಹೋರಾಟ ನಡೆಯುತ್ತಿಲ್ಲ' ಎಂದು ತಿಳಿಸಿದರು.

ರಾಜ್ಯದ ಬಜೆಟ್ ಒಳಗಾಗಿ ಹಿಂದುಳಿದ ವರ್ಗ 2ಎ ಮೀಸಲಾತಿ ನೀಡಲು ಆಗ್ರಹ

'ಮಠಕ್ಕೆ ನಿರಾಣಿ ನೀಡಿದ ವಸ್ತುಗಳನ್ನು ಮರಳಿಸುವೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸಚಿವ ಮುರುಗೇಶ ನಿರಾಣಿ ಅವರು ಮಠಕ್ಕೆ ದಾನವಾಗಿ ನೀಡಿರುವ ವಸ್ತುಗಳೆಲ್ಲವನ್ನೂ ಅವರ ಮನೆಗೆ ಮರಳಿಸುತ್ತೇನೆ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ನಿರಾಣಿ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿನ ಗಾಂಧಿ ಭವನದಲ್ಲಿ ಬುಧವಾರ ನಡೆದ ಸಮಾಜದ ರಾಜ್ಯ ಮಟ್ಟದ ಕಾರ್ಯಾಕಾರಿಣಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

'ಸಚಿವರ ಹೆಸರಿನಲ್ಲಿ ಕೆಲವೊಂದು ಅನಾಮಧೇಯ ವ್ಯಕ್ತಿಗಳು ಶ್ರೀಪೀಠಕ್ಕೆ ನಿರಾಣಿ ಅವರು ನೀಡಿರುವ ದಾನದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸ್ತಾಪಿಸಿದ್ದಾರೆ. ಇದರಿಂದ ನನಗೆ ಹಾಗೂ ಸಮಾಜಕ್ಕೆ ನೋವುಂಟಾಗಿದೆ.



ಬಸವ ಜಯ ಮೃತ್ಯುಂಜಯ

ಸಮಾಜದ ಮುಖಂಡರ ಒಮ್ಮತದಂತೆ ವಾಪಸ್ ಕೊಡಲು ನಿರ್ಣಯಿಸಲಾಗಿದೆ' ಎಂದು ಹೇಳಿದರು.

'ನಾನು ಭಕ್ತರ, ಬಡ ಕೂಲಿಕಾರನ, ಶ್ರಮಿಕನ ಹಾಗೂ ಸಮಾಜದ ಋಣದಲ್ಲಿರಲು ಬಯಸುತ್ತೇನೆಯೇ ಹೊರತು ವ್ಯಕ್ತಿಯ ಋಣದಲ್ಲಿರುವುದಕ್ಕೆ ಇಚ್ಛಿಸುವುದಿಲ್ಲ' ಎಂದು ಅವರು ಅಭಿಪ್ರಾಪಟ್ಟರು.

ನೋವಿನ ಮಾತುಗಳು:'ರೊಟ್ಟಿ, ಬಟ್ಟೆ, ಕಸಬರಿಗೆ ಕೊಟ್ಟಿದ್ದೇವೆ ಎಂಬಿತ್ಯಾದಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಹಾಕುತ್ತಿದ್ದಾರೆ. ಅದೆಲ್ಲವನ್ನೂ ಹಿಂತಿರುಗಿಸುತ್ತೇವೆ. ಕೊಟ್ಟಿರುವುದನ್ನು ನಿರಾಣಿ ಅವರೂ ಸ್ಪಷ್ಟವಾಗಿ ತಿಳಿಸಲಿ. ಪೀಠಕ್ಕೆ ದಾನ–ಧರ್ಮ ಕೊಟ್ಟಿರುವುದನ್ನು ಯಾರೂ ಹೇಳಲ್ಲ. ಯಾರೇ ಕೊಟ್ಟರೂ ಸಂಗಯ್ಯನ ಪ್ರಸಾದವೆಂದು ಸ್ವೀಕರಿಸಿದ್ದೇವೆ. ನಾವು ಸ್ವಾಭಿಮಾನದಿಂದ ಬದುಕಿರುವವರು. ನಮ್ಮ ಋಣದಲ್ಲಿದ್ದಾರೆ ಎನ್ನುವ ನೋವಿನ ಮಾತುಗಳನ್ನು ಮೀಸಲಾತಿ ಹೋರಾಟ ಆರಂಭ ಆದಾಗಿನಿಂದಲೂ ಕೆಲವರು ಹೇಳುತ್ತಿದ್ದಾರೆ' ವಿಷಾದಿಸಿದರು.

ಮೌನ ವಹಿಸಿದ್ದರಿಂದ ಅನುಮಾನ:'ಅವರ ಹೆಸರಿನಲ್ಲಿ ಪೋಸ್ಟ್‌ಗಳನ್ನು ಹಾಕುತ್ತಿದ್ದರೂ ನಿರಾಣಿ ಮೌನ ವಹಿಸಿದ್ದಾರೆ. ನಾನು ಆ ಪ್ರಚಾರ ಮಾಡಿಸುತ್ತಿಲ್ಲ ಎಂದು ನಿರಾಣಿ ಸ್ಪಷ್ಟವಾಗಿ ತಿಳಿಸಿ ಕ್ಷಮಾಪಣೆ ಕೇಳಲಿ. ಸುಮ್ಮನಿರುವುದರಿಂದ ಅನುಮಾನ ಮೂಡುತ್ತದೆ. ಕೆಲವು ಸ್ವಾಮೀಜಿಗಳ ಮೂಲಕವೂ ಹೇಳಿಸಿದ್ದಾರೆ. ದಾನ ಕೊಟ್ಟಿದ್ದನ್ನು ಬಹಿರಂಗಪಡಿಸುವ ಕೆಲಸವನ್ನು ದೇಶದ ಧಾರ್ಮಿಕ ಇತಿಹಾಸದಲ್ಲಿಯೇ ಯಾರೂ ಮಾಡಿರಲಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುತಂತ್ರಕ್ಕೆ ಸ್ವಾಮೀಜಿ ಖಂಡನೆ

'ರಾಜ್ಯ ಸರ್ಕಾರದಿಂದ ಸಮಾಜಕ್ಕೆ ಹಿಂದುಳಿದ ವರ್ಗ 2ಎ ಹಾಗೂ ಕೇಂದ್ರದಿಂದ ಹಿಂದುಳಿದ ವರ್ಗದ ಮೀಸಲಾತಿಗೆ ಹಕ್ಕೊತ್ತಾಯ ಮಂಡಿಸಿ ವರ್ಷದಿಂದ ನಿರಂತರವಾಗಿ ಚಳವಳಿ ನಡೆಸುತ್ತಿದ್ದೇವೆ. ಬಜೆಟ್ ಒಳಗಾಗಿ ಮೀಸಲಾತಿ ಘೋಷಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಗರದಲ್ಲಿ ಡಿ.16ರಂದು ನಡೆದಿದ್ದ ಸಮಾಜದ ಶಾಸಕರು ಮತ್ತು ಮುಖಂಡರ ಸಭೆಯಲ್ಲಿ ಭರವಸೆ ನೀಡಿದ್ದರು. ಆ ಮಾತಿನಂತೆ ನಡೆದುಕೊಂಡು ಮೀಸಲಾತಿ ಘೋಷಿಸಬೇಕು' ಎಂದು ಪೀಠಾಧಿಪತಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

'ಮೀಸಲಾತಿ ಹೋರಾಟ ಹಾಳು ಮಾಡುವುದಕ್ಕಾಗಿ ಸಮಾಜವನ್ನು ಒಡೆಯುತ್ತಿರುವಂತಹ ವ್ಯಕ್ತಿಗಳ ಕುತಂತ್ರವನ್ನು ಸಂಪೂರ್ಣವಾಗಿ ಖಂಡಿಸಲಾಗಿದೆ. ಅವರ ಹೆಸರು ಹೇಳಿ ಅವರನ್ನು ದೊಡ್ಡವರನ್ನಾಗಿ ಮಾಡಲಾರೆ. ಅವರನ್ನು ನಿರ್ಲಕ್ಷಿಸಬೇಕು ಎಂಬ ಒಮ್ಮತದ ನಿರ್ಣಯಕ್ಕೆ ಬರಲಾಗಿದೆ' ಎಂದರು.

'ನಿರಾಣಿ ಚಮಚಾಗಳಿಂದ ಸ್ವಾಮೀಜಿಗೆ ನೋವು'

ಬೆಳಗಾವಿ: 'ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠಕ್ಕೆ ನೀಡಿರುವ ದಾನದ ಬಗ್ಗೆ ಸಚಿವ ಮುರುಗೇಶ ನಿರಾಣಿ ಅವರ ಚಮಚಾಗಳು, ಸಹೋದರ ಲಕ್ಷ್ಮಣ ನಿರಾಣಿ ಮೊದಲಾದವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕುತ್ತಿದ್ದಾರೆ. ಅದನ್ನು ಸಮಾಜ ತೀವ್ರವಾಗಿ ಖಂಡಿಸುತ್ತದೆ' ಎಂದು ಲಿಂಗಾಯತ ಪಂಚಮಸಾಲಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ತಿಳಿಸಿದರು.

ಇಲ್ಲಿ ನಡೆದ ಸಮಾಜದ ಕಾರ್ಯಕಾರಿಣಿ ನಂತರ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಸಂಘಟನೆಯಲ್ಲಿ ಇಲ್ಲದವರು, ಮೀಸಲಾತಿ ಹೋರಾಟದಲ್ಲಿ ಭಾಗವಹಿಸದವರು ಅಪಪ್ರಚಾರ ಮಾಡುತ್ತಿದ್ದಾರೆ. ಇದರಿಂದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮನಸ್ಸಿಗೆ ನೋವಾಗಿದೆ. ಹೀಗಾಗಿ, ನಿರಾಣಿ ಅವರು ಮಠಕ್ಕೆ ನೀಡಿದ ವಸ್ತುಗಳನ್ನು ಮರಳಿಸಲು ಒಮ್ಮತದಿಂದ ನಿರ್ಣಯಿಸಲಾಗಿದೆ' ಎಂದರು.

KHADI AND VILLAGE INDUSTRIES COMMISSION

Ministry of Micro, Small & Medium Enterprises, Govt. of India,
Multi Disciplinary Training Centre(MDTC), Vijinapura Near FCI Godown, Doorvaninagar, Bangalore-560 016. Karnataka, Phone : 080-2565 0285, E-mail: kvicbang@gmail.com

TENDER NOTICE FOR ENGAGING SECURITY AND HOUSE KEEPING PERSONNEL

Multi Disciplinary Training Centre (MDTC), Khadi and Village Industries Commission (KVIC), Ministry of Micro, Small and Medium Enterprises, Govt. of India, Vijinapura, Doorvaninagar, Bangalore 560016, invites sealed tenders for providing the services of following personnel.

Sl. No.	Particulars	Unit	Qualification and Experience
1	Security Guards	9	Should be well trained with minimum qualification of S.S.L.C.
2	Security Supervisor	1	Should be ex-serviceman. Should possess valid driving license and know driving of LMV of four wheelers.
3	Gardener	2	Should be well trained & literate.
4	Sweeper/Scavenger (Female)	3	
5	Sweeper/Scavenger (MALE)	1	

Terms and Conditions:

1. The Tender Document/application can be obtained from this office or may be downloaded from the Website: www.kvic.org.in.
2. Cost of the Tender application is Rs.500.00 (Rupees five hundred only).
3. The Tender application should be submitted along with the Earnest Money Deposit of Rs.50,000/- (Rupees fifty thousand only) by Demand Draft in favour The Principal, Multi Disciplinary Training Centre, Khadi and V.I. Commission, payable at State Bank of India, Vijinapura, Bangalore - 560016.
4. The agency should have valid EPF, ESI, PAN, GST registration, Police Station Permission etc.
5. The last date for submission of the Tender will be **on or before 24.02.2022** and opening of the tender will be **on 28.02.2022.**
6. The Tender Committee reserves the right to accept or reject the tender without assigning any reason.
7. For further clarification or information, if any, may be contacted this office over phone at 080-2565-0285 during office hours on all working days.

Sd/- DIRECTOR / PRINCIPAL

ಉತ್ತರಾಖಂಡ ವಿಧಾನಸಭಾ ಚುನಾವಣೆ: ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಣೆ

'ನೌಕರಿಯಲ್ಲಿ ಮಹಿಳೆಯರಿಗೆ ಶೇ 40ರಷ್ಟು ಹುದ್ದೆ'

ಡೆಹ್ರಾಡೂನ್ (ಪಿಟಿಐ): 'ಉತ್ತರಾಖಂಡದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಪೊಲೀಸ್ ಇಲಾಖೆಯೂ ಸೇರಿ ಎಲ್ಲಾ ಸರ್ಕಾರಿ ನೌಕರಿಯಲ್ಲಿ ಶೇ 40ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡುತ್ತೇವೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

ಉತ್ತರಾಖಂಡ ವಿಧಾನಸಭಾ ಚುನಾವಣೆಗೆ ಪಕ್ಷದ ಪ್ರಣಾಳಿಕೆಯನ್ನು ವರ್ಚ್ಯುವಲ್ ರ‍್ಯಾಲಿಯ ಮೂಲಕ ಅವರು ಬುಧವಾರ ಬಿಡುಗಡೆ ಮಾಡಿದರು. 'ರಾಜ್ಯದಲ್ಲಿ ಹೊಸದಾಗಿ ನಾಲ್ಕು ಲಕ್ಷ ಉದ್ಯೋಗವನ್ನು ಸೃಷ್ಟಿಸುತ್ತೇವೆ. ರಾಜ್ಯದಲ್ಲಿ ಪ್ರವಾಸಿ ಪೊಲೀಸ್ ಪಡೆಯನ್ನು ಆರಂಭಿಸುತ್ತೇವೆ. ಎಲ್‌ಪಿಜಿ ಸಿಲಿಂಡರ್ ಬೆಲೆಗೆ ₹500ರ ಗರಿಷ್ಠ ಮಿತಿ ಹೇರಲಾಗುತ್ತದೆ' ಎಂದು ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಲಾಗಿದೆ.

ಕಾಂಗ್ರೆಸ್ ಪಕ್ಷವು ಈ ಚುನಾವಣೆಯಲ್ಲಿ ಮಹಿಳಾ ಸಬಲೀಕರಣದ ವಿಚಾರವನ್ನು ಇಟ್ಟುಕೊಂಡು ಎದುರಿಸುತ್ತಿದೆ. ಉತ್ತರ ಪ್ರದೇಶದಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಶೇ 40ರಷ್ಟು ಟಿಕೆಟ್‌ಗಳನ್ನು ಮೀಸಲಿರಿಸಿದೆ. ಪಕ್ಷವು ಅಧಿಕಾರಕ್ಕೆ ಬಂದರೆ ಮಹಿಳೆಯರು, ಯುವತಿಯರು ಮತ್ತು ವಿದ್ಯಾರ್ಥಿನಿಯರಿಗೆ ಹಲವು ಸವಲತ್ತುಗಳನ್ನು ಕೊಡುವುದಾಗಿ ಘೋಷಿಸಿದೆ. ಅದೇ ಮಾದರಿಯನ್ನು ಉತ್ತರಾಖಂಡದಲ್ಲೂ ಅನುಸರಿಸಲು ಮುಂದಾಗಿದೆ.

'ಐದು ವರ್ಷದ ಅಧಿಕಾರದ ಅವಧಿಯಲ್ಲಿ ಉತ್ತರಾಖಂಡ ಬಿಜೆಪಿ ಸರ್ಕಾರವು ಏನನ್ನೂ ಮಾಡಿಲ್ಲ. ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದಾಗ ಮಾಡಲಾಗಿದ್ದ ಕೆಲಸಗಳಷ್ಟೇ ಈಗಲೂ ಕಾಣಿಸುತ್ತಿವೆ. ಬಿಜೆಪಿ ಏನನ್ನೂ ಮಾಡಿಲ್ಲ, ಏಕೆಂದರೆ ಏನನ್ನಾದರೂ ಮಾಡುವ ಉದ್ದೇಶ ಅವರಿಗೆ ಇರಲಿಲ್ಲ. ಹೀಗಾಗಿ ನೀವು ನಿಮ್ಮ ಮತದಾನದ ಹಕ್ಕನ್ನು ಒಂದು ಪ್ರಬಲ ಅಸ್ತ್ರ ಎಂಬಂತೆ ಬಳಸಬೇಕು. ಮತದಾನದ ಬಗ್ಗೆ ಗಂಭೀರವಾಗಿರಬೇಕು' ಎಂದು ಪ್ರಿಯಾಂಕಾ ಹೇಳಿದ್ದಾರೆ.

'ಇಲ್ಲಿ ಡಬಲ್ ಎಂಜಿನ್ ಸರ್ಕಾರವಿದೆ ಎಂದು ಬಿಜೆಪಿ ಹೇಳುತ್ತಲೇ ಇರುತ್ತದೆ. ಆದರೆ ಈ ಎಂಜಿನ್‌ಗಳು ಕೆಲಸವೇ ಮಾಡುವುದಿಲ್ಲ. ದೇಶದಾದ್ಯಂತ ಈ ಡಬಲ್ ಎಂಜಿನ್ ಸರ್ಕಾರಗಳು ಕಬ್ಬು ಬೆಳೆಗಾರರಿಗೆ ಒಟ್ಟು ₹14,000 ಕೋಟಿ ಬಾಕಿ ಹಣ ನೀಡಬೇಕಿದೆ. ಪ್ರಧಾನಿ ನರೇಂದ್ರ ಮೋದಿ ಓಡಾಡಲು ₹16,000 ಕೋಟಿ ಮೊತ್ತದಲ್ಲಿ ಎರಡು ವಿಮಾನಗಳನ್ನು ಖರೀದಿಸಲಾಗಿದೆ. ಅದರ ಬದಲಿಗೆ ಕಬ್ಬು ಬೆಳೆಗಾರರ ಬಾಕಿ ಪಾವತಿ ಮಾಡಬಹುದಿತ್ತು' ಎಂದು ಪ್ರಿಯಾಂಕಾ ಹೇಳಿದ್ದಾರೆ.

ವರ್ಚ್ಯುವಲ್ ರ‍್ಯಾಲಿಯಲ್ಲಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು. ಉತ್ತರಾಖಂಡ ಕಾಂಗ್ರೆಸ್ ಅಧ್ಯಕ್ಷ ಗಣೇಶ್ ಗೋಡಿಯಾಲ್ (ಎಡದಿಂದ), ಪ್ರಚಾರ ಸಮಿತಿ ಅಧ್ಯಕ್ಷ ಹರೀಶ್ ರಾವತ್ ಇದ್ದರು –ಪಿಟಿಐ ಚಿತ್ರ

> ಕೋವಿಡ್ ಎರಡನೇ ಅಲೆ ವೇಳೆ ಕೇಂದ್ರ ಸರ್ಕಾರ ಆಮ್ಲಜನಕ ಮತ್ತು ಔಷಧ ರಫ್ತು ಮಾಡಿತು. ಇದರಿಂದ ಇಡೀ ದೇಶವೇ ಸಂಕಷ್ಟಕ್ಕೆ ಗುರಿಯಾಯಿತು
> **ಪ್ರಿಯಾಂಕಾ ಗಾಂಧಿ ವಾದ್ರಾ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪ್ರಜಾಮತ
ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್
ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ
ಪ್ರಜಾವಾಣಿ ಪಾಡ್‌ಕಾಸ್ಟ್
ಪ್ರತಿ ರಾತ್ರಿ 9.00 ಗಂಟೆಗೆ
prajavani.net/podcast

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ನಾಳೆ
ಕ್ಯಾನ್ಸರ್ ಬಗ್ಗೆ ತಿಳಿಯೋಣ
ಅಂತರರಾಷ್ಟ್ರೀಯ ಕ್ಯಾನ್ಸರ್ ದಿನ ವಿಶೇಷ
ಡಾ.ವಿನಯಕುಮಾರ್ ಮುತ್ತಗಿ, ಕನ್ಸಲ್ಟೆಂಟ್ ರೇಡಿಯೇಶನ್ ಅಂಕಾಲಜಿಸ್ಟ್, HCG NMR ಕ್ಯಾನ್ಸರ್ ಕ್ಯೂರೀ ಸೆಂಟರ್, ಹುಬ್ಬಳ್ಳಿ
ವೈದ್ಯರೊಂದಿಗೆ ಸಂವಾದ
ಸಂಜೆ 4 ಗಂಟೆಗೆ

ಫೆ. 7ಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ದೆಹಲಿಗೆ ಭೇಟಿ ನೀಡುವುದಾಗಿ ಪ್ರಕಟಿಸಿದ ಬೆನ್ನಲ್ಲೇ, ಬಿರುಸಿನ ರಾಜಕೀಯ ಚಟುವಟಿಕೆಗಳು ಆರಂಭವಾಗಿದ್ದು, ಸಚಿವಕಾಂಕ್ಷಿ ಶಾಸಕರೂ ದೆಹಲಿಗೆ ಹೋಗಲು ತಯಾರಿ ನಡೆಸಿದ್ದಾರೆ.

ಸಚಿವ ಸಂಪುಟ ಪುನಾರಚನೆ ಮಾಡಿ ಹೊಸ ಮುಖಗಳಿಗೆ ಅವಕಾಶ ನೀಡಬೇಕೆಂಬ ಒತ್ತಡವೂ ಬಿಜೆಪಿಯಲ್ಲಿ ಪ್ರಬಲವಾಗಿ ಕೇಳಿ ಬಂದಿದೆ.

ಸುದ್ದಿಗಾರರ ಜತೆ ಬುಧವಾರ ಬೆಳಿಗ್ಗೆ ಮಾತನಾಡಿದ ಬೊಮ್ಮಾಯಿ, ಗುರುವಾರವೇ ದೆಹಲಿಗೆ ಹೋಗಲು ತೀರ್ಮಾನಿಸಿರುವುದಾಗಿ ಹೇಳಿದ್ದರು. ಆದರೆ, ಮಧ್ಯಾಹ್ನ ಮಾತನಾಡಿದ ಅವರು, 'ಗುರುವಾರ ಭೇಟಿ ರದ್ದಾಗಿದೆ. ಸೋಮವಾರ ಬರುವಂತೆ ಸಂಸದರು ತಿಳಿಸಿದ್ದಾರೆ. ಆದ್ದರಿಂದ ಅಂದೇ ಹೋಗಲಿದ್ದೇನೆ' ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, 'ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ಮಾಡಲು ಹೋಗುತ್ತಿಲ್ಲ. ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಎಲ್ಲವೂ ವರಿಷ್ಠರಿಗೆ ಬಿಟ್ಟಿದ್ದು' ಎಂದು ಪ್ರತಿಕ್ರಿಯಿಸಿದರು.

ಈ ಮಧ್ಯೆ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮತ್ತು ಗೋಕಾಕ ಶಾಸಕ ರಮೇಶ ಜಾರಕಿಹೊಳಿ ದೆಹಲಿಗೆ ಹೋಗಲು ಸಿದ್ಧತೆ ನಡೆಸಿದ್ದಾರೆ.

ಚುನಾವಣಾ ಕಣದಲ್ಲಿ

- ಪಂಜಾಬ್ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದ ಮಂಗಳವಾರ, 931 ಜನರು ತಮ್ಮ ನಾಮಪತ್ರ ಸಲ್ಲಿಸಿದ್ದಾರೆ. 117 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಈಗ ಒಟ್ಟು 2,279 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಚಾಮ್‌ಕೌರ್ ಸಾಹಿಬ್ ಕ್ಷೇತ್ರದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಚನ್ನಿ ಒಟ್ಟು ಎರಡು ಕ್ಷೇತ್ರಗಳಿಂದ ಕಣಕ್ಕೆ ಇಳಿದಿದ್ದಾರೆ. ಇದೇ 20ರಂದು ಪಂಜಾಬ್‌ನಲ್ಲಿ ಮತದಾನ ನಡೆಯಲಿದೆ
- ಮಣಿಪುರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ತನ್ನ 10 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದೆ. ಈ ಮೊದಲು ಬಿಡುಗಡೆ ಮಾಡಿದ್ದ ಪಟ್ಟಿಯಲ್ಲಿ 40 ಅಭ್ಯರ್ಥಿಗಳಿಗೆ ಕಾಂಗ್ರೆಸ್ ತನ್ನ ಟಿಕೆಟ್ ಖಾತರಿಪಡಿಸಿತ್ತು. 60 ಸ್ಥಾನಗಳಿಗೆ ನಡೆಯಲಿರುವ ಈ ಚುನಾವಣೆಯಲ್ಲಿ ಪಕ್ಷವು ಈವರೆಗೆ 50 ಮಂದಿಯ ಉಮೇದುವಾರಿಕೆಯನ್ನು ಘೋಷಿಸಿದೆ. ಸಮಾಜವಾದಿ ಪಕ್ಷ, ಎನ್‌ಪಿಪಿ ಸಹ ತಮ್ಮ ಅಭ್ಯರ್ಥಿಗಳ ಮತ್ತೊಂದು ಪಟ್ಟಿಯನ್ನು ಬಿಡುಗಡೆ ಮಾಡಿವೆ

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್, ಗದಗ
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ-3/ಟೆಂಡರ/2021-22/4005 ದಿನಾಂಕ : 01-02-2022
ಇ-ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ
Standard Bid Document KW- 3 [ದ್ವಿಲಕೋಟೆ ಪದ್ಧತಿ]
ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-3ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್, ಮುಖಾಂತರ 01 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ:**2019-20ನೇ ಸಾಲಿನೆ ಬಯಲು ಸೀಮೆ ಪ್ರದೇಶಾಭಿವೃದ್ಧಿ ಯೋಜನೆ** ಅನುದಾನದಡಿ ಕೆಪಿಡಬ್ಲುಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ್ ಪೋರ್ಟಲ್, **https://eproc.karnataka.gov.in** ಮುಖಾಂತರ ಭಾಗವಹಿಸಬಹುದು. ವಿವರ ಈ ಕೆಳಗಿನಂತಿದೆ.

ಅ. ನಂ.	ಕಾಮಗಾರಿಯ ಹೆಸರು / ವರ್ಕ ಇಂಡೆಂಟ್	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇ-ಪೋರ್ಟಲ್ ಮುಖಾಂತರ ಇ.ಎಂ.ಡಿ. ಸಲ್ಲಿಸ-ಬೇಕಾದ ಮೊತ್ತ (ರೂ. ಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಮಿತಿ (ಮಳೆ ಗಾಲ ಅವಧಿ ಸೇರಿ)	ಗುತ್ತಿಗೆ-ದಾರರ ದರ್ಜೆ
1	CONSTRUCTION OF BRIDGE CUM BARRAGE ACROSS CHOGACHIHALLA ON LINGADAL -BALAGANUR ROAD IN GADAG TALUK, GADAG DIST. UNDER 2019-20 BADB **YOJANE. WORK_INDENT87174/Call-2**	**7367885.84**	**1,47,360/-**	**6** ತಿಂಗಳು	Valid PWD contractor can participate KW-3

ಇ-ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **02-02-2022** ರಿಂದ **09-02-2022** ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11-02-2022** ರಂದು 16.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **14-02-2022** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/515/2021-22

KEA
ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ / ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್‌ಗಳು)
ಫ್ಯಾಕ್ಸ್: 080-23461576 ಇ-ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in
ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.27/2021-22 ದಿನಾಂಕ: 02-02-2022
ಅಧಿಸೂಚನೆ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವ್ಯಾಪ್ತಿಯಲ್ಲಿರುವ ವಸತಿ ಶಾಲೆಗಳಲ್ಲಿ 2022-23ನೇ ಶೈಕ್ಷಣಿಕ ಸಾಲಿನ 6ನೇ ತರಗತಿಗೆ ಪ್ರವೇಶಾತಿ
ಸರ್ಕಾರದ ಆದೇಶ ಸಂಖ್ಯೆ ಸಕಇ 94 ಮೊದೇಶಾ 2020 ಬೆಂಗಳೂರು ದಿನಾಂಕ 19-06-2021 ಮತ್ತು 12-11-2021 ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪತ್ರ ಸಂಖ್ಯೆ ಕವಶಿಸಸಂ/ಶಿಕ್ಷಣ(1)/ಸಿಆರ್-16/2021-22 ದಿನಾಂಕ 17-01-2022 ಅನ್ವಯ, 2022-23ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ 6ನೇ ತರಗತಿ ಪ್ರವೇಶಕ್ಕೆ ಅಗತ್ಯವಾದ ಪ್ರವೇಶ ಪರೀಕ್ಷೆ ಮತ್ತು ಆನ್‌ಲೈನ್ ಕೌನ್ಸಿಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲಾಗುವುದು. 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು 6ನೇ ತರಗತಿಗೆ ವಸತಿ ಶಾಲೆಗಳಿಗೆ ದಾಖಲಿಸಲು, ದಿನಾಂಕ **03-02-2022 ರಿಂದ 22-02-2022 ರವರೆಗೆ** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳ ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ದಿನಾಂಕ **20-03-2022 ರಂದು** ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರವೇಶ ಪರೀಕ್ಷೆ ನಡೆಸಲಿದೆ. ಅರ್ಜಿ ಸಲ್ಲಿಸಲು ವರ್ಗಾವಾರು ವಾರ್ಷಿಕ ಆದಾಯದ ಮಿತಿ ಕೆಳಕಂಡಂತಿದೆ.

ಕ್ರ.ಸಂ.	ವಿದ್ಯಾರ್ಥಿಯ ವರ್ಗ	ಕುಟುಂಬದ ವಾರ್ಷಿಕ ಆದಾಯ ಮಿತಿ
01	ಪ.ಜಾತಿ/ಪರಿಶಿಷ್ಟ ವರ್ಗ	ರೂ. 2,50,000/-
02	ಹಿಂ.ವರ್ಗದ ಪ್ರವರ್ಗ-1	ರೂ. 2,50,000/-
03	ಹಿಂ.ವರ್ಗ 2ಎ, 2ಬಿ, 3ಎ ಮತ್ತು 3ಬಿ	ರೂ. 1,00,000/-

ಅರ್ಜಿ ಸಲ್ಲಿಸುವ ವಿಧಾನ, ಹಾಗೂ "ಮಾಹಿತಿ ಪುಸ್ತಕ-2022" ವನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಮತ್ತು ವಸತಿ ಶಿಕ್ಷಣ ಸಂಸ್ಥೆಗಳ ವೆಬ್‌ಸೈಟ್ http://kreis.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ. ಪರೀಕ್ಷೆಗೆ ಪ್ರವೇಶ ಪತ್ರಗಳನ್ನು **ದಿನಾಂಕ 14-03-2022 ರಿಂದ** ಈ ಮೇಲ್ಕಂಡ ವೆಬ್‌ಸೈಟ್‌ಗಳಿಂದ ಆಯಾ ವಸತಿ ಶಾಲೆಯಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು.
ಗಮನಿಸಿ: ಅಭ್ಯರ್ಥಿಯು ಈಗಾಗಲೇ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲೆಯಿಂದ SATS ಸಂಖ್ಯೆ, ಇತ್ತೀಚಿನ ಭಾವಚಿತ್ರ ಮತ್ತು ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳನ್ನು ಅಥವಾ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡು ಅರ್ಜಿ ಸಲ್ಲಿಸುವ ಸಮಯದಲ್ಲಿ ಸಂಬಂಧಿಸಿದ ವಸತಿ ಶಾಲೆ/ಕಾಲೇಜಿನ ಮುಖ್ಯಸ್ಥರನ್ನು ಸಂಪರ್ಕಿಸಬೇಕು.
ಪ್ರವೇಶ ಪರೀಕ್ಷೆ - 2022ರ ವೇಳಾಪಟ್ಟಿ

ದಿನಾಂಕ	ದಿನ	ಸಮಯ	ಅಂಕಗಳು
20-03-2022	ಭಾನುವಾರ	ಬೆ.11.00 ರಿಂದ ಮ.1.00	100

ವಸತಿ ಶಾಲೆಗಳ ಆಯ್ಕೆಯ ಆದ್ಯತಾ ಕ್ರಮದಲ್ಲಿ ನಮೂದಿಸುವ ಕುರಿತು: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಯಾವ ಶಾಲೆಗಳಲ್ಲಿ ದಾಖಲಾತಿ ಬಯಸುತ್ತಾರೋ, ಅಂತಹ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆದ್ಯತಾ ಕ್ರಮದಲ್ಲಿ ದಾಖಲಿಸುವ ಶಾಲೆಗಳನ್ನು ಮಾತ್ರ ಹಂಚಿಕೆಗೆ ಪರಿಗಣಿಸಲಾಗುವುದು. ಅಭ್ಯರ್ಥಿಗಳು ತಮ್ಮ ಸೀಟು ಹಂಚಿಕೆ ಅವಕಾಶವನ್ನು ಹೆಚ್ಚಿಸಿಕೊಳ್ಳಲು ತಮ್ಮ ಜಿಲ್ಲೆಯಲ್ಲಿರುವ KREIS ನ ಎಲ್ಲಾ ವಸತಿ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸತಕ್ಕದ್ದು. ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್, ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ Computerised Auto Selection ಮೂಲಕ ಸೀಟು ಹಂಚಿಕೆಯನ್ನು ಮಾಡಲಾಗುವುದು.
ಕೆಇಎ ಸಹಾಯವಾಣಿ ಸಂಖ್ಯೆಗಳು: 080 - 23 460 460 - (ಐದು ಲೈನುಗಳು - ಬೆ. 9.30 ರಿಂದ ಸಂ. 6.00)
ಸಹಿ/-
(ಎಸ್. ರಮ್ಯ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು
ವಾಸಾಸಂಇ/ಬೆಂ.ನ/3186/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಧಾನಸಭಾ ಚುನಾವಣೆಯ ಅತಿಕಿರಿಯ ಅಭ್ಯರ್ಥಿ ಪೂಜಾ ಶುಕ್ಲಾ ಎಸ್‌ಪಿ ಅಭ್ಯರ್ಥಿ

ಕಪ್ಪುಬಾವುಟ ತೋರಿಸಿದ್ದ ಯುವತಿಗೆ ಟಿಕೆಟ್

ಲಖನೌ (ಪಿಟಿಐ): ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಕಪ್ಪುಬಾವುಟ ಪ್ರದರ್ಶಿಸಿದ್ದ ಹಾಗೂ ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾಗಿದ್ದ 25 ವರ್ಷದ ಪೂಜಾ ಶುಕ್ಲಾ ಅವರಿಗೆ ಮುಖ್ಯವಾಹಿನಿಯ ರಾಜಕೀಯದ ಬಾಗಿಲು ತೆರೆದಿದೆ. ಸಮಾಜವಾದಿ ಪಕ್ಷವು ಅವರಿಗೆ ಟಿಕೆಟ್ ನೀಡಿದ್ದು, ಲಖನೌ ಉತ್ತರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸಿದೆ. ಅವರು ವಿಧಾನಸಭಾ ಚುನಾವಣೆಯ ಅತಿಕಿರಿಯ ಅಭ್ಯರ್ಥಿ ಎನಿಸಿದ್ದಾರೆ.

ಸರ್ಕಾರದ ನೀತಿಗಳನ್ನು ಖಂಡಿಸಿ 2017ರ ಜೂನ್‌ನಲ್ಲಿ ಪೂಜಾ ಶುಕ್ಲಾ ಅವರು ಇತರ 10 ಮಂದಿಯೊಂದಿಗೆ ಲಖನೌ ವಿಶ್ವವಿದ್ಯಾಲಯದ ರಸ್ತೆಯಲ್ಲಿ ಆದಿತ್ಯನಾಥ ಅವರ ಬೆಂಗಾವಲು ವಾಹನಗಳನ್ನು ತಡೆಯಲು ಯತ್ನಿಸಿ, ಕಪ್ಪು ಬಾವುಟ ಪ್ರದರ್ಶಿಸಿದ್ದರು. ಈ ಪ್ರತಿಭಟನೆಯ ಮೂಲಕ ಅವರು ಬೆಳಕಿಗೆ ಬಂದಿದ್ದರು.

ಪ್ರತಿಭಟನೆ ನಡೆಸಿದ ಶುಕ್ಲಾರನ್ನು ಜೈಲಿಗೆ ಕಳುಹಿಸಲಾಗಿತ್ತು. ಪ್ರಜಾಪ್ರಭುತ್ವದ ರೀತಿಯಲ್ಲಿ ಪ್ರತಿಭಟನೆ ನಡೆಸಿದ್ದರೂ ಜೈಲಿಗೆ ಕಳುಹಿಸಿದ್ದನ್ನು ಅವರು ಆಕ್ಷೇಪಿಸಿದ್ದರು. ಜೈಲಿಗೆ ಕಳುಹಿಸಲಾಗುತ್ತದೆ ಎಂಬುದರ ಅಂದಾಜೂ ಅವರಿಗೆ ಇರಲಿಲ್ಲ. ಆದರೆ ಸರಿದಾರಿಯಲ್ಲಿದ್ದ ತಮ್ಮ ಹೋರಾಟದ ಮೇಲೆ ನಂಬಿಕೆ ಇತ್ತು ಎಂದು ಅವರು ಘಟನೆಯನ್ನು ಮೆಲುಕು ಹಾಕಿದ್ದಾರೆ.

20 ದಿನಗಳ ಬಳಿಕ ಜೈಲಿನಿಂದ ಬಿಡುಗಡೆಯಾದ ಅವರು, ಎಸ್‌ಪಿ ವರಿಷ್ಠ ಮುಲಾಯಂ ಸಿಂಗ್ ಯಾದವ್ ಅವರನ್ನು ಭೇಟಿಯಾಗಿದ್ದರು. ಈ ಬಳಿಕ ಅವರು ಸಮಾಜವಾದಿ ಪಕ್ಷದ ವಿದ್ಯಾರ್ಥಿ ಘಟಕವಾದ ಛತ್ರ ಸಭಾದ ಪ್ರಮುಖ ಸದಸ್ಯೆಯಾಗಿ ಗುರುತಿಸಿಕೊಂಡರು.

ಏಕೆ ಸಮಾಜವಾದಿ ಪಕ್ಷವನ್ನು ಆಯ್ಕೆ ಮಾಡಿಕೊಂಡಿರಿ ಎಂದು ಪ್ರಶ್ನಿಸಿದಾಗ, 'ಮುಲಾಯಂ ಸಿಂಗ್ ಅವರ ಹೋರಾಟದ ಹಾದಿ ಹಾಗೂ ಅಖಿಲೇಶ್ ಅವರ ರಾಜಕೀಯ ಶೈಲಿಯಿಂದ ಪ್ರೇರಣೆಗೊಂಡು ಎಸ್‌ಪಿ ಆಯ್ಕೆ ಮಾಡಿಕೊಂಡೆ' ಎಂದಿದ್ದಾರೆ. ಬಿಜೆಪಿ ಹಾಗೂ ಅದರ ಬೆಂಬಲಿಗರು ನಿಯಮಗಳನ್ನು ಬೇಕಾಬಿಟ್ಟಿ ಉಲ್ಲಂಘಿಸುತ್ತಿರುವಾಗ, ಸಮಾಜವಾದಿ ಪಕ್ಷವು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಹತ್ತಿರವಾಗಿದೆ ಎಂಬುದನ್ನು ಕಂಡುಕೊಂಡೆ ಎಂದು ಅವರು ವಿವರಿಸಿದ್ದಾರೆ.

ಮುಖ್ಯಮಂತ್ರಿ ವಿರುದ್ಧ ಪ್ರತಿಭಟನೆ ನಡೆಸಿದ್ದ ಕಾರಣ, 2018ರಲ್ಲಿ ಲಖನೌ ವಿಶ್ವವಿದ್ಯಾನಿಲಯವು ಪೂಜಾ ಅವರಿಗೆ ಪ್ರವೇಶಾತಿ ನಿರಾಕರಿಸಿತ್ತು. ಹೀಗಾಗಿ ಅವರು ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದರು. ರಾಜಕಾರಣಿಯಾಗಿ, ವಿದ್ಯಾರ್ಥಿಗಳು ಹಾಗೂ ಯುವಜನರ ಹಕ್ಕುಗಳಿಗಾಗಿ ಹೋರಾಟ ಮುಂದುವರಿಸುವುದಾಗಿ ಅವರು ಹೇಳಿದ್ದಾರೆ.

'ಶಿಕ್ಷಣದ ಕಾರಣಕ್ಕೆ ವಿದ್ಯಾರ್ಥಿಗಳು ಹಾಗೂ ಯುವಕರು ರಾಜಕೀಯದಿಂದ ದೂರವಿರುತ್ತಾರೆ. ಇದು ಬದಲಾಗಬೇಕು. ರಾಜಕೀಯ ಅರಿವಿರುವ ವಿದ್ಯಾರ್ಥಿ ಮಾತ್ರ ಉತ್ತಮ ನಾಯಕನನ್ನು ಆಯ್ಕೆ ಮಾಡಲು ಸಾಧ್ಯ. ಈ ಮೂಲಕ ಯುವಜನರು ದೇಶದ ರಾಜಕೀಯವನ್ನು ಬದಲಾಯಿಸಿ ಅದನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬಹುದು' ಎಂದು ಪೂಜಾ ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹಾಗೂ ಸಂಸದೆ ಹೇಮಾಮಾಲಿನಿ ಅವರು ಮಥುರಾದಲ್ಲಿ ಪಕ್ಷದ ಚುನಾವಣಾ ಪ್ರಚಾರ ಸಭೆಯಲ್ಲಿ ಬುಧವಾರ ಭಾಗಿಯಾಗಿದ್ದರು–ಪಿಟಿಐ ಚಿತ್ರ

ಪಲ್ಲವಿ ಪಟೇಲ್, ಸ್ವಾಮಿ ಪ್ರಸಾದ್ ಮೌರ್ಯಗೆ ಟಿಕೆಟ್

ಕೇಂದ್ರ ಸಚಿವೆ ಅನುಪ್ರಿಯಾ ಪಟೇಲ್ ಅವರ ಸಹೋದರಿ ಪಲ್ಲವಿ ಪಟೇಲ್, ಯೋಗಿ ಸಂಪುಟದಲ್ಲಿ ಸಚಿವರಾಗಿದ್ದ ಸ್ವಾಮಿ ಪ್ರಸಾದ್ ಮೌರ್ಯ ಅವರಿಗೆ ಸಮಾಜವಾದಿ ಪಕ್ಷವು ಟಿಕೆಟ್ ಪ್ರಕಟಿಸಿದೆ. ಮಾಜಿ ಸಚಿವ ಅಭಿಷೇಕ್ ಮಿಶ್ರಾ ಅವರೂ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಪಲ್ಲವಿ ಅವರು ಕುಶಿನಗರ ಜಿಲ್ಲೆಯ ಫಜಿಲ್‌ನಗರ, ಮೌರ್ಯ ಅವರು ಕೌಶಂಭಿಯ ಸಿರಾತೂ, ಮಿಶ್ರಾ ಅವರು ಲಖನೌದ ಸರೋಜಿನಿ ನಗರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಯೋಗಿ ಸರ್ಕಾರದಲ್ಲಿ ಸಚಿವರಾಗಿದ್ದ ಮೌರ್ಯ ಅವರು ಇತ್ತೀಚೆಗೆ ಎಸ್‌ಪಿ ಸೇರಿದ್ದರು.

ಸಮಾಜವಾದಿ ಪಕ್ಷ ಬುಧವಾರ ಬಿಡುಗಡೆ ಮಾಡಿದ 10 ಅಭ್ಯರ್ಥಿಗಳ ಮತ್ತೊಂದು ಪಟ್ಟಿಯಲ್ಲಿ ಮುಲಾಯಂ ಸಿಂಗ್ ಯಾದವ್ ಅವರ ಕಿರಿ ಸೊಸೆ ಅಪರ್ಣಾ ಯಾದವ್ ಅವರಿಗೆ ಲಖನೌ ಕಂಟೋನ್ಮೆಂಟ್ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಇವರು 2017ರ ಚುನಾವಣೆಯಲ್ಲಿ ಸೋತಿದ್ದರು.

'ಬಿಜೆಪಿಯಿಂದ ನಕಾರಾತ್ಮಕ ರಾಜಕಾರಣ'

ಕೈರಾನಾ ವಲಸೆ ವಿಚಾರವನ್ನು ಇಟ್ಟುಕೊಂಡು ಬಿಜೆಪಿ ಕೆಟ್ಟ ರಾಜಕೀಯ ಮಾಡುತ್ತಿದೆ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.

ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರ ಜೊತೆಗೂಡಿ ಕೈರಾನಾದ ಶಾಮ್ಲಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅಖಿಲೇಶ್, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿರುದ್ಧ ಟೀಕಾಪ್ರಹಾರ ನಡೆಸಿದರು.

'ಬಿಜೆಪಿ ನಕಾರಾತ್ಮಕ ರಾಜಕಾರಣದಲ್ಲಿ ತೊಡಗಿದೆ. ಎಸ್‌ಪಿ-ಆರ್‌ಎಲ್‌ಡಿ ಸಂಬಂಧವು ಸಹೋದರತ್ವವನ್ನು ಪ್ರತಿನಿಧಿಸುತ್ತದೆ. ಕೈರಾನಾದಿಂದ ಕುಟುಂಬಗಳು ವಲಸೆ ಹೋಗಿದ್ದ ವಿಚಾರ ಪ್ರಸ್ತಾಪಿಸುತ್ತಿರುವವರು, ಚುನಾವಣೆ ಬಳಿಕ ರಾಜ್ಯದಿಂದ ವಲಸೆ ಹೋಗಬೇಕಾಗುತ್ತದೆ' ಎಂದು ತಿರುಗೇಟು ನೀಡಿದ್ದಾರೆ.

ರಾಯಬರೇಲಿ ವಶಕ್ಕೆ ಬಿಜೆಪಿ ತಂತ್ರ

ರಾಯಬರೇಲಿ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಅಮೇಠಿಗೆ ಲಗ್ಗೆ ಇಟ್ಟ ಮೇಲೆ, ಈ ಚುನಾವಣೆಯಲ್ಲಿ ರಾಯಬರೇಲಿ ಲೋಕಸಭಾ ಕ್ಷೇತ್ರದ ಅಡಿ ಬರುವ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಆರಿಸಿ ಬರುವ ಗುರಿಯನ್ನು ಬಿಜೆಪಿ ಹಾಕಿಕೊಂಡಿದೆ. ಈಗ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ನೆಲೆ ಭದ್ರವಾಗಿದ್ದ ಏಕೈಕ ಲೋಕಸಭಾ ಕ್ಷೇತ್ರವಿದು.

ಸೋನಿಯಾ ಗಾಂಧಿ

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪ್ರತಿನಿಧಿಸುತ್ತಿರುವ ರಾಯಬರೇಲಿ ಲೋಕಸಭಾ ಕ್ಷೇತ್ರದಲ್ಲಿ ಒಟ್ಟು ಆರು ವಿಧಾನಸಭಾ ಕ್ಷೇತ್ರಗಳಿವೆ. 2017ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಇಲ್ಲಿನ ಮೂರು ಕ್ಷೇತ್ರಗಳಲ್ಲಿ, ಎಸ್‌ಪಿ ಒಂದು ಕ್ಷೇತ್ರದಲ್ಲಿ ಜಯ ಸಾಧಿಸಿತ್ತು. ಎರಡು ಕ್ಷೇತ್ರಗಳನ್ನು ಉಳಿಸಿಕೊಳ್ಳುವಲ್ಲಿ ಮಾತ್ರ ಕಾಂಗ್ರೆಸ್ ಯಶಸ್ವಿಯಾಗಿತ್ತು.

ಈ ಹಿಂದಿನ ಚುನಾವಣೆಯಲ್ಲಿ ರಾಯಬರೇಲಿ ಸಾದರ್ ಮತ್ತು ಹರಚಾಂದ್‌ಪುರ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಅದಿತಿ ಸಿಂಗ್ ಮತ್ತು ರಾಕೇಶ್ ಸಿಂಗ್ ಜಯಗಳಿಸಿದ್ದರು. ಈಗ ಅವರಿಬ್ಬರನ್ನೂ ಬಿಜೆಪಿ ತನ್ನತ್ತ ಸೆಳೆದುಕೊಂಡಿದೆ. ಇಬ್ಬರೂ ಈಗ ಬಿಜೆಪಿ ಟಿಕೆಟ್‌ನಲ್ಲಿ ಕಣಕ್ಕೆ ಇಳಿದಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲೇಬೇಕು ಎಂದು ಪಟ್ಟು ಹಿಡಿದಿರುವ ಬಿಜೆಪಿ, ಮನೆ ಮನೆ ಭೇಟಿ ಸೇರಿದಂತೆ ಎಲ್ಲಾ ಸ್ವರೂಪದ ಪ್ರಚಾರವನ್ನು ಪರಿಣಾಮಕಾರಿಯಾಗಿ ನಡೆಸುತ್ತಿದೆ. ಬಿಜೆಪಿ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದೆ.

ಆದರೆ ಕಾಂಗ್ರೆಸ್‌ನ ಪ್ರಚಾರ ಕಾರ್ಯವು ಎದ್ದು ಕಾಣುತ್ತಿಲ್ಲ. ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎಸ್‌ಪಿ ಮೈತ್ರಿಕೂಟದ ಅಭ್ಯರ್ಥಿಗಳು ಕಣದಲ್ಲಿ ಇದ್ದರು. ಆದರೆ ಈ ಬಾರಿ ಕಾಂಗ್ರೆಸ್ ಮತ್ತು ಎಸ್‌ಪಿ ಪ್ರತ್ಯೇಕವಾಗಿ ಕಣದಲ್ಲಿವೆ. 'ಬಿಜೆಪಿ ರಾಯಬರೇಲಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಯುಪಿಎ ಅವಧಿಯಲ್ಲಿ ಮಾಡಲಾದ ಅಭಿವೃದ್ಧಿ ಯೋಜನೆಗಳನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದೆ. ಯುಪಿಎ ಸರ್ಕಾರವು ₹ 12,500 ಕೋಟಿ ಮೊತ್ತದ ವಿವಿಧ ಯೋಜನೆಗಳನ್ನು ಇಲ್ಲಿಗೆ ಮಂಜೂರು ಮಾಡಿತ್ತು. ಆದರೆ ಬಿಜೆಪಿ ಅವುಗಳ ಲಾಭವನ್ನು ಪಡೆದುಕೊಳ್ಳುತ್ತಿದೆ' ಎಂದು ಕಾಂಗ್ರೆಸ್ ವಕ್ತಾರ ವಿನಯ್ ದ್ವಿವೇದಿ ಹೇಳಿದ್ದಾರೆ.

'ಕಾಂಗ್ರೆಸ್‌ನ ಗಾಂಧಿ ಕುಟುಂಬದ ಜತೆಗೆ ರಾಯಬರೇಲಿಯ ಜನರು ಹೊಂದಿದ್ದ ನಂಟು ಈಗ ದುರ್ಬಲವಾಗಿದೆ. ಜನರು ಆ ನಂಟಿನಿಂದ ಈಗ ದೂರವಾಗುತ್ತಿದ್ದಾರೆ. ಇಂದಿರಾ ಗಾಂಧಿ ಅವರ ಅಧಿಕಾರದ ಅವಧಿಯಲ್ಲಿ ಆರಂಭಿಸಲಾಗಿದ್ದ ಕೈಗಾರಿಕೆಗಳು ಈಗ ಕಾರ್ಯನಿರ್ವಹಿಸುತ್ತಿಲ್ಲ. ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಇಲ್ಲಿ ಯಾವುದೇ ಪ್ರಭಾವವಿಲ್ಲ' ಎಂದು ರಾಕೇಶ್ ಸಿಂಗ್ ಹೇಳಿದ್ದಾರೆ.

ಈಗ ಬಿಜೆಪಿ ಅಭ್ಯರ್ಥಿಯಾಗಿರುವ ರಾಕೇಶ್, 'ಕಾಂಗ್ರೆಸ್ ಇಲ್ಲಿನ ಎಲ್ಲಾ ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಳ್ಳುವ ಸಾಧ್ಯತೆ ಅತ್ಯಧಿಕವಾಗಿದೆ' ಎಂದು ಅವರು ಹೇಳಿದ್ದಾರೆ.

ಪ್ರಿಯಾಂಕಾ ಕಿರುಕುಳ: ಅದಿತಿ

ರಾಯ ಬರೇಲಿ (ಉತ್ತರ ಪ್ರದೇಶ) (ಪಿಟಿಐ): 'ಪ್ರಿಯಾಂಕಾ ಗಾಂಧಿ ಕಿರುಕುಳ ನೀಡುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ನಾನು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದೆ ಎಂದು ಪಂಜಾಬ್‌ನಲ್ಲಿ ನನ್ನ ಪತಿಗೆ ಕಾಂಗ್ರೆಸ್ ಟಿಕೆಟ್ ನೀಡುತ್ತಿಲ್ಲ' ಎಂದು ರಾಯಬರೇಲಿ ಸಾದರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅದಿತಿ ಸಿಂಗ್ ಆರೋಪಿಸಿದ್ದಾರೆ.

2017ರ ಚುನಾವಣೆಯಲ್ಲಿ ರಾಯಬರೇಲಿ ಸದರ್ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕಿಯಾಗಿ ಆಯ್ಕೆಯಾಗಿದ್ದ ಅದಿತಿ ಸಿಂಗ್ ಅವರು ಈಚೆಗೆ ಬಿಜೆಪಿ ಸೇರಿದ್ದರು. ಈಗ ಬಿಜೆಪಿ ಟಿಕೆಟ್‌ನಿಂದ ಕಣಕ್ಕೆ ಇಳಿದಿದ್ದಾರೆ. ಅದಿತಿ ಅವರ ಪತಿ ಅಂಗದ್ ಸೈನಿ ಅವರು ಪಂಜಾಬ್ ಕಾಂಗ್ರೆಸ್‌ನಲ್ಲಿದ್ದಾರೆ. ಹಾಲಿ ಶಾಸಕರಾಗಿರುವ ಅವರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿದೆ. ಅವರು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ. ಇದರ ಮಧ್ಯೆಯೇ ಅದಿತಿ ಈ ಆರೋಪ ಮಾಡಿದ್ದಾರೆ.

'ಒಂದೇ ಕುಟುಂಬದಲ್ಲಿ ಇಬ್ಬರು ಭಿನ್ನ ಸಿದ್ಧಾಂತದ ವ್ಯಕ್ತಿಗಳು ಇರಬಾರದೇ? ನನಗೆ ಕಾಂಗ್ರೆಸ್‌ನ ಸಿದ್ಧಾಂತ ಹಿಡಿಸುವುದಿಲ್ಲ. ಆದರೆ ಅಂಗದ್ ಅವರಿಗೆ ಕಾಂಗ್ರೆಸ್ ಸಿದ್ಧಾಂತ ಒಪ್ಪುತ್ತದೆ. ಹೀಗಾಗಿ ಅವರು ಕಾಂಗ್ರೆಸ್‌ನಲ್ಲಿದ್ದಾರೆ. ಆದರೆ ನಾನು ಬಿಜೆಪಿ ಸೇರಿದೆ ಎಂಬ ಕಾರಣಕ್ಕೆ ಅಂಗದ್‌ಗೆ ಟಿಕೆಟ್ ನೀಡಿಲ್ಲ' ಎಂದು ಅದಿತಿ ಆರೋಪಿಸಿದ್ದಾರೆ.

'ಪ್ರಿಯಾಂಕಾ ಗಾಂಧಿ ಮಹಿಳಾ ಸಬಲೀಕರಣದ ಮಾತುಗಳನ್ನಾಡುತ್ತಾರೆ. ಆದರೆ ನಮ್ಮಂತಹ ಹೆಣ್ಣುಮಕ್ಕಳು ಗಂಡನ ಸಿದ್ಧಾಂತವನ್ನು ಹಿಂಬಾಲಿಸಬೇಕೆ?' ಎಂದು ಅವರು ಪ್ರಶ್ನಿಸಿದ್ದಾರೆ.

ಪಂಜಾಬ್ ಕಾಂಗ್ರೆಸ್ ನಾಯಕ ಜಾಖಡ್

ಸಿಎಂ ಆಗಲು ನನಗೆ 42 ಶಾಸಕರ ಬೆಂಬಲವಿತ್ತು

ಚಂಡೀಗಡ (ಪಿಟಿಐ): 'ಪಂಜಾಬ್‌ನ ಮುಖ್ಯಮಂತ್ರಿ ಸ್ಥಾನದಿಂದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಇಳಿದು, ಪಕ್ಷದಿಂದ ನಿರ್ಗಮಿಸಿದ ಬಳಿಕ ನಾನು ಮುಖ್ಯಮಂತ್ರಿ ಆಗಬೇಕು ಎಂದು 42 ಶಾಸಕರು ಬಯಸಿದ್ದರು' ಎಂದು ಪಂಜಾಬ್ ಕಾಂಗ್ರೆಸ್‌ನ ಹಿರಿಯ ನಾಯಕ ಸುನೀಲ್ ಜಾಖಡ್ ಅವರು ಹೇಳಿದ್ದಾರೆ.

ಮಂಗಳವಾರ ಪಕ್ಷದ ಕಾರ್ಯಕರ್ತರ ಜತೆ ನಡೆಸಿದ ಸಭೆಯೊಂದರಲ್ಲಿ ಅವರು ಈ ಮಾತು ಹೇಳಿದ್ದಾರೆ. ಈ ಸಭೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಸುನೀಲ್ ಜಾಖಡ್ ಅವರ ಸಂಬಂಧಿ ಸಂದೀಪ್ ಜಾಖಡ್ ಅವರು ಅಬೋಹರ್ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ. ಅಬೋಹರ್ ಕ್ಷೇತ್ರದಲ್ಲಿ ಮಂಗಳವಾರ ಸಾರ್ವಜನಿಕ ಸಭೆ ನಡೆಸಿದ್ದ ಅವರು ಹೀಗೆ ಹೇಳಿದ್ದರು ಎನ್ನಲಾಗಿದೆ.

ಸುನೀಲ್ ಜಾಖಡ್‌ಗೆ 42 ಮತಗಳು, ಸುಖ್ವಿಂದರ್ ರಾಂಧವಾ ಅವರಿಗೆ 16 ಮತಗಳು, ಮಹಾರಾಣಿ ಪ್ರಣೀತ್ ಕೌರ್‌ಗೆ (ಅಮರಿಂದರ್ ಸಿಂಗ್ ಅವರ ಪತ್ನಿ, ಪಟಿಯಾಲ ಸಂಸದೆ) 12 ಮತಗಳು, ನವಜೋತ್ ಸಿಂಗ್ ಸಿಧುಗೆ ಆರು ಮತ್ತು ಚರಣ್‌ಜಿತ್ ಸಿಂಗ್ ಚನ್ನಿಗೆ ಎರಡು ಮತಗಳು ದೊರಕಿದ್ದವು ಎಂದು ಜಾಖಡ್ ಹೇಳಿದ್ದರು.

'ಮುಖ್ಯಮಂತ್ರಿ ಯಾರಾಗಬೇಕು ಎಂದು 79 ಶಾಸಕರನ್ನು ಪಕ್ಷವು ಕೇಳಿತ್ತು. 42 ಶಾಸಕರು ನನಗೆ ಮತ ನೀಡಿದ್ದರು. ಆ ವೇಳೆ ನಾನು ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹುದ್ದೆಯಲ್ಲಿ ಸಹ ಇರಲಿಲ್ಲ' ಎಂದರು.

ಅಮರಿಂದರ್ ಸಿಂಗ್ ಪಕ್ಷ ತೊರೆದ ಬಳಿಕ ಸಿಖ್ ಸಮುದಾಯದ ವ್ಯಕ್ತಿಯನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಕಾಂಗ್ರೆಸ್ ಹಿರಿಯ ನಾಯಕಿ ಅಂಬಿಕಾ ಸೋನಿ ಅವರು ಹೇಳಿಕೆ ನೀಡಿದ್ದರು. ಬಳಿಕ, ಪಂಜಾಬ್ ಮುಖ್ಯಮಂತ್ರಿ ಸ್ಥಾನಕ್ಕೆ ನಡೆದ ಸ್ಪರ್ಧೆಯಲ್ಲಿ ಸುನೀಲ್ ಜಾಖಡ್ ಅವರ ಹೆಸರು ಮುಂಚೂಣಿಯಲ್ಲಿತ್ತು. ಆದರೆ ಪಕ್ಷವು ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿತು. ಪರಿಶಿಷ್ಟ ಜಾತಿಯಿಂದ ಪಂಜಾಬ್ ಮುಖ್ಯಮಂತ್ರಿ ಸ್ಥಾನಕ್ಕೇರಿದ ಮೊದಲ ವ್ಯಕ್ತಿ ಚನ್ನಿ.

ಪಂಜಾಬ್ ಚುನಾವಣೆಗೂ ಮುನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಕಾಂಗ್ರೆಸ್ ಘೋಷಿಸಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೇಳಿದ್ದರು. ಚನ್ನಿ ಮತ್ತು ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಅವರು ತಾವು ಮುಖ್ಯಮಂತ್ರಿ ಅಭ್ಯರ್ಥಿಗಳು ಎಂದು ಬಿಂಬಿಸಿಕೊಳ್ಳುವ ಅವಕಾಶಗಳನ್ನು ತಪ್ಪಿಸಿಕೊಳ್ಳುತ್ತಿಲ್ಲ.



> ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನನಗೆ ಪಂಜಾಬ್‌ನ ಉಪಮುಖ್ಯಮಂತ್ರಿ ಸ್ಥಾನ ನೀಡಿದ್ದರು. ನಾನು ಅದನ್ನು ನಿರಾಕರಿಸಿದ್ದೆ
> **ಸುನೀಲ್ ಜಾಖಡ್,** ಪಂಜಾಬ್ ಕಾಂಗ್ರೆಸ್ ಹಿರಿಯ ನಾಯಕ

ಗೋವಾ: ಆಮ್ ಆದ್ಮಿ ಪಕ್ಷದ ಅಭ್ಯರ್ಥಿಗಳಿಂದ ಶಪಥಪತ್ರಕ್ಕೆ ಸಹಿ

ಪಣಜಿ (ಪಿಟಿಐ): ತಾವು 'ಭ್ರಷ್ಟಾಚಾರ' ಮತ್ತು 'ಪಕ್ಷಾಂತರ'ದಲ್ಲಿ ಭಾಗಿ ಆಗುವುದಿಲ್ಲ ಎಂದು ಬರೆಯಲಾಗಿರುವ ಶಪಥಪತ್ರಕ್ಕೆ ಗೋವಾ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಎಲ್ಲಾ 40 ಅಭ್ಯರ್ಥಿಗಳೂ ಬುಧವಾರ ಸಹಿ ಹಾಕಿದರು.

'ಗೋವಾ ಎದುರಿಸುತ್ತಿರುವ ಅತಿದೊಡ್ಡ ಸಮಸ್ಯೆ ಎಂದರೆ ಪಕ್ಷಾಂತರ. ಜನರು ನಮ್ಮ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡುವ ಮೊದಲೇ ನಾವು ಆ ಪ್ರವೃತ್ತಿಯನ್ನು ಬೇರು ಸಮೇತ ಕಿತ್ತುಹಾಕಲಿದ್ದೇವೆ' ಎಂದು ದೆಹಲಿ ಮುಖ್ಯಮಂತ್ರಿ, ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಎಎಪಿಯ ಎಲ್ಲಾ ಅಭ್ಯರ್ಥಿಗಳೂ ಈ ವೇಳೆ ಶಪಥಪತ್ರದ ಜೊತೆ ಹಾಜರಿದ್ದರು.

ತಮ್ಮ ಪಕ್ಷದ ಅಭ್ಯರ್ಥಿಗಳು ಶಾಸಕರಾಗಿ ಆಯ್ಕೆ ಆದ ಬಳಿಕ ಯಾವುದೇ ರೀತಿಯ ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲ. ಪಕ್ಷ ತೊರೆದು ಬೇರೆ ಪಕ್ಷಗಳಿಗೆ ಸೇರುವುದಿಲ್ಲ. ಈ ಶಪಥಪತ್ರದಲ್ಲಿರುವ ನಿಬಂಧನೆಗಳನ್ನು ಎಎಪಿ ಅಭ್ಯರ್ಥಿ ಮೀರಿದರೆ ಅದು ಕಾನೂನಾತ್ಮಕವಾಗಿ ನಂಬಿಕೆಯ ಉಲ್ಲಂಘನೆ ಆಗಲಿದೆ.

ಈ ಶಪಥಪತ್ರಗಳ ಪ್ರತಿಗಳನ್ನು ಮತದಾರರಿಗೆ ಎಎಪಿ ಅಭ್ಯರ್ಥಿಗಳು ಹಂಚಲಿದ್ದಾರೆ. ಗೋವಾದಲ್ಲಿ ಪ್ರಾಮಾಣಿಕ ಸರ್ಕಾರವನ್ನು ನೀಡಲು ತಮ್ಮ ಪಕ್ಷ ಬದ್ಧವಾಗಿದೆ. ಅದಕ್ಕಾಗಿ ಪಕ್ಷಾಂತರವನ್ನು ದೂರ ಇರಿಸುವುದು ಅತಿ ಮುಖ್ಯ ಎಂದು ಕೇಜ್ರಿವಾಲ್ ಹೇಳಿದರು. ಕೇಜ್ರಿವಾಲ್ ಗೋವಾಕ್ಕೆ ನಾಲ್ಕು ದಿನಗಳ ಪ್ರವಾಸಕ್ಕಾಗಿ ಆಗಮಿಸಿದ್ದಾರೆ.

ನಿತ್ಯ ಪತ್ರಿಕೆ ಓದಿ..

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುವವರು ಕಡ್ಡಾಯವಾಗಿ ದಿನಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳಬೇಕು.ಆಸಕ್ತಿಯಿಂದ ಪತ್ರಿಕೆಗಳನ್ನು ಓದುವವರೊಂದಿಗೂ ದಿನದ ವಿದ್ಯಮಾನಗಳನ್ನು ಚರ್ಚಿಸಿ. ಇದರಿಂದ ವಿಷಯಗಳು ಮನದಟ್ಟಾಗುತ್ತವೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆ ಹಾಗೂ ಕೆಎಸ್‌ಆರ್‌ಪಿ-ಐಆರ್‌ಬಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ಮಾದರಿ ಪ್ರಶ್ನೋತ್ತರ

ಭಾಗ 7

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್-ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹುದ್ದೆಗಳು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ಶೀಘ್ರದಲ್ಲೇ ನಡೆಯಲಿವೆ. ಎರಡೂ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮ ದಿನದ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಕೆಂಪುಕೋಟೆಯಲ್ಲಿ ನೇತಾಜಿ ವಸ್ತು ಸಂಗ್ರಹಾಲಯ ಆರಂಭಿಸಲು ನಿಶ್ಚಯಿಸಲಾಗಿದೆ
2. ಜಪಾನ್ ಮಾಜಿ ಪ್ರಧಾನಿ ಶಿಂಜೋ ಅಬೆಗೆ ನೇತಾಜಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ
3. ದೆಹಲಿಯ ಇಂಡಿಯಾ ಗೇಟ್‌ನಲ್ಲಿ ನೇತಾಜಿ ಬೋಸ್ ಪ್ರತಿಮೆ ಸ್ಥಾಪನೆ ಯೋಜನೆ
4. ನಮ್ಮ ರಾಜ್ಯದಲ್ಲಿ 'ನೇತಾಜಿ ಅಮೃತ ಶಾಲೆಗಳಲ್ಲಿ 7500 ವಿದ್ಯಾರ್ಥಿಗಳಿಗೆ ಎನ್‌ಸಿಸಿ ತರಬೇತಿ ನೀಡಲು ನಿಶ್ಚಯಿಸಲಾಗಿದೆ

ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ) ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 1ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಸಿ) ಹೇಳಿಕೆ 1, 2,3 ಮಾತ್ರ ಸರಿಯಾಗಿದೆ
ಡಿ) ಮೇಲಿನ ಯಾವುದೂ ಸರಿಯಾಗಿಲ್ಲ

ಉತ್ತರ:ಬಿ

2) ಇತಿಹಾಸದಲ್ಲಿ ಭಾರತ ಮತ್ತು ಚೀನಾ ನಡುವೆ ಅತಿ ಹೆಚ್ಚು ವ್ಯಾಪಾರ ನಡೆದು ದಾಖಲೆ ಸೃಷ್ಟಿಯಾಗಿರುವುದು 2021ರಲ್ಲಿ. ಹಾಗಾದರೆ ಉಭಯ ದೇಶಗಳ ನಡುವೆ ಎಷ್ಟು ಮೊತ್ತದ ದ್ವಿಪಕ್ಷೀಯ ವ್ಯವಹಾರ ನಡೆದಿದೆ?

ಎ) ₹ 9.25 ಲಕ್ಷ ಕೋಟಿ ಬಿ) ₹ 10 .25 ಲಕ್ಷ ಕೋಟಿ
ಎ) ₹11 ಲಕ್ಷ ಕೋಟಿ ಡಿ) ₹15 ಲಕ್ಷ ಕೋಟಿ

ಉತ್ತರ: ಎ

3) 128 ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಲು ರಾಷ್ಟ್ರಪತಿಯವರು ಅನುಮೋದಿಸಿದ್ದಾರೆ. ಇದರಲ್ಲಿ 4 ಪದ್ಮವಿಭೂಷಣ, 17 ಪದ್ಮಭೂಷಣ ಮತ್ತು 107 ಪದ್ಮಶ್ರೀ ಪ್ರಶಸ್ತಿಗಳು ಇವೆ . ಪ್ರಶಸ್ತಿ ಪುರಸ್ಕೃತರಲ್ಲಿ ....ಮಹಿಳೆಯರು ಮತ್ತು 10 ವಿದೇಶಿಯರು ಮತ್ತು ಮರಣೋತ್ತರವಾಗಿ ಪ್ರಶಸ್ತಿಗೆ ಭಾಜನರಾದವರು 13 ಮಂದಿ.

ಎ) 34 ಬಿ) 39 ಸಿ) 47 ಡಿ) 22

ಉತ್ತರ: ಎ

4) 'ಗ್ರಾಮ್ ಒನ್' ಏನಿದು?



ಎ) ಕಂದಾಯ, ಆಹಾರ, ಕಾರ್ಮಿಕ ಹೀಗೆ ವಿವಿಧ ಇಲಾಖೆಗಳ ಹಲವು ಸೇವೆಗಳನ್ನು ಗ್ರಾಮೀಣ ಜನರ ಮನೆ ಬಾಗಿಲಿಗೆ ತಲುಪಿಸುವ ಯೋಜನೆ

ಬಿ) ಪ್ರತಿ ಗ್ರಾಮದಲ್ಲಿಯೂ ಸರ್ಕಾರದ ಎಲ್ಲಾ ಇಲಾಖೆಗಳನ್ನು ಒಂದೇ ಕಟ್ಟಡದಲ್ಲಿ ಇರುವಂತೆ ನೋಡಿಕೊಳ್ಳಲು ಒಂದು ಬೃಹತ್ ಕಟ್ಟಡ ನಿರ್ಮಿಸುವುದು

ಸಿ) ವಿದ್ಯುತ್ ಬಿಲ್ ಪಾವತಿ, ನೀರಿನ ಬಿಲ್ಲು ಪಾವತಿ, ಶಾಲಾ ಶುಲ್ಕ ಪಾವತಿ, ಹೀಗೆ ವಿವಿಧ ಸರ್ಕಾರಿ ಬಿಲ್‌ಗಳನ್ನು ಪಾವತಿಸಲು ಮುಖ್ಯ ಗ್ರಾಮದಲ್ಲಿರುವ ಒಂದು ಕೇಂದ್ರ. ಆ ಮುಖ್ಯ ಗ್ರಾಮದ ಸುತ್ತಮುತ್ತಲಿರುವ 5 ಗ್ರಾಮಗಳ ನಾಗರಿಕರು ಅಲ್ಲಿಗೆ ಬಂದು ಬಿಲ್ ಪಾವತಿಸಲು ಅವಕಾಶ ಸಿಗಲಿದೆ.

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

5) 'ನಮ್ಮ ರಾಜ್ಯ ಸರ್ಕಾರದಿಂದ ಯಾವ ದಿನವನ್ನು ದಾಸೋಹ ದಿನ ಎಂದು ಆಚರಿಸಲಾಗುತ್ತದೆ?

ಎ) ಫೆಬ್ರುವರಿ 21 ಬಿ) ಜನವರಿ 21
ಸಿ) ಮಾರ್ಚ್ 24 ಡಿ) ಮೇ 26

ಉತ್ತರ: ಬಿ

6) ದೇಶದ ಪ್ರಪ್ರಥಮ ಮತ್ತು ಏಷ್ಯಾದ ಅತಿದೊಡ್ಡ 'ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ ಉತ್ಕೃಷ್ಟತಾ ಕೇಂದ್ರ'ಕ್ಕೆ (ಎವಿಜಿಸಿ ಸೆಂಟರ್ ಆಫ್ ಎಕ್ಸಲೆನ್ಸ್) ಚಾಲನೆ ನೀಡಲಾಗಿದೆ. ಹಾಗಾದರೆ ಅದು ಎಲ್ಲಿದೆ?

ಎ) ಕೋಲ್ಕತ್ತಾದ ಹಾಜಿಯಾ
ಬಿ) ಕರ್ನಾಟಕದ ಮಹದೇವಪುರ(ಬೆಂಗಳೂರು)
ಸಿ) ಮಹಾರಾಷ್ಟ್ರದ ಕೊಲ್ಲಾಪುರ ಡಿ) ಗುಜರಾತಿನ ಗಾಂಧಿನಗರ

ಉತ್ತರ: ಬಿ

7) ಕೋವಿಡ್-19 ಕಾರಣಕ್ಕಾಗಿ ಈ ಕೆಳಗಿನ ಯಾವ ದೇಶದ ಪ್ರಧಾನಿ ತಮ್ಮ ಮದುವೆಯನ್ನೇ ಮುಂದೂಡಿದರು?

ಎ) ಆಸ್ಟ್ರೇಲಿಯಾ ಬಿ) ನೇಪಾಳ
ಸಿ) ವೆನೆಜುವೆಲಾ ಡಿ) ನ್ಯೂಜಿಲೆಂಡ್

ಉತ್ತರ: ಡಿ

8) ರಾಷ್ಟ್ರಪತಿಯವರ ಬೆಂಗಾವಲು ಪಡೆಯ ಕಮಾಂಡಂಟ್ ಸವಾರಿಗೆ ಬಳಸಲಾಗುತ್ತಿದ್ದ ಕುದುರೆ ನಿವೃತ್ತವಾಗಿದೆ. ಆ ಕುದುರೆಯ ಹೆಸರೇನು?

ಎ) ವಿಜಯ್ ಬಿ) ವಿಕಾಸ್ ಸಿ) ವಿರಾಟ್ ಡಿ) ವಿಭೂತಿ

ಉತ್ತರ: ಸಿ

9) ಗಣರಾಜ್ಯೋತ್ಸವ ಸಂದರ್ಭದಲ್ಲಿ ಎಷ್ಟು ವರ್ಷಗಳ ನಂತರ ಕಾಶ್ಮೀರದ ಲಾಲ್ ಚೌಕದಲ್ಲಿ ನಮ್ಮ ರಾಷ್ಟ್ರಧ್ವಜ ಹಾರಿತು?

ಎ) 40 ಬಿ) 20 ಸಿ) 30 ಡಿ) 10

ಉತ್ತರ: ಸಿ

ವಿವರಣೆ: 30 ವರ್ಷಗಳ ನಂತರ ಶ್ರೀನಗರದ ಲಾಲ್ ಚೌಕಿನಲ್ಲಿ ಗಣರಾಜ್ಯೋತ್ಸವ ಧ್ವಜಾರೋಹಣ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನಲ್

ನಿಮಗಿದು ಗೊತ್ತೆ?

ಕಾಮಾಲೆ ರೋಗ

ಕಾಮಾಲೆ, ಪಿತ್ತಕೋಶಕ್ಕೆ ಸಂಬಂಧಿಸಿದ ಒಂದು ರೋಗ. ತ್ವಚೆ ಮತ್ತು ಕಣ್ಣು ಹಳದಿ ಬಣ್ಣಕ್ಕೆ ತಿರುಗುವುದು ರೋಗದ ಲಕ್ಷಣ. ರಕ್ತದೊಂದಿಗೆ ಪಿತ್ತರಸ (Bile) ಬೆರೆತಾಗ, ಅದರ ಸ್ವಲ್ಪ ಭಾಗ ತ್ವಚೆಯ ಒಳಪದರಗಳಲ್ಲಿ ಸಂಗ್ರಹವಾಗಿ ಹಳದಿ ಬಣ್ಣ ಕಾಣಿಸಿಕೊಳ್ಳುತ್ತದೆ.

ಕಾಮಾಲೆ ರೋಗದ ಲಕ್ಷಣ, ಕೃತಕ ಬೆಳಕಿಗಿಂತ ಸೂರ್ಯನ ಬೆಳಕಿನಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ರಕ್ತದಲ್ಲಿ ಸೇರಿಕೊಂಡ ಪಿತ್ತರಸದ ವರ್ಣದ್ರವ್ಯಗಳ ಶೇಖರಣೆ, ಕಣ ವಿಭಜನೆಯ ಗತಿ, ಈ ಕಣಗಳು ವರ್ಣದ್ರವ್ಯಗಳನ್ನು ಎಷ್ಟರ ಮಟ್ಟಿಗೆ ವಿಲೀನಗೊಳಿಸುತ್ತವೆ ಎಂಬುದನ್ನು ಅನುಸರಿಸಿ, ಈ ಹಳದಿ ಬಣ್ಣ ಗೋಚರಿಸುತ್ತದೆ.

ಯಕೃತ್ತಿನಲ್ಲಿ ಉತ್ಪತ್ತಿಯಾದ ಪಿತ್ತರಸ ಸಣ್ಣ ಕರುಳಿನಲ್ಲಿರುವ ಜಿಡ್ಡು ಅಥವಾ ಕೊಬ್ಬು ಪದಾರ್ಥಗಳ ಮೇಲೆ ದಾಳಿ ಮಾಡಿ, ಅವನ್ನು ಚೂರಾಗಿಸುತ್ತವೆ. ಇದರಿಂದ ಅವನ್ನು ಹೀರಿಕೊಳ್ಳಲು ಸುಲಭವಾಗುತ್ತದೆ. ಪಿತ್ತರಸದಲ್ಲಿನ ಹೆಚ್ಚು ಪಾಲು ಲವಣಗಳನ್ನು (Bile salts) ರಕ್ತವೇ ಹೀರಿಕೊಳ್ಳುತ್ತದೆ.

ಪಿತ್ತಕೋಶ ಅಥವಾ ಯಕೃತ್ತು ಅತಿ ಹೆಚ್ಚು ಪಿತ್ತರಸವನ್ನು ಸ್ರವಿಸುವುದೇ ಕಾಮಾಲೆ ರೋಗಕ್ಕೆ ಸಾಮಾನ್ಯ ಕಾರಣ. ಹುಟ್ಟಿನಿಂದಲೇ ಕೆಲವು ದೋಷಗಳು ಪಿತ್ತರಸದಲ್ಲಿನ ವರ್ಣದ್ರವ್ಯಗಳನ್ನು ಹೊರ ಹಾಕುವ ಕಾರ್ಯವನ್ನು ಕುಂಠಿತಗೊಳಿಸುತ್ತವೆ. ಇದರಿಂದ ಕಾಮಾಲೆ ರೋಗ ತಲೆದೋರ ಬಹುದು. ಕೆಲವೊಮ್ಮೆ ಯಕೃತ್ತಿನ ಕೆಲವು ರೋಗಗಳೂ ಯಕೃತ್ತಿನ ಕೋಶಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಕ್ಕೆ ಅಡ್ಡಿ ಉಂಟು ಮಾಡುತ್ತದೆ. ಇದರಿಂದಾಗಿಯೂ ಕಾಮಾಲೆ ಬರುವ ಸಾಧ್ಯತೆ ಇರುತ್ತದೆ.

'ಸಾಮಾನ್ಯ ಜ್ಞಾನ' ಕುರಿತ ಇನ್ನಷ್ಟು ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಬಾಲ್ಯದ ಕನಸೇ ನನ್ನನ್ನು ಪೊಲೀಸ್ ಮಾಡಿದ್ದು..!

ಕರ್ನಾಟಕ ಪೊಲೀಸ್ ಇಲಾಖೆ ಇತ್ತೀಚೆಗೆ ನಡೆಸಿದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವಿಜಯಪುರದ ಬಸವನಬಾಗೇವಾಡಿಯ ರಚನಾ ಹನುಮಂತ ಅವರು ಮಹಿಳಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಆಯ್ಕೆಯಾಗಿದ್ದಾರೆ. ಅವರೊಂದಿಗೆ 'ಪ್ರಜಾವಾಣಿ' ನಡೆಸಿದ ಸಂದರ್ಶನದಲ್ಲಿ ತಮ್ಮ ಸಾಧನೆಯ ಜೊತೆಗೆ, ಪರೀಕ್ಷೆ ಸಿದ್ಧತೆಯ ಕುರಿತು ಮಾತನಾಡಿದ್ದಾರೆ.

ಬಸವರಾಜ್ ಸಂಪಳ್ಳಿ

- **ಪ್ರಥಮ ಸ್ಥಾನ ಪಡೆದಿದ್ದೀರಿ. ಹೇಗನ್ನಿಸುತ್ತಿದೆ?**

ತುಂಬಾ ಖುಷಿಯಾಗಿದೆ. ಹೆಮ್ಮೆ ಎನ್ನಿಸುತ್ತಿದೆ. ಮೊದಲ ಸ್ಥಾನ ಬರುವ ನಿರೀಕ್ಷೆ ಇರಲಿಲ್ಲ. ಆದರೆ, ಪ್ರಶ್ನೆ ಪತ್ರಿಕೆ ಕೀ ಆನ್ಸರ್ ಪ್ರಕಟವಾದಾಗಲೇ ನಾನು ಆಯ್ಕೆಯಾಗುತ್ತೇನೆ ಎಂಬ ವಿಶ್ವಾಸವಿತ್ತು. ಪೊಲೀಸ್ ಇಲಾಖೆಯಲ್ಲಿ ಇನ್ನೂ ಉನ್ನತ ಹುದ್ದೆಗೆ ಹೋಗಬೇಕು ಎಂಬ ಬಯಕೆ ಇದೆ.

- **ನಿಮ್ಮೂರು, ಬಾಲ್ಯ, ಶಿಕ್ಷಣ ಹೇಗಿತ್ತು?**

ನಮ್ಮದು ಬಸವನಬಾಗೇವಾಡಿ. ತಾಯಿ ಸಾವಿತ್ರಿ ಮುತ್ತಲಗೇರಿ ಆಶ್ರಯದಲ್ಲಿ ಬೆಳೆದೆ. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಪೂರೈಸಿದೆ. ಬಾಗಲಕೋಟೆಯ ಬಸವೇಶ್ವರ ಶಿಶುವಿಹಾರದಲ್ಲಿ ಪ್ರೌಢಶಿಕ್ಷಣ, ಅಲ್ಲಿನ ವಾಗ್ದೇವಿ ಪಿಯು ವಿಜ್ಞಾನ ಕಾಲೇಜಿನಲ್ಲಿ ಪಿಯುಸಿ, ಬೆಳಗಾವಿಯ ಬಾಳೆಕುಂದ್ರಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ(ಎಲೆಕ್ಟ್ರಿಕಲ್ಸ್) ಪೂರೈಸಿದೆ. ಸದ್ಯ, ವಿಜಯಪುರ ಜಿಲ್ಲೆ ಕೂಡಗಿ ಎನ್‌ಟಿಪಿಸಿಯಲ್ಲಿ ಮೂರು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಎಕ್ಸಿಕ್ಯೂಟಿವ್ ಆಗಿ ಕಾರ್ಯನಿರ್ವಹಿಸುತ್ತಿದ್ದೆ.

- **ಪೊಲೀಸ್ ಇಲಾಖೆಗೆ ಸೇರಬೇಕು ಎನಿಸಿದ್ದು ಏಕೆ?**

– ಸೈರನ್ (ಕೆಂಪು ಲೈಟ್) ಹಾಕಿಕೊಂಡು ಸುತ್ತಾಡುವ ಪೊಲೀಸ್ ಜೀಪಿನ ಬಗ್ಗೆ ಬಾಲ್ಯದಿಂದಲೂ ಎಲ್ಲಿಲ್ಲದ ಕುತೂಹಲ. ಆ ಜೀಪಿನಲ್ಲಿ ನಾನೂ ಕುಳಿತು ಸುತ್ತಾಡಬೇಕು, ದಕ್ಷ ಪೊಲೀಸ್ ಅಧಿಕಾರಿಯಾಗಬೇಕು ಎಂಬುದು ಬಾಲ್ಯದ ಕನಸಾಗಿತ್ತು. ಆ ಬಾಲ್ಯದ ಕನಸು ಇದೀಗ ನನಸಾಗಿದೆ. ಪೊಲೀಸ್ ಆಗಬೇಕು ಎಂಬ ಭಂಡ ಧೈರ್ಯ ನನ್ನನ್ನು ಇಲ್ಲಿಗೆ ತಂದು ನಿಲ್ಲಿಸಿದೆ.

- **ಪರೀಕ್ಷೆಗೆ ಸಿದ್ಧತೆ ಹೇಗೆ ಮಾಡಿದ್ದೀರಿ? ಕೋಚಿಂಗ್ ಹೇಗೆ ತಗೊಂಡಿರಿ?**

> **"ಸಾಮಾನ್ಯ ಜ್ಞಾನಕ್ಕಾಗಿ ಪ್ರಜಾವಾಣಿ ಪತ್ರಿಕೆ ಮತ್ತು 'ಅರಿ' ಪುಸ್ತಕವನ್ನು ಓದುತ್ತಿದ್ದೆ. ಇವೆರಡೂ ಪರೀಕ್ಷೆಯಲ್ಲಿ ನನ್ನ ನೆರವಿಗೆ ಬಂತು. 'ಜಿಕೆ ಟುಡೇ' ಮ್ಯಾಗಜಿನ್ ಹಾಗೂ ಎನ್‌ಸಿಆರ್‌ಟಿಇ ಪಿಯುಸಿ ಪುಸ್ತಕಗಳ ಅಭ್ಯಾಸ ನನಗೆ ಪರೀಕ್ಷೆ ಎದುರಿಸಲು ಸಹಾಯವಾಯಿತು"**
>
> **ರಚನಾ**

ಈ ಮೊದಲು ಎರಡು ಬಾರಿ ಪಿಎಸ್‌ಐ ಪರೀಕ್ಷೆ ಎದುರಿಸಿದ್ದೆ. ಯಶಸ್ವಿಯಾಗಿರಲಿಲ್ಲ. ಆದರೆ, ಮೂರನೇ ಬಾರಿ ಬಹಳ ವಿಶ್ವಾಸದಿಂದ ಪರೀಕ್ಷೆ ಎದುರಿಸಿ ಯಶಸ್ವಿಯಾಗಿರುವೆ. ಕೆಲಸದ ನಡುವೆಯೇ ಎರಡು ವರ್ಷಗಳ ಕೋವಿಡ್ ಅವಧಿಯಲ್ಲಿ ಈ ಪರೀಕ್ಷೆಗಾಗಿ ಉತ್ತಮ ತಯಾರಿ ನಡೆಸಿದ್ದೆ. ಕೂಡಗಿ ಎನ್‌ಟಿಪಿಸಿಯಲ್ಲಿ ಸಹೋದ್ಯೋಗಿ ವಿಜಯ್ ಹೂಗಾರ್ ಮಾರ್ಗದರ್ಶನ ನನಗೆ ಪರೀಕ್ಷೆ ಎದುರಿಸುವುದು ಸುಲಭವಾಗಿಸಿತು. ಅಲ್ಲದೇ, ಪ್ರತಿ ದಿನ ಮುಂಜಾನೆ 3 ಗಂಟೆಗೆ ನನ್ನ ತಾಯಿ ಎಬ್ಬಿಸುತ್ತಿದ್ದರು, ರನ್ನಿಂಗ್, ಲಾಂಗ್‌ಜಂಪ್, ಶಾಟ್‌ಪಟ್ ಅಭ್ಯಾಸ ಮಾಡುವ ಮೂಲಕ ದೈಹಿಕ ಪರೀಕ್ಷೆಗೆ ಅಭ್ಯಾಸ ಮಾಡಿದೆ. ಬಳಿಕ ಬೆಳಿಗ್ಗೆ 6 ರಿಂದ 9.30ರ ವರೆಗೆ ಹಾಗೂ ರಾತ್ರಿ 8ರಿಂದ 12 ವರೆಗೆ ಪ್ರತಿದಿನ ತಪ್ಪದೇ ಅಭ್ಯಾಸದಲ್ಲಿ ತೊಡಗಿದ್ದೆ. ಯಾವುದೇ ಕೋಚಿಂಗ್ ತೆಗೆದುಕೊಳ್ಳಲಿಲ್ಲ. ಆದರೆ, 'ಅನ್ ಅಕಾಡೆಮಿ' ನಡೆಸುವ ಆನ್‌ಲೈನ್ ಕೋಚಿಂಗ್ ಒಂದು ವರ್ಷ ಪಡೆದುಕೊಂಡಿದ್ದೆ.

- **ಮುಂದೆ ಪರೀಕ್ಷೆ ತೆಗೆದುಕೊಳ್ಳುವವರಿಗೆ ನಿಮ್ಮ ಸಲಹೆಗಳೇನು?**

–ಸತತ ಪರಿಶ್ರಮ ಮಾಡಬೇಕು. ಜೊತೆಗೆ ಉತ್ತಮ ಮಾರ್ಗದರ್ಶನ ಪಡೆದುಕೊಳ್ಳಬೇಕು. ಈ ಎರಡೂ ಸಾಧ್ಯವಾದರೆ ಅಂದುಕೊಂಡ ಗುರಿಯನ್ನು ಸುಲಭವಾಗಿ ತಲುಪಬಹುದು. ಸರ್ಕಾರ ಎಲ್ಲರಿಗೂ ಅವಕಾಶ ನೀಡಿದೆ. ಹೀಗಾಗಿ ಪೊಲೀಸ್ ಇಲಾಖೆ ಬಗ್ಗೆ ಯುವತಿಯರು ಯಾವುದೇ ಅಂಜಿಕೆ ಬೇಡ.

ಪ್ರಜಾವಾಣಿ ಉದ್ಯೋಗ ವಾರ್ತೆ

ಬಾಬಾ ಆಟೋಮಿಕ್ ರಿಸರ್ಚ್ ಸೆಂಟರ್‌ನಲ್ಲಿ ಹುದ್ದೆಗಳು

ಬಾಬಾ ಆಟೋಮಿಕ್ ರಿಸರ್ಚ್ ಸೆಂಟರ್‌ನ ಆಟೋಮಿಕ್ ಎನರ್ಜಿ ವಿಭಾಗದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಆಯ್ಕೆ ಪ್ರಕ್ರಿಯೆ: ಸಂದರ್ಶನ ಹಾಗೂ ಗೇಟ್ ಪರೀಕ್ಷೆ ಅಂಕದ ಆಧಾರದ ಮೇಲೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಫೆಬ್ರುವರಿ 11, 2022

ಹೆಚ್ಚಿನ ಮಾಹಿತಿಗೆ: http://www.barconlineexam.in

ಅರುಣ ಸಿಲ್ಕ್ಸ್
ವೆಡ್ಡಿಂಗ್ ಸ್ಯಾರೀಸ್ – ಫ್ಯಾನ್ಸಿ ಸ್ಯಾರೀಸ್ – ಸಲ್ವಾರ್ಸ್

ಅರುಣ ಸಿಲ್ಕ್ಸ್ ರವರ
ನೂತನ ಶೋರೂಮ್ ಈಗ
ಕೆಂಗೇರಿ ಉಪನಗರದಲ್ಲಿ
ಇಂದು 3-2-2022
ಬೆಳಗ್ಗೆ 10.50 ಗಂಟೆಯಿಂದ
ಅದ್ದೂರಿ ಪ್ರಾರಂಭ

ಉದ್ಘಾಟನೆ
ಶ್ರೀ ಎಸ್.ಟಿ. ಸೋಮಶೇಖರ್
ಗೌರವಾನ್ವಿತ ಸಹಕಾರ ಸಚಿವರು, ಕರ್ನಾಟಕ ಸರ್ಕಾರ
ಶಾಸಕರು. ಯಶವಂತಪುರ ಕ್ಷೇತ್ರ

ಶ್ರೀ. ಕೆ ಗೋಪಾಲಯ್ಯ
ಗೌರವಾನ್ವಿತ ಅಬಕಾರಿ ಸಚಿವರು. ಕರ್ನಾಟಕ ಸರ್ಕಾರ
ಶಾಸಕರು . ಮಹಾಲಕ್ಷ್ಮೀ ಲೇಔಟ್ ಕ್ಷೇತ್ರ

ವಿಶೇಷ ಆಹ್ವಾನಿತರು
ಶ್ರೀಮತಿ ಮೀರಾ ಸಕ್ಸೆನಾ IAS (Retd)
ನಿವೃತ ಅಪರ ಮುಖ್ಯ ಕಾರ್ಯದರ್ಶಿ ಮತ್ತು
ಮಾಜಿ ಅಧ್ಯಕ್ಷರು ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ

ಶ್ರೀ ವಿ.ವಿ. ಸತ್ಯನಾರಾಯಣ
ಮಾಜಿ ಪಾಲಿಕೆ ಸದಸ್ಯರು,
ಕೆಂಗೇರಿ ವಾರ್ಡ್, ಬೃ.ಬೆ.ಮ.ಪಾ

ಸಂಜನ ಆನಂದ್
ಚಲನಚಿತ್ರ ನಟಿ

ಸ್ಥಳ:
ಶ್ರೀ ಅರುಣ ಸಿಲ್ಕ್ಸ್
#141, 1ನೇ ಮುಖ್ಯರಸ್ತೆ, ಆಕ್ಸಿಸ್ ಬ್ಯಾಂಕ್ ಪಕ್ಕ
ಹೊಯ್ಸಳ ಸರ್ಕಲ್ ಹತ್ತಿರ, ಕೆಂಗೇರಿ ಉಪನಗರ,
ಬೆಂಗಳೂರು- 560060

ARUNA SILKS
Wedding Sarees - Fancy Sarees - Salwars

ಶ್ರೀ ಅರುಣ ಸಿಲ್ಕ್ಸ್
#141, 1ನೇ ಮುಖ್ಯರಸ್ತೆ, ಆಕ್ಸಿಸ್ ಬ್ಯಾಂಕ್ ಪಕ್ಕ
ಹೊಯ್ಸಳ ಸರ್ಕಲ್ ಹತ್ತಿರ, ಕೆಂಗೇರಿ ಉಪನಗರ,
ಬೆಂಗಳೂರು- 560060
PH : 080-29917755 / 9900055255

ಸರ್ವರಿಗೂ ಆದರದ ಸ್ವಾಗತ ಕೋರುವವರು
ಜೆ.ಆರ್.ನರಸಿಂಹಮೂರ್ತಿ. ಜೆ.ಆರ್. ಶ್ರೀನಿವಾಸ
ಜೆ.ಎನ್.ಶ್ರೀನಾಥ್. ಜೆ.ಎನ್. ರಮೇಶ್
ಜೆ.ಎಸ್. ಮಹೇಂದ್ರ. ಜೆ.ಎಸ್.ರತ್ನಕರ್

ಅರುಣ ಸಿಲ್ಕ್ ಪ್ಯಾರಡೈಸ್
#713, ಜಿಂಕ ಅವೆನ್ಯೂ
ಮೋದಿ ಹಾಸ್ಪಿಟಲ್ ರೋಡ್
ರಾಜಾಜಿನಗರ ಬೆಂಗಳೂರು – 560086
PH : 080-23197755 / 41497755



ಸುಭಾಷಿತ

ಪವಾಡಗಳಿಗಾಗಿ ಕಾಯಬೇಡಿ, ನಿಮ್ಮ ಇಡೀ ಜೀವನವೇ ಒಂದು ಪವಾಡ.

-ಆಲ್ಬರ್ಟ್ ಐನ್‌ಸ್ಟೀನ್

ರಣಜಿ ಟ್ರೋಫಿ ಕ್ರಿಕೆಟ್ ಹೊಳಪು ಮಂಕಾಗದಿರಲಿ

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯೆಂದರೆ ಕನಸುಗಳ ಕಣಜ. ತಾರೆಗಳಾಗಿ ಮಿನುಗಲು ಹಂಬಲಿಸುವ ಯುವ ಕ್ರಿಕೆಟಿಗರಿಗೆ ಚಿಮ್ಮುಹಲಗೆ. ದೇಶಿ ಕ್ರಿಕೆಟ್‌ನ ರಾಜ ಎಂದೇ ಕರೆಸಿಕೊಳ್ಳುವ ಈ ಟೂರ್ನಿಯನ್ನು ಈ ವರ್ಷ ಎರಡು ಹಂತಗಳಲ್ಲಿ ನಡೆಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ತೆಗೆದುಕೊಂಡಿರುವ ನಿಲುವು ಸ್ವಾಗತಾರ್ಹ. ಫೆಬ್ರುವರಿ 16ರಿಂದ ಮಾರ್ಚ್ 5ರವರೆಗೆ ಮೊದಲ ಹಂತದ ಪಂದ್ಯಗಳು ನಡೆಯಲಿವೆ. ಮಾರ್ಚ್ 27ರಿಂದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಆರಂಭವಾಗಲಿದೆ. ದೇಶದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಬಾರಿ ಐಪಿಎಲ್ ಟೂರ್ನಿಯನ್ನೂ ಭಾರತದಲ್ಲಿಯೇ ಆಯೋಜಿಸುವ ಸಾಧ್ಯತೆ ಇದೆ. ಆದ್ದರಿಂದ ಐಪಿಎಲ್ ಮುಗಿದ ನಂತರ ರಣಜಿ ಟೂರ್ನಿಯ ಎರಡನೇ ಹಂತವನ್ನು ನಡೆಸಲು ಉದ್ದೇಶಿಸಿದೆ. ಜನವರಿ 13ರಿಂದಲೇ ರಣಜಿ ಟೂರ್ನಿ ಆರಂಭವಾಗಬೇಕಿತ್ತು. ಆದರೆ, ಕೋವಿಡ್ ಮೂರನೇ ಅಲೆಯ ಆತಂಕ ಆವರಿಸಿದ್ದರಿಂದ ಮುಂದೂಡಲಾಯಿತು. ಆದರೆ, ಐಪಿಎಲ್ ತಂಡಗಳ ಮೆಗಾ ಹರಾಜು ಪ್ರಕ್ರಿಯೆಯತ್ತ ಹೆಚ್ಚು ಗಮನಹರಿಸಿದ್ದ ಮಂಡಳಿಯನ್ನು ಮಾಜಿ ಕ್ರಿಕೆಟಿಗರು ಮತ್ತು ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ತರಾಟೆಗೆ ತೆಗೆದುಕೊಂಡರು. ರಣಜಿ ಟೂರ್ನಿಯು ದೇಶದ ಕ್ರಿಕೆಟ್‌ನ ಬೆನ್ನೆಲುಬು. ಅದನ್ನು ಕಡೆಗಣಿಸಿದರೆ ಏನೂ ಉಳಿಯುವುದಿಲ್ಲ ಎಂದು ಭಾರತ ತಂಡದ ಮಾಜಿ ಕೋಚ್ ರವಿಶಾಸ್ತ್ರಿ ಮಾಡಿದ್ದ ಟ್ವೀಟ್‌ಗೆ ಭಾರಿ ಬೆಂಬಲ ವ್ಯಕ್ತವಾಯಿತು. ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ 2020–21ನೇ ಸಾಲಿನ ರಣಜಿ ಟೂರ್ನಿಯನ್ನು ರದ್ದು ಮಾಡಲಾಗಿತ್ತು. 88 ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಮೊದಲ ಬಾರಿಗೆ ಟೂರ್ನಿ ರದ್ದಾಗಿತ್ತು. ಆಗ ಕೂಡ ಮಂಡಳಿಯು ಬಹಳಷ್ಟು ಟೀಕೆಗಳನ್ನು ಎದುರಿಸಿತ್ತು. ಐಪಿಎಲ್ ತಂಡಗಳ ಆಯ್ಕೆಗೆ ಅನುಕೂಲ ಮಾಡಿಕೊಡಲು ಸೈಯದ್ ಮುಷ್ತಾಕ್ ಅಲಿ ಟಿ20 ಮತ್ತು ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟೂರ್ನಿಗಳನ್ನು ಆಯೋಜಿಸಿದ್ದ ಮಂಡಳಿಗೆ ದೀರ್ಘ ಮಾದರಿಯ ದೇಶಿ ಟೂರ್ನಿ ಬಗ್ಗೆ ಒಲವು ಕಡಿಮೆ ಆಗಿದೆ ಎಂಬ ಟೀಕೆಗಳು ವ್ಯಕ್ತವಾದವು. ಐಪಿಎಲ್‌ನಲ್ಲಿ ಚೆನ್ನಾಗಿ ಆಡಿದವರಿಗೆ ರಾಷ್ಟ್ರೀಯ ತಂಡದ ಆಯ್ಕೆಯಲ್ಲಿ ಆದ್ಯತೆ ನೀಡುತ್ತಿರುವುದು ಕೂಡ ದೇಶಿ ಕ್ರಿಕೆಟ್‌ಪ್ರಿಯರ ಕಣ್ಣು ಕೆಂಪಗಾಗಿಸಿತು. 1934ರಲ್ಲಿ ಆರಂಭವಾದ ರಣಜಿ ಟೂರ್ನಿಯು ದೇಶದ ಕ್ರಿಕೆಟ್ ಬೆಳವಣಿಗೆಗೆ ನೀಡಿದ ಕೊಡುಗೆ ಅಸಾಧಾರಣವಾದದ್ದು. ಇಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿದ ಹಲವರು ಕ್ರಿಕೆಟ್ ಲೋಕದ ದಿಗ್ಗಜರಾಗಿ ಬೆಳೆದರು. ಪ್ರತಿಯೊಂದು ರಾಜ್ಯದ ಪ್ರತಿಭಾವಂತರನ್ನು ಒರೆಗೆ ಹಚ್ಚುವ ವೇದಿಕೆ ಇದಾಗಿದೆ. ಅಲ್ಲದೆ ಬಹಳಷ್ಟು ಕ್ರಿಕೆಟಿಗರು, ಅಂಪೈರ್, ಸ್ಕೋರರ್, ಸಿಬ್ಬಂದಿ ಮತ್ತು ತಂಡಗಳ ನೆರವಿನ ಸಿಬ್ಬಂದಿಗೆ ಆದಾಯದ ಪ್ರಮುಖ ಮೂಲವೂ ಇದಾಗಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಐಪಿಎಲ್‌ನ ಥಳಕು, ಅಂತರರಾಷ್ಟ್ರೀಯ ಕ್ರಿಕೆಟ್ ಅಬ್ಬರದ ನಡುವೆಯೂ ಭವಿಷ್ಯದ ತಾರೆಯರನ್ನು ಪ್ರವರ್ಧಮಾನಕ್ಕೆ ತರುವ ರಣಜಿ ಪಂದ್ಯಗಳನ್ನು ನೋಡಲು ಇಷ್ಟಪಡುವ ಅಸಂಖ್ಯಾತ ಕ್ರಿಕೆಟ್‌ಪ್ರಿಯರು ಈಗಲೂ ಇದ್ದಾರೆ.

ಐಪಿಎಲ್‌ನ ಥಳಕು, ಅಂತರರಾಷ್ಟ್ರೀಯ ಕ್ರಿಕೆಟ್ ಅಬ್ಬರಗಳ ನಡುವೆಯೂ ರಣಜಿ ಪಂದ್ಯಗಳನ್ನು ನೋಡಲು ಇಷ್ಟಪಡುವ ಅಸಂಖ್ಯಾತ ಕ್ರಿಕೆಟ್‌ಪ್ರಿಯರು ಈಗಲೂ ಇದ್ದಾರೆ

ಅದಕ್ಕಾಗಿಯೇ ಮಂಡಳಿಯು ಈ ವರ್ಷ ಟೂರ್ನಿಯನ್ನು ನಡೆಸಲು ಮುಂದಾಗಿದೆ. ಅದಕ್ಕಾಗಿ ಹೊಸ ಪ್ರಯೋಗಕ್ಕೆ ಸಿದ್ಧವಾಗಿದೆ. ಜೀವಸುರಕ್ಷಾ ನಿಯಮದ ಚೌಕಟ್ಟಿನಲ್ಲಿ 38 ತಂಡಗಳು ಆಡಲಿವೆ. ಬೆಂಗಳೂರು, ಅಹಮದಾಬಾದ್, ಕೋಲ್ಕತ್ತ, ತಿರುವನಂತಪುರ, ಕಟಕ್, ಚೆನ್ನೈ, ಗುವಾಹಟಿ, ಹೈದರಾಬಾದ್ ಮತ್ತು ರಾಜ್‌ಕೋಟ್‌ನಲ್ಲಿ ಪಂದ್ಯಗಳನ್ನು ನಡೆಸಲು ಯೋಜಿಸಿದೆ. ಎಲೀಟ್ ವಿಭಾಗದಲ್ಲಿ ಎಂಟು ಗುಂಪುಗಳನ್ನು ಮಾಡಲಾಗಿದ್ದು, ಪ್ರತಿಯೊಂದು ಗುಂಪಿನಲ್ಲಿಯೂ ನಾಲ್ಕು ತಂಡಗಳಿರುತ್ತವೆ. ಪ್ಲೇಟ್ ವಿಭಾಗದಲ್ಲಿ ಆರು ತಂಡಗಳಿವೆ. ಬಹುತೇಕ ಎಲ್ಲ ತಂಡಗಳೂ ತಟಸ್ಥ ತಾಣಗಳಲ್ಲಿಯೇ ಆಡಲಿವೆ. ಕರ್ನಾಟಕ ತಂಡವು ಚೆನ್ನೈನಲ್ಲಿ ಪಂದ್ಯಗಳನ್ನು ಆಡಲಿದೆ. ಇದು ಸಹಜವಾಗಿಯೇ ಸ್ಥಳೀಯ ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದೆ. ಆದರೆ, ಕೊರೊನಾ ಕಾಲಘಟ್ಟದಲ್ಲಿ ಸುರಕ್ಷತೆ ಮುಖ್ಯ. ಪಂದ್ಯ ವೀಕ್ಷಿಸಲು ಜನ ಸೇರುವುದನ್ನು ತಡೆಯಲು ಈ ಕ್ರಮ ಎಂಬುದು ಮಂಡಳಿಯ ನಿಲುವು. ಎರಡು ವರ್ಷಗಳಿಂದ ಕೋವಿಡ್ ಸವಾಲುಗಳನ್ನು ಎದುರಿಸುತ್ತಲೇ ಕ್ರೀಡಾ ಚಟುವಟಿಕೆಗಳು ನಡೆಯುತ್ತಿವೆ. ಟೋಕಿಯೊ ಒಲಿಂಪಿಕ್ಸ್ ಯಶಸ್ವಿಯಾದ ನಂತರ ನಡೆದ ಬಹುತೇಕ ಎಲ್ಲ ಕ್ರೀಡಾಕೂಟಗಳು, ಕ್ರಿಕೆಟ್ ಟೂರ್ನಿಗಳು ಯಶಸ್ವಿಯಾಗಿವೆ. ಕಳೆದ ತಿಂಗಳಷ್ಟೇ ಭಾರತದಲ್ಲಿ ಎರಡು ಪ್ರಮುಖ ಬ್ಯಾಡ್ಮಿಂಟನ್ ಟೂರ್ನಿಗಳು ನಡೆದವು. ಬೆಂಗಳೂರಿನಲ್ಲಿ ಪ್ರೊ ಕಬಡ್ಡಿ ಮತ್ತು ಗೋವಾದಲ್ಲಿ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಕೂಡ ನಡೆಯುತ್ತಿವೆ. ಈ ಟೂರ್ನಿಗಳಲ್ಲಿ ಕೆಲವು ಆಟಗಾರರು ಕೊರೊನಾ ಸೋಂಕಿಗೆ ಒಳಗಾದರು. ಆದರೆ ಅವರನ್ನಷ್ಟೇ ಪ್ರತ್ಯೇಕಿಸಲಾಯಿತು. ನವಿ ಮುಂಬೈನಲ್ಲಿ ನಡೆದ ಏಷ್ಯಾ ಕಪ್ ಮಹಿಳೆಯರ ಫುಟ್‌ಬಾಲ್ ಟೂರ್ನಿಯಲ್ಲಿ ಭಾರತದ ಆಟಗಾರ್ತಿಯರಿಗೆ ಕೋವಿಡ್ ಖಚಿತವಾಗಿ ತಂಡ ಹೊರಬಿತ್ತು. ಆದರೆ ಟೂರ್ನಿಗಳು ಅಬಾಧಿತವಾಗಿ ನಡೆದವು. ಇದೇ 6ರಿಂದ ಭಾರತದಲ್ಲಿ ವೆಸ್ಟ್ ಇಂಡೀಸ್ ಮತ್ತು ಭಾರತ ತಂಡಗಳ ನಡುವಣ ಸೀಮಿತ ಓವರ್‌ಗಳ ಕ್ರಿಕೆಟ್ ನಡೆಯಲಿದೆ. ಈ ಆಶಾದಾಯಕ ಬೆಳವಣಿಗೆಯ ಅಲೆಯಲ್ಲಿಯೇ ರಣಜಿ ಟೂರ್ನಿಯನ್ನು ಯಶಸ್ವಿಗೊಳಿಸುವ ವಿಶ್ವಾಸದಲ್ಲಿ ಮಂಡಳಿಯಿದೆ. ಆಯೋಜಕರಿಗೆ ದುಡ್ಡು, ನೋಡುಗರಿಗೆ ಮನರಂಜನೆಯ ಹೊಳೆ ಹರಿಸುವ ಐಪಿಎಲ್‌ಗೂ ಇದರ ನಡುವೆ ಅವಕಾಶ ಮಾಡಿಕೊಡಲಾಗುತ್ತಿದೆ. ಆದರೆ, ಕೋವಿಡ್, ಐಪಿಎಲ್ ಏನೇ ಇರಲಿ, ದೇಶಿ ಕ್ರಿಕೆಟ್ ಮಂಕಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಬಿಸಿಸಿಐ ಮೇಲಿದೆ.

ದಿನದ ಟ್ವೀಟ್

ಕೇಂದ್ರೀಕರಣ ಸಲ್ಲ

ಆಸ್ಟ್ರೇಲಿಯಾ ಬರೀ 2.5 ಕೋಟಿ ಜನಸಂಖ್ಯೆಯನ್ನು ಹೊಂದಿದೆ ಮತ್ತು ಭೂಮಿಗೆ ಸಂಬಂಧಿಸಿದ ಹೆಚ್ಚಿನ ವಿಷಯಗಳನ್ನು ರಾಜ್ಯಗಳು ನಿರ್ವಹಿಸುತ್ತವೆ. 'ವಿಕೇಂದ್ರೀಕರಣ'ವು ಕೀಲಿಕೈ ಎಂಬುದು ಅವರಿಗೆ ತಿಳಿದಿದೆ. ಆದರೆ ಭಾರತದಲ್ಲಿ ಎಲ್ಲವೂ ಕೇಂದ್ರೀಕೃತಗೊಳ್ಳುತ್ತಿವೆ. ಕೆಟ್ಟ ಕ್ರಮಗಳು.

ಅನಂತ ಮಹಾಜನ, ನಾಗರಿಕ

ಕಿಡಿನುಡಿ

ಪ್ರಾಮಾಣಿಕವಾದ ಪ್ರಶ್ನೆಯೊಂದಿದೆ. ನಿರುದ್ಯೋಗದ ಬಗ್ಗೆ ಅಥವಾ ಸಮಾಜ ಕಲ್ಯಾಣಕ್ಕೆ ಮಾಡುವ ವೆಚ್ಚದಂತಹ ವಿಷಯಗಳ ಬಗ್ಗೆ ಕೇಳಿದಾಗ, ಸರ್ಕಾರದೊಟ್ಟಿಗೆ ಕೆಲಸ ಮಾಡುವ ಅರ್ಥಶಾಸ್ತ್ರಜ್ಞರು ಅಷ್ಟೊಂದು ಒರಟಾಗಿ, ಆಕ್ರಮಣಶೀಲರಾಗಿ ನಡೆದುಕೊಳ್ಳುವುದೇಕೆ? ಈ ಪ್ರಶ್ನೆಗಳು ಅವರಿಗೆ ಇರುಸುಮುರುಸು ಉಂಟುಮಾಡುತ್ತವೆಯೇ ಅಥವಾ ಇವುಗಳ ಬಗ್ಗೆ ಮಾತನಾಡುವುದರಿಂದ ಸಮಯ ವ್ಯರ್ಥ ಎಂಬುದು ಅವರ ನಂಬಿಕೆಯೇ? #UnionBudget2022

ಮಿಥಾಲಿ ಮುಖರ್ಜಿ, ಪತ್ರಕರ್ತೆ

25 ವರ್ಷಗಳ ಹಿಂದೆ

ಸೋಮವಾರ, 3-2-1997

- **ಕುದುರೆಮುಖ: ಗಣಿಗಾರಿಕೆ ಸಂಪೂರ್ಣ ಸ್ಥಗಿತ**

ಚಿಕ್ಕಮಗಳೂರು, ಫೆ. 2– ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆ ನಿನ್ನೆಯಿಂದ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಇದರಿಂದಾಗಿ ಕಂಪೆನಿ ಚಟುವಟಿಕೆಯೇ ಸ್ಥಗಿತಗೊಂಡಿದೆ. ಇದೇ ರೀತಿ ರಾಜ್ಯದ ಸುಮಾರು 42 ಕಂಪೆನಿಗಳು ಮುಚ್ಚುವುದು ಖಚಿತವಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಅರಣ್ಯ ಪ್ರದೇಶಗಳಲ್ಲಿ ಅರಣ್ಯೇತರ ಚಟುವಟಿಕೆಗಳು ನಡೆಯಬಾರದು ಎಂದು ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯ ಗಣಿ ಮತ್ತು ಭೂಗರ್ಭ ಇಲಾಖೆಯ ಆದೇಶದಂತೆ ಕಂಪೆನಿಯನ್ನು ಮುಚ್ಚಲಾಗಿದೆ ಎಂದು ಕೆಐಒಸಿಎಲ್‌ನ ಉನ್ನತ ಮೂಲಗಳು ತಿಳಿಸಿವೆ.

- **ಬೊಫೋರ್ಸ್: ಸಾಕ್ಷಿಗಳ ವಿಚಾರಣೆ ಶೀಘ್ರ ಆರಂಭ**

ನವದೆಹಲಿ, ಫೆ. 2 (ಪಿಟಿಐ)– ಬೊಫೋರ್ಸ್ ಹಗರಣಕ್ಕೆ ಸಂಬಂಧಿಸಿದ ಸಾಕ್ಷಿಗಳ ವಿಚಾರಣೆ ಶೀಘ್ರದಲ್ಲಿಯೇ ಆರಂಭವಾಗಲಿದೆ.

50 ವರ್ಷಗಳ ಹಿಂದೆ

ಗುರುವಾರ, 3-2-1972

- **ಆಡಳಿತ ಕಾಂಗ್ರೆಸ್ ಪಟ್ಟಿಯಲ್ಲಿ ಹಲವು ಬದಲಾವಣೆ**

ನವದೆಹಲಿ, ಫೆ. 2– ಮೈಸೂರು ಪ್ರದೇಶ ಚುನಾವಣಾ ಸಮಿತಿ ಸರ್ವಾನುಮತದಿಂದ ಮಾಡಿದ್ದ ಶಿಫಾರಸುಗಳಲ್ಲಿ ಆಡಳಿತ ಕಾಂಗ್ರೆಸ್ ಪಕ್ಷದ ಕೇಂದ್ರ ಚುನಾವಣಾ ಸಮಿತಿಯು ಹಲವಾರು ಬದಲಾವಣೆಗಳನ್ನು ಮಾಡಿದೆ.

ಈ ಬದಲಾವಣೆಗಳಿಂದಾಗಿ, ಚುನಾವಣೆಯಲ್ಲಿ ಈ ಅಭ್ಯರ್ಥಿಗಳೆಲ್ಲ ಆರಿಸಿ ಬಂದರೂ ಮುಖ್ಯಮಂತ್ರಿಯಾಗಬಯಸುವ ಯಾವ ಅಭ್ಯರ್ಥಿಗೂ ಸ್ಪಷ್ಟ ಬಹುಮತ ದೊರೆಯುವುದಿಲ್ಲ ಎಂದು ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

- **ಅರಸು ಸ್ಪರ್ಧೆ ಬಗ್ಗೆ ಇನ್ನೂ ಜಿಜ್ಞಾಸೆ**

ನವದೆಹಲಿ, ಫೆ. 2– ಮುಂದಿನ ವಿಧಾನಸಭೆ ಚುನಾವಣೆಗೆ ತಾವು ಸ್ಪರ್ಧಿಸುವ ಬಗೆಗೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರ ತೀರ್ಮಾನ ತಿಳಿಯಲು ಮೈಸೂರು ಪ್ರದೇಶ ಆಡಳಿತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ. ದೇವರಾಜ ಅರಸು ಅವರು ಎರಡು ದಿನ ಕಾದಿರಬೇಕಾಗಿದೆ. ಅದರಿಂದಾಗಿ ಅವರು ಸ್ಪರ್ಧಿಸುವ ಬಗ್ಗೆ ಇನ್ನೂ ಜಿಜ್ಞಾಸೆ ಇದೆ.

ಸಾಮಾಜಿಕ, ಕೌಟುಂಬಿಕ ಸ್ಥಾನಮಾನ ಬದಿಗೊತ್ತಿ, ತಾಯಂದಿರಲ್ಲಿನ ಖಿನ್ನತೆ ಗುರುತಿಸಬೇಕಾಗಿದೆ

ತಾಯಿಯ ಆತ್ಮಹತ್ಯೆ ಮೂಡಿಸಬೇಕಾದ ಎಚ್ಚರ

ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಆತ್ಮಹತ್ಯೆಯೊಂದು ಅನೇಕರ ಗಮನ ಸೆಳೆದಿದೆ. ಪ್ರತಿಯೊಂದು ಆತ್ಮಹತ್ಯೆಯೂ ಗಮನಾರ್ಹವೇ ಆದರೂ, ಅವರವರ ಹಿನ್ನೆಲೆಗೆ ತಕ್ಕಂತೆ ಕೆಲವು ಪ್ರಕರಣಗಳು ಹೆಚ್ಚು ಗಮನ ಸೆಳೆಯುತ್ತವೆ. ಈ ಬಾರಿ ಆತ್ಮಹತ್ಯೆಯು 9 ತಿಂಗಳ ಮಗುವಿರುವ ತಾಯಿಯೊಬ್ಬಳದ್ದು ಎಂಬ ಕಾರಣಕ್ಕೆ ಅದು ಮತ್ತಷ್ಟು ಹೆಚ್ಚಾಗಿ ಜನರ ಗಮನ ಸೆಳೆದಿದೆ. ಆತ್ಮಹತ್ಯೆ ಸಮಸ್ಯೆಯ ಬಗೆಗೆ ನಿರಂತರವಾಗಿ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಲೇ ಇರುವ ಮನೋವೈದ್ಯಕೀಯ ಜಗತ್ತಿಗೆ ಸವಾಲೆಸೆಯುವ ರೀತಿಯಲ್ಲಿ ಈ ಆತ್ಮಹತ್ಯೆಯಲ್ಲಿ ಹಲವು ಸಂಕೀರ್ಣ ವಿಷಯಗಳಿವೆ.

ಮಾಧ್ಯಮಗಳು- ಅದರಲ್ಲಿಯೂ ಟಿ.ವಿ. ವಾಹಿನಿಗಳು ಚರ್ಚೆ ನಡೆಸುವ, ಖಾಸಗಿತನವನ್ನು ಗೌರವಿಸದೆ, ಕಳೆದುಕೊಂಡವರ ನೋವನ್ನು ಲೆಕ್ಕಿಸದೆ ಪ್ರಶ್ನೆ ಕೇಳುವ ರೀತಿ ನೋಡಿದರೆ, ಮಾಧ್ಯಮಮಿತ್ರರಿಗೇ ಮಾನಸಿಕ ಕಾಯಿಲೆಗಳ ಬಗೆಗಿನ ಪ್ರಾಥಮಿಕ ಪಾಠವನ್ನು ಕಲಿಸಬೇಕಾದ ಅವಶ್ಯಕತೆ ಇದೆ ಎಂಬುದು ಸ್ಪಷ್ಟವಾಗುತ್ತದೆ.

'9 ತಿಂಗಳ ಮಗುವನ್ನು ಬಿಟ್ಟು ಪ್ರಾಣ ಕಳೆದುಕೊಳ್ಳಲು ಮನಸ್ಸಾದರೂ ಹೇಗೆ ಬಂತು?', 'ಗಂಡು ಮಗುವಾದರೂ ಪ್ರಾಣ ತೆಗೆದುಕೊಳ್ಳುವ ಅವಶ್ಯಕತೆಯೇನಿತ್ತು?' ಎಂಬಂಥ ಪ್ರಶ್ನೆಗಳು ಮನೋವೈದ್ಯೆಯಾದ ನನಗೆ, ಮೃತ ಮಹಿಳೆಯ ಮೇಲೂ ತೋರಬಹುದಾದ ಕ್ರೌರ್ಯ ಎಂದೇ ಅನಿಸುತ್ತವೆ.

ಶೇಕಡ 22ರಷ್ಟು ಭಾರತೀಯ ತಾಯಂದಿರು ಮಗುವಿನ ಜನನಾನಂತರದ ಖಿನ್ನತೆಗೆ ಗುರಿಯಾಗುತ್ತಾರೆ ಎನ್ನುತ್ತದೆ ವಿಶ್ವ ಆರೋಗ್ಯ ಸಂಸ್ಥೆಯ ಅಂಕಿ ಅಂಶ. ಯಾವುದೇ ಆರೋಗ್ಯದ ಸಮಸ್ಯೆಯಂತೆ ಗರ್ಭಿಣಿಯರಲ್ಲಿ, ಮಗುವಿನ ಹುಟ್ಟಿನ ಆನಂತರದ ಹಂತದಲ್ಲಿ ಉಂಟಾಗುವ ಖಿನ್ನತೆ, ಇನ್ನಿತರ ಮಾನಸಿಕ ಸಮಸ್ಯೆಗಳಿಗೆ ಜೈವಿಕ ಅಂಶ ಗಳೊಂದಿಗೆ ಪರಿಸರದ ಅಂಶಗಳೂ ಕಾರಣಗಳಾಗಿ ಒಟ್ಟುಗೂಡುತ್ತವೆ. ಅಂದರೆ ಹೊಸ ತಾಯಿಯಲ್ಲಿ ಉಂಟಾ ಗುವ ಖಿನ್ನತೆಗೆ ಹಲವು ಸಾಮಾಜಿಕ- ಕೌಟುಂಬಿಕ ಕಾರಣಗಳು (ಆರ್ಥಿಕ ಸಂಕಷ್ಟ, ಕೌಟುಂಬಿಕ ಹಿಂಸೆ, ಮೊದಲೇ ಇರುವ ಮಾನಸಿಕ ಕಾಯಿಲೆ, ಇತ್ತೀಚಿನ ಒತ್ತಡ, ದಾಂಪತ್ಯ ಕಲಹ, ಮಗುವಿನಲ್ಲಿ ಅನಾರೋಗ್ಯ...) ಇರಬಹುದಾದರೂ ಅವುಗಳ ಜೊತೆಗೆ ಮತ್ತು ಅಂತಿಮವಾಗಿ ಜೈವಿಕವಾಗಿ ಮಿದುಳಿನಲ್ಲಿ ನಡೆಯುವ ರಾಸಾಯನಿಕಗಳ ಏರುಪೇರು ಖಿನ್ನತೆಯನ್ನೂ ಅದರ ಪರಿಣಾಮವಾದ ಆತ್ಮಹತ್ಯೆಯ ಅಪಾಯವನ್ನೂ ತರುತ್ತದೆ. ಭಾರತವು ಮಾತೃಮರಣದ ಪ್ರಮಾಣದಲ್ಲಿ ಗಣನೀಯ ಸುಧಾರಣೆ ತೋರಿಸಿದ್ದರೂ ಈ ಸುಧಾರಣೆಯು ಮಾತೆಯರಲ್ಲಿನ ಖಿನ್ನತೆವರೆಗೆ ವಿಸ್ತರಿಸಿಲ್ಲ ಎನ್ನುವುದು ವಿಷಾದನೀಯ.

ಇದಕ್ಕೆ ಕಾರಣಗಳೂ ಉಂಟು. ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲಿ 'ತಾಯ್ತನ'ವನ್ನು ಸಂತಸದ ಸಮಯವಾಗಿಯೇ ಗ್ರಹಿಸಲಾಗುತ್ತದೆ. ಅಷ್ಟೇ ಅಲ್ಲ ಒಂದೊಮ್ಮೆ ತಾಯಿ ಯಾವುದೇ ಔಷಧಿ ತೆಗೆದುಕೊಳ್ಳಬೇಕೆಂದರೆ, ನಾವು ಮೊದಲು ವೈದ್ಯರನ್ನು ಕೇಳುವ ಪ್ರಶ್ನೆ 'ಇದರಿಂದ ಮಗೂಗೆ ಏನೂ ತೊಂದರೆಯಿಲ್ವಾ ಡಾಕ್ಟ್ರೇ?' ಅಥವಾ ಇನ್ನೂ ತಾಯಿಯಾಗಲು ದೂರವಿರುವ ಹದಿಹರೆಯದ ಬಾಲಕಿಗೆ 'ಫಿಟ್ಸ್' ಸಮಸ್ಯೆಗೆ ಮಾತ್ರೆ ಕೊಡಬೇಕೆಂದರೂ ಅಪ್ಪ-ಅಮ್ಮ ಕೇಳುವ ಮೊತ್ತಮೊದಲ ಪ್ರಶ್ನೆಯೆಂದರೆ, 'ಡಾಕ್ಟ್ರೇ, ಮುಂದೆ ಮಕ್ಕಳಾಗಲು ಇದರಿಂದ ತೊಂದರೆ ಯಾದರೆ?' ಎಂಬುದು.

ಅಂದರೆ, 'ತಾಯಿಯಾಗುವುದು ಸಂಭ್ರಮ', 'ಮಗು ಮಹತ್ವದ್ದು' ಎಂಬುವು ನಮ್ಮಲ್ಲಿ ಬೇರೂರಿರುವ ಭಾವನೆಗಳು. ಇದು ಸರಿಯೇ. ಅದರಲ್ಲಿ ಸಮಸ್ಯೆಯೂ ಇಲ್ಲ. ಆದರೆ ಆರೋಗ್ಯವಂತ ತಾಯಿ ಮಾತ್ರ ಆರೋಗ್ಯವಂತ ಮಗುವಿನ ಬೆಳವಣಿಗೆಗೆ ಕಾರಣಳಾಗಬಲ್ಲಳು! ಹಾಗಾಗಿ, ಮುಂದೆ ಹುಟ್ಟಬಹುದಾದ ಅಥವಾ ಈಗಾಗಲೇ ಹುಟ್ಟಿರಬಹುದಾದ ಮಗುವಿನಷ್ಟೇ ಅಥವಾ ಆ ಮಗುವಿಗಿಂತ ಮೊದಲು ತಾಯಿಯ ದೈಹಿಕ-ಮಾನಸಿಕ ಆರೋಗ್ಯ ನಮ್ಮ ಆದ್ಯತೆಯಾಗಬೇಕು ಎಂಬುದು ನಿರ್ವಿವಾದ. ಹಾಗೆಯೇ ಪ್ರತೀ ವ್ಯಕ್ತಿಗೆ ನೆಮ್ಮದಿಯ ಜೀವನ ನಡೆಸುವ ಹಕ್ಕು ಹೇಗೆ ಸಿಗಬೇಕೋ ಅದು ತಾಯಿಯಾಗಿರುವ ಮಹಿಳೆಯ ವಿಷಯದಲ್ಲಿಯೂ ಸಿಗಲೇಬೇಕು.

ಮಾನಸಿಕ ಆರೋಗ್ಯದ ಸಮಸ್ಯೆಗಳನ್ನು ದೈಹಿಕ ಆರೋಗ್ಯದ ಒಂದು ಭಾಗವಾಗಿಯೇ ಪರಿಗಣಿಸಬೇಕಾದದ್ದೂ ಅತ್ಯವಶ್ಯ. ಗರ್ಭಿಣಿಯರಿಗೆ ಪ್ರಸವಪೂರ್ವ ಆರೈಕೆಯ (antenatal care) ಲಭ್ಯತೆಯನ್ನು ಸರ್ಕಾರ ಮತ್ತೆ ಮತ್ತೆ ಒತ್ತಿ ಹೇಳುತ್ತದೆ. ಅಲ್ಲದೆ ಅದರ ಬಗೆಗೆ ಜಾಹೀರಾತುಗಳಿವೆ, ಗರ್ಭಿಣಿ ಕಾರ್ಡುಗಳನ್ನು ನೀಡಲಾಗುತ್ತದೆ. ಆದರೆ ಅವರ ಮಾನಸಿಕ ಸ್ಥಿತಿಯ ಬಗೆಗೆ ಆಡಳಿತ ವ್ಯವಸ್ಥೆ ಏನು ಕ್ರಮ ಕೈಗೊಂಡಿದೆ? ನಮ್ಮ ಜನಸಂಖ್ಯೆಗೆ ಹೋಲಿಸಿದರೆ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಇರಬಹುದಾದ ಮನೋವೈದ್ಯರ ಬಳಿ ಈ ಮಹಿಳೆಯರು ಹೋಗುವುದಾದರೂ ಹೇಗೆ? ತಮಗೆ ಹಾಗೆ ಮನೋವೈದ್ಯಕೀಯ ಸಲಹೆ ಅಥವಾ ಚಿಕಿತ್ಸೆ ಬೇಕೆ, ಬೇಡವೆ ಎಂಬ ಬಗ್ಗೆ ಸ್ವತಃ ತೀರ್ಮಾನಿಸುವಷ್ಟು ಜ್ಞಾನವಾಗಲಿ, ಸ್ವಾತಂತ್ರ್ಯ- ಸೌಲಭ್ಯಗಳಾಗಲಿ ನಮ್ಮಲ್ಲಿ ಎಷ್ಟು ಜನ ಮಹಿಳೆಯರಿಗೆ ಸಾಧ್ಯವಿದೆ? ಪರಿಹಾರಗಳಿಗಾಗಿ ನಾವು ಕಣ್ತೆರೆದು ವಿಜ್ಞಾನದ ಜಗತ್ತನ್ನೇ ನೋಡಬೇಕಾದ ಸಂದರ್ಭ ಇದು.

ನೋವಿಗೆ ವಿವಿಧ ರೂಪಗಳುಂಟು. ಯಾವ ನೋವಾದರೂ ಅದು ಮಾನಸಿಕವಾದದ್ದಾಗಿರಲಿ ಅಥವಾ ದೈಹಿಕವಾದದ್ದು ಆಗಿರಲಿ ಅದನ್ನು ಇನ್ನೊಬ್ಬರಿಂದಾಗಲಿ ಅಥವಾ ಯಂತ್ರದಿಂದಾಗಲಿ ಅಳೆಯುವುದು ಸಾಧ್ಯವಿಲ್ಲ. ಹಾಗಾಗಿಯೇ ಮನೋವೈದ್ಯಕೀಯ ತರಬೇತಿಯಲ್ಲಿ, ರೋಗಿ ಬಂದು 'ನನಗೆ ಸಾಯಬೇಕೆನಿಸುತ್ತಿದೆ' ಎಂದಾಕ್ಷಣ ಸಹಜವಾಗಿ ಯಾರೂ ಕೇಳಬಹುದಾದ 'ಏಕೆ?' ಎಂಬ ಪ್ರಶ್ನೆಯನ್ನು ಕಡ್ಡಾಯವಾಗಿ ಕೇಳಬಾರದೆಂದು ಕಲಿಸಿಕೊಡುತ್ತಾರೆ. ಅದೇ ರೀತಿಯಲ್ಲಿ ತಾಯಿಯೊಬ್ಬಳು ಬಂದು 'ಬೇಸರವೆನಿಸುತ್ತದೆ, ಸಾಯುವ ಬಗ್ಗೆ ಆಲೋಚನೆಗಳು ಬರುತ್ತಿವೆ' ಎಂದರೆ, ಮಗುವಿನ ಲಿಂಗ- ಕೌಟುಂಬಿಕ ಪರಿಸ್ಥಿತಿ- ಒತ್ತಡಗಳು- ವಿದ್ಯೆ- ವೃತ್ತಿ ಎಲ್ಲವನ್ನೂ ಬದಿಗಿರಿಸಿ, ಮೊದಲು ಖಿನ್ನತೆ- ಆತ್ಮಹತ್ಯೆಯ ಆಲೋಚನೆಗಳಿಗೆ ಮನೋವೈದ್ಯಕೀಯ ಚಿಕಿತ್ಸೆ ಅಗತ್ಯ. ಒಮ್ಮೆ ಬಿಕ್ಕಟ್ಟು ಪರಿಹಾರ ಸಫಲವಾದ ಮೇಲೆ ಉಳಿದ ಪ್ರಶ್ನೆಗಳಿಗೆ ಪ್ರಾಯೋಗಿಕ ಪರಿಹಾರಗಳನ್ನು ಹುಡುಕಲು ಸಾಧ್ಯವಿದೆ.

ಇಡೀ ಸಮುದಾಯದಲ್ಲಿ ಗರ್ಭಿಣಿಯರನ್ನು ನಿಯಮಿತ ತಪಾಸಣೆಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳಲ್ಲಿ ಹೇಗಿದ್ದರೂ ನೋಡಲಾಗುತ್ತದೆ. ಅಲ್ಲಿ ತಪಾಸಣೆ ನಡೆಸುವ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ತಾಯಂದಿರಲ್ಲಿ ಇರಬಹುದಾದ ಖಿನ್ನತೆಯನ್ನು ಗುರುತಿಸಲು ತರಬೇತಿ ನೀಡುವುದು ಇಂದಿನ ಅಂತರ್ಜಾಲ ಯುಗದಲ್ಲಿ ಸಾಧ್ಯವಿರುವ, ಸುಲಭದ ಕೆಲಸ. ಕೇವಲ ಎರಡು ಪ್ರಶ್ನೆಗಳನ್ನು 'ನಿಮ್ಮನ್ನು ಖಿನ್ನತೆ ಕಾಡುತ್ತಿದೆಯೇ?' (ಖಿನ್ನತೆಯನ್ನು ಗುರುತಿಸಲು) 'ನಿಮಗೆ ಮತ್ತೆ ಮತ್ತೆ ಗಾಬರಿಯಾಗುತ್ತದೆಯೇ?' (ಆತಂಕವನ್ನು ಗುರುತಿಸಲು)- ಗರ್ಭಿಣಿಯರು ಮತ್ತು ಹೊಸ ತಾಯಂದಿರು ತಪಾಸಣೆಗೆ ಬಂದಾಗ ಕೇಳುವುದು, ಬಹಳಷ್ಟು ತಾಯಂದಿರ ಖಿನ್ನತೆಯನ್ನು ಗುರುತಿಸಲು ಸಹಾಯ ಮಾಡಬಹುದು.

ಸ್ನಾತಕೋತ್ತರ ವೈದ್ಯಕೀಯ ಪ್ರಸೂತಿ ತಜ್ಞರ ತರಬೇತಿಯಲ್ಲಿ, ವೈದ್ಯಕೀಯ ಪದವಿಯಲ್ಲಿ ಬಾಣಂತಿಯರಲ್ಲಿ ಖಿನ್ನತೆಯ ಬಗ್ಗೆ ಕಡ್ಡಾಯವಾಗಿ ವಿಶೇಷ ತರಬೇತಿ ನೀಡಬೇಕಾದದ್ದು ಅಪೇಕ್ಷಣೀಯ. ಎಂದಿನ ವೃತ್ತಿಯ ಭಾಗವಾಗಿ ಇಂತಹ ಪ್ರಕರಣಗಳನ್ನು ಅವರು ನೋಡುತ್ತಾರೆ. ಆಗ ಅವರಿಗೆ ಅದು ಗುರುತಿಸಲು ಸಾಧ್ಯವಾಗಬೇಕು ಎಂಬ ಕಾರಣದಿಂದ ಇದನ್ನು ಮಾಡಬೇಕು. ಆತ್ಮಹತ್ಯೆಗೀಡಾದ ವ್ಯಕ್ತಿಯ ಖಾಸಗಿತನವನ್ನು ಗೌರವಿಸಬೇಕಾದದ್ದೂ ಅವರ ಕುಟುಂಬದವರ ನೋವನ್ನು ಮತ್ತಷ್ಟು ಹೆಚ್ಚು ಮಾಡದೆ ಮುಂದಿನ ಭವಿಷ್ಯದ ಬಗ್ಗೆ ಗಮನಿಸಲು ಬಿಡಬೇಕಾದದ್ದೂ ಈ ಹೊತ್ತಿನ ಅವಶ್ಯಕತೆ.

ನಮ್ಮ ಕೆಟ್ಟ ಕುತೂಹಲವನ್ನು ಬಿಟ್ಟುಬಿಡೋಣ. ತಾಯಂದಿರನ್ನು ಉಳಿಸುವತ್ತ ಆರ್ದ್ರ ಮನಸ್ಸಿನಿಂದ ಕೆಲಸ ಮಾಡೋಣ.

ಲೇಖಕಿ: ಮನೋವೈದ್ಯೆ

ಚುರುಮುರಿ

ಬಜೆಟ್ ವ್ಯಾಖ್ಯಾನ

• ಆನಂದ

'ನೋಡಿದೆಯಾ, ನಿರ್ಮಲಾ ಸೀತಾರಾಮನ್ ಡಿಸೈನ್ ಸೀರೆ ಉಟ್ಟುಕೊಂಡು ಬಜೆಟ್ ಮಂಡಿಸ್ತಾ ಇದಾರೆ' ಎಂದ ಹೆಂಡತಿಗೆ ಟೀವಿ ನೋಡುತ್ತಾ, 'ಹೌದುರೀ ಹೋದ ವರ್ಷ ಪ್ಲೇನ್ ಮೈಸೂರು ಸಿಲ್ಕ್ ಸೀರೇಲಿ ಇದ್ದರು' ಎಂದು ನೆನಪಿಸಿಕೊಂಡಳು.

'ಅಷ್ಟೇ ಅಂತ ಕಾಣುತ್ತೆ ಬದಲಾವಣೆ. ಉಳಿದಿದ್ದೆಲ್ಲ ಮಾಮೂಲಿ. ಅವೇ ಅಂಕಿ ಅಂಶಗಳು, ಯೋಜನೆಗಳು, ವಾಗ್ದಾನಗಳು...'

'ಮತ್ತೆ ಬಜೆಟ್ ಅಂದರೆ ಇನ್ನೇನು? ನಮಗೂ ಅಷ್ಟೇ ಗೊತ್ತಾಗೋದು. ಅದಕ್ಕೆ ಇಷ್ಟು ಲಕ್ಷ ಕೋಟಿ, ಇದಕ್ಕೆ ಇಷ್ಟು ಲಕ್ಷ ಕೋಟಿ...'

'ಹೋಲ್ಡಾನ್, ಈಗ ಟ್ರಿಲಿಯನ್‌ನಲ್ಲಿ ದುಡ್ಡು ಎಣಿಸಬೇಕು. ಲಕ್ಷ ಕೋಟಿ ಎಲ್ಲಾ ಹಿಂದಿನ ಕಾಲದ್ದು' ಎಂದು ಅವಳನ್ನು ತಿದ್ದಿದೆ.

'ಲಕ್ಷ ಕೋಟಿಯೋ ಟ್ರಿಲಿಯನ್ನೋ ನಮಗೆ ಗೊತ್ತಾಗೋದು ಸಾವಿರ, ಒಮ್ಮೊಮ್ಮೆ ಲಕ್ಷ' ಎಂದು ನಿಟ್ಟುಸಿರುಬಿಟ್ಟಳು.

'ಡೋಂಟ್ ವರಿ. ನಮ್ಮ ಸ್ಥಿತಿಗತಿ ಸುಧಾರಿಸೋದಿಕ್ಕೇ ಬಜೆಟ್ ಮಂಡಿಸೋದು. ನೋಡು, ಆಡಳಿತ ಪಕ್ಷದವರು ಹೇಗೆ ಹೊಗಳ್ತಾ ಇದಾರೆ ಬಜೆಟ್‌ನ. ಭವಿಷ್ಯದ ಆತ್ಮನಿರ್ಭರ ಭಾರತ ಬಜೆಟ್ ಎಂದೊಬ್ಬರು ಹೇಳಿದರೆ, ಪ್ರಗತಿಗೆ ವೇಗವರ್ಧಕ ಎಂದು ಇನ್ನೊಬ್ಬರು ಕೊಂಡಾಡಿದ್ದಾರೆ. ಸುಸ್ಥಿರ ಅಭಿವೃದ್ಧಿಗೆ ಪೂರಕ ಎಂದು ಮತ್ತೊಬ್ಬರು ಮೇಡಂ ಬೆನ್ನು ತಟ್ಟಿದ್ದಾರೆ ವರ್ಚುಯಲ್ಲಾಗಿ'.

'ಹೋದ ವರ್ಷವೂ ಹೀಗೆ ಹೇಳಿದ್ದು ನೆನಪು'

'ಛೆ! ಬೇರೆ ತರಹ ಹೊಗಳಿರುತ್ತಾರೆ'.

'ಆದರೆ ಇಲ್ಲಿ ನೋಡ್ರಿ, ಬಡವರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿದಂಗಿದೆ, ಸಾಮಾನ್ಯ ಜನರಿಗೆ ಸಿಕ್ಕಿದ್ದು ಶೂನ್ಯ, ಮಧ್ಯಮ ವರ್ಗಕ್ಕೆ ಹತಾಶೆ... ಹೀಗೂ ವ್ಯಾಖ್ಯಾನಿಸಲಾಗಿದೆ'.

'ಯಾವುದೇ ಬಜೆಟ್ ಬಂದರೂ ಆಡಳಿತ ಪಕ್ಷದವರು ಹೊಗಳೋದು, ವಿರೋಧ ಪಕ್ಷದವರು ಟೀಕಿಸೋದು ಬಜೆಟ್‌ನಷ್ಟೇ ಮಾಮೂಲು'.

'ಮತ್ತೆ ನಮ್ಮ ಗತಿ?'

'ಹೋದ ವರ್ಷ ಏನಾಯಿತೊ ಈ ವರ್ಷ ಸಹ ಅದೇ'.

'ಮುಂದಿನ ವರ್ಷ ನಿರ್ಮಲಾಜಿ ಯಾವ ಸೀರೇಲಿ ಬರ್ತಾರೋ ನೋಡಬೇಕು'.

ಸಂಗತ

ಹನಿ ನೀರಾವರಿ: 'ಸಮೃದ್ಧ' ದಾರಿ

ಲಭ್ಯವಿರುವ ನೀರಿನಲ್ಲಿಯೇ ಹನಿ ನೀರಾವರಿ ಮೂಲಕ ರಾಜ್ಯದ ಅಷ್ಟೂ ಕೃಷಿಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯ

• ಮಲ್ಲಿಕಾರ್ಜುನ ಹೆಗ್ಗಳಗಿ

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಐದು ನದಿಗಳ ಜೋಡಣೆಯ ಯೋಜನೆ ಪ್ರಕಟಿಸಿದ್ದಾರೆ. ಇದು ತುಂಬ ಗೊಂದಲದ-ಸಂಕೀರ್ಣ ವಿಚಾರ. ಹನಿ ನೀರಾವರಿ ವಿಧಾನವನ್ನು ಸಮರ್ಪಕವಾಗಿ ಜಾರಿಗೊಳಿಸಿದರೆ, ಈಗ ಲಭ್ಯವಿರುವ ನೀರಿನಲ್ಲಿಯೇ ರಾಜ್ಯದ ಅಷ್ಟೂ ಕೃಷಿಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದು. ಇದು ಅತ್ಯಂತ ಸುಲಭವಾಗಿ ಕಾರ್ಯರೂಪಕ್ಕೆ ತರಬಹುದಾದ ಪರಿಣಾಮಕಾರಿ ವಿಧಾನವಾಗಿದೆ.

ಹನಿ ನೀರಾವರಿ ಒಂದು ಕೌತುಕದ ಕೃಷಿ ತಂತ್ರಜ್ಞಾನ. ಇಸ್ರೇಲ್ ದೇಶದ ಕೃಷಿ ವಿಜ್ಞಾನಿಗಳು ಸುಮಾರು ಐದು ದಶಕಗಳ ಹಿಂದೆ ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಕಾರ್ಯರೂಪಕ್ಕೆ ತಂದರು. ಇಂದು ಇಸ್ರೇಲ್‌ನಲ್ಲಿ ಹನಿ ನೀರಾವರಿ ಮಾಡಿದ ಚಮತ್ಕಾರ ಕಣ್ಣು ಕುಕ್ಕುವಂತೆ ಬೆಳೆದಿದೆ. ಅವಶ್ಯಕತೆಯೇ ಆವಿಷ್ಕಾರದ ಮೂಲ ಎನ್ನುವ ಮಾತೊಂದಿದೆ. ತೀವ್ರ ನೀರಿನ ಕೊರತೆ ಅನುಭವಿಸುತ್ತಿದ್ದ ಇಸ್ರೇಲ್ ರೈತರು ಹನಿ ನೀರಾವರಿಯನ್ನು ಆಸಕ್ತಿಯಿಂದ ಅನುಷ್ಠಾನಕ್ಕೆ ತಂದಿದ್ದಾರೆ, ಜಗತ್ತಿಗೆ ಮಾದರಿಯಾಗಿ ಬೆಳೆದಿದ್ದಾರೆ.

ನಮ್ಮಲ್ಲಿ ಜಲಾಶಯಗಳ ನೀರನ್ನು ಕಾಲುವೆಗಳ ಮೂಲಕ ಬೆಳೆಗೆ ಪೂರೈಸುವ ವಿಧಾನವನ್ನು ರೈತರು ಹೆಚ್ಚಾಗಿ ಅನುಸರಿಸುತ್ತಿದ್ದಾರೆ. ಇದರಿಂದ ಅವಶ್ಯಕತೆಗಿಂತ ಹೆಚ್ಚು ನೀರಿನ ಬಳಕೆಯಾಗುತ್ತಿದೆ.

ಆಲಮಟ್ಟಿ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದ ಶೇ 25ರಷ್ಟು ಭೂಮಿಯು ತೀವ್ರ ಸವಳು–ಜವಳು ಆವರಿಸಿ ಹಾಳಾಗಿದೆ. ಮುಂದಿನ ದಿನಗಳಲ್ಲಿ ಇದು ಕ್ರಮೇಣ ಹೆಚ್ಚಾಗಲಿದೆ ಎಂಬ ಆತಂಕವನ್ನು ಕೃಷಿ ತಜ್ಞರು ವ್ಯಕ್ತಪಡಿಸಿದ್ದಾರೆ. ಸವಳು– ಜವಳು ಆಗಿ ಬರಡಾಗುವುದಕ್ಕೆ ಅತಿಯಾದ ನೀರಿನ ಬಳಕೆ ಕಾರಣ. ಬೆಳೆಗೆ ನೀರಿನ ಅವಶ್ಯಕತೆ ಇರಲಿ ಬಿಡಲಿ, ನೀರು ಸಿಗುತ್ತದೆ ಎಂದು ಹಗಲು-ರಾತ್ರಿ ಹರಿಯಬಿಡುತ್ತಾರೆ. ಭೂಮಿ ಹಾಳಾಗುವುದು ಮಾತ್ರವಲ್ಲ ಸವಳು– ಜವಳು ನೀರು ಬಸಿಯುವುದರಿಂದ ವಾತಾವರಣ ಕೂಡ ಕಲುಷಿತವಾಗುತ್ತದೆ.

ಮಣ್ಣು ನಿಸರ್ಗದ ಅಮೂಲ್ಯವಾದ ಕೊಡುಗೆ. ಕೃಷಿಗೆ ಫಲವತ್ತಾದ ಆರೋಗ್ಯಪೂರ್ಣ ಭೂಮಿ ಬೇಕು. ಮಣ್ಣಿನಲ್ಲಿ ಅನೇಕ ಪೋಷಕಾಂಶಗಳು, ಮೂರು ಕೋಟಿಗಿಂತಲೂ ಹೆಚ್ಚು ಸೂಕ್ಷ್ಮಜೀವಿಗಳಿರುತ್ತವೆ. ಈ ಜೀವಿಗಳ ಚಟುವಟಿಕೆಗಳಿಗೆ ಮಣ್ಣು ಆಧಾರಸ್ತಂಭವಾಗಿದೆ. ಮಣ್ಣು ಎಲ್ಲ ಜೀವಿಗಳ ಬದುಕಿನ ನೆಲೆ. ಮಣ್ಣು ಇಲ್ಲದೆ ಯಾವ ಜೀವಿಯೂ ಬದುಕಲು ಸಾಧ್ಯವಿಲ್ಲ. ಒಂದು ಇಂಚು ಮಣ್ಣು ತಯಾರಾಗಲು ಸಾವಿರ ಸಾವಿರ ವರ್ಷಗಳು ಬೇಕು. ಅಸಮರ್ಪಕ ನೀರಾವರಿಯಿಂದ ಭೂಮಿ ಹಾಳು ಮಾಡುವುದು ಇಡೀ ಮನುಕುಲಕ್ಕೆ ಶಾಪವಾಗಿ ಪರಿಣಮಿಸುತ್ತದೆ.

ಹನಿ ನೀರಾವರಿಯು ನೀರನ್ನು ಪ್ಲಾಸ್ಟಿಕ್ ಕೊಳವೆಗಳ ಮೂಲಕ ಸಸಿ, ಗಿಡ, ಮರದ ಬುಡಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ಅವುಗಳ ಅವಶ್ಯಕತೆಗೆ ತಕ್ಕಂತೆ ಎಷ್ಟು ಬೇಕೋ ಅಷ್ಟು, ಯಾವಾಗ ಬೇಕೋ ಆವಾಗ, ಸ್ವಲ್ಪವೂ ಕೊರತೆಯಾಗದಂತೆ, ಸ್ವಲ್ಪವೂ ಹೆಚ್ಚಾಗದಂತೆ ಹನಿ ಹನಿಯಾಗಿ ಹಣಿಸುವ ವಿಧಾನವಾಗಿದೆ. ಬಹಳಷ್ಟು ಸಂಶೋಧನೆ ಮೂಲಕ ಹನಿ ನೀರಾವರಿಯನ್ನು ಅತ್ಯಂತ ಪರಿಣಾಮಕಾರಿ ವಿಧಾನವಾಗಿ ಅಭಿವೃದ್ಧಿಪಡಿಸಲಾಗಿದೆ.

ಹನಿ ನೀರಾವರಿಯಿಂದ ಉತ್ಪಾದನೆಯು ಶೇ 15ರಿಂದ 20ರಷ್ಟು ಹೆಚ್ಚಾಗುತ್ತದೆ. ಪೋಷಕಾಂಶ ಹಾಗೂ ಕೀಟನಾಶಕಗಳನ್ನು ನೀರಿನಲ್ಲಿ ಕರಗಿಸಿ ಸೂಕ್ತ ಪ್ರಮಾಣದಲ್ಲಿ ಬಳಸಬಹುದಾಗಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಭೂಮಿಯ ಗುಣಮಟ್ಟ ಸದಾಕಾಲ ಉತ್ತಮವಾಗಿ ಉಳಿಯುತ್ತದೆ. ಕೇಂದ್ರ ಸರ್ಕಾರವು ಭೂಮಿ ಆರೋಗ್ಯ ಕಾರ್ಡ್ ಪ್ರಕಟಿಸಿದೆ. ಈ ಮಾರ್ಗದರ್ಶನವನ್ನು ಸ್ಥಳೀಯ ವಾತಾವರಣಕ್ಕೆ ಹೊಂದುವಂತೆ ಸುಲಭವಾಗಿ ಬಳಸಬಹುದಾಗಿದೆ.

ಭೂಮಿಯ ಮುಳುಗಡೆ ಹಾಗೂ ಜನರ ಸ್ಥಳಾಂತರದ ಸಮಸ್ಯೆಗಳು ಇರುವುದಿಲ್ಲ. ಕಾಲುವೆ ನಿರ್ಮಾಣ ಮತ್ತು ನಿರ್ವಹಣೆಗೆ ಮಾಡುವ ಖರ್ಚು ತೀವ್ರ ಕಡಿಮೆಯಾಗುತ್ತದೆ. ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಲ್ಲಿ ಕಬ್ಬು ಕೃಷಿಗೆ ಹನಿ ನೀರಾವರಿ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಲಾಗಿದೆ. ಕಬ್ಬು ಬೆಳೆಗಾರರ ಸಹಕಾರಿ ನೀರಾವರಿ ಸಂಘಟನೆಗಳನ್ನು ರಚಿಸಿ, ಸಕ್ಕರೆ ಕಾರ್ಖಾನೆಗಳ ಸಹಭಾಗಿತ್ವದಲ್ಲಿ ಈ ಯೋಜನೆ ಕಾರ್ಯಗತಗೊಳಿಸುವ ಕೆಲಸ ನಡೆಯುತ್ತಿದೆ.

ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ಈ ವಿಧಾನ ಅನುಸರಿಸುವ ಬಗ್ಗೆ ಸಭೆ, ಚರ್ಚೆಗಳು ನಡೆದಿವೆ. ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯು ಯೋಜನಾ ವರದಿಯನ್ನು ಸಿದ್ಧಪಡಿಸಿದೆ. ಸರ್ಕಾರ ಗಟ್ಟಿ ನಿರ್ಧಾರ ಮಾಡಿ ಯೋಜನೆ ಜಾರಿಗೊಳಿಸಬೇಕಾಗಿದೆ.

ರಾಜ್ಯ ತೋಟಗಾರಿಕೆ ಇಲಾಖೆಯ ಮೂಲಕ ಹನಿ ನೀರಾವರಿಗೆ ಸಬ್ಸಿಡಿ ಕೊಡುವ ವಿಧಾನ ಜಾರಿಯಲ್ಲಿದೆ. ಹಿಂದೆ ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಪಂಗಡದವರಿಗೆ ಸಮಾನವಾಗಿ ಶೇ 90ರಷ್ಟು ಸಬ್ಸಿಡಿ ನೀಡಲಾಗುತ್ತಿತ್ತು. ಆದರೆ ಈಗ ಸಾಮಾನ್ಯ ವರ್ಗದ ರೈತರಿಗೆ ಶೇ 45, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮಾತ್ರ ಶೇ 90ರಷ್ಟು ಸಬ್ಸಿಡಿ ನೀಡುವುದಾಗಿ ಸರ್ಕಾರ ಹೇಳಿದೆ. ಇದರಿಂದ ರೈತರಲ್ಲಿ ಭಾರಿ ಅಸಮಾಧಾನ ಉಂಟಾಗಿದೆ. ಹನಿ ನೀರಾವರಿ ಮಾಡುವ ರೈತರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಎಲ್ಲರಿಗೂ ಸಮಾನವಾಗಿ ಶೇ 90ರಷ್ಟು ಸಬ್ಸಿಡಿ ನೀಡುವ ಕ್ರಮ ಮುಂದುವರಿಸುವುದು ಅವಶ್ಯ. ಹಾಗೆಯೇ ಸಬ್ಸಿಡಿ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡುವುದೂ ಮುಖ್ಯ.

ವಾಚಕರ ವಾಣಿ

ಆದಾಯ ಪ್ರಮಾಣಪತ್ರ: ಮಿತಿ ಮತ್ತು ಅತಿ

ಸರ್ಕಾರವು ಬಡವರಿಗೆಂದು ಜಾರಿಗೆ ತಂದಿರುವ ವಸತಿ ಯೋಜನೆಯಲ್ಲಿ ಫಲಾನುಭವಿಗಳಿಗೆ ಆದಾಯದ ಮಿತಿಯನ್ನು₹ 32,000ಕ್ಕೆ ನಿಗದಿಪಡಿಸಲಾಗಿದೆ. ಆದರೆ ಇದು ಇಂದಿನ ದಿನಗಳಲ್ಲಿ ಅವೈಜ್ಞಾನಿಕವಾಗಿದ್ದು, ಕಂದಾಯ ಇಲಾಖೆ ಅಧಿಕಾರಿಗಳು ಇಷ್ಟು ಕಡಿಮೆ ಪ್ರಮಾಣದ ಆದಾಯ ಪ್ರಮಾಣಪತ್ರ ನೀಡಲು ನಿರಾಕರಿಸುತ್ತಿದ್ದಾರೆ. ವಸತಿ ಯೋಜನೆಯಡಿ ನೀಡಬೇಕಾದ ಆದಾಯದ ಮಿತಿಯನ್ನು ಹೆಚ್ಚಿಸುವ ಮೂಲಕ ಸರ್ಕಾರವು ಬಡವರಿಗಾಗಿರುವ ತೊಂದರೆಯನ್ನು ಸರಿಪಡಿಸಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ಬಜೆಟ್ ವಿಶ್ಲೇಷಣೆ: 'ಆನೆಯ ವರ್ಣನೆ'!

ಕೇಂದ್ರ ಸರ್ಕಾರ ಮಂಡಿಸಿರುವ 2022- 23ನೇ ಸಾಲಿನ ಬಜೆಟ್ ಕುರಿತು ವಿವಿಧ ವ್ಯಕ್ತಿಗಳ ವಿಮರ್ಶೆ ಮತ್ತು ಅಭಿಪ್ರಾಯಗಳನ್ನು ನೋಡಿದಾಗ, ಐದು ಜನ ದೃಷ್ಟಿವಂಚಿತರು ಆನೆಯನ್ನು ಮುಟ್ಟಿ ತಮ್ಮ ತಮ್ಮ ಅನಿಸಿಕೆ ಗಳನ್ನು ತಿಳಿಸಿದಂತೆ ಅನಿಸುತ್ತಿದೆ. ವಿಮರ್ಶಕರು ಬಜೆಟ್ ಅನ್ನು ನಿಷ್ಪಕ್ಷಪಾತವಾಗಿ ಗಮನಿಸಿಲ್ಲ. ಆಡಳಿತ ಪಕ್ಷದ ಪರವಾಗಿ ಇರುವವರು 'ಅಮೋಘವಾದ ಬಜೆಟ್' ಎಂದೂ ವಿರೋಧ ಪಕ್ಷದವರು 'ಜನವಿರೋಧಿ ಬಜೆಟ್', 'ನಿರಾಶಾದಾಯಕ ಬಜೆಟ್', 'ಹೊಟ್ಟೆಯ ಮೇಲೆ ತಣ್ಣೀರುಬಟ್ಟೆ ಹಾಕುವ ಬಜೆಟ್' ಎಂದೆಲ್ಲ ವಿಶ್ಲೇಷಿಸಿದ್ದಾರೆ.

ಕೃಷಿಕರು ಕೃಷಿಗೆ ಸಂಬಂಧಿಸಿದಂತೆ, ಸಂಬಳ ಪಡೆಯುವ ನೌಕರರು ಆದಾಯ ತೆರಿಗೆ ವಿನಾಯಿತಿಯಂತಹ ವಿಷಯಗಳಿಗೆ ಮಾತ್ರ ಪ್ರತಿಕ್ರಿಯಿಸಿದ್ದಾರೆ. ಹೀಗೆ ಬಹುತೇಕರು ತಮ್ಮ ತಮ್ಮ ಕ್ಷೇತ್ರಗಳಿಗೆ ಅನುಕೂಲ ಆಗಿದೆಯೋ ಇಲ್ಲವೋ ಎಂದು ಮಾತ್ರ ನೋಡಿದ್ದಾರೆ. ಆದರೆ, ಒಟ್ಟಾರೆಯಾಗಿ ಈ ಬಜೆಟ್ ದೇಶದ ಆರ್ಥಿಕ ವ್ಯವಸ್ಥೆಗೆ ಪೂರಕವಾಗಿದೆಯೋ ಇಲ್ಲವೋ ಎನ್ನುವುದನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳವಾಗಿ ವಿಮರ್ಶಿಸ ಬೇಕಾದ ಅವಶ್ಯಕತೆ ಇದೆ.

ಟಿ.ವಿ.ಬಿ.ರಾಜನ್, ಬೆಂಗಳೂರು

ಅರಿವು ಮೂಡಿಸಿದ 'ಪ್ರಾರ್ಥನೆ'

'ಪ್ರಾರ್ಥನೆ ಜೊತೆ ಹುಡುಗಾಟ ಸಲ್ಲದು' ಎಂಬ ನಟರಾಜ್ ಹುಳಿಯಾರ್ ಅವರ ಲೇಖನ (ಪ್ರ.ವಾ., ಫೆ. 1) ನೇರ ಮತ್ತು ನಿಷ್ಠುರವಾಗಿದೆ. ಬಹುಶಃ ಹೆಚ್ಚಿನ ಜನಸಾಮಾನ್ಯರಿಗೆ ಗಾಂಧೀಜಿಗೆ ಪ್ರಿಯವಾಗಿದ್ದ 'ಅಬೈಡ್ ವಿತ್ ಮಿ' ಕವನದ ಬಗ್ಗೆ ತಿಳಿದಿಲ್ಲ. ಇದು ಏನಿರಬಹುದು ಎಂದು ನಮಗೂ ಕುತೂಹಲವಿತ್ತು.

ಈ ವಿಷಯದ ಬಗ್ಗೆ ನಟರಾಜ್ ಅವರು ತಾವೇ ಅನುವಾದಿಸಿದ ಕವನದ ಸಾಲುಗಳ ಮೂಲಕ ಬೆಳಕು ಚೆಲ್ಲಿದ್ದಾರೆ. ಅಂತೆಯೇ ಗಾಂಧೀಜಿಯ ಕೊನೆಯ ಪ್ರಾರ್ಥನೆಯನ್ನು ತಿಳಿಸಿಕೊಟ್ಟು ನಮ್ಮ ಅರಿವನ್ನು ಹೆಚ್ಚಿಸಿದ್ದಾರೆ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ನಿರುದ್ಯೋಗಿಗಳ 'ಲಸಿಕೆ'ಗೇಕೆ ಅನಾದರ?

ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಬಜೆಟ್ ಕಡಿಮೆ ಹಣ ಮೀಸಲಿರಿಸಿದೆ. ಇಲ್ಲಿ ಪ್ರಶ್ನೆ ಗ್ರಾಮೀಣ ಸಂಕಟದ್ದಾಗಿರಲಿಲ್ಲ. ಅದು ಒಂದು ಕಾನೂನಿನ ಮೂಲಕ ಸರ್ಕಾರವು ಗ್ರಾಮೀಣ ಜನರಿಗೆ ಮಾಡಿದ ವಾಗ್ದಾನವಾಗಿತ್ತು. ಉದ್ಯೋಗಕ್ಕಾಗಿ ಬೇಡಿಕೆ ಇಟ್ಟಾಗ ಕೆಲಸ ಕೊಡಬೇಕಾಗಿದ್ದ ವಾಗ್ದಾನವು ಅತಿ ಕಡಿಮೆ ಹಣ ಇಡುವುದರ ಮೂಲಕ 'ಕೆಲಸ ಕೊಟ್ಟಾಗ ಮಾಡಿ' ಎಂಬ ನೀತಿಯಾಗಿ ಪರಿವರ್ತನೆಗೊಂಡಿದೆ. ಗ್ರಾಮಾಭಿವೃದ್ಧಿಗೆ ಕೇಂದ್ರ ಬಜೆಟ್ಟಿನಲ್ಲಿ ₹ 1,35,944 ಕೋಟಿ ಇಟ್ಟಿದ್ದರೆ ಉದ್ಯೋಗ ಖಾತರಿಗಾಗಿ ₹ 98,000 ಕೋಟಿ ಇಡಬೇಕೆಂದು ಅಂದಾಜು ಮಾಡಲಾಗಿತ್ತು. ಆದರೆ ಕಳೆದ ವರ್ಷದಷ್ಟೇ, ಅಂದರೆ ₹ 73,000 ಕೋಟಿ ಮಾತ್ರ ಇರಿಸಿದ್ದು, ಇದರಲ್ಲಿ ₹ 18,350 ಕೋಟಿ ಹಿಂದಿನ ವರ್ಷದ ವೇತನ ಬಾಕಿಗೆ ಹೋಗಿಬಿಡುತ್ತದೆ. ಅಂದರೆ ಈ ವರ್ಷಕ್ಕಾಗಿ ನಿಜವಾಗಿ ಇಟ್ಟ ಬಜೆಟ್ ₹ 54,650 ಕೋಟಿ ಮಾತ್ರ. ಉದ್ಯೋಗ ಖಾತರಿಯನ್ನು ನಂಬಿಕೊಂಡು ಉದ್ಯೋಗ ಕೇಳಿಕೊಂಡು ಬರುವ ಜಾಬ್ ಕಾರ್ಡುಗಳ ಸಂಖ್ಯೆ 9.94 ಕೋಟಿ ಆಗಿರುವಾಗ, ಈಗಿನ ಬಜೆಟ್ ಪ್ರಕಾರ ಇಷ್ಟು ಕುಟುಂಬಗಳಿಗೆ ಇಷ್ಟು ಹಣದಲ್ಲಿ ಸರ್ಕಾರವು ₹ 334 ದಿನಗೂಲಿಯಂತೆ ವರ್ಷದಲ್ಲಿ 16 ದಿನಗಳ ಕೆಲಸವನ್ನು ಮಾತ್ರ ಗ್ಯಾರಂಟಿಯಾಗಿ ಕೊಡಬಲ್ಲದು.

ಇದು ಇಂದಿನ ಕತೆಯಲ್ಲ. 2015– 16ರಿಂದಲೇ ಹೀಗೆ ನಡೆದುಕೊಂಡು ಬಂದಿದೆ. ಪ್ರತಿವರ್ಷವೂ ಇಟ್ಟ ಬಜೆಟ್ಟಿನಲ್ಲಿ ಒಂದು ಭಾಗವು ಕಳೆದ ವರ್ಷದ ಬಾಕಿಗಾಗಿ ಖರ್ಚಾಗಿ ಹೋಗಿದ್ದರೆ, ಉಳಿದ ಹಣದಲ್ಲಿ ಶೇ 80– 90ರಷ್ಟು ಭಾಗವು ಮೊದಲ ಆರು ತಿಂಗಳಿಗೇ ಮುಗಿದುಹೋಗಿ ಕೆಲಸವು ಅರ್ಧಕ್ಕೇ ನಿಂತು ಹೋಗುತ್ತಿತ್ತು. ಬೊಕ್ಕಸದಲ್ಲಿ ಹಣವೇ ಇಲ್ಲದಿರುವಾಗ ಕೆಲಸ ಕೇಳಿಕೊಂಡು ಬಂದವರಿಗೆ ಉದ್ಯೋಗ ಕೊಡುವುದೆಲ್ಲಿಂದ? ಕೊರೊನಾ ಕಾರಣದಿಂದ ಕೆಲಸ ಕಳೆದುಕೊಂಡು ಹಳ್ಳಿಗೆ ಮರಳಿದ ದೇಶದ ಅಸಂಘಟಿತ ಕೂಲಿಕಾರರನ್ನೆಲ್ಲ ಕರೆದು ಸಂತೈಸಿದ್ದು ಇದೇ ಯೋಜನೆಯೆಂದು ಎಲ್ಲರೂ ಬಲ್ಲರು. ಜೀವನ ಮತ್ತು ಜೀವನೋಪಾಯಗಳನ್ನು ಕಳೆದುಕೊಂಡು ಬಂದ ನಿರುದ್ಯೋಗಿಗಳಿಗೆ ರೋಗಕ್ಕೆ ಲಸಿಕೆಯಂತೆ ಅದು ಕೆಲಸ ಮಾಡಿತ್ತು. 2020– 21ರಲ್ಲಿ ಏಳೂವರೆ ಕೋಟಿ ಕುಟುಂಬಗಳಿಂದ ಬಂದ 11 ಕೋಟಿ ಜನರಿಗೆ ಉದ್ಯೋಗ ಕೊಟ್ಟ ಪರಿಣಾಮವಾಗಿ 1.11 ಲಕ್ಷ ಕೋಟಿಯನ್ನು ಕೇಂದ್ರ ಸರ್ಕಾರ ಖರ್ಚು ಮಾಡಿತು.

ಆದರೆ ಮರುವರ್ಷವೇ ಆ ಸಂಕಟ ಮುಂದುವರಿದಿದ್ದರೂ ಬಜೆಟ್ಟಿನಲ್ಲಿ ಶೇ 34ರಷ್ಟು ಕಡಿತ ಮಾಡಲಾಗಿ ಜನರಿಗೆ ಕೇಳಿದಷ್ಟು ಕೆಲಸ ಸಿಗಲಿಲ್ಲ. ಮತ್ತೆ ಸರ್ಕಾರ ₹ 25,000 ಕೋಟಿಯನ್ನು ಹೆಚ್ಚುವರಿಯಾಗಿ ಕೊಡುವ ಪ್ರಸಂಗ ಬಂತು. ಸರ್ಕಾರದಿಂದ ಇಷ್ಟು ಮಟ್ಟದ ಹಿಂಜರಿತ ಇದ್ದಾಗ್ಯೂ ಈಗ 6.74 ಕೋಟಿ ಕುಟುಂಬಗಳಿಂದ 9.75 ಕೋಟಿ ಜನರು ಈಗಾಗಲೇ ಕೆಲಸ ಮಾಡಿ ಮುಗಿಸಿದ್ದಾರೆ. ಮತ್ತೆ ಕೆಲಸ ಕೇಳುತ್ತಲೂ ಇದ್ದಾರೆ. ಉದ್ಯೋಗ ಅರಸಿ ಬರುವ ಗ್ರಾಮೀಣ ಜನರಿಗೆ ಧಾರಾಳವಾಗಿ ಕೆಲಸ ಕೊಡಬೇಕೆಂದರೆ ಕನಿಷ್ಠ ₹ 3.62 ಲಕ್ಷ ಕೋಟಿಯನ್ನು ಬಜೆಟ್ಟಿನಲ್ಲಿ ಇರಿಸಬೇಕೆಂದು ಬಜೆಟ್‌ಪೂರ್ವ ಅಂದಾಜಿನಲ್ಲಿ ತಿಳಿಸಲಾಗಿತ್ತು. ಆದರೆ ಸರ್ಕಾರ ಈ ಲೆಕ್ಕವನ್ನು ಗೌಣ ಮಾಡುವ ಮೂಲಕ ಲಕ್ಷಾಂತರ ಗ್ರಾಮೀಣ ಜನರ ಮೂಲಭೂತ ಜೀವನಾವಶ್ಯಕತೆಯಾದ ಉದ್ಯೋಗವನ್ನೇ ನಿರಾಕರಿಸುತ್ತಿದೆ. ಸ್ಥಳೀಯ ಉದ್ಯೋಗದ ಭರವಸೆಯನ್ನೇ ಕಿತ್ತುಹಾಕಿದೆ.

ಶಾರದಾ ಗೋಪಾಲ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಟಾಟಾ ತೆಕ್ಕೆಯಲ್ಲಿ ಲಾಭಕ್ಕೆ ಬರಲಿದೆಯೇ ಏರ್ ಇಂಡಿಯಾ

69 ವರ್ಷಗಳ ಬಳಿಕ ಮತ್ತೆ ಟಾಟಾ ಸಮೂಹದ ತೆಕ್ಕೆಗೆ ಏರ್ ಇಂಡಿಯಾ ಬಂದು ಸೇರಿದೆ. ಸರ್ಕಾರದ ವಶದಲ್ಲಿದ್ದ ವಿಮಾನಯಾನ ಸಂಸ್ಥೆಯನ್ನು ₹18,000 ಕೋಟಿ ನೀಡಿ ಖರೀದಿಸಿರುವ ಟಾಟಾ ಬಳಿ ಈಗಾಗಲೇ ಎರಡು ವಿಮಾನಯಾನ ಸಂಸ್ಥೆಗಳಿವೆ. ಏರ್‌ಏಷ್ಯಾ ಇಂಡಿಯಾ ಹಾಗೂ ವಿಸ್ತಾರಾ ಎಂಬ ವಿಮಾನಯಾನ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ. ಈ ಸಂಸ್ಥೆಗೆ ಇದು ಮೂರನೇ ಸೇರ್ಪಡೆ. ಹೀಗಾಗಿ ಮೂರು ಬೃಹತ್ ವಿಮಾನಯಾನ ಕಂಪನಿಗಳ ಒಡೆತನ ಹೊಂದಿರುವ ಹೆಗ್ಗಳಿಕೆ ಟಾಟಾ ಸಂಸ್ಥೆಯದ್ದಾಗಿದೆ.

ದೇಶದಲ್ಲಿ ಮೊದಲು ವಿಮಾನಯಾನ ಸೇವೆ ಆರಂಭಿಸಿದ್ದೇ ಜೆಆರ್‌ಡಿ ಟಾಟಾ. ಸಂಸ್ಥೆಯನ್ನು ಸರ್ಕಾರವು ರಾಷ್ಟ್ರೀಕರಣ ಮಾಡಿ, ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. 2007ರಿಂದೀಚೆಗೆ ಏರ್ ಇಂಡಿಯಾ ಸಾಲದ ಶೂಲಕ್ಕೆ ಸಿಲುಕಿ ಹೈರಾಣಾಗಿತ್ತು. ಸಂಸ್ಥೆಯನ್ನು ಖಾಸಗೀಕರಣ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದಾಗ, ಹಲವರು ಹಿಂದೇಟು ಹಾಕಿದರು. ಆದರೆ ಏರ್ ಇಂಡಿಯಾ ಖರೀದಿಯು ಟಾಟಾಗೆ ಭಾವನಾತ್ಮಕ ವಿಷಯವಾಗಿತ್ತು. 2022ರ ಜನವರಿ 27ರಂದು ಏರ್ ಇಂಡಿಯಾ ಅಧಿಕೃತವಾಗಿ ಟಾಟಾ ತೆಕ್ಕೆ ಸೇರಿತು.

2015ರ ಜನವರಿ 9ರಂದು 'ವಿಸ್ತಾರಾ' ಹೆಸರಿನ ವಾಯುಯಾನ ಸಂಸ್ಥೆಯನ್ನು ಟಾಟಾ ಆರಂಭಿಸಿತ್ತು. ಕೇವಲ 5 ವರ್ಷಗಳಲ್ಲಿ 2 ಕೋಟಿ ಪ್ರಯಾಣಿಕರಿಗೆ ಸೇವೆ ನೀಡಿ ಸೈ ಎನಿಸಿಕೊಂಡ ಸಂಸ್ಥೆಯು ಪ್ರಯಾಣಿಕ ಸೇವೆಗೆ ವಿಶ್ವದಲ್ಲೇ ಹೆಸರುವಾಸಿಯಾಗಿದೆ.

ಭಾರತದ ಏಕೈಕ ಪ್ರೀಮಿಯಂ ಎಕಾನಮಿ ಕ್ಲಾಸ್ ವಿಮಾನಯಾನ ಸೇವೆ ನೀಡುತ್ತಿರುವ ವಿಸ್ತಾರಾ, ತನ್ನ ಡ್ರೀಮ್‌ಲೈನರ್ ಮತ್ತು ಎ321 ನಿಯೊ ವಿಮಾನಗಳಲ್ಲಿ ಹಾಸಿಗೆಗಳ ಐಷಾರಾಮಿ ಸೌಲಭ್ಯವನ್ನೂ ನೀಡುತ್ತಿದೆ. 35 ಏರ್‌ಬಸ್ ಎ320, ಆರು ಬೋಯಿಂಗ್ 737-800ಎನ್‌ಜಿ, ಎರಡು ಏರ್‌ಬಸ್ ಎ321 ನಿಯೊ, ಮತ್ತು ಎರಡು ಬೋಯಿಂಗ್ ಬಿ787-9 ಡ್ರೀಮ್‌ಲೈನರ್ ಸೇರಿದಂತೆ ಪ್ರಸ್ತುತ 45 ವಿಮಾನಗಳನ್ನು ವಿಸ್ತಾರಾ ಹೊಂದಿದೆ. ಮುಂದಿನ ವರ್ಷ ವಿವಿಧ ಶ್ರೇಣಿಯ 70 ವಿಮಾನಗಳನ್ನು ಖರೀದಿಸಲು ನಿರ್ಧರಿಸಿದೆ.

ಸಿಂಗಪುರ ಏರ್‌ಲೈನ್ಸ್ ಜೊತೆ ಏರ್‌ಏಷ್ಯಾ ಇಂಡಿಯಾ ವಿಮಾನ ಸಂಸ್ಥೆ ಆರಂಭಿಸಿರುವ ಟಾಟಾ, ಇದರಲ್ಲಿ ಶೇ 84ರಷ್ಟು ಪಾಲು ಹೊಂದಿದೆ. ಇದು ಕಡಿಮೆ ದರದ ವಿಮಾನಯಾನ ಸೇವೆಗೆ ಹೆಸರಾಗಿದೆ. ಆದರೆ, ವಿಸ್ತಾರಾ ಸಂಸ್ಥೆಯ ಗ್ರಾಹಕರೇ ಬೇರೆ, ಏರ್‌ಏಷ್ಯಾ ಇಂಡಿಯಾದ ಗ್ರಾಹಕರೇ ಬೇರೆ.

ಏರ್ ಇಂಡಿಯಾದ ಜತೆ ಏರ್‌ಇಂಡಿಯಾ ಎಕ್ಸ್‌ಪ್ರೆಸ್ ಎಂಬ ಸಹ ಸಂಸ್ಥೆಯೂ ಟಾಟಾ ಸಮೂಹಕ್ಕೆ ಸೇರಿದೆ. ಇದು ಏರ್‌ಏಷ್ಯಾದ ರೀತಿ ಅಗ್ಗದ ವಿಮಾನ ಸಂಚಾರ ಒದಗಿಸುತ್ತಿದೆ. ಏರ್‌ಇಂಡಿಯಾ ಎಕ್ಸ್‌ಪ್ರೆಸ್ ಹಾಗೂ ಏರ್‌ಏಷ್ಯಾ ಇಂಡಿಯಾ ಸಂಸ್ಥೆಗಳನ್ನು ವಿಲೀನಗೊಳಿಸುವ ಅಂಶವನ್ನು ಟಾಟಾ ಸಂಸ್ಥೆ ಪರಿಗಣಿಸುತ್ತಿದೆ. ವಿಶ್ವದರ್ಜೆಯ ಪ್ರೀಮಿಯಂ ಸೇವೆ ನೀಡುತ್ತಿರುವ ವಿಸ್ತಾರಾ ಸಂಸ್ಥೆಯನ್ನು ಹಾಗೆಯೇ ಉಳಿಸಿಕೊಳ್ಳಲು ಟಾಟಾ ಉದ್ದೇಶಿಸಿದೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರದ ನಿಯಂತ್ರಣದಿಂದ ಖಾಸಗಿ ನಿಯಂತ್ರಣಕ್ಕೆ ಬಂದಿರುವ ಏರ್ ಇಂಡಿಯಾ ಉದ್ಯೋಗಿಗಳು ಹಾಗೂ ಅವರ ಸಂಬಳ, ಸೌಲಭ್ಯದಲ್ಲಿ ಯಾವುದೇ ಬದಲಾವಣೆ ಮಾಡದಿರಲು ಟಾಟಾ ನಿರ್ಧರಿಸಿದೆ. ಸಂಸ್ಥೆಯ ಪುನರುಜ್ಜೀವನಕ್ಕೆ ರೂಪುರೇಷೆ ಸಿದ್ಧಪಡಿಸಲು 100 ದಿನಗಳ ಕಾರ್ಯಕ್ರಮ ಹಾಕಿಕೊಂಡಿದೆ. ಏರ್ ಇಂಡಿಯಾ ಹೆಸರು ತಾಯ್ನಾಡಿನ ಪ್ರೀತಿ ಹಾಗೂ ಆದರಾತಿಥ್ಯವನ್ನು ನೆನಪಿಸುತ್ತದೆ. ಹೀಗಾಗಿ ಬ್ರ್ಯಾಂಡ್ ಮೌಲ್ಯವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ 'ಏರ್ ಇಂಡಿಯಾ' ಹೆಸರು ಹಾಗೂ ಲೋಗೊವನ್ನು ಹಾಗೆಯೇ ಉಳಿಸಿಕೊಳ್ಳುವ ಸಾಧ್ಯತೆಯಿದೆ.

ಟಾಟಾ ಮುಂದಿರುವ ಸವಾಲುಗಳು

ವಿಮಾನಯಾನ ಸಂಸ್ಥೆಗಳನ್ನು ನಿರ್ವಹಿಸಿ ಟಾಟಾ ಸನ್ಸ್‌ಗೆ ದೀರ್ಘಕಾಲದ ಅನುಭವವಿದೆ. ಏರ್ ಇಂಡಿಯಾದ ಮೊದಲ ಮಾಲೀಕ ಟಾಟಾ ಕಂಪನಿಯೇ ಆಗಿತ್ತು. ಏರ್ ಇಂಡಿಯಾ ರಾಷ್ಟ್ರೀಕರಣದ ನಂತರ ಹಲವು ದಶಕ ಟಾಟಾ ಕಂಪನಿಯು ವಿಮಾನಯಾನ ಉದ್ದಿಮೆಯಿಂದ ದೂರವಿತ್ತು. ಆದರೆ ಈಚಿನ ದಶಕಗಳಲ್ಲಿ ಕಂಪನಿಯು ಬೇರೆ ಕಂಪನಿಗಳ ಪಾಲುದಾರಿಕೆಯಲ್ಲಿ ವಿಮಾನಯಾನ ಕಂಪನಿಗಳನ್ನು ನಡೆಸುತ್ತಿರುವ ಅನುಭವ ಹೊಂದಿದೆ. ಈ ಕಾರಣದಿಂದ ನಷ್ಟದಲ್ಲಿರುವ ಏರ್ ಇಂಡಿಯಾವನ್ನು ಲಾಭದ ಹಾದಿಗೆ ಮರಳಿಸುವ ಸಾಮರ್ಥ್ಯ ಟಾಟಾ ಕಂಪನಿಗೆ ಇದೆ ಎಂದು ನಿರೀಕ್ಷಿಸಲಾಗಿದೆ.

ಏರ್ ಇಂಡಿಯಾ, ವಿಸ್ತಾರಾ ಮತ್ತು ಏರ್‌ಏಷ್ಯಾ ಮೂರೂ ಕಂಪನಿಗಳು ಸೇರಿದರೆ ಅದು ಭಾರತದ ವಿಮಾನಯಾನ ಮಾರುಕಟ್ಟೆಯಲ್ಲಿ ಶೇ 26.9ರಷ್ಟು ಪಾಲು ಹೊಂದಲಿದೆ. ಅತಿ ಹೆಚ್ಚು ಮಾರುಕಟ್ಟೆ ಪಾಲು ಹೊಂದಿರುವ ಇಂಡಿಗೋದ ನಂತರದ ಸ್ಥಾನದಲ್ಲಿ ಟಾಟಾ ನಿಲ್ಲಲಿದೆ. ಮಾರುಕಟ್ಟೆಯಲ್ಲಿನ ಈ ಪಾಲನ್ನು ಸರಿಯಾಗಿ ಬಳಸಿಕೊಳ್ಳಲು ಮೂರೂ ಕಂಪನಿಗಳನ್ನು ವಿಲೀನ ಮಾಡುವ ಮತ್ತು ಅಥವಾ ಪ್ರತ್ಯೇಕವಾಗಿಯೇ ಇರಿಸುವ ಆಯ್ಕೆ ಟಾಟಾ ಕಂಪನಿಯ ಮುಂದೆ ಇದೆ.

ಏರ್ ಇಂಡಿಯಾ ಸ್ವತಃ 127 ದೊಡ್ಡ ವಿಮಾನಗಳನ್ನು ಹೊಂದಿದೆ. ಜತೆಗೆ ಕಂಪನಿಯ ಖರೀದಿಯ ನಂತರ ಏರ್ ಇಂಡಿಯಾದ 13,000ಕ್ಕೂ ಹೆಚ್ಚು ಕಾಯಂ ನೌಕರರು ಮತ್ತು ಗುತ್ತಿಗೆ ನೌಕರರು ಟಾಟಾ ತೆಕ್ಕೆಗೆ ಬಂದಿದ್ದಾರೆ. ಇದರ ಜತೆಯಲ್ಲಿಯೇ ದೇಶ-ವಿದೇಶಗಳ ವಿಮಾನ ನಿಲ್ದಾಣಗಳಲ್ಲಿ ಏರ್ ಇಂಡಿಯಾ ಹೊಂದಿರುವ ಗ್ರೌಂಡ್ ಫೋರ್ಸ್ ಸಹ ಟಾಟಾಗೆ ದೊರೆತಿದೆ. ಏರ್ ಇಂಡಿಯಾವು 102 ಮಾರ್ಗಗಳಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಖರೀದಿಯ ಮೂಲಕ ದೊರೆತಿರುವ ಈ ಸ್ವತ್ತುಗಳನ್ನು ಸರಿಯಾಗಿ ಬಳಕೆ ಮಾಡಿಕೊಂಡರೆ, ಏರ್ ಇಂಡಿಯಾ ಗಳಿಕೆಯ ಹಾದಿಗೆ ಮರಳಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ.

ಏರ್ ಇಂಡಿಯಾದ ನೌಕರರನ್ನು ಟಾಟಾ ಹೇಗೆ ನಿರ್ವಹಣೆ ಮಾಡುತ್ತದೆ ಎಂಬುದೂ ಅತ್ಯಂತ ಮಹತ್ವದ ಅಂಶವಾಗಿದೆ. ಸರ್ಕಾರಿ ಕಂಪನಿಯಾಗಿದ್ದಾಗ ಆಡಳಿತ ಮಂಡಳಿಗೆ ಅನ್ವಯವಾಗುತ್ತಿದ್ದ ಹಲವು ಕಟ್ಟುಪಾಡುಗಳು, ಖಾಸಗಿ ಕಂಪನಿಯಾದ ನಂತರ ಅನ್ವಯವಾಗುವುದಿಲ್ಲ. ನೌಕರರ ಜತೆಗೆ ಆಡಳಿತ ಮಂಡಳಿಯ ತಾಂತ್ರಿಕ ಸಂಬಂಧ ಬದಲಾಗಲಿದೆ. ಇದರಿಂದ ಕಂಪನಿಯು ತನಗೆ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಒಟ್ಟಾರೆಯಾಗಿ ಇದು ಕಂಪನಿಯ ಕಾರ್ಯನಿರ್ವಹಣೆಯನ್ನು ಸುಗಮವಾಗಿಸಲು ನೆರವಾಗುತ್ತದೆ.

ಆದರೆ ಟಾಟಾ ಕಂಪನಿಯ ಮುಂದಿರುವ ದೊಡ್ಡ ಸವಾಲೆಂದರೆ, ಏರ್ ಇಂಡಿಯಾದ ಕಾರ್ಯಾಚರಣೆಯನ್ನು ಪರಿಣಾಮಕಾರಿಯಾಗಿಸುವುದು. ಏಕೆಂದರೆ ಕಂಪನಿಯ ತೆಕ್ಕೆಯಲ್ಲಿರುವ ವಿಸ್ತಾರಾ, ಏರ್‌ಏಷ್ಯಾದ ವಿಮಾನಗಳು ಮತ್ತು ಏರ್ ಇಂಡಿಯಾದ ವಿಮಾನಗಳ ಕಾರ್ಯಾಚರಣೆಯ ಮಧ್ಯೆ ಘರ್ಷಣೆಯಾಗದಂತೆ ನೋಡಿಕೊಳ್ಳಬೇಕಿದೆ. ಮೂರೂ ಕಂಪನಿಯ ವಿಮಾನಗಳು ಒಂದೇ ಮಾರ್ಗದಲ್ಲಿ, ಏಕಕಾಲಕ್ಕೆ ಕಾರ್ಯನಿರ್ವಹಿಸಿದರೆ ಅದು ಮೂರೂ ಕಂಪನಿಗಳಿಗೆ ನಷ್ಟವಾಗುತ್ತದೆ. ಇದನ್ನು ವ್ಯವಸ್ಥಿತವಾಗಿ ಸರಿಪಡಿಸಿದರೆ ಮಾತ್ರ ಏರ್ ಇಂಡಿಯಾವನ್ನು ಗಳಿಕೆಯತ್ತ ಒಯ್ಯಲು ಸಾಧ್ಯವಾಗುತ್ತದೆ. ಇಲ್ಲಿಯೂ ಒಂದು ಅನುಕೂಲಕರ ಸಂಗತಿ ಇದೆ. ಏರ್ ಇಂಡಿಯಾದ ಗ್ರಾಹಕರು ಮತ್ತು ಕಾರ್ಯಾಚರಣೆಯ ಮಾರ್ಗಗಳು ಬೇರೆ-ಬೇರೆ. ವಿಸ್ತಾರಾದ ಗ್ರಾಹಕರು ಮತ್ತು ಕಾರ್ಯಾಚರಣೆಯ ಮಾರ್ಗಗಳು ಬೇರೆ ಬೇರೆ. ಏರ್‌ಏಷ್ಯಾದ ಸ್ಥಿತಿಯೂ ಹೀಗೇ ಇದೆ. ಮೂರೂ ಕಂಪನಿಗಳು ತಾವು ಹೆಚ್ಚು ಸಕ್ರಿಯವಾಗಿರುವ ಮಾರ್ಗಗಳತ್ತ ಮತ್ತು ಆ ವರ್ಗದ ಗ್ರಾಹಕರತ್ತ ಗಮನ ಕೇಂದ್ರೀಕರಿಸಿದರೆ, ಈ ಸಂಭಾವ್ಯ ಘರ್ಷಣೆಯನ್ನು ತಡೆಗಟ್ಟಬಹುದು. ಆ ಮೂಲಕ ಮೂರೂ ಕಂಪನಿಗಳು ಯಾವುದೇ ನಷ್ಟವಿಲ್ಲದೆ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ದೊಡ್ಡ ಮಾರುಕಟ್ಟೆ

ಭಾರತವು ಈಗ ವಿಶ್ವದ ಮೂರನೇ ಅತ್ಯಂತ ದೊಡ್ಡ ದೇಶೀಯ ವಿಮಾನಯಾನ ಮಾರುಕಟ್ಟೆಯಾಗಿದೆ. ಹಿಂದಿನ ನಾಲ್ಕು ವರ್ಷಗಳಲ್ಲಿ ಅತ್ಯಂತ ತ್ವರಿತವಾಗಿ ಬೆಳೆಯುತ್ತಿರುವ ಮಾರುಕಟ್ಟೆ ಎನಿಸಿದೆ. 2024ರ ವೇಳೆಗೆ ಬ್ರಿಟನ್ ವಿಮಾನಯಾನ ಮಾರುಕಟ್ಟೆಯನ್ನು ಭಾರತವು ಹಿಂದಿಕ್ಕಲಿದೆ. 2030ರ ವೇಳೆಗೆ ಚೀನಾ ಮತ್ತು ಅಮೆರಿಕದ ವಿಮಾನಯಾನ ಮಾರುಕಟ್ಟೆಯನ್ನು ಮೀರಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್‌ನ ಪ್ರಕಾರ ಈಗ ಭಾರತದ ಮಾರುಕಟ್ಟೆಯು ಅತ್ಯಂತ ವೇಗವಾಗಿ ಬೆಳವಣಿಗೆ ಸಾಧಿಸುತ್ತಿದೆ.

ವಿಮಾನಯಾನ ಸಂಸ್ಥೆಗಳಲ್ಲಿ ಶೇ 49ರಷ್ಟು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಗೆ ಅವಕಾಶವಿದೆ. 2025ರ ವೇಳೆಗೆ ದೇಶದಲ್ಲಿ ಇನ್ನೂ ₹35,000 ಕೋಟಿಯಷ್ಟು ಬಂಡವಾಳ ಹೂಡಿಕೆಯಾಗುವ ನಿರೀಕ್ಷೆ ಇದೆ. ದೇಶದಲ್ಲಿ ಈಗಾಗಲೇ ಹಲವು ವಿಮಾನಯಾನ ಸ್ಟಾರ್ಟ್‌ಅಪ್‌ಗಳು ನೋಂದಣಿಯಾಗಿವೆ. ಕೆಲವು ಕಾರ್ಯಾಚರಣೆ ಆರಂಭಿಸಲು ಸಿದ್ಧವಾಗಿದೆ. ಕೋವಿಡ್ ನಿರ್ಬಂಧದ ಮಧ್ಯೆಯೂ 2021ರಲ್ಲಿ ದೇಶದಲ್ಲಿ ಪ್ರತಿದಿನ 2.80 ಲಕ್ಷ ಜನರು ವಿಮಾನದಲ್ಲಿ ಓಡಾಟ ನಡೆಸಿದ್ದಾರೆ. ಕೋವಿಡ್ ಕರಿಛಾಯೆ ತಿಳಿಯಾದ ನಂತರ ದೇಶದ ವಿಮಾನಯಾನ ಮಾರುಕಟ್ಟೆ ಮತ್ತಷ್ಟು ವೇಗವಾಗಿ ಬೆಳೆಯುವ ನಿರೀಕ್ಷೆ ಇದೆ.

ಗ್ರಾಹಕ ಸ್ನೇಹಿ

ಏರ್ ಇಂಡಿಯಾ ಖಾಸಗಿ ವಲಯಕ್ಕೆ ಪ್ರವೇಶಿಸಿದರೆ, ಅತ್ಯುತ್ತಮ ದರ್ಜೆಯ ಸೇವೆಗಳು ಸಿಗಬಹುದು ಎಂಬುದು ಪ್ರಯಾಣಿಕರ ನಿರೀಕ್ಷೆ. ಸುವ್ಯವಸ್ಥಿತ ಕಾರ್ಯಾಚರಣೆ, ಸುಧಾರಿತ ಸೇವೆಗಳು ಮರಳುತ್ತವೆ ಎಂಬ ಆಶಯವಿದೆ. ಅದನ್ನು ಸಾಕಾರಗೊಳಿಸಲು ಟಾಟಾ ಮುಂದಾಗಿದೆ. ಒಂದು ಕಾಲಕ್ಕೆ ಏರ್ ಇಂಡಿಯಾದಲ್ಲಿ ಪ್ರಯಾಣಿಸುವುದು ಜನರಿಗೆ ಪ್ರತಿಷ್ಠೆಯಾಗಿತ್ತು. ಆ ಮನಸ್ಥಿತಿಗೆ ಸ್ವಲ್ಪ ಮುಕ್ಕಾಗಿದ್ದರೂ, ಸಂಸ್ಥೆಯು ಖಾಸಗೀಕರಣ ಆಗುವುದಾದರೆ, ಅದನ್ನು ಟಾಟಾ ಸಂಸ್ಥೆಯೇ ತೆಗೆದುಕೊಳ್ಳಲಿ ಎಂಬ ಮನೋಭಾವ ಜನರಲ್ಲಿತ್ತು. ಪ್ರಯಾಣಿಕರಿಗೆ ನೀಡುವ ಸೇವೆ ಹಾಗೂ ಸೌಲಭ್ಯಗಳಿಂದ ಹೆಸರಾಗಿದ್ದ ಏರ್ ಇಂಡಿಯಾ, ಟಾಟಾ ಸಮೂಹವನ್ನು ಸೇರುತ್ತಿದ್ದಂತೆಯೇ ಪ್ರಯಾಣಿಕರಿಗೆ ಅನುಕೂಲಕರವಾದ ಕೆಲವು ಬದಲಾವಣೆಗಳಿಗೆ ಮುನ್ನುಡಿ ಬರೆಯಲಾಗಿದೆ.

ನಿಗದಿತ ಸಮಯಕ್ಕೆ ವಿಮಾನ ಟೇಕಾಫ್ ಹಾಗೂ ಲ್ಯಾಂಡಿಂಗ್ ವಿಚಾರದಲ್ಲಿ ಪ್ರಯಾಣಿಕರಿಗೆ ಸಾಕಷ್ಟು ಅಸಮಾಧಾನಗಳಿವೆ. ಆದರೆ ಟಾಟಾ ತನ್ನ ಎರಡು ವಿಮಾನಯಾನ ಸಂಸ್ಥೆಗಳಲ್ಲಿ ಸಮಯ ಪಾಲನೆಗೆ ಆದ್ಯತೆ ನೀಡಿದೆ. ಟಾಟಾ ಒಡೆತನಕ್ಕೆ ಸಿಕ್ಕ ಬಳಿಕ, ಏರ್ ಇಂಡಿಯಾದ ವಿಮಾನಗಳ ಹಾರಾಟ ಮತ್ತೆ ಹಳಿಗೆ ಮರಳಿದೆ. ನಿಗದಿತ ಸಮಯಕ್ಕೆ ಕಾರ್ಯಾಚರಣೆ ಶುರುವಾಗಿದೆ. ಹಾಗೆಯೇ, ಪ್ರಯಾಣಿಕರಿಗೆ ಕಡಿಮೆ ದರದ ವಿಮಾನಸೇವೆಯ ಪ್ರಯೋಜನವನ್ನು ಟಾಟಾ ನೀಡುವ ನಿರೀಕ್ಷೆಯಿದೆ.

ಪ್ರಯಾಣಿಕರನ್ನು 'ಅತಿಥಿಗಳು' ಎಂದು ಟಾಟಾ ಪರಿಗಣಿಸಿದೆ. ಟಾಟಾ ಒಡೆತನಕ್ಕೆ ಸಿಕ್ಕ ಮೊದಲ ದಿನ ರತನ್ ಟಾಟಾ ಅವರ ಸಂದೇಶದ ಧ್ವನಿ ಪ್ರಸಾರ ಮಾಡಿದ ವಿಮಾನ ಸಿಬ್ಬಂದಿ, ಪ್ರಯಾಣಿಕರನ್ನು ಅತಿಥಿಗಳು ಎಂದು ಕರೆದರು. ಆತಿಥ್ಯಕ್ಕೆ ಹೆಸರಾಗಿರುವ ಟಾಟಾ ಒಡೆತನದ ತಾಜ್ ಹೋಟೆಲ್ ಸಮೂಹದ ಆತಿಥ್ಯ ಇನ್ನು ಮುಂದೆ ವಿಮಾನದ ಪ್ರಯಾಣಿಕರಿಗೆ ಸಿಗುವ ಸಾಧ್ಯತೆಯಿದೆ. ವಿಸ್ತಾರಾ ಪ್ರಯಾಣಿಕರಿಗೆ ಈಗಾಗಲೇ ಈ ಸೌಲಭ್ಯ ನೀಡಲಾಗುತ್ತಿದೆ.

ಮುಂಬೈನಿಂದ ಕಾರ್ಯಾಚರಣೆ ನಡೆಸುವ ನಾಲ್ಕು ವಿಮಾನಗಳಲ್ಲಿ ನೀಡುವ ಊಟದ ಪ್ರಮಾಣದಲ್ಲಿ ಹೆಚ್ಚಳ ಮಾಡಲಾಗಿದೆ. ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿದ್ದ ಮಾಂಸಾಹಾರವನ್ನು ಮುಂಬೈ–ನೆವಾರ್ಕ್ ಮಾರ್ಗದ ವಿಮಾನದಲ್ಲಿ ಪೂರೈಸಲಾಗಿದೆ. ವಿಮಾನದ ಟಿಕೆಟ್ ಬುಕಿಂಗ್ ಮಾಡುವ ಆ್ಯಪ್ ಹಾಗೂ ಬ್ಯಾಕ್‌ಎಂಡ್ ಸೇವೆಯು ಟಾಟಾ ಸಂಸ್ಥೆ ಸಮೂಹದ ಟಿಸಿಎಸ್‌ಗೆ ನೀಡುವ ಸಾಧ್ಯತೆಯಿದ್ದು, ಪ್ರಯಾಣಿಕರು ಸುಲಭವಾಗಿ ಟಿಕೆಟ್ ಬುಕ್ಕಿಂಗ್ ಮಾಡಬಹುದಾಗಿದೆ. ಇಂತಹ ಹಲವು ಪ್ರಯಾಣಿಕ ಸ್ನೇಹಿ ಕ್ರಮಗಳನ್ನು ಟಾಟಾ ಮುಂದಿನ ದಿನಗಳಲ್ಲಿ ಜಾರಿಗೊಳಿಸುವ ನಿರೀಕ್ಷೆ ದಟ್ಟವಾಗಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 35

ಶಿವಲಿಂಗ ಪ್ರತಿಷ್ಠಾಪಿಸುವ ಕ್ರಮ

ಬ್ರಹ್ಮ-ವಿಷ್ಣು ನಡುವಿನ ಯುದ್ಧದ ಕಥೆಯನ್ನು ಕೇಳಿದ ಪ್ರಯಾಗದ ಮುನಿಗಳು ತಾವು ಧನ್ಯರಾದೆವೆಂದು ಸೂತಮುನಿಗೆ ನಮಸ್ಕರಿಸುತ್ತಾರೆ. ನಂತರ ಸಕಲರಿಗೂ ಮುಕ್ತಿ ದಯಪಾಲಿಸುವ ಶಿವನ ಆರಾಧಿಸುವ ಬಗೆ ಹೇಗೆ ಅಂತ ಪ್ರಶ್ನಿಸುತ್ತಾರೆ. ಸೂತಮುನಿಯು ಶಿವಲಿಂಗವನ್ನು ಹೇಗೆ ಪ್ರತಿಷ್ಠಾಪಿಸಿ, ಪೂಜಿಸಬೇಕು ಎಂದು ಹೇಳುತ್ತಾನೆ.

'ಶುಭವಾದ ಮತ್ತು ನಮಗೆ ಅನುಕೂಲ ಆಗಿರುವಂಥ ಕಾಲದಲ್ಲಿ, ಪವಿತ್ರವಾದ ತೀರ್ಥಕ್ಷೇತ್ರ ಅಥವಾ ನದಿಯ ದಡದಲ್ಲಿ ನಮಗಿಷ್ಟದಂತೆ ಲಿಂಗವನ್ನು ಪ್ರತಿಷ್ಠಾಪಿಸಬಹುದು. ಆದರೆ ಆ ಲಿಂಗಕ್ಕೆ ಪೂಜೆಯು ನಿರಂತರವಾಗಿ ನಡೆಯುವಂತಿರಬೇಕು. ಕಲ್ಪದಲ್ಲಿ ಹೇಳಿರುವ ಲಕ್ಷಣಗಳಂತೆ ಕಲ್ಲು-ಮಣ್ಣಿನ ಅಥವಾ ಬೆಳ್ಳಿ, ಚಿನ್ನ ಮುಂತಾದ ಲೋಹಗಳಿಂದ ನಿರ್ಮಿಸಿ ಲಿಂಗವನ್ನು ಪೂಜಿಸಬೇಕು. ಇದರಿಂದ ಇಷ್ಟಫಲವು ಲಭಿಸುವುದು. ಕಲ್ಪದಲ್ಲಿ ಹೇಳಿರುವಂತೆ ಎಲ್ಲಾ ಲಕ್ಷಣಗಳಿಂದ ಕೂಡಿರುವ ಲಿಂಗವನ್ನು ಪೂಜಿಸಿದರೆ, ತಕ್ಷಣ ಪೂಜೆಯ ಫಲವನ್ನು ಕೊಡುವುದು. ಚರವಾದ ಸ್ಥಳದಲ್ಲಿ ಪ್ರತಿಷ್ಠಾಪಿಸುವಾಗ ಚಿಕ್ಕದಾದ ಲಿಂಗವನ್ನು ಉಪಯೋಗಿಸಬೇಕು. ಸ್ಥಿರವಾದ ಸ್ಥಳದಲ್ಲಿ ಅಥವಾ ದೇವಾಲಯಗಳಲ್ಲಿ ದೊಡ್ಡದಾದ ಲಿಂಗವನ್ನು ಪೀಠದೊಡನೆ ಪ್ರತಿಷ್ಠಾಪಿಸಬೇಕು.

ಲಿಂಗಪ್ರತಿಷ್ಠಾಪಿಸುವ ಮುನ್ನ ಚಚ್ಚೌಕವಾದ ಅಥವಾ ಮೂರು ಮೂಲೆಗಳುಳ್ಳಂತಹ ಮಂಡಲವನ್ನು ನಿರ್ಮಿಸಬೇಕು. ಲಿಂಗದ ಪೀಠವು ಮಂಚದ ಕಾಲಿನಂತೆ ಮಧ್ಯದಲ್ಲಿ ಸೂಕ್ಷ್ಮವಾಗಿರಬೇಕು. ಅಂತಹ ಪೀಠವು ಮಹಾಫಲವನ್ನು ಕೊಡುವುದು. ಸ್ಥಿರವಾದ ಸ್ಥಳದಲ್ಲಿ ಪ್ರತಿಷ್ಠಾಪಿಸುವ ಲಿಂಗವನ್ನು ಮಣ್ಣು, ಶಿಲೆ ಮತ್ತಿತರ ಯಾವ ವಸ್ತುವಿನಿಂದ ನಿರ್ಮಿಸಿರುವುದೋ, ಅದೇ ವಸ್ತುವಿನಿಂದ ಆ ಲಿಂಗಕ್ಕೆ ಪೀಠವನ್ನು ನಿರ್ಮಿಸಬೇಕು. ಚರವಾದ ಸ್ಥಳದಲ್ಲಿ ಲಿಂಗದೊಂದಿಗೆ ಪೀಠವೂ ಸೇರಿಕೊಂಡಿರಬೇಕು. ಹನ್ನೆರಡು ಅಂಗುಲ ಪ್ರಮಾಣವುಳ್ಳ ಲಿಂಗವು ಉತ್ತಮವಾದುದು. ಲಿಂಗವು ಚಿಕ್ಕದಾದರೆ ಫಲವು ಸ್ವಲ್ಪವೇ ಲಭಿಸುವುದು. ದೊಡ್ಡದಾದರೆ ಉತ್ತಮ ಫಲ ಸಿಗುವುದು. ಚರವಾದ ಸ್ಥಳದಲ್ಲಿ ಒಂದಂಗುಲದಷ್ಟು ಚಿಕ್ಕದಾದ ಲಿಂಗವು ಉತ್ತಮವಾದುದಾಗಿರುತ್ತದೆ.

ಮೊದಲಿಗೆ, ಗರ್ಭಗೃಹದ ಪ್ರಧಾನವಾದ ಬಾಗಿಲಿನ ಮೇಲ್ಭಾಗದಲ್ಲಿ ದೃಢವಾದ ಮತ್ತು ಕನ್ನಡಿಯಂತೆ ನಿರ್ಮಲವಾದಂಥ ನವರತ್ನಗಳಿಂದ ಅಲಂಕರಿಸಬೇಕು. ಅಲ್ಲಿ ದೇವತೆಗಳಿರುವ ಮನೋಹರವಾದಂಥ ವಿಮಾನವನ್ನು ಕೆತ್ತಬೇಕು. ಇಂತಹ ಗರ್ಭಗೃಹದ ಮಧ್ಯದ ಪೀಠದಲ್ಲಿ ದೊಡ್ಡ ಲಿಂಗವನ್ನು ಪ್ರತಿಷ್ಠಾಪಿಸಬೇಕು. ನಂತರ ಆ ಲಿಂಗವನ್ನು 'ಸದ್ಯೋಜಾತಾದಿ' ಐದು ಮಂತ್ರಗಳಿಂದ ಐದು ಸ್ಥಾನಗಳಲ್ಲಿ ಕ್ರಮವಾಗಿ ಅರ್ಚಿಸಬೇಕು. ಅಗ್ನಿಯಲ್ಲಿ ಹವಿಸ್ಸಿನಿಂದ ವಿಧಿವತ್ತಾಗಿ ಹೋಮಮಾಡಿ, ಶಿವನನ್ನು ಮತ್ತು ಅವನ ಪರಿವಾರದೊಡನೆ ಪೂಜಿಸಬೇಕು. ಸದ್ಯೋಜಾ ತಾದಿ ಐದು ಮಂತ್ರಗಳು ಯಾವುದೆಂದರೆ 'ಸದ್ಯೋಜಾತಂ ಪ್ರಪದ್ಯಾಮಿ| ವಾಮದೇವಾಯ ನಮೋ| ಅಘೋರೇಭ್ಯೋ| ತತ್ಪುರುಷಾಯ ವಿದ್ಮಹೇ| ಈಶಾನಸ್ಸರ್ವವಿದ್ಯಾನಾಂ|'

ಶಿವನ ಪ್ರತಿಷ್ಠಾಪಿಸುವ ಆಚಾರ್ಯರನ್ನೂ ಶಿಲ್ಪಿಯನ್ನೂ ಗುರುವನ್ನೂ ಪೂಜಿಸಬೇಕು. ಬಂಧುಗಳ ಇಷ್ಟಾರ್ಥಗಳನ್ನು ಈಡೇರಿಸಬೇಕು. ಯಾಚಕರಿಗೆ ಚೇತನರೂಪವಾದ ಗೋವುಗಳನ್ನೂ, ಅಚೇತರೂಪವಾದ ದ್ರವ್ಯಗಳನ್ನೂ ದಾನ ಮಾಡಬೇಕು. ಸ್ಥಿರ ಮತ್ತು ಚರವಾದ ಸಕಲ ಪ್ರಾಣಿಗಳನ್ನೂ ಪ್ರಯತ್ನಪೂರ್ವಕವಾಗಿ ಸಂತೋಷಗೊಳಿಸಬೇಕು. ಚಿನ್ನ ಮತ್ತು ನವರತ್ನಗಳನ್ನು ತುಂಬಿರುವಂತಹ ಗರ್ತದಲ್ಲಿ ಲಿಂಗವನ್ನು ಸದ್ಯೋಜಾತಂ ಮೊದಲಾದ ಮಂತ್ರಗಳನ್ನು ಉಚ್ಚರಿಸಿ ಇಡಬೇಕು. ಮಂಗಳಕರನಾದ ಮಹಾದೇವನನ್ನು ಧ್ಯಾನಿಸಿ, ಮಹಾಮಂತ್ರವಾದ ಓಂಕಾರವನ್ನು ನಾದಪೂರ್ವಕವಾಗಿ ಪಠಿಸಿ, ಶಿವಲಿಂಗವನ್ನು ಪೀಠದಲ್ಲಿ ಪ್ರತಿಷ್ಠಾಪಿಸಬೇಕು. ನಂತರ, ದೃಢವಾದ ಅಷ್ಟಬಂಧವೆಂಬ ಲೇಪದಿಂದ ಗಟ್ಟಿಯಾಗಿ ಆ ಲಿಂಗವನ್ನು ಬಂಧಿಸಬೇಕು.

ಹೀಗೆ ಗರ್ಭಗುಡಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ ನಂತರ, ಹೊರಗಿನ ಉತ್ಸವಕ್ಕಾಗಿ ಶ್ರೇಷ್ಠವಾದ ಉತ್ಸವಮೂರ್ತಿಯೊಂದನ್ನು ಪಂಚಾಕ್ಷರೀಮಂತ್ರದಿಂದ ಪ್ರತಿಷ್ಠಾಪಿಸಬೇಕು. ವಿಗ್ರಹವನ್ನು ಗುರುಗಳಿಂದ ತೆಗೆದುಕೊಳ್ಳಬೇಕು. ಅಥವಾ ಸಾಧುಗಳು ಪೂಜಿಸಿದಂತಹ ವಿಗ್ರಹವನ್ನು ಪರಿಗ್ರಹಿಸಬೇಕು. ಈ ರೀತಿಯಾಗಿ ಲಿಂಗದಲ್ಲಿಯೂ ವಿಗ್ರಹದಲ್ಲಿಯೂ ಶಿವಪೂಜೆಯನ್ನು ಮಾಡಿದರೆ ಶಿವಲೋಕವು ಲಭಿಸುವುದು. ಶಿವಲಿಂಗದಲ್ಲಿ ಸ್ಥಾವರ ಮತ್ತು ಜಂಗಮವೆಂಬ ಎರಡು ವಿಧವಿದೆ. ಮರ ಮತ್ತು ಪೊದರು ಮುಂತಾದವುಗಳು ಸ್ಥಾವರಲಿಂಗ. ಕ್ರಿಮಿ, ಕೀಟ, ಮುಂತಾದವುಗಳು ಜಂಗಮವಾದ ಲಿಂಗ. ಸ್ಥಾವರ ಲಿಂಗವನ್ನು ಶಾಸ್ತ್ರಸಂಪ್ರದಾಯದಂತೆ ಪೂಜಿಸಬೇಕು. ಜಂಗಮಲಿಂಗವನ್ನು ಆಯಾಯ ಸುಖದ ಅನುರಾಗದಿಂದ ತೃಪ್ತಿಗೊಳಿಸಬೇಕು ಎಂದು ಸೂತಮುನಿ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಕೆಂಪು ಸೀರೆಯುಟ್ಟು ದೇವಸ್ಥಾನದ ಗಂಟೆ ಬಾರಿಸುತ್ತಿರುವ ಚಿತ್ರವೊಂದು ವೈರಲ್ ಆಗುತ್ತಿದೆ. ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಾರದ ಮುಂಚೂಣಿ ವಹಿಸಿರುವ ಪ್ರಿಯಾಂಕಾ ಗಾಂಧಿ ಅವರು, ಅವರ ಅಜ್ಜಿ ಇಂದಿರಾ ಗಾಂಧಿ ಅವರ ಸೀರೆಯುಟ್ಟು ಜನರ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಚಿತ್ರವನ್ನು ಬಿಂಬಿಸಲಾಗಿದೆ. 'ಉತ್ತರ ಪ್ರದೇಶದ ಚುನಾವಣೆ ಬಂದಾಗ ಅಜ್ಜಿಯ ಸೀರೆಯೂ ಕಪಾಟಿನಿಂದ ಹೊರಬರುತ್ತದೆ. ಇದರರ್ಥ ಏನು ಎಂಬುದು ನಿಮಗೆ ತಿಳಿಯುತ್ತದೆ' ಚಿತ್ರಕ್ಕೆ ಅಡಿಬರಹ ನೀಡಲಾಗಿದೆ.

2009ರ ಲೋಕಸಭೆ ಚುನಾವಣೆಗೂ ಮೊದಲು ತೆಗೆದಿರುವ ಚಿತ್ರ ಇದು ಎಂದು ಇಂಡಿಯಾ ಟುಡೆ ವರದಿ ಮಾಡಿದೆ. ತಮ್ಮ ಸಹೋದರ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಪರ ಪ್ರಿಯಾಂಕಾ ಅವರು ಅಮೇಠಿಯಲ್ಲಿ ಪ್ರಚಾರ ನಡೆಸಿದ್ದರು. ಆ ವೇಳೆ ಅವರು ದುರ್ಗಾ ದೇವಿ ದೇವಸ್ಥಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದ್ದರು. ಈ ಚಿತ್ರವನ್ನು 2020ರಲ್ಲಿ ನಡೆದ ಬಿಹಾರ ವಿಧಾನಸಭೆ ಚುನಾವಣೆ ವೇಳೆಯೂ ಸುಳ್ಳು ಮಾಹಿತಿಯೊಂದಿಗೆ ಬಳಸಲಾಗಿತ್ತು ಎಂದು ಇಂಡಿಯಾ ಟುಡೆ ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ವಿವೇಕದ ದೀಪ

ಧರ್ಮಸಂಕಟದಿ ಮನ ತಲ್ಲಣಿಸುತಿರುವಂದು |
ನಿರ್ಮಥಿಸು ನಿನ್ನಾತ್ಮವನೆ ಮಮತೆ ಬಿಟ್ಟು ||
ನಿರ್ಮಮದ ಸದ್ವಿವೇಕದ ದೀಪಕಿಂತ ನೀಂ |
ನೆಮ್ಮಲಿನ್ನೇನಿಹುದೊ ? – ಮಂಕುತಿಮ್ಮ || 555 ||

ಪದ-ಅರ್ಥ: ನಿರ್ಮಥಿಸು = ಮಥನ ಮಾಡು, ನಿನ್ನಾತ್ಮವನೆ = ನಿನ್ನ + ಆತ್ಮವನೆ, ನಿರ್ಮಮದ = - ಮಮಕಾರರಹಿತವಾದ, ನೆಮ್ಮಲಿನ್ನೇನಿಹುದೊ = ನೆಮ್ಮಲು(ನಂಬಲು) + ಇನ್ನೇನು + ಇಹುದೊ.

ವಾಚ್ಯಾರ್ಥ: ಧರ್ಮಸಂಕಟದಲ್ಲಿ ಮನಸ್ಸು ತಲ್ಲಣಗೊಂಡಾಗ, ಮೋಹವನ್ನು ಬಿಟ್ಟು ನಿನ್ನ ಆತ್ಮವನ್ನೇ ಮಥನಮಾಡು. ಮೋಹರಹಿತವಾದ ವಿವೇಕದ ಬೆಳಕಿಗಿಂತ ನಂಬಲು ಅರ್ಹವಾದದ್ದು ಮತ್ತಾವುದು?

ವಿವರಣೆ: ನಮ್ಮೆಲ್ಲರ ಬದುಕಿನಲ್ಲಿ ಆಗಾಗ ಧರ್ಮಸಂಕಟಗಳು ಮುಂದೆ ಬಂದು ನಿಲ್ಲುತ್ತವೆ. ಯಾವುದು ಸರಿಯಾದ ದಾರಿ ಎಂಬುದು ತಿಳಿಯದಂತಾಗುತ್ತದೆ. ದಾರಿ ಕಾಣದಂತೆ ಮಾಡುವುದು ಮೋಹದ ಪರದೆ. ತಲ್ಲಣ ಹೆಚ್ಚಾಗುವುದು ಮೋಹ ಬಲಿತಾಗ. ನ್ಯಾಯಾಧೀಶ ಕಠಿಣ ನ್ಯಾಯ ಕೊಡಬಲ್ಲ. ಯಾಕೆಂದರೆ ಅಲ್ಲಿ ತನ್ನ ಮೋಹವಿಲ್ಲ. ಆದರೆ ಅದೇ ತನ್ನ ಮಗನ ಬಗ್ಗೆ, ಹೆಂಡತಿಯ ಬಗ್ಗೆ ತೀರ್ಮಾನ ಕೊಡಬೇಕಾದರೆ ಮನಸ್ಸು ಬೆಂದು ಹೋಗುತ್ತದೆ. ಇಲ್ಲಿ ತೀರ್ಮಾನ ಕಷ್ಟವಲ್ಲ, ಯಾರ ವಿರುದ್ಧ ತೀರ್ಮಾನ ಎಂಬುದು ಕಷ್ಟ. ಅಲ್ಲಿ ನಾನು, ನನ್ನದು ಎಂಬ ಮೋಹ ಬಿಗಿದಾಗ ಯಾವ ತೀರ್ಮಾನವೂ ತಲ್ಲಣವನ್ನುಂಟು ಮಾಡುತ್ತದೆ.

ಲಕ್ಷ್ಮಣ ಅಣ್ಣನೊಂದಿಗೆ ಕಾಡಿಗೆ ಹೊರಟ. ಸುಲಭವಾಯಿತೇ ತೀರ್ಮಾನ? ಅವನು ಕಾಡಿಗೆ ಹೋಗುವುದು ತಂದೆಯ ಅಪ್ಪಣೆಯಾಗಿರಲಿಲ್ಲ. ಅದು ತನ್ನ ಸ್ವಂತದ ತೀರ್ಮಾನ. ಒಂದೆಡೆಗೆ ಹೊಸ ಹೆಂಡತಿ, ಭೋಗ ಭಾಗ್ಯಗಳು, ಮತ್ತೊಂದೆಡೆಗೆ ಅಣ್ಣ-ಅತ್ತಿಗೆಯರ ಸೇವೆ, ಕಾಡಿನಲ್ಲಿ, ಅದೂ ಹದಿನಾಲ್ಕು ವರ್ಷ! ಲಕ್ಷ್ಮಣ ತನ್ನ ಮೋಹ, ಮಮತೆಗಳನ್ನು ಬದಿಗಿಟ್ಟು ತನ್ನ ಜವಾಬ್ದಾರಿಯನ್ನು ಚಿಂತಿಸಿ, ಲೋಕಕ್ಕೆ ಸುಲಭವೆನ್ನಿಸುವಂತೆ ತೀರ್ಮಾನ ತೆಗೆದುಕೊಂಡು ಅಣ್ಣನನ್ನು ಹಿಂಬಾಲಿಸಿದ. ಇದೇ ಮಮತೆಯನ್ನು ಬಿಟ್ಟು ತನ್ನ ಆತ್ಮವನ್ನು ಮಂಥನ ಮಾಡಿದ ಕ್ರಿಯೆ. ಆಗ ಬಂದ ವಿವೇಕದ ದೀಪವನ್ನು ನಂಬಿ ಆತ ಹೊರಟ.

ವಲ್ಲಭಭಾಯಿ ಪಟೇಲ ಒಬ್ಬ ಯಶಸ್ವಿ ಬ್ಯಾರಿಸ್ಟರ್. ಅಹಮದಾಬಾದಿನಲ್ಲಿ ಒಳ್ಳೆಯ ಪ್ರಾಕ್ಟೀಸ್ ಇತ್ತು. ಸಂಜೆ ಕ್ಲಬ್‌ನಲ್ಲಿ ಕುಳಿತು, ಆಗ ತಾನೇ ದಕ್ಷಿಣ ಆಫ್ರಿಕೆಯಿಂದ ಬಂದಿದ್ದ ಮೋಹನದಾಸ ಗಾಂಧಿಯ ಉಪನ್ಯಾಸ ಕೇಳಿ ತಮಾಷೆ ಮಾಡಿದ್ದುಂಟು. ಈತ ಏನು ಬದಲಾವಣೆ ಮಾಡಿಯಾನು? ಒಂದೆರಡು ಬಾರಿ ಅವರೊಂದಿಗೆ ಕಾಲ ಕಳೆದ ಮೇಲೆ ಚಿಂತನೆ ಬದಲಾಯಿತು. ಈ ಮನುಷ್ಯ ಹೇಳುವುದರಲ್ಲಿ ಏನೋ ಸತ್ಯವಿದೆ. ಸ್ವಂತಕ್ಕೆ ಏನನ್ನೂ ಬಯಸದೆ ದೇಶಕ್ಕೋಸ್ಕರ ಪ್ರಯತ್ನ ಮಾಡುತ್ತಿದ್ದಾನೆ ಎನ್ನಿಸಿತು. ತನ್ನ ಕರ್ತವ್ಯವೇನು? ಒಂದೆಡೆಗೆ ಬ್ಯಾರಿಸ್ಟರ್ ಪದವಿ, ಅದರಿಂದ ಬರುವ ಗೌರವ, ಹಣ, ಅಂತಸ್ತು, ಸುಖ. ಮತ್ತೊಂದೆಡೆಗೆ ಗಾಂಧಿಯೊಡನೆ ಸೇರಿದರೆ ಅನಿಶ್ಚಿತತೆ, ಜೈಲುವಾಸ. ಇದೇ ಧರ್ಮಸಂಕಟದ ಕ್ಷಣಗಳಲ್ಲಿ ವಲ್ಲಭಭಾಯಿ ಚಿಂತಿಸಿದರು. ತನ್ನ ಸ್ವಂತದ, ಮೋಹದ ಆಕರ್ಷಣೆಗಳನ್ನು ಬದಿಗೆ ಸರಿಸಿ, ಆದರ್ಶದ ದೀಪವನ್ನು ಕೈಯಲ್ಲಿ ಹಿಡಿದು ಮೋಹನದಾಸರನ್ನು ಹಿಂಬಾಲಿಸಿದರು. ಈ ನಂಬಿಕೆಯ ದೀಪ ಅವರನ್ನು ಕಾಯ್ದಿತು. ಭಾರತದ ಇತಿಹಾಸದ ಪುಟಗಳಲ್ಲಿ ಅಮರರನ್ನಾಗಿಸಿತು.

ಈ ಕ್ಷಣಗಳು ಕೇವಲ ಮಹಾತ್ಮರ ಜೀವನದಲ್ಲಿ ಮಾತ್ರ ಬರುವವಲ್ಲ. ನಮ್ಮೆಲ್ಲರ ಬದುಕಿನಲ್ಲೂ ಬರುತ್ತವೆ. ಯಾರು ಮಮತೆಯನ್ನು ದೂರವಿಟ್ಟು, ಆತ್ಮವನ್ನು ಮಂಥಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೋ ಅವರು ಮಹಾತ್ಮರಾಗುತ್ತಾರೆ, ಮೋಹದ ಜಾಲದಲ್ಲಿ ಸಿಕ್ಕು ಪಾರಾಗದವರು ಕಳೆದು ಹೋಗುತ್ತಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 3, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ - ಶಿಶಿರ ಋತು ಮಕರ ಮಾಸದ 20 ನೇ ದಿನ
ತಿಥಿ: (ಮಾಘ ಶುಕ್ಲ) ತೃತೀಯ ಗಂ. 28-39 ನಕ್ಷತ್ರ: ಶತಭಿಷ ಗಂ. 16-35 ಯೋಗ: ಪರಿಘ ಗಂ. 21-16, ಕರಣ: ತೈತಿಲ ಗಂ. 17-22. ರಾಹುಕಾಲ : ಮಧ್ಯಾಹ್ನ 01:30 - 03:00
ಸೂರ್ಯೋದಯ : 07-00 ಸೂರ್ಯಾಸ್ತ : 06-28
ಮುಸ್ಲಿಂ ದಿನಾಂಕ : 01 ರಜಬ್ ಅದೃಷ್ಟ ಸಂಖ್ಯೆ: 8, 14

ಮೇಷ: ಕೌಟುಂಬಿಕವಾಗಿ ಒಡಹುಟ್ಟಿದವರ ಜೊತೆಯಲ್ಲಿ ಇರುವ ಭಿನ್ನಾಭಿಪ್ರಾಯಗಳಿಗೆ ಮೂಲ ಕಾರಣಗಳು ಏನೆಂಬುವುದು ತಿಳಿಯುವುದು. ವಿದೇಶದಿಂದ ಮಗನ ಆಗಮನದ ಸುದ್ದಿ ಮನೆಯವರಿಗೆಲ್ಲ ಸಂತೋಷ ತರುವುದು.

ವೃಷಭ: ವ್ಯಾಪಾರ ವ್ಯವಹಾರಗಳ ಬಗೆಗೆ ಮಕ್ಕಳಿಗೆ ತಿಳಿಸುವಿರಿ. ಈ ದಿನ ಸಾಂಸಾರಿಕ ವಿಷಯದಲ್ಲಿ ನೀವು ಆರಿಸಿಕೊಳ್ಳುವ ನಿರ್ಧಾರಗಳು ಹಿರಿಯರ ಕೋಪಕ್ಕೆ ಕಾರಣವಾಗುತ್ತದೆ. ಬ್ಯಾಂಕ್ ಉದ್ಯೋಗಿಗಳಿಗೆ ಬಿಡುವಿಲ್ಲದ ಕೆಲಸ.

ಮಿಥುನ: ಸದ್ಯದಲ್ಲಿ ಎದುರಾಗಿರುವ ಸಮಸ್ಯೆಗಳು ಪರಿಹಾರವಾಗಲಿವೆ. ಆತುರದ ನಿರ್ಧಾರ ಬೇಡ. ಮಗನ ಕೆಲಸಗಳಿಗಾಗಿ ಅಲೆದಾಟ ಹೆಚ್ಚಿ ದಣಿವಾದರೂ ಕೆಲಸ ಕೈಗೂಡಿದ್ದಕ್ಕೆ ಸಮಾಧಾನ.

ಕರ್ಕಾಟಕ: ನಿರಂತರ ಕೆಲಸ-ಕಾರ್ಯಗಳಿಂದ ಹೊರ ಬರಲು ಪ್ರಯತ್ನಿಸಿ. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶವನ್ನು ಪಡೆದುಕೊಳ್ಳುವಿರಿ. ಮಾತೃವರ್ಗದವರಲ್ಲಿ ಮಂಗಳ ಕಾರ್ಯಗಳು ಜರುಗಲಿದೆ.

ಸಿಂಹ: ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು. ಕೃಷಿ ಹಾಗೂ ಹೈನು ವ್ಯಾಪಾರಗಳಿಂದ ಈ ದಿನ ಅಧಿಕ ಲಾಭವಾಗುವುದು. ನಿಮ್ಮ ಈಗಿನ ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಇರುತ್ತದೆ.

ಕನ್ಯಾ: ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಗುವಿರಿ. ಕೆಲಸದಲ್ಲಿ ಪ್ರಮುಖ ಬೆಳವಣಿಗೆ ನಿಮ್ಮ ಗಮನಕ್ಕೆ ಬರಲಿದೆ. ಬಯಕೆಗಳು ಸುಲಭವಾಗಿ ಈಡೇರುವುದು. ಮನೋರಂಜನೆಗಾಗಿ ಖರ್ಚು ಮಾಡುವಿರಿ.

ತುಲಾ: ನಿರ್ದಿಷ್ಟವಾದ ಕೆಲಸಗಳನ್ನು ನಿರ್ದಿಷ್ಟವಾದ ಸಮಯದಲ್ಲಿ ಮಾಡಿ ಮುಗಿಸುವಿರಿ. ವ್ಯಂಗ್ಯಚಿತ್ರ ಕಲಾವಿದರಿಗೆ ಮಾಸಪತ್ರಿಕೆಯ ಸಂಸ್ಥೆಯಿಂದ ಹೆಚ್ಚಿನ ಅವಕಾಶ. ನೆರೆಯವರೊಂದಿಗಿನ ಸಂಬಂಧ ಸುಧಾರಿಸುವುದು.

ವೃಶ್ಚಿಕ: ದಾಂಪತ್ಯದಲ್ಲಿ ಸಂಶಯದ ವಾತಾವರಣ ಸೃಷ್ಟಿಯಾಗದಂತೆ ಜೀವನವನ್ನು ನಡೆಸಿ. ಮಗನೊಡನೆ ಗಹನವಾದ ಮಾತುಕತೆ ನಡೆಯುವ ಸಂಭವವಿದೆ. ತಾಳ್ಮೆ, ಸಮಾಧಾನ ಕಳೆದುಕೊಂಡಲ್ಲಿ ಅನಾವಶ್ಯಕವಾಗಿ ಕಲಹ.

ಧನು: ನಿಮ್ಮ ದುಡುಕು ನಿರ್ಧಾರಗಳಿಂದ ಇತರರಿಗೆ ನೋವಾಗುವ ಲಕ್ಷಣಗಳಿವೆ. ಇನ್ನೊಬ್ಬರಿಗೆ ನೋವಿಗೆ ಸಮಾಧಾನ ಹೇಳುವ ಅಥವಾ ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿ.

ಮಕರ: ಆಡಳಿತ ಕೆಲಸಗಳಿಗಾಗಿ ಸೂಕ್ತ ವ್ಯಕ್ತಿಯನ್ನು ತಿಳಿಸುವಂತೆ ಪರಿಚಿತರಲ್ಲಿ ಕೇಳಿಕೊಳ್ಳುವುದರಿಂದ ಸುಲಭವಾಗಿ ಫಲ ಸಿಗುವುದು. ವಿದ್ಯಾರ್ಥಿಗಳು ಓದಿನಲ್ಲಿ ಏಕಾಗ್ರತೆಯನ್ನು ಸಾಧಿಸಿ.

ಕುಂಭ: ದೇಹದಲ್ಲಿ ಕಫ ಅಧಿಕವಾಗಿರುವುದರಿಂದ ಅನಾರೋಗ್ಯ. ಆಗಾಗ ಒಂಟಿತನದ ಚಿಂತೆಯು ಕಾಡಲಿದೆ. ಮನೆಯ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ. ಎಲ್ಲವೂ ನಿಮ್ಮಿಚ್ಛೆಯಂತೆ ನಡೆಯಲಿದೆ.

ಮೀನ: ಜೀವನದ ಬಗ್ಗೆ ಹೆಚ್ಚಿನ ಉತ್ಸಾಹವನ್ನು ತಾಳುವಿರಿ. ನಿಮ್ಮನ್ನು ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು, ಹೊಸ ಚೈತನ್ಯ ತುಂಬಿ ಬರಲಿದೆ. ಸಂಗೀತಗಾರರಿಗೆ ಹಾಗೂ ನೃತ್ಯ ಕಲೆಗಳಿಗೆ ಪ್ರಾಧಾನ್ಯತೆ.

ಪದಬಂಧ 4858

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಪ್ಪವಾಗಿ ಬಂದಿರುವ ಚರ್ಚೆ ತರ್ಜುಮೆಯಾದೀತೇ? (4)
3.ಹಸುವಿನ ಹತ್ತಿರವಿರುವ ಎಳೆಮಗು (4)
5.ಹೀಗೆ ಸಂತೈಸು (3)
7.ಮಾವನ ಮರ್ಯಾದೆ! (2)
8.ನೆನಪಲ್ಲೇ ಇರುವ ಕಾರಣ! (2)
11.ಪಗಡೆಯಾಟದಲ್ಲಿ ದಾಳದಿಂದ ಸೂಚಿತವಾಗುವ ಸಂಖ್ಯೆ (2)
13.ಕಾಣದಾಗುವಿಕೆ ಅಥವಾ ಇಂದ್ರಜಾಲ (2)
14.ಶ್ರೋತ ಎಂದು ಹೀಗೆ ಹೇಳಿ (3)
16.ಮೃತರಾದವರಿಗೆ ಮಾಡತಕ್ಕ ಅಪರಕ್ರಿಯೆ (4)
17.ಸೊಗಸಾದುದು ಇಲ್ಲದ (4)

ಮೇಲಿಂದ ಕೆಳಕ್ಕೆ
1.ರಾಜನ ಗೃಹವಿದು (4)
2.ದರಬಾರಿನಲ್ಲಿ ತಿಳಿಸಿದ ರೇಟು! (2)
3.ಹರಸುವಾಗ ಅಕಳು ಬಂದಿದೆಯಲ್ಲಾ! (2)
4.ಇದು ಒಳ್ಳೆಯ ದಿನ (3)
6.ಮಸ್ತಿಷ್ಕ ಇಲ್ಲದ (3)
7.ಈತ ಆನೆ ನಡೆಸುವವನು (4)
9.ಗುರುತುಳ್ಳವನು (4)
10.ತೂಕ ಮಾಡುವ ಸಾಧನ ಇಲ್ಲದ (3)
12.ಶನಿವಾರದ ಮರುದಿನ (4)
13.ಮತ್ತು ಬರಿಸುವಂಥದ್ದು (3)
14.ಕೈ ಇಲ್ಲಿ ಕಾಣುತ್ತಿದೆ (2)
15.ಕತ್ತಲೆ ಇಲ್ಲದ (2)



4857ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಪ್ರಜ್ಞೆ 5.ತಂಗಳು 6.ಅಡಿ 7.ನೆರಗು 9.ನೆಗಡಿ 10.ಜವಾಬುದಾರಿ 11.ಕಮರಿ 12.ಗೆಳ 15.ವಾವೆ 16.ಕುಲಾವಿ 17.ವಾದ
ಮೇಲಿಂದ ಕೆಳಕ್ಕೆ: 1.ಸ್ವಪ್ರಶಂಸೆ 2.ಸ್ವಗತ 3.ಗಡಿಬಿಡಿ 8.ಗುಜರಿ 9.ನೆರಿಗೆ 11.ಕಡಿವಾಣ 13.ತಲೋದಕ 14.ಹಿಲಾಲು

ಸುಡೊಕು 5244

7		5	9				2	
					2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5243 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ಷೇರುಪೇಟೆ ವಹಿವಾಟು ▲695



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,576
ಇಂದಿನ ಅಂತ್ಯ	17,780
▲	203
ದಿನದ ಗರಿಷ್ಠ	17,794

ವಿನಿಮಯ ದರ

$ ಡಾಲರ್	74.83
£ ಪೌಂಡ್	101.46
€ ಯುರೊ	84.6
¥ ಯೆನ್ (100ಕ್ಕೆ)	64.49

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹64
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1277 (1260)
ಸೂರ್ಯಕಾಂತಿ (ರಿಫೈನ್ಡ್)	₹1280 (1280)
ಪಾಮೋಲಿನ್	₹1235(1225)

ಕೊಬ್ಬರಿ ಧಾರಣೆ

ತುರುವೇಕೆರೆ	₹17200-17200

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹18000-20000
2ನೇ ದರ್ಜೆ	₹10000-16000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1500-2000
ಮಧ್ಯಮ	₹1000-1500
ಸಣ್ಣ	₹500-1 000

ಗೋಮಾಳದತ್ತ 'ಪ್ರಭಾವಿ' ಕಣ್ಣು

ಒಂದನೇ ಪುಟದಿಂದ

'ಬಗರ್ ಹುಕುಂ ಸಾಗುವಳಿ ಮಾಡಲು ಆಸಕ್ತಿ ತೋರಿಸದೆ, ಸಂಘ–ಸಂಸ್ಥೆಗಳಿಗೆ ಇದೇ ಆಸ್ತಿ ಮಂಜೂರು ಮಾಡಲು ಹೊರಟಿರುವುದೇಕೆ' ಎಂಬ ಪ್ರಶ್ನೆಯನ್ನು ಭೂಮಿ ಮತ್ತು ವಸತಿ ಹಕ್ಕು ಹೋರಾಟಗಾರರು ಎತ್ತಿದ್ದಾರೆ. 'ಬೆಂಗಳೂರು ಸುತ್ತಮುತ್ತ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡಿರುವ ಉಳ್ಳವರಿಗೆ ಸರ್ಕಾರಿ ಭೂಮಿ ಮಂಜೂರು ಮಾಡಿಕೊಡುವ ಹುನ್ನಾರ ಇದರ ಹಿಂದೆ ಅಡಗಿದೆ' ಎಂಬುದು ಅವರ ಆರೋಪ. '1993–94ರಿಂದ ಭೂಮಿಗಾಗಿ ಅರ್ಜಿ ಹಾಕಿ ಕಾಯುತ್ತಿರುವ ಭೂರಹಿತ ಲಕ್ಷಾಂತರ ಕುಟುಂಬಗಳಿವೆ. ಈಗ ಅದೇ ಭೂಮಿಯನ್ನೇ ಗುರಿಯಾಗಿಟ್ಟುಕೊಂಡು ಸರ್ಕಾರ ಹೊಸ ನೀತಿ ರೂಪಿಸಿ ಸಂಘ–ಸಂಸ್ಥೆಗಳಿಗೆ ಮಾರಾಟ ಮಾಡಲು ಹೊರಟಿದೆ. ಸರ್ಕಾರ ಈ ನಿರ್ಧಾರ ವಾಪಸ್ ಪಡೆಯಬೇಕು' ಎಂದು ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ಕುಮಾರ್ ಸಮತಳ ಆಗ್ರಹಿಸಿದರು.

'40 ವರ್ಷಗಳಿಂದ ಭೂಮಿ ಹಕ್ಕಿಗಾಗಿ ಕಾಯುತ್ತಿರುವ ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳನ್ನು ಕಾರಣವಿಲ್ಲದೆ ಸರ್ಕಾರ ತಿರಸ್ಕರಿಸುತ್ತಲೇ ಬಂದಿದೆ. ಇದೇ ಜಾಗವನ್ನು ಸಂಘ–ಸಂಸ್ಥೆಗಳ ಹೆಸರಿನಲ್ಲಿ ಉಳ್ಳವರಿಗೆ ಮಂಜೂರು ಮಾಡಲು ಈಗ ಹೊಸ ತಂತ್ರವನ್ನು ಸರ್ಕಾರ ಹೆಣೆದಿದೆ. ಸಂಘ–ಸಂಸ್ಥೆಗಳ ಬದಲಿಗೆ ಭೂ ರಹಿತರಿಗೆ ಮಂಜೂರು ಮಾಡುವುದರಲ್ಲಿ ತಪ್ಪದೇನಿದೆ? ರಿಯಲ್ ಎಸ್ಟೇಟ್ ಮಂತ್ರಿಗಳ ಸಮಿತಿಯನ್ನು ಕೂಡಲೇ ರದ್ದುಪಡಿಸಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಮೊದಲು ಭೂಮಿ ಮಂಜೂರು ಮಾಡಬೇಕು' ಎಂದು ಸಮಿತಿಯ ಕಾರ್ಯದರ್ಶಿ ಮಂಡಳಿಯ ಸಿರಿಮನೆ ನಾಗರಾಜ್ ಒತ್ತಾಯಿಸಿದರು.

'ನ್ಯಾಯಾಲಯದಲ್ಲಿ ಪ್ರಶ್ನೆ'

ಸಚಿವ ಸಂಪುಟ ಉಪಸಮಿತಿಗೆ ನೇಮಕ ಆಗಿರುವ ಅಧ್ಯಕ್ಷ ಮತ್ತು ಸದಸ್ಯರನ್ನು ನೋಡಿದರೆ ಕುರಿ ಕಾಯಲು ತೋಳಗಳನ್ನು ನೇಮಿಸಿದಂತೆ ಆಗಿದೆ. ಇವರ ಮೇಲೆಯೇ ಭೂ ಅಕ್ರಮದ ಆರೋಪಗಳಿವೆ. ಗೋಮಾಳ, ಸೊಪ್ಪಿನಬೆಟ್ಟದ ಜಾಗಗಳು ಸಮುದಾಯದ ಆಸ್ತಿ. ಅವುಗಳನ್ನು ಖಾಸಗಿ ಟ್ರಸ್ಟ್, ಸ್ವಯಂ ಸೇವಾ ಸಂಸ್ಥೆಗಳಿಗೆ ಕೊಡಲು ಮುಂದಾದರೆ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಕ್ಕೆ ಮಣೆ ಹಾಕಿದಂತೆ ಆಗಲಿದೆ. ಸಂಘ–ಸಂಸ್ಥೆಗಳಿಗೆ ಈ ಜಾಗ ಮಂಜೂರು ಮಾಡುವ ವಿಷಯದಲ್ಲಿನ ಕಾನೂನು ಬದ್ಧತೆಯನ್ನು ಪರಿಶೀಲಿಸಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು.

ರವಿಕೃಷ್ಣ ರೆಡ್ಡಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ

ಕೆ.ಜಿ.ಗೆ ₹1,043ಕ್ಕೆ ರೇಷ್ಮೆಗೂಡು ಹರಾಜು!

ರಾಮನಗರ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ದಾಖಲೆ: ಸಚಿವರ ಸಂತಸ

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಬುಧವಾರ ದ್ವಿತಳಿ ರೇಷ್ಮೆಗೂಡು ಪ್ರತಿ ಕೆ.ಜಿ.ಗೆ ₹1,043ರ ದರದಲ್ಲಿ ಹರಾಜಾಗುವ ಮೂಲಕ ಸಾರ್ವಕಾಲಿಕ ದಾಖಲೆ ಬರೆಯಿತು.

ಏಷ್ಯಾದ ಅತಿದೊಡ್ಡ ರೇಷ್ಮೆಗೂಡು ಮಾರುಕಟ್ಟೆ ಎಂಬ ಖ್ಯಾತಿ ಹೊಂದಿರುವ ರಾಮನಗರ ಮಾರುಕಟ್ಟೆಯಲ್ಲಿ ರೇಷ್ಮೆಗೂಡು ಸಾವಿರದ ಗಡಿ ದಾಟಿದ್ದು ಇದೇ ಮೊದಲು. ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಿದ್ದಯ್ಯನದೊಡ್ಡಿ ಗ್ರಾಮದ ರೈತ ರಮೇಶ ಎಂಬುವರು ಮಾರುಕಟ್ಟೆಗೆ 95 ಕೆ.ಜಿ.ಯಷ್ಟು ಗೂಡು ತಂದಿದ್ದು, ಕೆ.ಜಿ.ಗೆ ₹1,043ರಂತೆ ಒಟ್ಟು ₹ 99,565 ಜೇಬಿಗೆ ಇಳಿಸಿದರು.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿ ಗ್ರಾಮದ ಗಂಗಾಧರಪ್ಪ ಎಂಬ ರೈತ ಮಾರುಕಟ್ಟೆಗೆ 158 ಕೆ.ಜಿ ಗೂಡು ತಂದಿದ್ದು, ಅವರಿಗೂ ಕೆ.ಜಿಗೆ ₹1,042ರ ದರ ದೊರೆಯಿತು. ಅವರು ಒಟ್ಟಾರೆ ₹1,64,844 ಕೊಂಡೊಯ್ದರು.

ರಾಮನಗರದ ರೇಷ್ಮೆಗೂಡು ಮಾರುಕಟ್ಟೆ

ರಾಮನಗರ ಮಾರುಕಟ್ಟೆಗೆ ಬುಧವಾರ ದ್ವಿತಳಿಯ 152 ಲಾಟ್ ಗೂಡು ಬಂದಿದ್ದು, 14,647 ಕೆ.ಜಿ. ಯಷ್ಟು ತೂಗಿತು. ಅಂತೆಯೇ ಮಿಶ್ರ ತಳಿ ಗೂಡು ಕೇವಲ 49 ಲಾಟ್ ಇದ್ದು, 1,742 ಕೆ.ಜಿ. ಮಾತ್ರ ಆವಕ ಆಗಿತ್ತು.

ರಾಮನಗರ ಮಾರುಕಟ್ಟೆಗೆ ಈ ಹಿಂದೆ ನಿತ್ಯ ಸರಾಸರಿ 60–70 ಟನ್ ಗೂಡು ಬರುತ್ತಿತ್ತು. ಈಗ ಆ ಪ್ರಮಾಣ 15–20 ಟನ್‌ಗೆ ಇಳಿಕೆ ಆಗಿದೆ. ಗೂಡು ಉತ್ಪಾದನೆ ಕುಸಿದಿರುವ ಕಾರಣ ಸಹಜವಾಗಿಯೇ ಬೆಲೆ ಏರಿಕೆ ಆಗಿದೆ. ಮತ್ತೊಂದೆಡೆ ಕೇಂದ್ರ ಸರ್ಕಾರವು ಚೀನಾ ರೇಷ್ಮೆ ಆಮದು ಸುಂಕವನ್ನು ಶೇ 28ಕ್ಕೆ ಏರಿಸಿದೆ. ಹೀಗಾಗಿ, ಸಹಜವಾಗಿಯೇ ಬೆಲೆ ಗರಿಷ್ಠ ಮಟ್ಟಕ್ಕೆ ಏರಿದೆ ಎಂದು ರೇಷ್ಮೆ ಬೆಳೆಗಾರರ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ರವಿ ತಿಳಿಸಿದರು.

ಸಚಿವರ ಸಂತಸ: ದಾಖಲೆ ಬೆಲೆಗೆ ಗೂಡು ಹರಾಜಾಗಿದ್ದಕ್ಕೆ ರೇಷ್ಮೆ ಸಚಿವ ನಾರಾಯಣ ಗೌಡ ಸಂತಸ ವ್ಯಕ್ತಪಡಿಸಿದ್ದಾರೆ.

'2021ರ ಆರಂಭದಲ್ಲಿ ರೇಷ್ಮೆ ಧಾರಣೆ ಸರಾಸರಿ ₹ 300 ಇತ್ತು. ಕಳೆದ ಡಿಸೆಂಬರ್ ವೇಳೆಗೆ ಇದು ₹700–800ಕ್ಕೆ ಏರಿಕೆ ಆಯಿತು. ಈಗ ದಾಖಲೆ ಬೆಲೆಗೆ ಹರಾಜಾಗಿದೆ. ಮಾರುಕಟ್ಟೆಯಲ್ಲಿನ ಅವ್ಯವಸ್ಥೆ ಸರಿಪಡಿಸಿ, ಇಲಾಖೆಯು ಕೈಗೊಂಡ ಕ್ರಮಗಳಿಂದ ಈ ಧಾರಣೆ ಸಾಧ್ಯವಾಗಿದೆ' ಎಂದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

2-2-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1290)
ಒಂದು ವಾರದ ಡೆಲಿವರಿ	1335 (1285)
ಸೋಯಾ ಕಚ್ಚಾ	1125 (1132)
ಪಾಮ್ ವಾರದ ಡೆಲಿವರಿ	1233 (1131)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,850 (48,900)
ಬೆಳ್ಳಿ ಕೆ.ಜಿ	61,400 (61,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ರಫೇಲ್‌-ಎಂ' ಪರೀಕ್ಷೆ

ಕೋಲ್ಕತ್ತ (ಪಿಟಿಐ): ಫ್ರೆಂಚ್ ನಿರ್ಮಿತ ರಫೇಲ್‌ಯುದ್ಧವಿಮಾನದಸಮುದ್ರಆವೃತ್ತಿಯನ್ನು ಗೋವಾದ ನೌಕಾನೆಲೆಯಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಇದನ್ನು ಭಾರತದ ಸ್ವದೇಶಿ ನಿರ್ಮಿತ ಐಎನ್‌ಎಸ್ ವಿಕ್ರಾಂತ್‌ನಿಂದಲೂ ಟೇಕ್‌ಆಫ್ ಮಾಡಬಹುದಾಗಿದೆ ಎಂದು ಉನ್ನತ ರಾಜತಾಂತ್ರಿಕ ಅಧಿಕಾರಿಯೊಬ್ಬರು ಹೇಳಿದ್ದಾರೆ.

4ನೇ ವರ್ಷದ ಚಿರಸ್ಮರಣೆ

ಶ್ರೀ ಸಿ.ಆರ್. ಗುಂಡುರಾಜ್

ಲೇಟ್ ಶ್ರೀ ಕೆ.ರಾಮಯ್ಯ ಮತ್ತು ಲೇಟ್ ಡಿ.ಶಾರದಮ್ಮನವರ ಪುತ್ರ

ಚಿಕ್ಕ ಆಡುಗೋಡಿ, ಬೆಂಗಳೂರು

ಜನನ: 17-04-1966 ನಿಧನ: 03-02-2018

ನೀವು ನಮ್ಮನಗಲಿ ಇಂದಿಗೆ ನಾಲ್ಕು ವರ್ಷ ಕಳೆದರೂ, ನಿಮ್ಮ ಪ್ರೀತಿ, ತಾಳ್ಮೆ, ತ್ಯಾಗಮಯ ಜೀವನ, ಆದರ್ಶಗಳೇ ನಮ್ಮಗಳ ಬದುಕಿಗೆ ದಾರಿದೀಪ, ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಅನುದಿನವೂ ನಿಮ್ಮನ್ನು ಸ್ಮರಿಸುತ್ತಿರುವ

ದುಃಖತಪ್ತರು: ಧರ್ಮಪತ್ನಿ, ಮಕ್ಕಳು, ಸಹೋದರರು, ಸಹೋದರಿಯರು ಅಳಿಯಂದಿರು, ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು

ಪೆನ್ನಾರ್– ಕಾವೇರಿ ನದಿಗಳ ಜೋಡಣೆ: ಕೇಂದ್ರ ಸರ್ಕಾರಕ್ಕೆ ರಾಜ್ಯದ ಬೇಡಿಕೆ

'ಮೊದಲೇ ನೀರಿನ ಸಮಾನ ಹಂಚಿಕೆ ಆಗಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಉದ್ದೇಶಿತ 'ನದಿ ಜೋಡಣೆ' ಯೋಜನೆ ಪ್ರಸ್ತಾವವು ಎರಡು ದಶಕಗಳ ನಂತರ ಮತ್ತೆ ಮುನ್ನಲೆಗೆ ಬಂದಿದ್ದು, 'ಆಯಾ ರಾಜ್ಯಗಳ ಅಗತ್ಯಕ್ಕೆ ಅನುಗುಣವಾಗಿ ನೀರಿನ ಹಂಚಿಕೆ ಮಾಡಬೇಕು' ಎಂದು ಕರ್ನಾಟಕ ಹಕ್ಕು ಪ್ರತಿಪಾದಿಸಿದೆ.

ಮಂಗಳವಾರ ಲೋಕಸಭೆಯಲ್ಲಿ ಬಜೆಟ್ ಮಂಡಿಸಿರುವ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ದಮನ್‌ಗಂಗಾ– ಪಿಂಜಲ್, ಪಾರ್‌–ತಾಪಿ– ನರ್ಮದಾ, ಗೋದಾವರಿ– ಕೃಷ್ಣಾ, ಕೃಷ್ಣಾ– ಪೆನ್ನಾರ್ ಹಾಗೂ ಪೆನ್ನಾರ್– ಕಾವೇರಿ ನದಿಗಳ ಜೋಡಣೆ ಯೋಜನೆ ಪ್ರಸ್ತಾಪಿಸಿದ್ದು, ಆಯಾ ರಾಜ್ಯಗಳ ಸಮ್ಮತಿ ಅಗತ್ಯ ಎಂದು ಹೇಳಿದ್ದಾರೆ.

ದಕ್ಷಿಣದ ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಗೆ ಅನುಕೂಲ ಕಲ್ಪಿಸುವ ಗೋದಾವರಿ– ಕೃಷ್ಣಾ, ಕೃಷ್ಣಾ– ಪೆನ್ನಾರ್ ಮತ್ತು ಪೆನ್ನಾರ್– ಕಾವೇರಿ ನದಿಗಳ ಜೋಡಣೆಗೆ ಪ್ರತ್ಯೇಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಅಗತ್ಯವಿದ್ದರೂ, ವಾಸ್ತವದಲ್ಲಿ ಗೋದಾವರಿಯಿಂದ ಕಾವೇರಿಯನ್ನು ಜೋಡಿಸುವುದೇ ಈ ಮೂರೂ ಯೋಜನೆಗಳ ಉದ್ದೇಶವಾಗಿದೆ.

ಈ ಉದ್ದೇಶಿತ ಯೋಜನೆಯಿಂದ ಒಟ್ಟು 247 ಟಿಎಂಸಿ ಅಡಿ ಹೆಚ್ಚುವರಿ ನೀರು ಕಣಿವೆ ವ್ಯಾಪ್ತಿಯಲ್ಲಿ ಲಭ್ಯವಾಗಲಿದೆ. ಈ ಪೈಕಿ ತಮಿಳುನಾಡು 200 ಟಿಎಂಸಿ ಅಡಿ ನೀರಿಗೆ ಈಗಾಗಲೇ ಬೇಡಿಕೆ ಸಲ್ಲಿಸಿದೆ. ಕರ್ನಾಟಕದ ಉದ್ದೇಶಿತ ಮೇಕೆದಾಟು ಮತ್ತು ಮಾರ್ಕಂಡೇಯ ಯೋಜನೆಗಳಿಗೆ ವಿರೋಧ ವ್ಯಕ್ತಪಡಿಸಿದ್ದಲ್ಲದೆ, ಕೇಂದ್ರದ ಉದ್ದೇಶಿತ ನದಿ ಜೋಡಣೆ ಯೋಜನೆಯಿಂದ ಲಭ್ಯವಾಗುವ ನೀರಿನ ಪಾಲಿಗೆ ಹೊಂಚು ಹಾಕಿರುವ ತಮಿಳುನಾಡಿಗೇ ಅಧಿಕ ಪ್ರಮಾಣದ ನೀರಿನ ಹಂಚಿಕೆ ಆಗಬಹುದು ಎಂಬ ಆತಂಕವನ್ನು ಕರ್ನಾಟಕದ ಜಲಸಂಪನ್ಮೂಲ ತಜ್ಞರು ವ್ಯಕ್ತಪಡಿಸಿದ್ದಾರೆ.

ಕೇಂದ್ರದ ಆರ್ಥಿಕ ನೆರವಿನೊಂದಿಗೆ 2021ರ ಫೆಬ್ರುವರಿಯಲ್ಲಿ ತಮಿಳುನಾಡು ಸರ್ಕಾರ ಕೈಗೆತ್ತಿಕೊಂಡಿರುವ ಕಾವೇರಿ– ಗುಂಡಾರು– ವೈಗೈ ನದಿಗಳ ಜೋಡಣೆ ಯೋಜನೆಯನ್ನು ಕಾವೇರಿಯಲ್ಲಿ ಲಭ್ಯವಿರುವ ಹೆಚ್ಚುವರಿ ನೀರಿನ ಹಕ್ಕು ಪ್ರತಿಪಾದನೆ ರೂಪದಲ್ಲಿ ವಿರೋಧಿಸಿರುವ ಕರ್ನಾಟಕವು, ಮೇಕೆದಾಟು ಯೋಜನೆ ಮೂಲಕ ಬಳಕೆಗೆ ಅನುಮತಿ ಕೋರಿದೆ.

ಗೋದಾವರಿ– ಕೃಷ್ಣಾ ಜೋಡಣೆಯಿಂದ ಹೆಚ್ಚುವರಿಯಾಗಿ ಲಭ್ಯವಾಗಲಿರುವ ನೀರನ್ನು ಪೆನ್ನಾರ್ ಮತ್ತು ಕಾವೇರಿ ನದಿಗಳಿಗೆ ಹರಿಸುವ ಯೋಜನೆ ಉಪಯುಕ್ತವಾಗಿದೆ. ಆದರೆ, ಕರ್ನಾಟಕಕ್ಕೆ ಲಭ್ಯ ಹೆಚ್ಚುವರಿ ನೀರಿನಲ್ಲಿ ಸಮಾನ ಹಂಚಿಕೆಗಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ರಾಜ್ಯದ ಜಲಸಂಪನ್ಮೂಲ ಇಲಾಖೆ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕರ್ನಾಟಕಕ್ಕೆ ಸಮರ್ಪಕ ಪಾಲು ದೊರೆತಲ್ಲಿ ಖಂಡಿತವಾಗಿಯೂ ಈ ಯೋಜನೆ ಬರಪೀಡಿತ ಜಿಲ್ಲೆಗಳಿಗೆ ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರ ಈ ಸಂಬಂಧ ಚರ್ಚೆಗೆ ಆಯೋಜಿಸಿದ್ದ ಸಭೆಗಳಲ್ಲಿ ನೀರಿನ ಹಕ್ಕನ್ನು ಪ್ರತಿಪಾದಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಗೋದಾವರಿ– ಕಾವೇರಿ ಜೋಡಣೆ ಯೋಜನೆ ಸಂಬಂಧ ಕಳೆದ ಏಪ್ರಿಲ್‌ನಲ್ಲಿ ಆಯಾ ರಾಜ್ಯಗಳ ಅಭಿಪ್ರಾಯ ಕೇಳಿದ್ದಾಗಿ ಕೇಂದ್ರದ ಜಲಶಕ್ತಿ ಸಚಿವಾಲಯ ಸ್ಪಷ್ಟಪಡಿಸಿದೆ. ನೀರಿನ ಸಮರ್ಪಕ ಹಂಚಿಕೆ ನಿರ್ಧಾರ ಪ್ರಕಟಿಸಿದ ನಂತರ ಆಯಾ ರಾಜ್ಯಗಳು ಸಮ್ಮತಿ ಸೂಚಿಸಿದಲ್ಲಿ ವಿಸ್ತೃತ ಯೋಜನಾ ವರದಿಗೆ ಅನುಮೋದನೆ ದೊರೆಯಲಿದೆ.

ರಾಜ್ಯದ ಹಿತಾಸಕ್ತಿ ಬಲಿಕೊಟ್ಟು ನದಿ ಜೋಡಣೆ ಅಸಾಧ್ಯ: ಈಶ್ವರಪ್ಪ

ಶಿವಮೊಗ್ಗ: ರಾಜ್ಯದ ಹಿತಾಸಕ್ತಿ ಬಲಿಕೊಟ್ಟು ನದಿ ಜೋಡಣೆ ಯೋಜನೆ ಒಪ್ಪಿಕೊಳ್ಳುವುದು ಅಸಾಧ್ಯ. ಈಗಾಗಲೇ ಮುಖ್ಯಮಂತ್ರಿ ಸ್ಪಷ್ಟನೆ ನೀಡಿದ್ದಾರೆ. ರಾಜ್ಯಕ್ಕೆ ಎಷ್ಟು ನೀರು ಸಿಗುತ್ತದೆ ಎನ್ನುವುದನ್ನು ನೋಡಿಕೊಂಡೇ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದಲ್ಲಿ ಬುಧವಾರ ಅವರು ಸುದ್ದಿಗಾರರ ಜತೆ ಮಾತನಾಡಿ, 'ನದಿ ಜೋಡಣೆಯಿಂದ ರಾಜ್ಯಕ್ಕೆ ಆಗುವ ಉಪಯೋಗ ಕುರಿತು ಇನ್ನಷ್ಟು ಚರ್ಚೆಗಳು ನಡೆಯಬೇಕು. ರಾಜ್ಯಕ್ಕೆ ಅನ್ಯಾಯವಾಗಲು ಎಂದಿಗೂ ಬಿಡುವುದಿಲ್ಲ. ನದಿ ಜೋಡಣೆಯಿಂದ 9 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕಲಿದೆ. ಒಣ ಬೇಸಾಯ ಮಾಡುವವರಿಗೆ ಅನುಕೂಲವಾಗಲಿದೆ. ಕುಡಿಯುವ ನೀರಿನ ಕೊರತೆ ನೀಗಲಿದೆ. ಇಂತಹ ರೈತ ಪರ ಯೋಜನೆಯ ಲಾಭ ರಾಜ್ಯಕ್ಕೂ ಸಿಗಬೇಕು. ಪರಿಸರವಾದಿಗಳು ಸಹಕರಿಸಬೇಕು' ಎಂದರು.

'ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಎಚ್‌.ಕೆ. ಪಾಟೀಲ್, ಸಿದ್ದರಾಮಯ್ಯ ಮೊದಲಾದವರು ನೀರಿನ ವಿಚಾರದಲ್ಲೂ ರಾಜಕಾರಣ ಮಾಡುತ್ತಿದ್ದಾರೆ. ಇದರಿಂದ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಹೆಚ್ಚಿದ ಕಾರ್ಯಭಾರ: 9,881 ಅತಿಥಿ ಉಪನ್ಯಾಸಕರ ಉದ್ಯೋಗಕ್ಕೆ ಕುತ್ತು

ಒಂದನೇ ಪುಟದಿಂದ

ಹೀಗೆ ಆಯ್ಕೆ ಮಾಡಲಾಗಿದ್ದ 14,106 ಅತಿಥಿ ಉಪನ್ಯಾಸಕರು ಆನ್‌ಲೈನ್ 'ಅಪ್ಲಿಕೇಷನ್ ಐಡಿ' ಹೊಂದಿದ್ದಾರೆ. ಕಾರ್ಯಭಾರ ಹೆಚ್ಚಾಗಿರುವ ಕಾಲೇಜುಗಳಲ್ಲಿ ಹೊಸಬರನ್ನು ಆಯ್ಕೆ ಮಾಡಿಕೊಳ್ಳುವಂತೆ ಕಾಲೇಜು ಶಿಕ್ಷಣ ಇಲಾಖೆ ನೀಡಿದ ಸೂಚನೆ ಅನ್ವಯ ಅಂದಾಜು 3,000 ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಂದರೆ, ರಾಜ್ಯದಲ್ಲಿ ಒಟ್ಟು 17,106 ಅತಿಥಿ ಉಪನ್ಯಾಸಕರಿದ್ದರು. 'ಅತಿಥಿ ಉಪನ್ಯಾಸಕರ ಬೋಧನಾ ಅವಧಿ ಹೆಚ್ಚಿಸಿದ್ದರಿಂದ 6,470 ಜನರಿಗೆ ಕೆಲಸ ಇಲ್ಲದಂತಾಗುತ್ತದೆ. ಜತೆಗೆ, 3,411 ಜನರಿಗೆ ಭಾಗಶಃ ಬೋಧನಾ ಕಾರ್ಯಭಾರ ವಹಿಸಲಾಗಿದೆ. ಅಂದರೆ ಒಟ್ಟು 9,881 ಜನರು ಈಗ ಕೆಲಸ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ' ಎಂದು ಸಿಐಟಿಯು ರಾಜ್ಯ ಅಧ್ಯಕ್ಷೆ ಮತ್ತು ಅತಿಥಿ ಉಪನ್ಯಾಸಕರ ಪರ ಹೋರಾಟದ ನೇತೃತ್ವ ವಹಿಸಿರುವ ಎಸ್. ವರಲಕ್ಷ್ಮಿ ವಿವರಿಸುತ್ತಾರೆ.

ಗೌರವಧನ ಹೆಚ್ಚಿಸಿದ್ದು ಅಲ್ಪ ಮಾತ್ರ!

'ಗೌರವಧನ ದುಪ್ಪಟ್ಟು ಮಾಡಿರುವುದಾಗಿ ಸರ್ಕಾರ ಹೇಳುತ್ತಿರುವುದು ಮೇಲ್ನೋಟಕ್ಕೆ ಸತ್ಯ ಅನಿಸುತ್ತದೆ. ಆದರೆ, ಇದು ಮೂಗಿಗೆ ತುಪ್ಪ ಸವರುವ ಪ್ರಯತ್ನವಾಗಿದೆ. ಗಂಟೆವಾರು ವಿಭಜಿಸಿದರೆ ಸರ್ಕಾರ ಹೇಳುತ್ತಿರುವುದು ಸುಳ್ಳೆಂಬುದು ಗೊತ್ತಾಗುತ್ತದೆ' ಎಂದು ಅತಿಥಿ ಉಪನ್ಯಾಸಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉದಾಹರಣೆಗೆ, ಈಗ 5 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಕಾರ್ಯನಿರ್ವಹಿಸಿರುವವರು ಮತ್ತು ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ ₹32 ಸಾವಿರ ನಿಗದಿಪಡಿಸಲಾಗಿದೆ. ಪ್ರತಿ ವಾರ ಗರಿಷ್ಠ 15 ಗಂಟೆ ಬೋಧನೆ ಮಾಡಿದರೆ, ತಿಂಗಳಿಗೆ 60 ಗಂಟೆಯಾಗುತ್ತದೆ. ₹32 ಸಾವಿರ ಮೊತ್ತವನ್ನು 60 ಗಂಟೆಗಳಿಗೆ ವಿಭಜಿಸಿ ಲೆಕ್ಕಾಚಾರ ಹಾಕಿದರೆ ಪ್ರತಿ ಗಂಟೆ ಬೋಧನೆಗೆ ಕೇವಲ ₹533.33 ದೊರೆಯುತ್ತದೆ. ಹಳೆಯ ಗೌರವಧನದಂತೆ ಇದೇ ಅವಧಿಗೆ ₹406.25 ದೊರೆಯುತ್ತಿತ್ತು. ಅಂದರೆ ಸರ್ಕಾರ ಕೇವಲ ₹127.08ರಷ್ಟು ಮಾತ್ರ ಹೆಚ್ಚಿಸಿದೆ ಎಂದು ದೂರಿದ್ದಾರೆ.

ಇದೇ ರೀತಿ, ವಿಜ್ಞಾನ ವಿಭಾಗದಲ್ಲಿ ಪ್ರತಿ ವಾರಕ್ಕೆ ಗರಿಷ್ಠ 19 ಗಂಟೆ ಬೋಧನೆ ಮಾಡಿದರೆ ತಿಂಗಳಿಗೆ 76 ಗಂಟೆಗಳಾಗುತ್ತವೆ. ಅಂದರೆ ಪ್ರತಿ ಗಂಟೆಗೆ ₹421.05 ದೊರೆಯುತ್ತದೆ. ಹಳೆಯ ಗೌರವಧನದಂತೆ ಪ್ರತಿ ಗಂಟೆಗೆ ₹325 ದೊರೆಯುತ್ತಿತ್ತು. ಅಂದರೆ, ಹೆಚ್ಚುವರಿಯಾಗಿ ಕೇವಲ ₹96.05 ಮಾತ್ರ ಲಭ್ಯವಾಗುತ್ತದೆ ಎಂದು ವಿವರಿಸಿದ್ದಾರೆ.

ಇದೇ ಸೂತ್ರವು ಯುಜಿಸಿ ಅರ್ಹತೆ ಇಲ್ಲದ ಉಪನ್ಯಾಸಕರಿಗೂ ಮತ್ತು 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದವರಿಗೂ ಅನ್ವಯಿಸುತ್ತದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	500-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	450
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಸಾಗರ	
ಸಿಪ್ಪೆಗೋಟು	17000-34699
ಕುಮಟ	
ಚಿಪ್ಪು	26,369-30,119
ಕೋಕ	17569-27089
ಹಳೆಚಾಲಿ	46509-48739
ಹೊಸಚಾಲಿ	36509-40719
ಪುತ್ತೂರು	
ಹೊಸತು	25700-42000
ಸಿದ್ದಾಪುರ	
ಬಿಳಿಗೋಟ	22899-32699
ಚಾಲಿ	47099-47299
ಕೋಕ	26699-38299
ಹೊಸಚಾಲಿ	33899-40109
ಕೆಂಪುಗೋಟು	27089-35489
ರಾಶಿ	44699-48399
ತಟ್ಟಿಬೆಟ್ಟೆ	30012-45909
ಶಿರಸಿ	
ಬೆಟ್ಟೆ	26090-46000
ಬಿಳಿಗೋಟು	21499-31126
ಚಾಲಿ	33689-42299
ರಾಶಿ	43861-48208
ಶಿವಮೊಗ್ಗ	
ಬೆಟ್ಟೆ	46000-52099
ಗೊರಬಲು	17000-34699
ರಾಶಿ	43009-45919
ಸರಕು	50009-75696
ರಾಮನಗರ ರೇಷ್ಮೆ	
ಮಿಶ್ರತಳಿ	400-801
ದ್ವಿತಳಿ	450-1043

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15700	15850	236.70ಸೆಂಟ್ಸ್
ಎಸಿ	---	7000	7250	
ಆರ್‌ಪಿ	---	7150	7350	ಲಂಡನ್
ಆರ್‌ಸಿ	---	3850	3950	2178ಡಾಲರ್ಸ್

'ಕಾನೂನು ಮಾನ್ಯತೆ ನೀಡುವ ನಡೆ ಅಲ್ಲ'

ಒಂದನೇ ಪುಟದಿಂದ

'ಕ್ರಿಪ್ಟೊಕರೆನ್ಸಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಅನ್ವಯವಾಗುವ ನಿಯಂತ್ರಣ ನೀತಿಯೊಂದನ್ನು ರೂಪಿಸುವ ಕೆಲಸ ನಡೆದಿದೆ' ಎಂದು ಅವರು ತಿಳಿಸಿದ್ದಾರೆ. ಡಿಜಿಟಲ್ ವಹಿವಾಟಿನಲ್ಲಿ ಲಾಭ ದೊರೆತಿದೆ ಎಂದು ವ್ಯಕ್ತಿಯೊಬ್ಬ ತಿಳಿಸಿದಾಗ, ಅಲ್ಲಿ ಹೂಡಿಕೆ ಮಾಡಲು ಹಣ ಬಂದಿದ್ದು ಎಲ್ಲಿಂದ ಎಂಬುದನ್ನೂ ಆತ ತಿಳಿಸಬೇಕಾಗುತ್ತದೆ. ಹೂಡಿಕೆಯು ಸರಿಯಾಗಿ ಇದ್ದಲ್ಲಿ, ಲಾಭಕ್ಕೆ ತೆರಿಗೆ ಹಾಕಲಾಗುತ್ತದೆ.

'ಈ ತೆರಿಗೆಯ ಕಾರಣದಿಂದಾಗಿ ನಮಗೆ, ಹೂಡಿಕೆಯು ಅಕ್ರಮವಾಗಿತ್ತೇ ಎಂಬುದು ಕೂಡ ಗೊತ್ತಾಗುತ್ತದೆ. ವ್ಯಕ್ತಿಯು ಲೆಕ್ಕಕ್ಕೆ ಸಿಗದ ಹಣವನ್ನು ಅಲ್ಲಿ ಹೂಡಿಕೆ ಮಾಡುತ್ತಿದ್ದರೆ ಅಥವಾ ಬೇನಾಮಿ ಹೂಡಿಕೆ ಮಾಡುತ್ತಿದ್ದರೆ ಅದಕ್ಕೆ ತಕ್ಕ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಮೊಹಾಪಾತ್ರ ಸ್ಪಷ್ಟನೆ ನೀಡಿದ್ದಾರೆ.

ಕ್ರಿಪ್ಟೊಕರೆನ್ಸಿಗಳಲ್ಲಿ ಹೂಡಿಕೆ ಮಾಡಿದವರ ಸಂಖ್ಯೆ 10 ಕೋಟಿ ಎಂಬ ಮಾತಿದೆ. ಹೂಡಿಕೆ ಮಾಡಿದವರ ಸಂಖ್ಯೆ ನಿಜಕ್ಕೂ ಅಷ್ಟಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ. ಅಲ್ಲಿ ಸಿಗುವ ಲಾಭವನ್ನು ತಿಳಿಸಲಾಗುತ್ತಿದೆಯೇ, ಲಾಭ ನಿಜವಾಗಿಯೂ ಸಿಗುತ್ತಿದೆಯೇ ಅಥವಾ ಕ್ರಿಪ್ಟೊಕರೆನ್ಸಿಗಳಿಗೆ ಮಾರುಕಟ್ಟೆ ಸೃಷ್ಟಿಸಲು ಹೆಚ್ಚು ಲಾಭ ತೋರಿಸಲಾಗುತ್ತಿದೆಯೇ ಎಂಬುದನ್ನು ನೋಡಬೇಕಿದೆ ಎಂದು ಅವರು ತಿಳಿಸಿದ್ದಾರೆ.

₹ 1 ಲಕ್ಷ ಕೋಟಿ ವಹಿವಾಟು?

ನವದೆಹಲಿ: ತೆರಿಗೆ ಇಲಾಖೆ ಅಧಿಕಾರಿಗಳ ಪ್ರಕಾರ, ದೇಶದಲ್ಲಿ ಅಂದಾಜು 40 ಕ್ರಿಪ್ಟೊಕರೆನ್ಸಿ ವಿನಿಮಯ ಕೇಂದ್ರಗಳು ಇವೆ. ನಿಯಂತ್ರಣಕ್ಕೆ ಒಳಪಟ್ಟಿಲ್ಲದ ಕ್ರಿಪ್ಟೊಕರೆನ್ಸಿ ವಹಿವಾಟಿನ ವಾರ್ಷಿಕ ಮೊತ್ತವು ₹ 30 ಸಾವಿರ ಕೋಟಿಯಿಂದ ₹ 1 ಲಕ್ಷ ಕೋಟಿವರೆಗೆ ಇದೆ ಎನ್ನಲಾಗಿದೆ. ಆದರೆ ಈ ಅಂಕಿ–ಅಂಶಗಳನ್ನು ತಾಳೆ ಮಾಡಿ ನೋಡಲು ಆಗುತ್ತಿಲ್ಲ.

ನವೋದ್ಯಮಗಳ ರಾಜಧಾನಿ ದೆಹಲಿ: ಆರ್ಥಿಕ ಸಮೀಕ್ಷೆ

'ಸಂಖ್ಯೆಯೊಂದೇ ಮಾನದಂಡ ಅಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸತ್ತಿನಲ್ಲಿ ಸೋಮವಾರ ಮಂಡನೆಯಾಗಿರುವ ಆರ್ಥಿಕ ಸಮೀಕ್ಷೆ ವರದಿಯು, 'ದೆಹಲಿಯು ದೇಶದ ನವೋದ್ಯಮ ರಾಜಧಾನಿ ಆಗಿದೆ' ಎಂದು ಹೇಳಿದೆ. 2019ರ ಏಪ್ರಿಲ್‌ನಿಂದ 2021ರ ಡಿಸೆಂಬರ್ ನಡುವಿನ ಅವಧಿಯಲ್ಲಿ ದೆಹಲಿಯಲ್ಲಿ ಐದು ಸಾವಿರಕ್ಕಿಂತ ಹೆಚ್ಚಿನ ನವೋದ್ಯಮಗಳ ನೋಂದಣಿ ಆಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಆದರೆ, ಇದೇ ಅವಧಿಯಲ್ಲಿ ಬೆಂಗಳೂರಿನಲ್ಲಿ 4,514 ನವೋದ್ಯಮಗಳ ನೋಂದಣಿ ಆಗಿದೆ ಎಂದು ಸಮೀಕ್ಷೆಯು ಹೇಳಿದೆ.

ಮಹಾರಾಷ್ಟ್ರದಲ್ಲಿ ಒಟ್ಟು 11,308 ನವೋದ್ಯಮಗಳು ಇದ್ದು, ಸಂಖ್ಯೆಯ ದೃಷ್ಟಿಯಲ್ಲಿ ಇದು ಅತಿಹೆಚ್ಚು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆರ್ಥಿಕ ಸಮೀಕ್ಷೆ ವರದಿಯಲ್ಲಿ 'ದೆಹಲಿ ನವೋದ್ಯಮಗಳ ರಾಜಧಾನಿ' ಎಂದು ಉಲ್ಲೇಖಿಸಿರುವುದರ ವಿಚಾರವಾಗಿ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ರಾಜ್ಯ ಐ.ಟಿ., ಬಿ.ಟಿ. ಮತ್ತು ಕೌಶಲ ಅಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, '2019ರಿಂದ 2021ರ ನಡುವಿನ ಅವಧಿಯಲ್ಲಿ ಬೆಂಗಳೂರಿನ ನವೋದ್ಯಮಗಳಿಗೆ ಅತಿಹೆಚ್ಚಿನ ಬಂಡವಾಳ (ಅಂದಾಜು ₹ 2.29 ಲಕ್ಷ ಕೋಟಿ) ಹರಿದುಬಂದಿದೆ. ಜಾಗತಿಕ ನವೋದ್ಯಮ ವ್ಯವಸ್ಥೆ ಸೂಚ್ಯಂಕ –2021ರ ವರದಿಯ ಅನ್ವಯ, ನವೋದ್ಯಮಗಳಿಗೆ ಪೂರಕವಾಗುವ ವ್ಯವಸ್ಥೆ ಹೊಂದಿರುವ ನಗರಗಳ ಪೈಕಿ ಬೆಂಗಳೂರಿಗೆ ಜಾಗತಿಕ ಮಟ್ಟದಲ್ಲಿ 10ನೆಯ ಸ್ಥಾನ ಲಭಿಸಿದೆ. ಟಾಪ್ 10 ನಗರಗಳ ಪಟ್ಟಿಯಲ್ಲಿ ಜಾಗ ಪಡೆದಿರುವ ಭಾರತದ ಏಕೈಕ ನಗರ ಬೆಂಗಳೂರು' ಎಂದರು.

ನಗರವೊಂದು ನವೋದ್ಯಮಗಳ ಕೇಂದ್ರ ಎಂದು ಗುರುತಿಸಿಕೊಳ್ಳುವಲ್ಲಿ, ಅಲ್ಲಿನ ನವೋದ್ಯಮಗಳ ಸಂಖ್ಯೆಯನ್ನು ಒಂದು ಅಂಶವನ್ನಾಗಿ ಮಾತ್ರ ಪರಿಗಣಿಸಬಹುದು. ಬಂಡವಾಳ ಸೆಳೆಯುವ ಅವಕಾಶಗಳು, ಪ್ರತಿಭಾವಂತರ ಲಭ್ಯತೆ, ತಂತ್ರಜ್ಞಾನವನ್ನು ಬಳಸಿಕೊಳ್ಳುವ ಅವಕಾಶಗಳು ಕೂಡ ನಗರವನ್ನು ನವೋದ್ಯಮಗಳ ಕೇಂದ್ರವಾಗಿ ಗುರುತಿಸುವಲ್ಲಿ ಕೊಡುಗೆ ನೀಡುತ್ತವೆ ಎಂದು ಅವರು ಹೇಳಿದರು.

'ಜಾಗತಿಕವಾಗಿ ಯಶಸ್ಸು ಕಾಣುವ ನವೋದ್ಯಮ ಕಟ್ಟಲು ಪೂರಕವಾದ ವ್ಯವಸ್ಥೆ ಇರುವ ನಗರಗಳ ಪಟ್ಟಿಯಲ್ಲಿ ಬೆಂಗಳೂರು 23ನೆಯ ಸ್ಥಾನ ಪಡೆದಿದೆ. ಅಮೆರಿಕದ ಸಿಲಿಕಾನ್ ವ್ಯಾಲಿ ಮೊದಲ ಸ್ಥಾನದಲ್ಲಿದೆ. ದೆಹಲಿಯು 36ನೆಯ ಸ್ಥಾನದಲ್ಲಿದೆ' ಎಂದು 'ಜಾಗತಿಕ ನವೋದ್ಯಮ ವ್ಯವಸ್ಥೆ ವರದಿ – 2021' ಈಚೆಗೆ ಹೇಳಿತ್ತು. ಸ್ಟಾರ್ಟ್‌ಅಪ್ ಜಿನೋಮ್ ಸಂಸ್ಥೆ ಈ ವರದಿ ಸಿದ್ಧಪಡಿಸಿದೆ.

'ಬಂಡವಾಳ ಸಂಗ್ರಹ, ಮಾಹಿತಿ ಹಾಗೂ ಇತರ ಪ್ರದೇಶಗಳ ಜೊತೆಗಿನ ಸಂಪರ್ಕದ ವಿಚಾರದಲ್ಲಿ ಸುಧಾರಣೆ ಕಂಡಿರುವ ಬೆಂಗಳೂರು 23ನೆಯ ಸ್ಥಾನ ಪಡೆದಿದೆ' ಎಂದು ಸ್ಟಾರ್ಟ್‌ಅಪ್ ಜಿನೋಮ್ ಸಂಸ್ಥೆಯ ವರದಿ ಹೇಳಿತ್ತು.

ದೇಶದ ಅತಿದೊಡ್ಡ ಬ್ರ್ಯಾಂಡ್ ಎಲ್‌ಐಸಿ

ಮುಂಬೈ (ಪಿಟಿಐ): ಐಪಿಒಗೆ ಸಜ್ಜಾಗುತ್ತಿರುವ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ದೇಶದಲ್ಲಿನ ಅತ್ಯಂತ ಬಲಿಷ್ಠ ಹಾಗೂ ಅತಿದೊಡ್ಡ ಬ್ರ್ಯಾಂಡ್ ಎಂದು ವರದಿಯೊಂದು ಹೇಳಿದೆ. ಈ ವರದಿಯ ಅನ್ವಯ ಎಲ್‌ಐಸಿ ಬ್ರ್ಯಾಂಡ್ ಮೌಲ್ಯ 8.65 ಬಿಲಿಯನ್ ಅಮೆರಿಕನ್ ಡಾಲರ್ (₹ 64 ಸಾವಿರ ಕೋಟಿ). ಎಲ್‌ಐಸಿಯು ಜಾಗತಿಕ ಮಟ್ಟದಲ್ಲಿ ವಿಮಾ ಕಂಪನಿಗಳ ಪೈಕಿ ಮೂರನೆಯ ಅತ್ಯಂತ ಬಲಿಷ್ಠ ಬ್ರ್ಯಾಂಡ್ ಆಗಿದೆ.

ಲಂಡನ್ ಮೂಲದ ಬ್ರ್ಯಾಂಡ್ ಫೈನಾನ್ಸ್ ವರದಿಯ ಪ್ರಕಾರ, ಎಲ್‌ಐಸಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ಅಂದಾಜು ₹ 43.40 ಲಕ್ಷ ಕೋಟಿ ಆಗಿರಲಿದೆ. 2027ರ ವೇಳೆಗೆ ಎಲ್‌ಐಸಿಯ ಮಾರುಕಟ್ಟೆ ಮೌಲ್ಯವು ₹ 58.90 ಲಕ್ಷ ಕೋಟಿಗೆ ತಲುಪಲಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

AIR INDIA sats
ಏರ್‌ಪೋರ್ಟ್ ಕೆಲಸಕ್ಕೆ ಬೇಕಾಗಿದ್ದಾರೆ
(ನೇರ ಸಂದರ್ಶನ)
ವಯೋಮಿತಿ: 18–35 ವರ್ಷ
ಲೋಡಿಂಗ್, ಕ್ಯಾಬಿನ್ ಕ್ಲೀನಿಂಗ್ & ಇಕ್ವಿಪ್ಮೆಂಟ್ ಆಪರೇಟರ್ (ಡ್ರೈವರ್)
ದಿನಾಂಕ ಮತ್ತು ಸಮಯ:
07–02–2022 (ಸೋಮವಾರ)
08–02–2022 (ಮಂಗಳವಾರ)
ಮತ್ತು
09–02–2022 (ಬುಧವಾರ)
ಬೆಳ್ಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ.
ವಿಳಾಸ:
ಏರ್ ಇಂಡಿಯಾ ಸ್ಯಾಟ್ಸ್, ಕಾರ್ಗೋ ಬಿಲ್ಡಿಂಗ್, ಕೆಂಪೇಗೌಡ ಇಂಟರ್‌ನ್ಯಾಷನಲ್ ಏರ್‌ಪೋರ್ಟ್, ದೇವನಹಳ್ಳಿ, ಬೆಂಗಳೂರು. ಸಂಪರ್ಕಿಸಿ:
080-66783411
ROUNAQH

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ sslc puc degree ಸಂಬಳ15000 to 28000 ಸಂಪರ್ಕಿಸಿರಿ 9980814578,9980812378

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600 -62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 8123884588, 8123884788

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು, ಯುವಕರು ಬೇಕಾಗಿದ್ದಾರೆ. ತಕ್ಷಣ ವಸತಿಯೂಟದೊಂದಿಗೆ ಸಂಬಳ 16,000 - 23,000. 6366324863, 9663196788

ಭವಿಷ್ಯ

Astrology

"ಶ್ರೀಆದಿಶಕ್ತಿ ಜ್ಯೋತಿಷ್ಯಂ" ಎಲ್ಲಿಯೂ ಪರಿಹಾರವಾಗದ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

'ನಂ.1 ಸ್ತ್ರೀಪುರುಷ ವಶೀಕರಣ' ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ.ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ಪ್ರವಾಸ

Travel

29.03.2022 10 ದಿನಗಳು ಆಗ್ರಾ, ಮಥುರಾ, ಅಲಹಾಬಾದ್, ಗಯ,ಕಾಶಿ,ಸೀತಾಮಡಿ, ವಿಂದ್ಯಾಚಲಂ ಪ್ರವಾಸ. ರೂ.13,500 ಒಬ್ಬರಿಗೆ. ಆರ್.ಗಾಂಧಿ ಟೂರ್ಸ್.(ರಿ) 9945445809/ 9902433500

ವಾರಣಾಸಿ, ಗಯಾ, ನೈಮೀಶಾರಣ್ಯ, ಅಯೋಧ್ಯ 14.02.2022, 09.03.2022 ರಿಂದ 7 ದಿನಗಳು/ ವಿಜಯವಾಡ, ಭದ್ರಾಚಲಂ, ಅನ್ನಾವರಂ, ಪಂಚರಾಮ ಮಂದಿರಗಳು 07.03.2022 ರಿಂದ 10 ದಿನಗಳು/ ಸೋಮನಾಥ್, ದ್ವಾರಕಾ,ಉಜ್ಜಯಿನಿ, ಓಂಕಾರೇಶ್ವರ್, ಮಾತ್ರಗಯಾ, ಅಷ್ಟಜ್ಯೋತಿರ್ಲಿಂಗಗಳು 09.03.2022 ರಿಂದ 15/10 ದಿನಗಳು/ ಗಂಗೋತ್ರಿ, ಯುಮುನೋತ್ರಿ, ಕೇದಾರನಾಥ್, ಬದರಿನಾಥ್, ಕಾಶಿ,ಗಯಾ 27.04.2022,29.04.2022 ರಿಂದ 14/18 ದಿನಗಳು ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ, ಬೆಂಗಳೂರು-18

ಶ್ರೇಯಸ್ ಟೂರ್ಸ್: 05.03.2022 10ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ.(ನಿಷ್ಕಳಂಕ, ವಲ್ಲಭಭಾಯಿ,ಡಿಯು ಸಹಿತ). 05.03.2022 12ದಿನಗಳು ಚಂಡೀಗಡ್,ಸಿಮ್ಲಾ, ಕುಲುಮನಾಲಿ,ಮಣಿಕರಣ, 5ದೇವಿಯರು,ಡಾಲ್‌ಹೌಸಿ, ಕುರುಕ್ಷೇತ್ರ.ವೈಷ್ಣೋದೇವಿ, ಅಮೃತಸರ್,ವಾಘಾಗಡಿ. 9743351212, 9206979202, 6366322639

ಸಮಾಜಸೇವೆ

Others

ಬಿಸಿನೆಸ್ ಮೆನ್ ಗಾಗಿ ಕೇಂದ್ರ ಸರಕಾರದ ಬ್ಯಾಂಕಿಂಗ್ ಮಾಹಿತಿಗಾಗಿ ಸಂಪರ್ಕಿಸಿ: 8088231127, 9741103367, 8147012578

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ನಿಧನ ವಾರ್ತೆ

ಡಾ.ಕೆ.ಎಂ. ಶ್ರೀನಿವಾಸಗೌಡ

ಡಾ.ಕೆ.ಎಂ. ಶ್ರೀನಿವಾಸಗೌಡ

ಬೆಂಗಳೂರು: ವೈದ್ಯರೂ ಹಾಗೂ ಅನುವಾದಕರೂ ಆಗಿದ್ದ ಡಾ.ಕೆ.ಎಂ. ಶ್ರೀನಿವಾಸಗೌಡ (75) ಅವರು ಬುಧವಾರ ಮುಂಜಾನೆ 3.15ಕ್ಕೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರು ಕೆಲ ದಿನಗಳಿಂದ ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಜಯನಗರ 5ನೇ ಹಂತದಲ್ಲಿ ವಾಸವಿದ್ದ ಅವರು, ನಿವಾಸದಲ್ಲಿಯೇ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಹೊಸೂರು ರಸ್ತೆಯ ಕೂಡ್ಲು ಗೇಟ್ ಬಳಿಯಿರುವ ಚಿತಾಗಾರದಲ್ಲಿ ಮಧ್ಯಾಹ್ನ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು.

ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ವಿವಿಧ ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಕಿಮ್ಸ್) ರೋಗ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ ಅವರು, ಬಳಿಕ ಅದೇ ಸಂಸ್ಥೆಯ ಪ್ರಾಂಶುಪಾಲರಾಗಿದ್ದರು. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದರು. ಬೆಂಗಳೂರು ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದಲ್ಲಿ ರಕ್ತಮಜ್ಜೆ ಬ್ಯಾಂಕ್‌ಗಾಗಿ ಶ್ರಮಿಸಿದ್ದರು. ಪಿ.ಲಂಕೇಶ್ ನೇತೃತ್ವದ ಲಂಕೇಶ್ ಪತ್ರಿಕೆ ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ ಕ್ರೀಡೆ, ಆರೋಗ್ಯ ಕುರಿತ ಅಂಕಣಗಳನ್ನು ಅವರು ಬರೆದಿದ್ದಾರೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಇಂಗ್ಲಿಷ್ ಭಾಷೆಗೆ 'ದಿ ಬ್ರೈಡ್ ಇನ್ ದಿ ರೈನಿ ಮೌಂಟೇನ್ಸ್' ಶೀರ್ಷಿಕೆಯಡಿ ಅನುವಾದ ಮಾಡಿದ್ದರು. ಅವರ ಈ ಕೃತಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಶಸ್ತಿ ಕಳೆದ ಸಾಲಿನಲ್ಲಿ ದೊರೆತಿತ್ತು. ಪೂರ್ಣಚಂದ್ರ ತೇಜಸ್ವಿ ಅವರ 'ಪರಿಸರದ ಕಥೆಗಳು' ಕೃತಿಯನ್ನೂ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಇದು ಪೂರ್ವ ಪ್ರಾಥಮಿಕ ತರಗತಿಗೆ ಪಠ್ಯವಾಗಿದೆ.

ಅಶೋಕ್ ರಾವ್

ಬೆಂಗಳೂರು: ಖಳನಟರಾಗಿ ಪ್ರಸಿದ್ಧರಾಗಿದ್ದ ಅಶೋಕ್ ರಾವ್ (71) ಬುಧವಾರ ಬೆಳಗಿನ ಜಾವ ನಿಧನರಾದರು.

ಅಶೋಕ್ ರಾವ್

'ಕೆಲಕಾಲದಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಹೃದಯಾಘಾತಕ್ಕೆ ಒಳಗಾದರು' ಎಂದು ಅವರ ಕುಟುಂಬದವರು ತಿಳಿಸಿದರು. ಅಶೋಕ್ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಕಾಸರಗೋಡಿನ ಕಾಂಞಂಗಾಡ್‌ನವರಾದ ಅಶೋಕ್ ಅವರು ಕನ್ನಡ, ತೆಲುಗು, ಇಂಗ್ಲಿಷ್ ಸಹಿತ ವಿವಿಧ ಭಾಷೆಗಳ ಚಿತ್ರಗಳಲ್ಲಿ ಖಳ ಹಾಗೂ ಪೋಷಕ ಪಾತ್ರಗಳಲ್ಲಿ ಮಿಂಚಿದ್ದರು. ಡಾ.ರಾಜ್‌ಕುಮಾರ್ ಅಭಿನಯದ 'ಪರಶುರಾಮ' ಅವರು ಅಭಿನಯಿಸಿದ ಮೊದಲ ಚಿತ್ರ. ಬೆಂಗಳೂರಿನ ರಂಗತಂಡಗಳಲ್ಲಿ ಸಕ್ರಿಯರಾಗಿದ್ದ ಅವರು ಹಲವು ರಂಗ ಸಂಸ್ಥೆಗಳ ಪೋಷಕರಾಗಿಯೂ ಸೇವೆ ಸಲ್ಲಿಸಿದ್ದರು. ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದ ಅವರು ಕೆಲಕಾಲ ಉದ್ಯಮಿಯಾಗಿದ್ದರು. ಪ್ರತಿಷ್ಠಿತ ಕಂಪನಿಗಳ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. 1989ರ ವೇಳೆಗೆ ಅವರಿಗೆ ಬಂದ ನಟನೆಯ ಅವಕಾಶಗಳು ಅವರು ಪೂರ್ಣ ಪ್ರಮಾಣದ ಕಲಾವಿದನಾಗಿ ತೊಡಗಿಕೊಳ್ಳಲು ಕಾರಣವಾದವು. ಸುಮಾರು 250ಕ್ಕೂ ಹೆಚ್ಚು ಚಿತ್ರಗಳಲ್ಲಿ ಅವರು ನಟಿಸಿದ್ದಾರೆ. ಸಾಕಷ್ಟು ಸಮಾಜ ಸೇವೆಯನ್ನೂ ಮಾಡಿದ್ದಾರೆ ಎಂದು ಅವರ ಪುತ್ರ ಸಿದ್ಧಾರ್ಥ್ ಹೇಳಿದರು.

'ಆವೇಶ', 'ಮತ್ತೆ ಹಾಡಿತು ಕೋಗಿಲೆ', 'ಕಾಲಚಕ್ರ', 'ಬಾ ನಲ್ಲೆ ಮಧುಚಂದ್ರಕೆ', 'ಹಬ್ಬ' ಅವರು ಅಭಿನಯಿಸಿದ ಪ್ರಮುಖ ಚಿತ್ರಗಳು. ಡಾ ರಾಜ್‌ಕುಮಾರ್, ಟೈಗರ್ ಪ್ರಭಾಕರ್, ವಿಷ್ಣುವರ್ಧನ್, ಶಂಕರ್ ನಾಗ್, ಅನಂತ್ ನಾಗ್ ಸೇರಿ ಅನೇಕ ನಟರ ಜತೆ ಅವರು ಅಭಿನಯಿಸಿದ್ದರು. ನಗರದ ಹೆಬ್ಬಾಳದಲ್ಲಿರುವ ರುದ್ರಭೂಮಿಯಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಸಿದ್ಧಾರ್ಥ್ ತಿಳಿಸಿದರು.

ಚಳಿಗಾಲದ ಒಲಿಂಪಿಕ್ಸ್: ವಾನಿಗೆ ಕೋವಿಡ್

ಬೀಜಿಂಗ್ (ಪಿಟಿಐ): ಚಳಿಗಾಲದ ಒಲಿಂಪಿಕ್ ಕೂಟಕ್ಕೆ ಬೀಜಿಂಗ್‌ಗೆ ತೆರಳಿರುವ ಭಾರತ ತಂಡದ ಮ್ಯಾನೇಜರ್ ಮೊಹಮ್ಮದ್ ಅಬ್ಬಾಸ್ ವಾನಿ ಅವರಿಗೆ ಕೋವಿಡ್ ಖಚಿತಪಟ್ಟಿದೆ.

ಕಾಶ್ಮೀರದ ಸ್ಕೀಯಿಂಗ್ ಪಟು ಆರಿಫ್ ಖಾನ್ ಅವರು ಈ ಬಾರಿಯ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ಭಾರತದ ಏಕೈಕ ಅಥ್ಲೀಟ್ ಆಗಿದ್ದಾರೆ. ಅವರು ಸೇರಿ ಆರು ಮಂದಿಯ ತಂಡವು ಸೋಮವಾರ ರಾತ್ರಿ ಬೀಜಿಂಗ್‌ಗೆ ಪ್ರಯಾಣ ಬೆಳೆಸಿತ್ತು.

ಚೆಫ್ ಡಿ ಮಿಶನ್ ಹರ್ಜಿಂದರ್ ಸಿಂಗ್, ಕೋಚ್ ಲೂದರ್ ಚಂದ್ ಠಾಕೂರ್, ತಂತ್ರಜ್ಞ ಪೂರನ್ ಚಂದ್ ಮತ್ತು ಅಧಿಕಾರಿ ರೂಪ್ ಚಂದ್ ನೇಗಿ ಭಾರತ ತಂಡದಲ್ಲಿರುವ ಇನ್ನುಳಿದ ಸದಸ್ಯರು. ಅಬ್ಬಾಸ್ ವಾನಿ ಅವರಿಗೆ ಕೋವಿಡ್ ದೃಢಪಟ್ಟಿದ್ದರ ಕುರಿತು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷ ನರಿಂದರ್ ಬಾತ್ರಾ ಮಾಹಿತಿ ನೀಡಿದ್ದಾರೆ. ವಾನಿ ಅವರ ಮರುಪರೀಕ್ಷೆಯ ಕುರಿತು ಚೆಫ್ ಡಿ ಮಿಷನ್ ಹರ್ಜಿಂದರ್ ಅವರು ಟೂರ್ನಿಯ ಆಯೋಜಕರೊಂದಿಗೆ ಚರ್ಚಿಸಿದ್ದಾರೆ' ಎಂದು ಹೇಳಿದ್ದಾರೆ.

ಡೆನ್ಮಾರ್ಕ್ ವಿರುದ್ಧದ ಡೇವಿಸ್ ಕಪ್ ಟೆನಿಸ್ ಪಂದ್ಯ

ಯೂಕಿಗೆ ಸ್ಥಾನ; ಸುಮಿತ್‌ಗೆ ನಿರಾಶೆ

ನವದೆಹಲಿ (ಪಿಟಿಐ): ಡೆನ್ಮಾರ್ಕ್ ವಿರುದ್ಧ ಮುಂದಿನ ತಿಂಗಳು ಇಲ್ಲಿ ನಡೆಯಲಿರುವ ಡೇವಿಸ್ ಕಪ್ ವಿಶ್ವ ಗುಂಪು ಒಂದರ ಪ್ಲೇ-ಆಫ್ ಪಂದ್ಯಕ್ಕಾಗಿ ಐದು ಮಂದಿಯ ಭಾರತ ತಂಡವನ್ನು ಪ್ರಕಟಿಸಲಾಗಿದೆ.

ಸುಮಿತ್ ನಗಾಲ್ ಅವರನ್ನು ಕೈಬಿಟ್ಟು ಯೂಕಿ ಭಾಂಬ್ರಿ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ' ಎಂದು ರಾಷ್ಟ್ರೀಯ ಟೆನಿಸ್ ಫೆಡರೇಷನ್ ಬುಧವಾರ ತಿಳಿಸಿದೆ.

ದೆಹಲಿ ಜಿಮ್‌ಖಾನ ಕ್ಲಬ್‌ನಲ್ಲಿ ಮಾರ್ಚ್ 4 ಮತ್ತು 5ರಂದು ಬಯೋಬಬಲ್ ವ್ಯವಸ್ಥೆಯಲ್ಲಿ ಪಂದ್ಯ ನಡೆಯಲಿದೆ.

ವಿಶ್ವ ರ್‍ಯಾಂಕಿಂಗ್‌ನಲ್ಲಿ 863ನೇ ಸ್ಥಾನದಲ್ಲಿರುವ ಯೂಕಿ, ರಾಮ್‌ಕುಮಾರ್ ರಾಮನಾಥನ್ (182) ಮತ್ತು ಪ್ರಜ್ಞೇಶ್ ಗುಣೇಶ್ವರನ್ (228) ಅವರು ಸಿಂಗಲ್ಸ್‌ನಲ್ಲಿ ಆಡಲಿದ್ದಾರೆ.

ಯೂಕಿ ಭಾಂಬ್ರಿ– ರಾಯಿಟರ್ಸ್ ಚಿತ್ರ

ಗ್ರಾಸ್‌ಕೋರ್ಟ್‌ನಲ್ಲಿ ಆಡುವ ಪರಿಣತಿ ಹೊಂದಿರುವುದರಿಂದ ರಾಮ್‌ಕುಮಾರ್ ಮತ್ತು ಯೂಕಿ ಅವರನ್ನು ಆಯ್ಕೆ ಮಾಡಲಾಗಿದೆ.

ಡಬಲ್ಸ್ ಪರಿಣತ ರೋಹನ್ ಬೋಪಣ್ಣ ಮತ್ತು ದಿವಿಜ್ ಶರಣ್ ತಂಡದಲ್ಲಿರುವ ಇನ್ನಿಬ್ಬರು ಆಟಗಾರರು. ಸಾಕೇತ್ ಮೈನೇನಿ ಮತ್ತು ದಿಗ್ವಿಜಯ್ ಪ್ರತಾಪ್ ಸಿಂಗ್ ಅವರನ್ನು ಕಾಯ್ದಿರಿಸಿದ ಆಟಗಾರರಾಗಿದ್ದಾರೆ. ಆಟವಾಡದ ನಾಯಕ ರೋಹಿತ್ ರಾಜ್‌ಪಾಲ್ ಮತ್ತು ಮುಖ್ಯ ಕೋಚ್ ಜೀಶನ್ ಅಲಿ ತಂಡದಲ್ಲಿದ್ದಾರೆ.

ಜನವರಿ 29ರಂದು ತಂಡದ ಆಯ್ಕೆಗಾಗಿ ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ವರ್ಚುವಲ್ ಸಭೆ ನಡೆಸಿತ್ತು. ಅಧ್ಯಕ್ಷ ನಂದನ್ ಬಾಲ್, ಸದಸ್ಯರಾದ ಬಲರಾಮ್ ಸಿಂಗ್, ಮುಸ್ತಫಾ ಗೌಸ್, ಸಾಯಿ ಜಯಲಕ್ಷ್ಮಿ, ರಾಜ್‌ಪಾಲ್, ಜೀಶನ್ ಅಲಿ ಮತ್ತು ಎಐಟಿಎ ಪ್ರಧಾನ ಕಾರ್ಯದರ್ಶಿ ಅನಿಲ್ ಧುಪರ್ ಸಭೆಯಲ್ಲಿದ್ದರು.

ಫೆಬ್ರುವರಿ 23ರಂದು ತಂಡವು ದೆಹಲಿಯಲ್ಲಿ ಸೇರಲಿದೆ.

ಲಾರೆಸ್ 'ವರ್ಲ್ಡ್ ಬ್ರೇಕ್‌ಥ್ರೂ' ಪ್ರಶಸ್ತಿ: ನೀರಜ್ ನಾಮನಿರ್ದೇಶನ

ಲಂಡನ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಾವೆಲಿನ್ ಥ್ರೊ ಪಟು, ಭಾರತದ ನೀರಜ್ ಚೋಪ್ರಾ ಅವರು ಪ್ರತಿಷ್ಠಿತ ಲಾರೆಸ್ ವರ್ಷದ ಬ್ರೇಕ್‌ಥ್ರೂ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.

ಟೆನಿಸ್ ತಾರೆಯರಾದ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಮತ್ತು ಬ್ರಿಟನ್‌ನ ಎಮ್ಮಾ ರಡುಕಾನು ಕೂಡ ಈ ಪಟ್ಟಿಯಲ್ಲಿದ್ದಾರೆ. 23 ವರ್ಷದ ಚೋಪ್ರಾ ಅವರು ಟೋಕಿಯೊದಲ್ಲಿ 87.58 ಮೀಟರ್ಸ್ ಜಾವೆಲಿನ್ ಎಸೆಯುವ ಮೂಲಕ, ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಎರಡನೇ ಅಥ್ಲೀಟ್ ಎನಿಸಿಕೊಂಡಿದ್ದರು. ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಈ ಸಾಧನೆ ಮಾಡಿದ ದೇಶದ ಮೊದಲ ಕ್ರೀಡಾಪಟು ಎಂಬ ಶ್ರೇಯ ಗಳಿಸಿದ್ದರು.

ಲಾರೆಸ್ ಪುರಸ್ಕಾರಕ್ಕೆ ನಾಮನಿರ್ದೇಶನಗೊಂಡ ಭಾರತದ ಮೂರನೇ ಕ್ರೀಡಾಪಟು ಎನಿಸಿಕೊಂಡಿದ್ದಾರೆ ನೀರಜ್. ಈ ಹಿಂದೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಮತ್ತು ಕುಸ್ತಿಪಟು ವಿನೇಶಾ ಫೋಗಟ್ ಈ ಪಟ್ಟಿಗೆ ಸೇರಿದ್ದರು. ಜಗತ್ತಿನ 1,300ಕ್ಕೂ ಹೆಚ್ಚು ಕ್ರೀಡಾ ಪತ್ರಕರ್ತರು ಮತ್ತು ಪ್ರಸಾರಕರ ಸಮಿತಿಯು ಈ ವರ್ಷದ ಲಾರೆಸ್ ವಿಶ್ವ ಕ್ರೀಡಾ ಪ್ರಶಸ್ತಿಗಳಿಗಾಗಿ ಏಳು ವಿಭಾಗಗಳಲ್ಲಿ ನಾಮನಿರ್ದೇಶಿತರನ್ನು ಆಯ್ಕೆ ಮಾಡಿದೆ. ಪ್ರಶಸ್ತಿ ವಿಜೇತರ ಹೆಸರುಗಳನ್ನು ಏಪ್ರಿಲ್‌ನಲ್ಲಿ ಬಹಿರಂಗಪಡಿಸಲಾಗುತ್ತದೆ.

ಐಸಿಸಿ ಟಿ20 ರ್‍ಯಾಂಕಿಂಗ್: ರಾಹುಲ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತ ತಂಡದ ಆರಂಭಿಕ ಆಟಗಾರ, ಕನ್ನಡಿಗ ಕೆ.ಎಲ್.ರಾಹುಲ್ ಅವರು ಐಸಿಸಿ ಟಿ20 ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ಒಂದು ಸ್ಥಾನ ಬಡ್ತಿ ಪಡೆದಿದ್ದು, ನಾಲ್ಕನೇ ಸ್ಥಾನಕ್ಕೇರಿದ್ದಾರೆ. ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಮತ್ತು ಸೀಮಿತ ಓವರ್‌ಗಳ ಪಂದ್ಯಗಳ ನಾಯಕ ರೋಹಿತ್ ಶರ್ಮಾ ಅವರು ಕ್ರಮವಾಗಿ 10 ಮತ್ತು 11ನೇ ಸ್ಥಾನಗಳಲ್ಲೇ ಉಳಿದಿದ್ದಾರೆ.

ಬುಧವಾರ ಪ್ರಕಟಗೊಂಡಿರುವ ಬೌಲರ್‌ಗಳ ವಿಭಾಗದ ಕ್ರಮಾಂಕದಲ್ಲಿ ವೇಗಿ ಭುವನೇಶ್ವರ ಕುಮಾರ್ 20ನೇ ಸ್ಥಾನದಲ್ಲಿದ್ದರೆ, ಜಸ್‌ಪ್ರೀತ್ ಬೂಮ್ರಾ 26ನೇ ಸ್ಥಾನದಲ್ಲಿದ್ದಾರೆ. ವೆಸ್ಟ್ ಇಂಡೀಸ್‌ನ ಎಡಗೈ ಸ್ಪಿನ್ನರ್ ಅಕೀಲ್ ಹೊಸೇನ್ ಮತ್ತು ವೇಗಿ ಜೇಸನ್ ಹೋಲ್ಡರ್ ಅವರು ವೃತ್ತಿಜೀವನದ ಶ್ರೇಷ್ಠ ಕ್ರಮಾಂಕಗಳಿಗೆ ಜಿಗಿದಿದ್ದು, ಕ್ರಮವಾಗಿ 18 ಮತ್ತು 23ನೇ ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್ ಎದುರು ಇತ್ತೀಚೆಗೆ ಕೊನೆಗೊಂಡ ಸರಣಿಯಲ್ಲಿ ಇವರಿಬ್ಬರು ಉತ್ತಮ ಸಾಮರ್ಥ್ಯ ತೋರಿದ್ದರು. ವೆಸ್ಟ್ ಇಂಡೀಸ್ ತಂಡವು 3-2ರಿಂದ ಸರಣಿ ಗೆದ್ದುಕೊಂಡಿತ್ತು. ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ನಿಕೋಲಸ್ ಪೂರನ್ ಎಂಟು ಸ್ಥಾನ ಏರಿಕೆ ಕಂಡಿದ್ದು, ಸದ್ಯ 18ನೇ ಸ್ಥಾನದಲ್ಲಿದ್ದಾರೆ.

ಜಪಾನ್ ತಂಡಕ್ಕೆ ಫೈನಲ್ ನಿರೀಕ್ಷೆ

ಪುಣೆ (ಪಿಟಿಐ): ಸತತ ಮೂರನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಜಪಾನ್ ತಂಡವು ಏಷ್ಯಾಕಪ್ ಮಹಿಳಾ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಗುರುವಾರ ಮಾಜಿ ಚಾಂಪಿಯನ್ ಚೀನಾ ತಂಡದ ಸವಾಲನ್ನು ಎದುರಿಸಲಿದೆ.

ಟೂರ್ನಿಯ ಗುಂಪು ಹಂತದ ಪಂದ್ಯದಲ್ಲಿ ಚೀನಾ ತೈಪೆ ಮತ್ತು ಇರಾನ್ ಎದುರು ಕ್ರಮವಾಗಿ 4–0 ಹಾಗೂ 7–0ಯಿಂದ ಜಯಿಸಿದ್ದ ಚೀನಾ, ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ವಿಯೆಟ್ನಾಂ ತಂಡದ ವಿರುದ್ಧ 3–1ರಿಂದ ಗೆಲುವು ಸಾಧಿಸಿತ್ತು.

ಉಭಯ ತಂಡಗಳ ನಡುವಿನ ಕಳೆದ ಐದು ಮುಖಾಮುಖಿಗಳಲ್ಲಿ ಒಮ್ಮೆ ಮಾತ್ರ ಚೀನಾ (2008) ಜಯ ಸಾಧಿಸಿದೆ.

ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ಜಪಾನ್ ಗೆದ್ದರೆ ಸತತ ಮೂರನೇ ಪ್ರಶಸ್ತಿ ಇನ್ನಷ್ಟು ಹತ್ತಿರವಾಗಲಿದೆ.

ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

ವಿಶ್ವಕಪ್ ಪದಕ ಗೆಲುವಿನ ಮೇಲೆ ಶ್ರೀಜೇಶ್ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹಳ ವರ್ಷಗಳಿಂದ ಕನಸು ಕಂಡಿದ್ದ ಒಲಿಂಪಿಕ್ಸ್ ಪದಕ ಗೆದ್ದ ಸಂತಸ ಇದೆ. ಇದೀಗ ವಿಶ್ವಕಪ್ ಹಾಕಿಯಲ್ಲಿ ಭಾರತಕ್ಕೆ ಪದಕ ತಂದುಕೊಡುವುದು ತಮ್ಮ ಗುರಿ ಎಂದು ಭಾರತ ತಂಡದ ಅನುಭವಿ ಗೋಲ್‌ಕೀಪರ್ ಪಿ.ಆರ್ ಶ್ರೀಜೇಶ್ ಹೇಳಿದರು.

ಹೋದ ವರ್ಷ ಟೋಕಿಯೊದಲ್ಲಿ ಭಾರತ ಹಾಕಿ ತಂಡವು ಕಂಚಿನ ಪದಕ ಜಯಿಸಿತ್ತು. ತಂಡದಸಾಧನೆಯಲ್ಲಿ ಶ್ರೀಜೇಶ್ ಪಾತ್ರವೂ ಮುಖ್ಯವಾಗಿತ್ತು.

ವಿಶ್ವ ಗೇಮ್ಸ್ ಅಥ್ಲೀಟ್ ಪ್ರಶಸ್ತಿ ಜಯಿಸಿರುವ ಶ್ರೀಜೇಶ್ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಒಲಿಂಪಿಕ್ ಪದಕ ಜಯವು ಕನಸಾಗಿತ್ತು ನಿಜ. ಆದರೆ, ಆ ಪದಕದ ಬಣ್ಣವನ್ನು ಬದಲಿಸುವ ಅವಕಾಶ ನಮ್ಮ ಮುಂದಿದೆ. ಅದಕ್ಕಾಗಿ ನಮ್ಮ ಪ್ರಯತ್ನವು 2022ರಲ್ಲಿ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯೊಂದಿಗೆ ಆರಂಭವಾಗಲಿದೆ. ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್ ಕೂಡ ಇದೇ ವರ್ಷ ನಡೆಯಲಿವೆ. ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದು 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಪ್ರವೇಶ ಗಿಟ್ಟಿಸುತ್ತೇವೆ. ಹೋದ ಬಾರಿ ನಾವು ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ಗೆ ಪ್ರವೇಶಿಸಿರಲಿಲ್ಲ. ಮುಂದಿನ ವಿಶ್ವಕಪ್ ಟೂರ್ನಿಯಲ್ಲಿ ಪದಕ ಜಯಿಸುವುದು ನನ್ನ ಗುರಿ' ಎಂದರು.

ಪಿ.ಆರ್. ಶ್ರೀಜೇಶ್

'ಒಬ್ಬ ಗೋಲ್‌ಕೀಪರ್‌ಗೆ ಆಡುವ ಆಸಕ್ತಿ ಮತ್ತು ಆಟದ ಬಗ್ಗೆ ಪ್ರೀತಿ ಇದ್ದರೆ ಸಾಕು. ವಯಸ್ಸು ಪ್ರಮುಖವಲ್ಲ. ಸುದೀರ್ಘ ಗುರಿಗಳನ್ನು ನಾನು ಯೋಜಿಸುತ್ತಿಲ್ಲ. ಸಣ್ಣ ಸಣ್ಣ ಗುರಿಗಳನ್ನು ಯಶಸ್ವಿಯಾಗಿ ಸಾಧಿಸುತ್ತ ಮುನ್ನಡೆಯುವುದು ಉದ್ದೇಶ' ಎಂದು 33 ವರ್ಷದ ಶ್ರೀಜೇಶ್ ಅವರು ಹೇಳಿದರು.

'ಭಾರತ ತಂಡದ ನೀಲಿ ಬಣ್ಣದ ಪೋಷಾಕು ಧರಿಸುವುದು ಎಲ್ಲರಿಗೂ ಸಿಗುವ ಅವಕಾಶವಲ್ಲ. ಕೆಲವು ಅದೃಷ್ಟವಂತರಿಗೆ ಅದು ಸಿಗುತ್ತದೆ. ಆದರೆ, ಅದರೊಂದಿಗೆ ಕಠಿಣ ಪರಿಶ್ರಮಪಡಬೇಕು. ಈ ಪೋಷಾಕಿನ ಬಣ್ಣವೇ ಪ್ರತಿದಿನ ನಾನು ಉತ್ಸಾಹದಿಂದ ಕಣಕ್ಕಿಳಿದು ಅಭ್ಯಾಸ ಮಾಡಲು ಮತ್ತು ಆಡಲು ಪ್ರೇರಣೆ ನೀಡುತ್ತದೆ' ಎಂದು ಹೇಳಿದರು.

ಕೋವಿಡ್: ಮೂರನೇ ಅಲೆಯಲ್ಲಿ ಗರಿಷ್ಠ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ ಹೆಚ್ಚಳವಾಗಿದ್ದು, ಸೋಂಕಿತರಲ್ಲಿ 81 ಮಂದಿ ಸಾವಿಗೀಡಾಗಿರುವುದು ಬುಧವಾರ ದೃಢಪಟ್ಟಿದೆ.

ಏಳು ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ದಿಯಾದ ಗರಿಷ್ಠ ಮರಣ ಪ್ರಕರಣಗಳು ಇವಾಗಿವೆ. ಕಳೆದ ತಿಂಗಳು (ಜ.29) 70 ಮಂದಿ ಸಾವಿಗೀಡಾಗಿದ್ದರು. ಒಂದು ದಿನದ ಅವಧಿಯಲ್ಲಿ 1.63 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 20,505 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 12.55 ರಷ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 38.44 ಲಕ್ಷಕ್ಕೆ ಏರಿಕೆಯಾಗಿದೆ.

ಎರಡು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 23 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ. ಬೆಂಗಳೂರಿನಲ್ಲಿ 8,850 ಮಂದಿ ಸೋಂಕಿತರಾಗಿದ್ದಾರೆ. ಮೈಸೂರಿನಲ್ಲಿ 1,209, ಬೆಳಗಾವಿಯಲ್ಲಿ 1,060, ತುಮಕೂರಿನಲ್ಲಿ 762, ಶಿವಮೊಗ್ಗದಲ್ಲಿ 715, ಧಾರವಾಡದಲ್ಲಿ 633, ಉತ್ತರ ಕನ್ನಡದಲ್ಲಿ 595, ಹಾಸನದಲ್ಲಿ 590, ಮಂಡ್ಯದಲ್ಲಿ 579, ಕೊಡಗಿನಲ್ಲಿ 543 ಹಾಗೂ ಉಡುಪಿಯಲ್ಲಿ 542 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ 21,493 ಮಂದಿ ಸೇರಿದಂತೆ ರಾಜ್ಯದಲ್ಲಿ 40,903 ಮಂದಿ ಚೇತರಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 36.27 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.77 ಲಕ್ಷಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 96 ಸಾವಿರ ಸಕ್ರಿಯ ಪ್ರಕರಣಗಳಿವೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ 13 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ದಕ್ಷಿಣ ಕನ್ನಡದಲ್ಲಿ 10 ಮಂದಿ, ಮಂಡ್ಯ ಹಾಗೂ ಮೈಸೂರಿನಲ್ಲಿ ತಲಾ ಆರು ಮಂದಿ, ತುಮಕೂರು ಹಾಗೂ ಶಿವಮೊಗ್ಗದಲ್ಲಿ ತಲಾ ಐವರು, ಕೋಲಾರ, ಕಲಬುರಗಿ, ಬೀದರ್ ಹಾಗೂ ಬಳ್ಳಾರಿಯಲ್ಲಿ ತಲಾ ನಾಲ್ಕು, ಉತ್ತರ ಕನ್ನಡ ಹಾಗೂ ಉಡುಪಿಯಲ್ಲಿ ತಲಾ ಮೂವರು ಸಾವಿಗೀಡಾಗಿದ್ದಾರೆ. ಯದಲ್ಲಿ ಮರಣ ಪ್ರಮಾಣ ದರವು ಶೇ 0.39ಕ್ಕೆ ಏರಿಕೆಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,137ಕ್ಕೆ ತಲುಪಿದೆ.



ದೈನಂದಿನ ಪ್ರಕರಣ 1.61 ಲಕ್ಷಕ್ಕೆ ಇಳಿಕೆ

ನವದೆಹಲಿ: ದೇಶದಾದ್ಯಂತ ಬುಧವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ 1,61,386 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ. ಸೋಂಕಿನಿಂದ 1,733 ಮಂದಿ ಮೃತಪಟ್ಟಿದ್ದಾರೆ. 2,81,109 ಮಂದಿ ಸೋಂಕಿತರು ಚೇತರಿಸಿಕೊಂಡಿದ್ದಾರೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಮಂಗಳವಾರ 1,67,059 ಪ್ರಕರಣಗಳು ದೃಢಪಟ್ಟಿದ್ದವು. ಇದಕ್ಕೆ ಹೋಲಿಸಿದರೆ ಇಂದು ಹೊಸ ಪ್ರಕರಣಗಳಲ್ಲಿ ಶೇ 3ರಷ್ಟು ಇಳಿಕೆ ಕಂಡುಬಂದಿದೆ.

ಸದ್ಯ ದೇಶದಲ್ಲಿ 17,43,059 ಸಕ್ರಿಯ ಪ್ರಕರಣಗಳಿವೆ. ದೈನಂದಿನ ಪಾಸಿಟಿವಿಟಿ ದರ ಶೇ 9.26ರಷ್ಟಿದೆ. 167.29 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

38,44,338 ▲ ಒಟ್ಟು ಸೋಂಕಿತರು (38,23,833 ನಿನ್ನೆಯ ವಿವರ)

1,77,244 ▼ ಸಕ್ರಿಯ ಪ್ರಕರಣಗಳು

36,27,925 ▼ ಗುಣಮುಖರಾದವರು

39,137 ಒಟ್ಟು ಸಾವು ▲

ದಿನದ ಮಾಹಿತಿ

ಹೊಸ ಪ್ರಕರಣ 20,505 ▲

ಗುಣಮುಖ 40,903 ▼

ಸಾವು 81 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಇರಾಕ್, ಸಿರಿಯಾದಲ್ಲಿ ಕುರ್ದಿಶ್ ಉಗ್ರರ ನೆಲೆ ನಾಶ

ಅಂಕಾರ (ಎಪಿ): ಇರಾಕ್ ಮತ್ತು ಸಿರಿಯಾದಲ್ಲಿನ ಶಂಕಿತ ಕುರ್ದಿಶ್ ಭಯೋತ್ಪಾದಕರ ನೆಲೆಗಳನ್ನು ಟರ್ಕಿಯ ಯುದ್ಧವಿಮಾನಗಳು ಬುಧವಾರ ಬೆಳಿಗ್ಗೆ ಹೊಡೆದುರುಳಿಸಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಯೋತ್ಪಾದಕರ ಬೆದರಿಕೆಗಳಿಂದ ಟರ್ಕಿಯ ಗಡಿಯನ್ನು ರಕ್ಷಿಸುವ ಪ್ರಯತ್ನದ ಭಾಗವಾಗಿ ಈ ದಾಳಿ ನಡೆದಿದೆ. ಉತ್ತರ ಇರಾಕ್‌ನ ಸಿಂಜಾರ್ ಪರ್ವತ ಮತ್ತು ಉತ್ತರ ಸಿರಿಯಾದ ಡೆರಿಕ್ ಮತ್ತು ಕರಕಾಕ್ ಪ್ರದೇಶಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಟರ್ಕಿಯ ರಕ್ಷಣಾ ಸಚಿವಾಲಯದ ಹೇಳಿಕೆಯೊಂದು ತಿಳಿಸಿದೆ. ಉತ್ತರ ಇರಾಕ್‌ನಲ್ಲಿನ ಕುರ್ದಿಸ್ತಾನ್ ಕಾರ್ಯಕರ್ತರು ಮತ್ತು ಸಿರಿಯಾದಲ್ಲಿನ ಪೀಪಲ್ಸ್ ಪ್ರೊಟೆಕ್ಷನ್ ಯೂನಿಟ್ಸ್ ಅಥವಾ ವೈಪಿಜಿ ಭಯೋತ್ಪಾದಕ ಸಂಘಟನೆಯನ್ನು ದಾಳಿಯು ಗುರಿಯಾಗಿಸಿಕೊಂಡಿತ್ತು.

ಭಯೋತ್ಪಾದಕರಿದ್ದ ಗುಹೆಗಳು, ಸುರಂಗಗಳು, ಯುದ್ಧಸಾಮಗ್ರಿ ಸಂಗ್ರಹಾಗಾರಗಳು, ನೆಲೆಗಳು ಮತ್ತು ತರಬೇತಿ ಶಿಬಿರಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಯಿತು ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಈಕ್ವೆಡಾರ್‌ನಲ್ಲಿ ಭೂ ಕುಸಿತ: 24 ಮಂದಿ ಸಾವು

ಕ್ವಿಟೊ(ಎಪಿ): ಈಕ್ವೆಡಾರ್ ರಾಜಧಾನಿ ಕ್ವಿಟೊದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಸಂಭವಿಸಿದ ಭೂ ಕುಸಿತದಲ್ಲಿ 24 ಮಂದಿ ಮೃತಪಟ್ಟಿದ್ದು, 12 ಮಂದಿ ನಾಪತ್ತೆಯಾಗಿದ್ದಾರೆ.

ಮಂಗಳವಾರ ರಾತ್ರಿ ಮಳೆಯಿಂದ ಬೆಟ್ಟ ಕುಸಿದ ಪರಿಣಾಮ ಎಂಟು ಮನೆಗಳು ಧ್ವಂಸಗೊಂಡಿವೆ.

ಇದಲ್ಲದೆ ಸುತ್ತಮುತ್ತಲಿನ ಇನ್ನೂ ಹಲವು ಮನೆಗಳಿಗೆ ಹಾನಿಯಾಗಿದೆ. ಘಟನೆಯಲ್ಲಿ 48 ಮಂದಿ ಗಾಯಗೊಂಡಿದ್ದಾರೆ.

ಪ್ರಜ್ಞೇಶ್‌ಗೆ ಪ್ರಶಸ್ತಿ ಮೇಲೆ ಕಣ್ಣು

ಬೆಂಗಳೂರು ಓಪನ್: ಭರವಸೆಯಲ್ಲಿ ಮಾಜಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ವರ್ಷಗಳ ಹಿಂದೆ ಚಾಂಪಿಯನ್ ಆಗಿದ್ದ ಪ್ರಜ್ಞೇಶ್ ಗುಣೇಶ್ವರನ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಮತ್ತೆ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆವರಣದಲ್ಲಿ ನಡೆಯಲಿರುವ ಬೆಂಗಳೂರು ಓಪನ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯಗಳು ಇದೇ ಆರರಂದು ಆರಂಭವಾಗಲಿವೆ.

ಸದ್ಯ ಪುಣೆಯಲ್ಲಿ ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯಲ್ಲಿ ಆಡುತ್ತಿರುವ ಅವರು ಅಲ್ಲಿಂದ ಆಯೋಜಕರಿಗೆ ಸಂದರ್ಶನ ನೀಡಿದರು.

ಬೆಂಗಳೂರು ಓಪನ್ ಟೂರ್ನಿಯ 2018ರ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದಿರುವ ಅವರು ಬೆಂಗಳೂರನ್ನು ತಮ್ಮ ಎರಡನೇ ತವರಾಗಿ ಕಾಣುತ್ತಿದ್ದಾರೆ.

'ಬೆಂಗಳೂರಿಗೆ ಸಂಬಂಧಿಸಿದ ನೆನಪುಗಳು ಮಧುರ. ಕೆಎಸ್‌ಎಲ್‌ಟಿಎ ಅಂಗಣದಲ್ಲಿ ತುಂಬ ಕಾಲ ಅಭ್ಯಾಸ ಮಾಡಿದ್ದೇನೆ. ಬೆಂಗಳೂರು ಓಪನ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಲು ಸಾಧ್ಯವಾಗಿದೆ. ಇತರ ಟೂರ್ನಿಗಳಲ್ಲೂ ಅಲ್ಲಿ ಅನೇಕ ಪ್ರಶಸ್ತಿಗಳನ್ನು ಗೆದ್ದಿದ್ದೇನೆ. ಚೆನ್ನೈ ಬಿಟ್ಟರೆ ಬೆಂಗಳೂರು ನನಗೆ ಅತ್ಯಂತ ಪ್ರಿಯ ನಗರ' ಎಂದು 32 ವರ್ಷದ ಪ್ರಜ್ಞೇಶ್ ಹೇಳಿದ್ದಾರೆ.

ಪ್ರಜ್ಞೇಶ್ ಗುಣೇಶ್ವರನ್ –ಪ್ರಜಾವಾಣಿ ಚಿತ್ರ

ವಿಶ್ವ ಕ್ರಮಾಂಕದಲ್ಲಿ 228ನೇ ಸ್ಥಾನದಲ್ಲಿರುವ ಪ್ರಜ್ಞೇಶ್ ಅವರು ಬೆಂಗಳೂರು ಓಪನ್‌ನ ಮುಖ್ಯ ಸುತ್ತಿಗೆ ನೇರ ಪ್ರವೇಶ ಪಡೆದಿದ್ದಾರೆ.

ಎರಡು ಎಟಿಪಿ ಚಾಲೆಂಜರ್ ಮತ್ತು ಒಂಬತ್ತು ಐಟಿಎಫ್ ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಅವರು ಕಳೆದ ವರ್ಷ ಕೋವಿಡ್‌ನಿಂದಾಗಿ ಸಂಕಷ್ಟ ಅನುಭವಿಸಿದ್ದರು.

'ಕಳೆದ ವರ್ಷ ನಿರೀಕ್ಷಿತ ಸಾಧನೆ ಮಾಡಲು ಆಗಲಿಲ್ಲ. ಸಮರ್ಪಕವಾಗಿ ಅಭ್ಯಾಸ ಮಾಡಲು ಸಾಧ್ಯವಾಗಲಿಲ್ಲ. ಗಾಯದ ಸಮಸ್ಯೆಯೂ ಕಾಡಿತ್ತು. ಕಳೆದ ಎರಡು ತಿಂಗಳಿನಿಂದ ಎಲ್ಲವೂ ಸರಿ ಹೋಗಿದೆ' ಎಂದು ಎಡಗೈ ಆಟಗಾರ ಹೇಳಿದರು.

ಪ್ರೊ ಕಬಡ್ಡಿ: ಪಟ್ನಾ ಪೈರೆಟ್ಸ್ ಜಯಭೇರಿ

ಬೆಂಗಳೂರು: ಸಚಿನ್ ಅಮೋಘ ಆಟದ ನೆರವಿನಿಂದ ಪಟ್ನಾ ಪೈರೆಟ್ಸ್ ತಂಡವು ಇಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯ ಲೀಗ್ ಪಂದ್ಯದಲ್ಲಿ ಜಯಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಶೆರಟನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬುಧವಾರ ಪಟ್ನಾ ತಂಡವು 37–35ರಿಂದ ಯು.ಪಿ. ಯೋಧಾ ವಿರುದ್ಧ ಜಯಿಸಿತು.

ಮೊದಲಾರ್ಧ ಮುಗಿದಾಗ ಪಟ್ನಾ ತಂಡವು 20–15ರಿಂದ ಮುನ್ನಡೆ ಸಾಧಿಸಿತ್ತು. ಆದರೆ,ವಿರಾಮದ ನಂತರ ಯುಪಿ ತಂಡವು ತಿರುಗೇಟು ನೀಡಿತು. ಕಠಿಣ ಪೈಪೋಟಿಯೊಡ್ಡಿತು. ತಂಡದ ಸುರೀಂದರ್ ಗಿಲ್ (10) ಮತ್ತು ಶ್ರೀಕಾಂತ್ ಜಾಧವ್ (9) ರೇಡಿಂಗ್‌ನಲ್ಲಿ ಪಾಯಿಂಟ್ಸ್ ಹೆಕ್ಕಿ ತಂದರು. ತಂಡದ ಗೆಲುವಿಗೆ ಪ್ರಯತ್ನಿಸಿದರು. ಆದರೆ, ಪಟ್ನಾ ತಂಡದ ನಾಯಕ ಪ್ರಶಾಂತ್ ಕುಮಾರ್ ಅವರ ಚಾಣಾಕ್ಷ ತಂತ್ರಗಳಿಂದಾಗಿ ಯೋಧಾ ತಂಡಕ್ಕೆ ಜಯ ಒಲಿಯಲಿಲ್ಲ.

ಸಚಿನ್ (12) ರೇಡಿಂಗ್‌ನಲ್ಲಿ ಮಿಂಚಿದರು. ಆಲ್‌ರೌಂಡರ್ ಮೊಹಮ್ಮದ್ರೇಜ್ ಚಿಯಾನೆ (5) ಕೂಡ ಮಿಂಚಿದರು. ಇದರಿಂದಾಗಿ ಪಟ್ನಾ ತಂಡವು ರೋಚಕ ಜಯ ಸಾಧಿಸಿತು.

ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 36–34 ರಿಂದ ಯು ಮುಂಬಾ ಎದುರು ಜಯಭೇರಿ ಬಾರಿಸಿತು. ಪುಣೇರಿ ತಂಡದ ಅಸ್ಲಂ ಇನಾಮದಾರ್ (8), ಅಭಿನೇಶ್ ನಾದರಾಜನ್ (6) ಮತ್ತು ಮೋಹಿತ್ ಗೊಯತ್ (9) ಅವರ ಆಟದ ಬಲದಿಂದ ತಂಡವು ಗೆದ್ದಿತು. ಂಬಾ ತಂಡದ ಅಭಿಷೇಕ್ ಸಿಂಗ್ (8) ಮತ್ತು ವಿ. ಅಜಿತ್ (10) ಅವರು ರೇಡಿಂಗ್‌ನಲ್ಲಿ ಮಿಂಚಿದರು.

ಇಂದಿನ ಪಂದ್ಯ (ರಾತ್ರಿ)

ದಬಂಗ್ ಡೆಲ್ಲಿ – ಜೈಪುರ್ ಪಿಂಕ್ ಪ್ಯಾಂಥರ್ಸ್ 7.30

ತೆಲುಗು ಟೈಟನ್ಸ್ – ತಮಿಳ್ ತಲೈವಾಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	15	9	4	2	53
ಬೆಂಗಳೂರು ಬುಲ್ಸ್	17	9	7	1	51
ಪಟ್ನಾ ಪೈರೆಟ್ಸ್	14	9	4	1	50
ಯು ಮುಂಬಾ	15	5	5	5	43
ಹರಿಯಾಣ ಸ್ಟೀಲರ್ಸ್	15	6	6	3	43
ಯುಪಿ ಯೋಧಾ	16	5	8	3	42
ಪುಣೇರಿ ಪಲ್ಟನ್	15	8	7	-	42
ಬೆಂಗಾಲ್ ವಾರಿಯರ್ಸ್	15	7	7	1	41
ಜೈಪುರ ಪಿಂಕ್ ಪ್ಯಾಂಥರ್ಸ್	14	6	6	2	40
ತಮಿಳ್ ತಲೈವಾಸ್	14	4	4	6	39
ಗುಜರಾತ್ ಜೈಂಟ್ಸ್	14	5	6	3	38
ತೆಲುಗು ಟೈಟನ್ಸ್	14	1	10	3	22

(ಬುಧವಾರದ ಪಂದ್ಯಗಳ ಅಂತ್ಯಕ್ಕೆ)

ವಾಲಿಬಾಲ್: ಭರವಸೆಯಲ್ಲಿ ಚೆನ್ನೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೈಮ್ ವಾಲಿ ಬಾಲ್ ಲೀಗ್ ಟೂರ್ನಿಗಾಗಿ ಉತ್ತಮ ತಯಾರಿ ನಡೆಸಿದ್ದು, ಅತ್ಯುತ್ತಮ ಸಾಮರ್ಥ್ಯ ತೋರಲಿದ್ದೇವೆ ಎಂದು ಚೆನ್ನೈ ಬ್ಲಿಟ್ಜ್ ತಂಡದ ನಾಯಕ ಮೋಹನ್ ಉಕ್ರಪಾಂಡಿಯನ್ ಹೇಳಿದ್ದಾರೆ.

ಫೆಬ್ರುವರಿ ಐದರಿಂದ ಹೈದರಾಬಾದ್‌ನ ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ಟೂರ್ನಿ ಲೀಗ್ ಆರಂಭವಾಗಲಿದ್ದು, ಆರರಂದು ಚೆನ್ನೈ ಬ್ಲಿಟ್ಜ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಅಹಮದಾಬಾದ್ ಡಿಫೆಂಡರ್ಸ್ ವಿರುದ್ಧ ಆಡಲಿದೆ.

ಬುಧವಾರ ವರ್ಚುವಲ್ ಸಂವಾದದಲ್ಲಿ ಮಾತನಾಡಿದ ಮೋಹನ್, 'ನಮ್ಮದು ಸಮತೋಲಿತ ತಂಡ. ವಿದೇಶಿ ಕೋಚ್‌ಗಳೂ ಇದ್ದಾರೆ. ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಿದೆ. 15 ಪಾಯಿಂಟ್‌ಗಳ ಪಂದ್ಯದಲ್ಲಿ ಅನುಭವ ಮುಖ್ಯವಾಗುತ್ತದೆ' ಎಂದರು.

'ಉತ್ತಮ ತರಬೇತಿ ನಡೆದಿದೆ. ಟೂರ್ನಿಗಾಗಿ ಕಾತರರಾಗಿದ್ದೇವೆ. ಯುವ ಆಟಗಾರರಿಗೆ ಲೀಗ್‌ನಿಂದ ತುಂಬ ಅನುಕೂಲವಾಗಲಿದೆ' ಎಂದು ಅಭಿಪ್ರಾಯಪಟ್ಟರು. ಮೋಹನ್ ರಾಷ್ಟ್ರೀಯ ತಂಡದ ಆಟಗಾರನೂ ಹೌದು. ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯು ಸೋನಿ ಟೆನ್ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರವಾಗಲಿದೆ.

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿ: ಅಫ್ಗಾನಿಸ್ತಾನ ಹೋರಾಟ ವ್ಯರ್ಥ

ಪ್ರಶಸ್ತಿ ಸುತ್ತಿಗೆ ಇಂಗ್ಲೆಂಡ್ ಲಗ್ಗೆ

ವಿಕೆಟ್ ಗಳಿಸಿದ ಇಂಗ್ಲೆಂಡ್ ತಂಡದ ರೆಹಾನ್ ಅಹಮದ್ ಸಂಭ್ರಮ– ಟ್ವಿಟರ್ ಚಿತ್ರ

ನಾರ್ತ್‌ಸೌಂಡ್, ಆಂಟಿಗಾ (ಪಿಟಿಐ): ಅಫ್ಗಾನಿಸ್ತಾನದ ಸವಾಲು ಮೀರಿದ ಇಂಗ್ಲೆಂಡ್ ತಂಡ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿತು. ಇದರೊಂದಿಗೆ 24 ವರ್ಷಗಳ ಬಳಿಕ ಪ್ರಶಸ್ತಿ ಸುತ್ತಿಗೆ ತಲುಪಿದ ಸಾಧನೆ ಮಾಡಿತು.

ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಕೆಚ್ಚೆದೆಯ ಹೋರಾಟ ನೀಡಿದ ಅಫ್ಗಾನಿಸ್ತಾನ ತಂಡ ಡಕ್ವರ್ತ್ ಲೂಯಿಸ್ ನಿಯಮದಡಿ 15 ರನ್‌ಗಳಿಂದ ಇಂಗ್ಲೆಂಡ್‌ಗೆ ಮಣಿಯಿತು.

ಮಳೆ ಕಾಡಿದ ಪಂದ್ಯದಲ್ಲಿ ಓವರ್‌ಗಳನ್ನು 47ಕ್ಕೆ ಸೀಮಿತಗೊಳಿಸಲಾಗಿತ್ತು. ಟಾಸ್ ಗೆದ್ದ ಇಂಗ್ಲೆಂಡ್ ಮೊದಲು ಬ್ಯಾಟಿಂಗ್ ಮಾಡಿ 6 ವಿಕೆಟ್‌ಗೆ 231 ರನ್ ಗಳಿಸಿತು.

ಅಫ್ಗಾನಿಸ್ತಾನದ ಗೆಲುವಿಗೆ ಡಕ್ವರ್ತ್ ಲೂಯಿಸ್ ನಿಯಮದಡಿ 231 ರನ್‌ಗಳ ಪರಿಷ್ಕೃತ ಗುರಿ ನೀಡಲಾಗಿತ್ತು. ಆದರೆ ತಂಡಕ್ಕೆ 9 ವಿಕೆಟ್ ಕಳೆದುಕೊಂಡು 215 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಇಂಗ್ಲೆಂಡ್ ತಂಡದ ಆರಂಭ ಚೆನ್ನಾಗಿರಲಿಲ್ಲ. ಮೊದಲ ವಿಕೆಟ್ ರೂಪದಲ್ಲಿ ಜಾಕೊಬ್ ಬೆಥೆಲ್ (2) ಔಟಾದಾಗ ತಂಡದ ಮೊತ್ತ ಕೇವಲ ಒಂಬತ್ತು ರನ್. ಈ ಹಂತದಲ್ಲಿ ಬ್ಯಾಟರ್ ಜಾರ್ಜ್ ಥಾಮಸ್ (50) ಮತ್ತು ನಾಯಕ ಟಾಮ್ ಪ್ರೆಸ್ಟ್ (17) ತಂಡಕ್ಕೆ ಆಸರೆಯಾದರು. ಇವರಿಬ್ಬರೂ ಎರಡನೇ ವಿಕೆಟ್‌ಗೆ 43 ರನ್ ಸೇರಿಸಿದರು.ಜಾರ್ಜ್ ಬೆಲ್ (ಔಟಾಗದೆ 56) ಮತ್ತು ಅಲೆಕ್ಸ್ ಹಾರ್ಟನ್ (ಔಟಾಗದೆ 53) ಮುರಿಯದ ಏಳನೇ ವಿಕೆಟ್‌ಗೆ 95 ರನ್ ಸೇರಿಸಿದರು.

ಅಫ್ಗಾನಿಸ್ತಾನ ಪರ ನವೀದ್ ಜದ್ರಾನ್ (67ಕ್ಕೆ 2), ನೂರ್ ಅಹಮದ್ (32ಕ್ಕೆ 2) ಬೌಲಿಂಗ್‌ನಲ್ಲಿ ಮಿಂಚಿದರು.

ಗುರಿ ಬೆನ್ನತ್ತಿದ ಕಣಿವೆ ದೇಶದ ತಂಡದ ಆರಂಭ ಕಳಪೆಯಾಗಿತ್ತು. ನಂಗೆಯಲಿಯಾ ಖರೋಟೆ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದಾದ ತಂಡದ ಮೊತ್ತ ಒಂದು ರನ್ ಆಗಿತ್ತು. ಮೊಹಮ್ಮದ್ ಇಶಾಕ್ (43) ಮತ್ತು ಅಲ್ಲಾ ನೂರ್ (60) ಎರಡನೇ ವಿಕೆಟ್‌ಗೆ 93 ರನ್ ಸೇರಿಸಿ ತಂಡದಲ್ಲಿ ಜಯದ ಆಸೆ ಚಿಗುರಿಸಿದರು. ಇವರಿಬ್ಬರ ವಿಕೆಟ್ ಪತನದ ಬಳಿಕ ಅಬ್ದುಲ್ ಹಾದಿ (ಔಟಾಗದೆ 37), ಬಿಲಾಲ್ ಅಹಮದ್ (33) ಮತ್ತು ನೂರ್ ಅಹಮದ್ (25) ಹೋರಾಟ ತೋರಿದರು.

ಕೊನೆಯ 10 ಎಸೆತಗಳಲ್ಲಿ ಗೆಲುವಿಗೆ 18 ರನ್ ಬೇಕಿದ್ದವು. ಈ ವೇಳೆ ಅಫ್ಗಾನಿಸ್ತಾನದ ನಾಲ್ಕು ವಿಕೆಟ್ ಬಾಕಿ ಇದ್ದವು. 46ನೇ ಓವರ್ ಎಸೆದ ಇಂಗ್ಲೆಂಡ್‌ನ ಎಡಗೈ ಸ್ಪಿನ್ನರ್ ರೆಹಾನ್ ಅಹಮದ್ ಕೇವಲ ಒಂದು ರನ್ ನೀಡಿ ಮೂರು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 47 ಓವರ್‌ಗಳಲ್ಲಿ 6 ವಿಕೆಟ್‌ಗೆ 231 (ಜಾರ್ಜ್ ಥಾಮಸ್ 50, ಟಾಮ್ ಪ್ರೆಸ್ಟ್ 17, ಜಾರ್ಜ್ ಬೆಲ್ ಔಟಾಗದೆ 56, ಅಲೆಕ್ಸ್ ಹಾರ್ಟನ್ ಔಟಾಗದೆ 53; ನವೀದ್ ಜದ್ರಾನ್ 67ಕ್ಕೆ 2, ನಂಗೆಯಲಿಯಾ ಖರೋಟೆ 25ಕ್ಕೆ 1, ನೂರ್ ಅಹಮದ್ 32ಕ್ಕೆ 2). **ಅಫ್ಗಾನಿಸ್ತಾನ:** 47 ಓವರ್‌ಗಳಲ್ಲಿ 9 ವಿಕೆಟ್‌ಗೆ 215 (ಮೊಹಮ್ಮದ್ ಇಶಾಕ್ 43, ಅಲ್ಲಾ ನೂರ್ 60, ಅಬ್ದುಲ್ ಹಾದಿ 37, ಬಿಲಾಲ್ ಅಹಮದ್ 33, ನೂರ್ ಅಹಮದ್ 25; ಜೋಷುವಾ ಬಾಯ್ಡೆನ್ 23ಕ್ಕೆ 1, ಟಾಮ್ ಪ್ರೆಸ್ಟ್ 39ಕ್ಕೆ 1, ರೆಹಾನ್ ಅಹಮದ್ 41ಕ್ಕೆ 4, ಥಾಮಸ್ ಅಸ್ಪಿನ್‌ವಾಲ್ 37ಕ್ಕೆ 2). **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 15 ರನ್‌ಗಳ ಜಯ, ಫೈನಲ್ ಪ್ರವೇಶ.

ಯಶ್, ರಶೀದ್ ದ್ವಿಶತಕದ ಜೊತೆಯಾಟ

ಶೇಕ್ ರಶೀದ್ ಮತ್ತು ಯಶ್ ಧುಲ್ ಅವರ ದ್ವಿಶತಕದ ಜೊತೆಯಾಟದ ನೆರವಿನಿಂದ ಭಾರತ 19 ವರ್ಷದೊಳಗಿನವರ ತಂಡ ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ 5ಕ್ಕೆ 290 ರನ್ ಗಳಿಸಿದೆ. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ತಂಡ 37 ರನ್ ಗಳಿಸುವಷ್ಟರಲ್ಲಿ ಆರಂಭಿಕ ಬ್ಯಾಟರ್‌ಗಳಿಬ್ಬರನ್ನು ಕಳೆದುಕೊಂಡಿತ್ತು. ಈ ಸಂದರ್ಭದಲ್ಲಿ ಜೊತೆಗೂಡಿದ ರಶೀದ್ (94; 108 ಎಸೆತ, 8 ಬೌಂಡರಿ, 1 ಸಿಕ್ಸರ್) ಮತ್ತು ಯಶ್ (110; 110 ಎ, 10 ಬೌಂ, 1 ಸಿ) 204 ರನ್‌ಗಳ ಜೊತೆಯಾಟವಾಡಿದರು. 46ನೇ ಓವರ್‌ನಲ್ಲಿ ಯಶ್ ಧುಲ್ ರನೌಟಾಗುವುದರೊಂದಿಗೆ ಈ ಜೊತೆಯಾಟ ಮುರಿಯಿತು.

ಗುರಿ ಬೆನ್ನತ್ತಿರುವ ಆಸ್ಟ್ರೇಲಿಯಾ 23 ಓವರ್‌ಗಳಲ್ಲಿ 94 ರನ್ ಗಳಿಸುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿದೆ.

ಸಂಕ್ಷಿಪ್ತ ಸ್ಕೋರು: ಭಾರತ 19 ವರ್ಷದೊಳಗಿನವರು: 50 ಓವರ್‌ಗಳಲ್ಲಿ 5ಕ್ಕೆ 290 (ಶೇಕ್ ರಶೀದ್ 94, ಯಶ್ ಧುಲ್ 110; ಜಾಸ್ ನಿಸ್ಬೆಟ್ 41ಕ್ಕೆ2, ವಿಲಿಯಂ ಸೇಜ್‌ಮನ್ 57ಕ್ಕೆ2); **ಆಸ್ಟ್ರೇಲಿಯಾ 19 ವರ್ಷದೊಳಗಿನವರು:** 23 ಓವರ್‌ಗಳಲ್ಲಿ 4ಕ್ಕೆ 94 (ಕ್ಯಾಂಬೆಲ್ ಕೆಲ್ವೆ 30, ಕೋರಿ ಮಿಲ್ಲರ್ 38; ರವಿ ಕುಮಾರ್ 20ಕ್ಕೆ1, ಅಂಕೃಷ್ 11ಕ್ಕೆ1, ವಿಕಿ ಓಸ್ತವಾಲ್ 12ಕ್ಕೆ1, ನಿಶಾಂತ್ ಸಿಂಧು 7ಕ್ಕೆ1). ವಿವರ ಅಪೂರ್ಣ.

ಭಾರತಕ್ಕೆ ಬಂದಿಳಿದ ವಿಂಡೀಸ್ ತಂಡ

ಅಹಮದಾಬಾದ್ (ಪಿಟಿಐ): ಇಂಗ್ಲೆಂಡ್ ತಂಡದ ವಿರುದ್ಧ ಟಿ20 ಕ್ರಿಕೆಟ್ ಸರಣಿಯಲ್ಲಿ ಜಯಭೇರಿ ಬಾರಿಸಿದ ಸಂಭ್ರಮದಲ್ಲಿರುವ ವೆಸ್ಟ್ ಇಂಡೀಸ್ ತಂಡವು ಬುಧವಾರ ಭಾರತಕ್ಕೆ ಬಂದಿಳಿಯಿತು.

ಇದೇ 6ರಿಂದ ಮೊಟೇರಾದಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತದ ಎದುರು ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ವಿಂಡೀಸ್ ತಂಡವು ಆಡಲಿದೆ.

‘ದೀರ್ಘ ಪ್ರಯಾಣದ ನಂತರ ಬಾರ್ಬಡೀಸ್‌ನಿಂದ ಮೆನ್ ಇನ್ ಮರೂನ್ (ಕಂದುಬಣ್ಣದ ಪೋಷಾಕು ಧರಿಸಿರುವವರು) ಬಳಗವು ಭಾರತಕ್ಕೆ ಆಗಮಿಸಿತು’ ಎಂದು ವೆಸ್ಟ್ ಇಂಡೀಸ್ ಕ್ರಿಕೆಟ್ ಟ್ವೀಟ್ ಮಾಡಿದೆ.

‘ವಿಂಡೀಸ್ ಬಳಗವು ಅಹಮದಾಬಾದಿಗೆ ಸುರಕ್ಷಿತವಾಗಿ ಬಂದು ತಲುಪಿದೆ. ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಆಡಲು ಸಿದ್ಧವಾಗಿದೆ’ ಎಂದು ಬಿಸಿಸಿಐ ಕೂಡ ಟ್ವೀಟ್ ಮಾಡಿದೆ.

ತಂಡದ ಆಟಗಾರರು ಬಯೋಬಬಲ್ ನಿಯಮಗಳಿಗನುಗುಣವಾಗಿ ಕೋವಿಡ್ ಪರೀಕ್ಷೆಗೆ ಒಳಗಾಗಲಿದ್ದಾರೆ.

ಇಲ್ಲಿ ನಡೆಯಲಿರುವ ಪಂದ್ಯಗಳಿಗೆ ಪ್ರೇಕ್ಷಕರನ್ನು ನಿರ್ಬಂಧಿಸಲಾಗಿದೆ. ಕೋವಿಡ್ ಕಾರಣದಿಂದಾಗಿ ಈ ಮುಂಜಾಗ್ರತೆಯನ್ನು ವಹಿಸಲಾಗುತ್ತಿದೆ ಎಂದು ಗುಜರಾತ್ ಕ್ರಿಕೆಟ್ ಸಂಸ್ಥೆ ಈಗಾಗಲೇ ತಿಳಿಸಿದೆ.

ಫೆಬ್ರುವರಿ 16 ರಿಂದ 20ರವರೆಗೆ ಉಭಯ ತಂಡಗಳು ಕೋಲ್ಕತ್ತದಲ್ಲಿ ಮೂರು ಟ್ವೆಂಟಿ–20 ಪಂದ್ಯಗಳನ್ನು ಆಡಲಿವೆ. ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಪಂದ್ಯಗಳಿಗೆ ಕ್ರೀಡಾಂಗಣದ ಆಸನ ಸಾಮರ್ಥ್ಯದ ಶೇ 75ರಷ್ಟು ಪ್ರೇಕ್ಷಕರಿಗೆ ಅವಕಾಶ ನೀಡಲು ಪಶ್ಚಿಮ ಬಂಗಾಳ ಸರ್ಕಾರ ನಿರ್ಧರಿಸಿದೆ.

ಕೀರನ್ ಪೊಲಾರ್ಡ್ ಬಳಗವು ಈಚೆಗೆ ತನ್ನ ತವರಿನಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿತ್ತು. ಇದೇ 12 ಮತ್ತು 13ರಿಂದ ಐಪಿಎಲ್‌ನ ಮೆಗಾ ಹರಾಜು ಪ್ರಕ್ರಿಯೆ ನಡೆಯಲಿದ್ದು ಫ್ರ್ಯಾಂಚೈಸಿಗಳ ಗಮನ ಸೆಳೆಯಲು ಉಭಯ ದೇಶಗಳ ತಂಡದ ಆಟಗಾರರಿಗೆ ಈ ಟೂರ್ನಿಯು ವೇದಿಕೆಯಾಗಲಿದೆ.

ಶಿಖರ್, ಶ್ರೇಯಸ್‌ಗೆ ಕೋವಿಡ್

ಶಿಖರ್ ಧವನ್


ಶ್ರೇಯಸ್

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್ ಎದುರು ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದ ಮೂವರಿಗೆ ಕೋವಿಡ್ ಇರುವುದು ಖಚಿತವಾಗಿದೆ.

ತಂಡದ ಆರಂಭಿಕ ಬ್ಯಾಟರ್ ಶಿಖರ್ ಧವನ್, ಶ್ರೇಯಸ್ ಅಯ್ಯರ್ ಮತ್ತು ಯುವ ಆಟಗಾರ ಋತುರಾಜ್ ಗಾಯಕವಾಡ್ ಅವರಿಗೆ ಕೋವಿಡ್ ದೃಢಪಟ್ಟಿದೆ. ಅವರನ್ನು ಪ್ರತ್ಯೇಕವಾಸದಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಜನವರಿ 31ರಿಂದ ಭಾರತ ತಂಡವು ಅಹಮದಾಬಾದ್‌ನಲ್ಲಿದೆ. ಇದೇ 6ರಿಂದ ವಿಂಡೀಸ್ ವಿರುದ್ಧ ಏಕದಿನ ಸರಣಿಯು ಇಲ್ಲಿ ನಡೆಯಲಿದೆ.

‘ಮೂವರು ಆಟಗಾರರಲ್ಲಿ ಸೋಂಕು ಇರುವುದು ದೃಢಪಟ್ಟಿದೆ. ಆಡಳಿತಾತ್ಮಕ ನೆರವು ಸಿಬ್ಬಂದಿಯಲ್ಲಿ 3–4 ಜನರಿಗೆ ಸೋಂಕು ಇರುವ ಶಂಕೆ ಇದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಒಂದು ವಾರದ ಐಸೋಲೆಷನ್‌ನಲ್ಲಿ ಈ ಮೂವರೂ ಇರಬೇಕು. ಆದ್ದರಿಂದ ಅವರು ಸರಣಿಯಲ್ಲಿ ಕಣಕ್ಕಿಳಿಯುವುದು ಸಾಧ್ಯವಿಲ್ಲ. ಅವರ ಬದಲಿಗೆ ಮೀಸಲು ಆಟಗಾರರಾದ ಶಾರೂಕ್ ಖಾನ್, ಆರ್. ಸಾಯಿಕಿಶೋರ್ ಮತ್ತು ರಿಷಿ ಧವನ್ ಸ್ಥಾನ ಪಡೆಯುವ ಸಾಧ್ಯತೆ ಇದೆ. ನಾಯಕ ರೋಹಿತ್ ಶರ್ಮಾ ಅವರೊಂದಿಗೆ ವೆಂಕಟೇಶ್ ಅಯ್ಯರ್ ಇನಿಂಗ್ಸ್ ಆರಂಭಿಸುವ ನಿರೀಕ್ಷೆ ಇದೆ. ಫೆ 6ರಂದು ಮೊದಲ ಪಂದ್ಯ ನಡೆಯಲಿದೆ. ಭಾರತಕ್ಕೆ ಇದು 1000ನೇ ಏಕದಿನ ಪಂದ್ಯವಾಗಿದೆ. ಈ ಸಾಧನೆ ಮಾಡಿದ ಮೊದಲ ತಂಡವಾಗಲಿದೆ.

ಡೆರಿಲ್ ಮಿಚೆಲ್‌ಗೆ ಐಸಿಸಿ ಗೌರವ

ದುಬೈ (ಪಿಟಿಐ): ನ್ಯೂಜಿಲೆಂಡ್ ತಂಡದ ಬ್ಯಾಟರ್ ಡೆರಿಲ್ ಮಿಚೆಲ್ ಅವರು ಬುಧವಾರ ‘2021ರ ಐಸಿಸಿ ಕ್ರೀಡಾಸ್ಫೂರ್ತಿ’ ಗೌರವಕ್ಕೆ ಪಾತ್ರರಾಗಿದ್ದಾರೆ.

ಹೋದ ವರ್ಷದ ನವೆಂಬರ್ 10ರಂದು ನಡೆದ ಇಂಗ್ಲೆಂಡ್ ವಿರುದ್ಧದ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಮಿಚೆಲ್ ರನ್‌ಗಾಗಿ ಓಡುವ ವೇಳೆ ಬೌಲರ್ ಆದಿಲ್ ರಶೀದ್‌ಗೆ ಆಕಸ್ಮಿಕವಾಗಿ ಡಿಕ್ಕಿ ಹೊಡೆದಿದ್ದರು.

ಅಡಿಡಾಸ್ ಜೊತೆ ಸಂದೇಶ್ ಒಪ್ಪಂದ

ಭಾರತ ಫುಟ್‌ಬಾಲ್ ತಂಡದ ಸಂದೇಶ್ ಜಿಂಗಾನ್ ಕ್ರೀಡಾ ಉಡುಪುಗಳ ತಯಾರಿಕೆ ಸಂಸ್ಥೆ ಅಡಿಡಾಸ್ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ. ಐಎಸ್‌ಎಲ್‌ನಲ್ಲಿ ಎಟಿಕೆ ಮೋಹನ್ ಬಾಗನ್ ತಂಡದಲ್ಲಿರುವ ಸಂದೇಶ್ ಯುವ ಆಟಗಾರರನ್ನು ಪ್ರೋತ್ಸಾಹಿಸುವ ಕಾರ್ಯದಲ್ಲಿ ಕೈಜೋಡಿಸಲಿದ್ದಾರೆ.

‘ಫುಟ್‌ಬಾಲ್ ಜೊತೆ ನನ್ನ ಪ್ರಯಾಣ ಅತ್ಯಂತ ಖುಷಿಯಿಂದ ಕೂಡಿದೆ. ಭಾರತದಲ್ಲಿ ಈ ಕ್ರೀಡೆಯನ್ನು ಉನ್ನತ ಮಟ್ಟಕ್ಕೆ ತಲುಪಿಸಲು ನಾನು ಕಾತರನಾಗಿದ್ದೇನೆ. ಫುಟ್‌ಬಾಲ್ ಬಗ್ಗೆ ನನಗಿರುವ ಆಸಕ್ತಿಯನ್ನು ಮನಗಂಡಿರುವ ಅಡಿಡಾಸ್ ಈ ಅವಕಾಶ ನೀಡಿದೆ’ ಎಂದು ಸಂದೇಶ್ ಹೇಳಿದ್ದಾರೆ.

ಐಎಸ್‌ಎಲ್: ಕೋವಿಡ್–19ರಿಂದ ಮುಂದೂಡಿದ ಪಂದ್ಯಗಳಿಗೆ ಅವಕಾಶ

25 ಪಂದ್ಯಗಳಿಗೆ ಪರಿಷ್ಕೃತ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪರಿಷ್ಕೃತ ವೇಳಾಪಟ್ಟಿಯನ್ನು ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ಬಿಡುಗಡೆ ಮಾಡಿದೆ.

ಈಗ ನಡೆಯುತ್ತಿರುವ ಹಂತದ ಪಂದ್ಯಗಳು ಫೆಬ್ರುವರಿ ಎಂಟರಂದು ಮುಗಿಯಲಿವೆ. ಒಂಬತ್ತರಿಂದ ಕೊನೆಯ ಹಂತ ಆರಂಭವಾಗಲಿದ್ದು 25 ಪಂದ್ಯಗಳು ನಡೆಯಲಿವೆ. ಕೋವಿಡ್‌ನಿಂದಾಗಿ ಜನವರಿಯಲ್ಲಿ ಮುಂದೂಡಲಾದ ಪಂದ್ಯಗಳಿಗೆ ಈ ಅವಧಿಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಈ ಆವೃತ್ತಿಯ ಲೀಗ್ ಹಂತದ ಕೊನೆಯ ಪಂದ್ಯ ಮಾರ್ಚ್ ಏಳರಂದು ನಡೆಯಲಿದೆ. ಎಟಿಕೆ ಮೋಹನ್ ಬಾಗನ್ ಮತ್ತು ಜೆಮ್ಶೆಡ್‌ಪುರ ಎಫ್‌ಸಿ ತಂಡಗಳು ಫತೋರ್ಡದಲ್ಲಿ ಮುಖಾಮುಖಿಯಾಗಲಿವೆ. ಎಲ್ಲ ಶನಿವಾರಗಳಲ್ಲೂ ಹೆಚ್ಚುವರಿ ಡಬಲ್ ಹೆಡರ್ (ಎರಡು ಪಂದ್ಯಗಳು) ನಡೆಯಲಿವೆ. ಫೆಬ್ರುವರಿ 19, 26 ಮತ್ತು ಮಾರ್ಚ್ 5ರಂದು ಈ ಪಂದ್ಯಗಳು ನಡೆಯಲಿವೆ.

ಲೀಗ್ ಹಂತದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡಕ್ಕೆ ಇನ್ನು ಆರು ಪಂದ್ಯಗಳು ಇದ್ದು ಈ ಪೈಕಿ ಐದು ಪಂದ್ಯಗಳು ಪರಿಷ್ಕೃತ ವೇಳಾಪಟ್ಟಿಯಲ್ಲಿ ನಡೆಯಲಿವೆ.

ಪರಿಷ್ಕೃತ ವೇಳಾಪಟ್ಟಿಯಲ್ಲಿ ಬಿಎಫ್‌ಸಿ ಪಂದ್ಯಗಳು

ದಿನಾಂಕ	ಎದುರಾಳಿ	ಸ್ಥಳ
ಫೆ.11	ಎಚ್‌ಎಫ್‌ಸಿ	ಬ್ಯಾಂಬೊಲಿಮ್
ಫೆ.18	ನಾರ್ತ್‌ಈಸ್ಟ್	ಫತೋರ್ಡ
ಫೆ.21	ಒಎಫ್‌ಸಿ	ಬ್ಯಾಂಬೊಲಿಮ್
ಫೆ.27	ಎಟಿಕೆಎಂಬಿ	ಫತೋರ್ಡ
ಮಾ.5	ಎಸ್‌ಸಿಇಬಿ	ವಾಸ್ಕೊ

ಚೆನ್ನೈಯಿನ್– ಎಸ್‌ಸಿ ಈಸ್ಟ್ ಬೆಂಗಾಲ್ ಪಂದ್ಯ ಡ್ರಾ

ವಾಸ್ಕೊ (ಪಿಟಿಐ): ಬುಧವಾರ ರಾತ್ರಿ ನಡೆದ ಚೆನ್ನೈಯಿನ್ ಎಫ್‌ಸಿ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ನಡುವಿನ ಪಂದ್ಯ 2–2ರ ಡ್ರಾದಲ್ಲಿ ಕೊನೆಗೊಂಡಿತು. ಚೆನ್ನೈಯಿನ್‌ಗೆ ಈಸ್ಟ್ ಬೆಂಗಾಲ್‌ನ ಹೀರಾ ಎರಡನೇ ನಿಮಿಷದಲ್ಲಿ ಗೋಲಿನ ‘ಉಡುಗೊರೆ’ ನೀಡಿದರು. 15ನೇ ನಿಮಿಷದಲ್ಲಿ ನಿಂಥೋಯ್ ಗೋಲು ಗಳಿಸಿದರು. ಈಸ್ಟ್ ಬೆಂಗಾಲ್‌ಗಾಗಿ ಸಿಡೊಯೆಲ್ (61ನೇ ನಿಮಿಷ) ಮತ್ತು ಟೆರಿನಾ (90ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು.

ಮುಂಬೈಗೆ ಎಟಿಕೆಎಂಬಿ ಎದುರಾಳಿ: ಫತೋರ್ಡದಲ್ಲಿ ಗುರುವಾರ ರಾತ್ರಿ ಎಟಿಕೆ ಮೋಹನ್ ಬಾಗನ್ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಳು ಸೆಣಸಲಿವೆ. ಈ ಪಂದ್ಯದಲ್ಲಿ ಎಲ್ಲರ ಕಣ್ಣು ಕಿಯಾನ್ ನಾಸಿರಿ ಮೇಲಿರಲಿದೆ.

ಎಸ್‌ಸಿ ಈಸ್ಟ್ ಬೆಂಗಾಲ್ ಎದುರಿನ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧಿಸಿದ ನಾಸಿರಿ ಐಎಸ್‌ಎಲ್‌ನಲ್ಲಿ ಈ ಸಾಧನೆ ಮಾಡಿದ ಅತಿ ಕಿರಿಯ ಆಟಗಾರ ಎನಿಸಿಕೊಂಡಿದ್ದಾರೆ. ಎಟಿಕೆಎಂಬಿ ತಂಡಕ್ಕಾಗಿ ಗೋಲು ಗಳಿಸಿದ ಅತಿ ಕಿರಿಯ ಆಟಗಾರ ಎಂಬ ಶ್ರೇಯಸ್ಸು ಕೂಡ ಅವರದಾಗಿದೆ. ಬದಲಿ ಆಟಗಾರನಾಗಿ ಐಎಸ್‌ಎಲ್‌ನಲ್ಲಿ ಹ್ಯಾಟ್ರಿಕ್ ಗಳಿಸಿದ ಮೊದಲ ಆಟಗಾರ ಕೂಡ ಆಗಿದ್ದಾರೆ.

ಬೆಂಗಳೂರು ರೇಸ್

ಸಲಜಾರ್ ಗೆಲ್ಲುವ ನಿರೀಕ್ಷೆ

ಸ್ಟೇಯರ್ಸ್ ಟ್ರಯಲ್ ಸ್ಟೇಕ್ಸ್ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಸಲಜಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00 ಗಂಟೆಗೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಹೀ ಈಸ್ ದಿ ಒನ್ 3, ಎಲೈಟ್ ಏಜೆಂಟ್ 5. ಸ್ಮೈಲ್ ಅರೌಂಡ್ 7
2ನೇ ರೇಸ್: ರಾವಿಶಿಂಗ್ ಫಾರ್ಮ್ 3, ಫಿಲಾಸಫಿ 7, ಯುಕಾನ್ 5
3ನೇ ರೇಸ್: ಕಮಾಂಡ್ ಪೋಸ್ಟ್ 4, ಅಫರ್ಮಿ 1, ಮೆಸರ್ಸ್ ಥ್ಯಾಚರ್ (6)
4ನೇ ರೇಸ್: ಹೋಪ್ ಐಲ್ಯಾಂಡ್ 5, ಲಾರ್ಡ್ ಫ್ರಾಂಕೆಲ್ 6, ಸೆನ್ಸೆಶನಲ್ ಗ್ರೇ 9
5ನೇ ರೇಸ್: ಆಂಟೈಸ್ 1, ಗ್ರೀನ್ ಚಾನೆಲ್ 2. ಪೆಲೂಷೆ 3
6ನೇ ರೇಸ್: ಸಲಜಾರ್ 2, ಸ್ಪೀಡ್‌ಸ್ಟರ್ 5
7ನೇ ರೇಸ್: ನೈಟ್ ಇನ್ ಹೂವ್ಸ್ 1, ಬನ್‌ಹಿಲ್ಡ್ 5, ಕಟಾನ 7
8ನೇ ರೇಸ್: ಶೈನಿಂಗ್ ರಾಕ್ 1, ಇನ್ ಎ ಬ್ರೀಝ್ 6, ಫ್ಲೆಮೀಂಗೊ ರೋಡ್ 10

ಉತ್ತಮ ಬೆಟ್: ನೈಟ್ ಇನ್ ಹೂವ್ಸ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
4,5,6,7,8	3,4,5	6,7,8

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ 2022–23ನೇ ಸಾಲಿನ ಕೇಂದ್ರ ಬಜೆಟ್ ಜನಪರವಾಗಿದೆಯೇ?

ಜನಾಭಿಪ್ರಾಯ:

ಹೌದು	ಇಲ್ಲ
61%	39%